ಕಸ್ತೂರಿ

ಫೆಬ್ರುವರಿ, ೧೯೮೩



ರೂ. ೨-೫೦

ಕಸ್ತೂರಿಯ ಅರ್ಧವಾರ್ಷಿಕ ಪರಿವಿಡಿ

ಸಪ್ಟೆಂಬರ್ ೧೯೮೨ ರಿಂದ ಫೆಬ್ರುವರಿ ೧೯೮೩ ರ ವರೆಗೆ

ಕ್ರಮ : ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ

ಸ = ಸಪ್ಟೆಂಬರ್ ಅ = ಅಕ್ಟೋಬರ್ ನ = ನವೆಂಬರ್ ಡಿ = ಡಿಸೆಂಬರ್

ಜ = ಜನವರಿ ಫೆ = ಫೆಬ್ರುವರಿ

ಅನುಭವ

ಆರೋಗ್ಯ - ವೈದ್ಯಕೀಯ

ಇತಿಹಾಸ

ಇದುವೆ ಜೀವ ಇದು ಜೀವನ

ಕವನ - ಉವಾಚ

ಕಥೆ

ಕಲೆ

ಚರ್ಚೆ - ಚಿಂತನ

ಜೀವನ ಚರಿತ್ರೆ- ವ್ಯಕ್ತಿಚಿತ್ರ

ದೇಶ - ನಗರ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಸೀತಿಕಥೆ

ಪದಾರ್ಥ ಚಿಂತಾಮಣಿ

ಪುಸ್ತಕ ವಿಭಾಗ


ಪ್ರಾಣಿ ಜೀವನ

ರಹಸ್ಯ- ಸಾಹಸ- ಸೋಜಿಗ

ವಿಜ್ಞಾನ

ಸಾಮಾನ್ಯ

ಹರಟೆ – ನಗೆಬರೆಹ



ಕಸ್ತೂರಿ

ಕನ್ನಡ ಡೈಜೆಸ್ಟ್



ಸಂಪಾದಕ :

ಬಿ. ಎಸ್. ಗೋಪಾಲಕೃಷ್ಣ

ಸಹಾಯಕ ಸಂಪಾದಕ :

ಮಾಧವ ನಾ. ಮಹಿಷಿ

ಕಲೆ :

ಕೆ. ಬಿ. ಕುಲಕರ್ಣಿ

ಮುಖಪುಟ :

ಶಕುನ ಹೇಳಲೆ ಸ್ವಾಮಿ ?

ಚಿತ್ರ :

ಈಶ್ವರ್ ಎನ್. ಜೋಶಿ

ಜನವರಿ ೧೯೮೩ ರಿಂದ ಜಾರಿಯಲ್ಲಿ ಬಂದಿರುವ
ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI February 1983

ಬೆಳಕಿಂಡಿ

ಪ್ರಾಮಾಣಿಕತನವೇ ಪರಮ ಉಪಾಯವೆಂದು ತಿಳಿದು ಪ್ರಾಮಾಣಿಕನಾಗಿರಲು ಯತ್ನಿಸುತ್ತಿದ್ದೀರಾ? ಹಾಗಾದರೆ ಒಂದು ಮಾತನ್ನು ತಿಳಿದುಕೊಳ್ಳಿ - ಅದರಲ್ಲೂ ಭ್ರಷ್ಟತನದ ಒಂದಂಶ ಇದೆ.

—ಅನಾತೊಲ್ ಫ್ರಾನ್ಸ್

*

ತಾಳ್ಮೆಯಿಂದಿರುವವನಿಂದಾಗಿ ಆತನಿಗೆ ತೊಂದರೆ ಕೊಡುವವನ ಮನಸ್ಸು ಕೂಡ ತೊಂದರೆಗೀಡಾಗುತ್ತದೆ.

—ರಾಬರ್ಟ್ ಗ್ರೀನ್

*

ಕೆಲವರು ಅದೆಷ್ಟು ಬೇಸರ ತರಿಸುವಂಥವರಾಗಿರುತ್ತಾರೆಂದರೆ ಅವರೊಂದಿಗೆ ಕಳೆದ ಐದೇ ನಿಮಿಷಗಳಿಂದಾಗಿ ನಿಮ್ಮ ಇಡೀ ದಿನ ಹಾಳಾಗುತ್ತದೆ.

—ಜೂಲ್ಸ್ ರೆನಾರ್ಡ್

*

ಹಣವಿಲ್ಲದವರು ಅಕಸ್ಮಾತ್ತಾಗಿ ಅದು ಸಿಕ್ಕಾಗ ಉಪಯೋಗಿಸುವ ರೀತಿಯಲ್ಲಿ ಹಣವಂತರು ಧನವನ್ನು ಬಳಸುತ್ತಿದ್ದರೆ ಜೀವನ ಎಷ್ಟು ಸುಖಮಯವಾಗಬಹುದಿತ್ತು! —ರೋನಾಲ್ಡ್ ಡಾಗ್ಲಸ್

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಿಹಿಚಿಂತನ

ನಾರ್ಹ. ಶ್ರೀಮತಿ ಇಂದಿರಾ ಅವರ ಕಥೆಯನ್ನು ಸಂದೇಶ ಸಹಿತ ಕೊನೆಗೊಳಿಸಿದ ಡಾ. ಸ್ವಾಮಿಯವರಿಗೆ ವಂದನೆಗಳು.

ಮಾಳೂರು —ಪಿ. ಶಾಂತಾರಾಮ ಪ್ರಭು

ಡಾ. ಗೊರೂರು

ಜನವರಿ ೧೯೮೫ರ 'ಕಸ್ತೂರಿ'ಯಲ್ಲಿ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ ಬರೆದ ಗೊರೂರರಿಗೆ ಸಂಬಂಧಿಸಿದ ಲೇಖನ ಓದಿದೆ. ಅವರು ೫೫ನೇ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದು ನಿಜವಾಗಿಯೂ ನಾಡು ತಾನು ಈ ಮೊದಲೆ ನೀಡಬೇಕಾದ ಗೌರವವನ್ನು ತಡವಾಗಿಯಾದರೂ ಸಲ್ಲಿಸಿತು ಅನ್ನಬೇಕು.

ಲೇಖನದಲ್ಲಿ ಡಾ. ಗೊರೂರು ೧೯೮೦–೮೧ನೆ ವರುಷದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತರೆಂಬ ಬಗ್ಗೆ ಉಲ್ಲೇಖವಿಲ್ಲ. ಅವರ "ಅಮೇರಿಕೆಯಲ್ಲಿ ಗೊರೂರು" ಎಂಬ ಕೃತಿಗೆ ಹಾಗೂ ಅವರ ಒಟ್ಟು ಸಾಹಿತ್ಯ ಕೃಷಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದೆ. ಕನ್ನಡ ಪ್ರವಾಸಸಾಹಿತ್ಯದಲ್ಲಿ "ಅಮೇರಿಕೆಯಲ್ಲಿ ಗೊರೂರು" ಮೇರು ಕೃತಿ. ನನ್ನ ಸ್ನೇಹಿತರೊಬ್ಬರು ಹೇಳಿದಂತೆ ಅಮೇರಿಕೆಗೆ ಹೋಗುವುದಕ್ಕಿಂತ ಗೊರೂರರ ಕೃತಿ "ಅಮೇರಿಕೆಯಲ್ಲಿ ಗೊರೂರು" ಓದಿ ಬಿಟ್ಟರೆ ಅಮೇರಿಕೆಯ ಕರಿ ಮತ್ತು ಬಿಳಿ ಜೀವನ ದರ್ಶನವಾಗುವುದು.

ಅಥಣಿ —ಡಾ. ವಸಂತ ಅ. ಕುಲಕರ್ಣಿ

ಗರ್ಭಪಾತ

ಜನವರಿ ೧೯೮೫ರ ಸಂಚಿಕೆ ಎಂದಿನಂತೆ ಉತ್ತಮ ವೈಚಾರಿಕತೆಯಿಂದ ಕೂಡಿ ಹೊರಬಂದಿದೆ. ಮುಖಪುಟವನ್ನು ಅಲಂಕರಿಸಿದ 'ನಿಸರ್ಗದ ನಗು' ಆಕರ್ಷಣೀಯವಾಗಿದೆ. ಡಾ. ಗೊರೂರರ ಮತ್ತು ದಿ. ದಿನಕರ ದೇಸಾಯಿಯವರ ವ್ಯಕ್ತಿಚಿತ್ರಣಗಳು ರಮ್ಯವಾಗಿವೆ.

ಡಾ. ಕೆ. ಎಂ. ನರಸಿಂಹಸ್ವಾಮಿ, ಕಳಸರವರ "ಗರ್ಭಪಾತ" ಓದಿದಾಗ ಶ್ರೀಮತಿ ಎಂ. ಕೆ. ಇಂದಿರಾ ಅವರು ಬಹಳ ಹಿಂದೆ ಬರೆದ "ಮೈಕ್ರೋಸ್ಕೋಪ್" ಎಂಬ ಕಥೆ ನೆನಪಿಗೆ ಬಂದು ಆ ಕಥೆಯ ಮುಕುಂದ, ಸದಾಶಿವರಾಯರು ಇಲ್ಲಿ ಪುನಃ ಮೈದಳೆದಂತೆ ಭಾಸವಾಯಿತು. ಲೇಖಕರು,

ರಾಜದ್ರೋಹಿಣಿ

'ರಾಜದ್ರೋಹಿಣಿ'– ಪುಸ್ತಕ ವಿಭಾಗ ರಮ್ಯವಾಗಿದೆ. ಆದರೆ ಇದೇ ಕಥೆ ನಿಮ್ಮ "ಕರ್ಮವೀರ"ದ ೧೯೭೧ನೇ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗಿದ್ದು "ನಾರಿಯೋ ಧಾರುಣಿಯೋ" ಎಂಬ ಶಿರೋನಾಮೆ ಹೊಂದಿದೆ. ಈ ಕಥೆಯ ಲೇಖಕರು ಶ್ರೀ ಜಯತೀರ್ಥ ರಾಜಪುರೋಹಿತರು.

ಮುಧೋಳ —ಬಿ. ಜಿ. ಸಾಲೀಮಠ

[ಒಂದೇ ಚಾರಿತ್ರಿಕ ವಸ್ತುವನ್ನು ಬಳಸಿ ಅನೇಕರು ಬರೆಯಬಹುದಲ್ಲವೆ ? —ಸಂ.]

ಬಗರು

'ನಿಮ್ಮ ಶಬ್ದ ಭಾಂಡಾರ ಬೆಳೆಯಲಿ'– (ಡಿಸೆಂಬರ್ ೮೪ರ 'ಕಸ್ತೂರಿ') ವಿಭಾಗದಲ್ಲಿ "ಬಗರು" ಎಂಬ ಪದಕ್ಕೆ "ಪರಚು" ಎಂಬರ್ಥವನ್ನು ಕೊಟ್ಟಿರುವಿರಿ, ಆದರೆ "ಪರಚು" ಎನ್ನುವುದಕ್ಕೆ ಆಡು ಭಾಷೆಯಲ್ಲಿ "ಜಿಗುರು" ಎನ್ನುವ ಶಬ್ದವಿದೆ. "ಬಗರು" ಎನ್ನುವ ಶಬ್ದ 'ಗೆಬರು' ಎಂದಾದರೂ ಇರಬೇಕು ಇಲ್ಲವೆ 'ಜಿಗುರು' ಎಂದಾದರೂ ಇರಬೇಕೆನ್ನಿಸುತ್ತದೆ. ಏಕೆಂದರೆ 'ಜಿಗುರು' ಅಂದರೆ ಉಗುರಿನಿಂದ ಪರಚು ಎಂದರ್ಥ; ಗೆಬರು ಅಂದರೆ ಬೆರಳು ಮತ್ತು ಉಗುರುಗಳನ್ನುಪಯೋಗಿಸಿ ಮಣ್ಣನ್ನು ಬಗಿ, ಕೆಬರು, ಅಗಿ ಎಂದರ್ಥವಾಗುತ್ತದೆ.

ಒಂದು ವೇಳೆ "ಬಗರು" ಎಂಬ ಶಬ್ದ ಕನ್ನಡದಲ್ಲಿದ್ದರೆ ಅದು ಮೇಲಿನ ಎರಡೂ ಶಬ್ದಗಳಿಗೂ ಒಂದೇ ಅರ್ಥ ಕೊಡಬಲ್ಲದು.

ಹೊಸಪೇಟೆ —ಎ. ಪಂಪಣ್ಣ

[ಬಗರು ಶಬ್ದದ ಅರ್ಥಕ್ಕಾಗಿ 'ಸಂಕ್ಷಿಪ್ತ ಕನ್ನಡ ನಿಘಂಟು' ಪುಟ ೫೭೫ ನೋಡಿ. —ಸಂ.]

ಕಸ್ತೂರಿಯೇ... ?

ನವೆಂಬರ್ ಪುಸ್ತಕ ವಿಭಾಗದ ತಾಮ್ಹಣಕರರ "ಬಂಗಾರ ಕೊಡುವ ಸಾಲಿಗ್ರಾಮ" ಓದಿ

ಮನಸ್ಸಿನಲ್ಲಿ ಒಂದು ಹೊಸ ವಿಚಾರ ಮೂಡಿತು. ತಾವು ಅದನ್ನು ಕಾರ್ಯರೂಪಕ್ಕೆ ತರುವಿರಾ?

ನಿಮ್ಮ 'ಕಸ್ತೂರಿ'ಗೆ "ಬುರುಡೆ" ಎಂದು ಹೆಸರು ಬದಲಾಯಿಸಿದರೆ ಹೇಗೆ? ಇದರಿಂದ ಸಮಸ್ತ ಕನ್ನಡ ಜನರಿಗೂ ಆನಂದವಾದೀತು.

ಬೆಂಗಳೂರು —ಶ್ರೀಕಂಠಯ್ಯ

ಸುಂದರ

ಜನವರಿ, ೧೯೮೭ರ 'ಕಸ್ತೂರಿ'ಯ ರಕ್ಷಾಪುಟ ಚೆನ್ನಾಗಿದೆ. ಆದರೆ, ಆಡುಭಾಷೆಯಲ್ಲೂ 'ಜನವರಿ, ಎಂದೇ ಹೇಳುತ್ತಾರೆ. ಹೊರತು ಜನೇವರಿ ಎಂದಲ್ಲ ಅಲ್ಲವೆ.? ಇಂಗ್ಲೀಷ್ ಮತ್ತು ಕನ್ನಡ ಸಂಖ್ಯೆಗಳನ್ನು ಮಿಶ್ರಿಸಿ ಹೊಸ ಪ್ರಯೋಗ ಮಾಡಿದ್ದೀರಾ ಹೇಗೆ? ೧೯೮೭ ಇರಬೇಕಿತ್ತಲ್ಲವೇ?

ಜನವರಿ ಸಂಚಿಕೆಯಲ್ಲಿ 'ಇದುವೇ ಜೀವ ಇದು ಜೀವನ' ದಲ್ಲಿ ಪ್ರಕಟವಾದ ಶ್ರೀ ಸಂಜೀವ ಕುಮಾರರ ಲೇಖನವು, ೯-೧-೮೭ರ 'ಸುಧಾ'ದಲ್ಲಿ 'ಭೋಗಭಿಕ್ಷೆ' ಎಂಬ ತಲೆಬರಹದಲ್ಲಿ, ಶ್ರೀ ಪ್ರೇಂ ಸತೀಶ್ ಎಂಬುವರ ಹೆಸರಿನಲ್ಲೂ ಪ್ರಕಟವಾಗಿದೆ. ಇಬ್ಬರೂ ಒಬ್ಬರೇನೆ?

ಬೆಂಗಳೂರು —ಎಂ. ಪಿ. ಹೆಬ್ಬಾರ್

[ಕನ್ನಡ ಮೂರು ಅಂಕಿಯನ್ನು 3 ಎಂದು ಬರೆಯುವ ರೂಢಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದೆ. —ಸಂ.]

ಕುಷ್ಠರೋಗ

ಡಿಸೆಂಬರ್ 'ಕಸ್ತೂರಿ'ಯಲ್ಲಿ ಬಂದ "ಕುಷ್ಠರೋಗ: ಒಂದು ಪ್ರಗತಿ ವರದಿ" ಸ್ವಾಗತಾರ್ಹ ಲೇಖನ. ಆದರೆ ಅದರಲ್ಲಿ ಬಂದ ಕೆಲ ಸಂಗತಿಗಳು ಸತ್ಯದೂರವಾಗಿವೆ.

೧) ಲೇಖಕರು ಹೇಳುವಂತೆ ಕುಷ್ಠರೋಗ ಅಂಟಿದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಅಂಗ ವಿಕಲರಾಗುತ್ತಾರೆಂಬುದು ತಪ್ಪು. ಈ ಪ್ರಮಾಣ ನೂರಕ್ಕೆ ೨೦ ರಷ್ಟು ಮಾತ್ರವಿದೆ.

೨) ರಿಫಾಂಪ್ಸಿನ್ ಮತ್ತು ಕ್ಲೋರಾಸಿಫಿನ್ ಎಂಬ ಹೊಸ ಔಷಧಗಳ ಬಗ್ಗೆ ಬರೆದಿದ್ದಾರೆ. ರಿಫಾಂಪ್ಸಿನ್‌ನೊಂದಿಗಿರುವ ಇನ್ನೊಂದು ಔಷಧ ಕ್ಲೋಫಾಜ್‌ಮಿನ್ ಹೊರತು ಕ್ಲೋರಾಸಿಫಿನ್ ಅಲ್ಲ. ಇವೆರಡೂ ರೋಗ ಚಿಕಿತ್ಸೆಯಲ್ಲಿ ತುಂಬ ಫಲಪ್ರದವಾಗಿದ್ದು ಲೇಖಕರು ತದ್ವಿರುದ್ಧ ಬರೆದಿದ್ದಾರೆ.

೩) ಕುಷ್ಠರೋಗದ ಲಸಿಕೆಯ ಪರಿಣಾಮ ನಿರೀಕ್ಷಿಸಿದಷ್ಟು ಆಗಲಿಕ್ಕಿಲ್ಲ. ಏಕೆಂದರೆ, ಸಾಂಸರ್ಗಿಕ ಕುಷ್ಠದಲ್ಲಿ ದೈಹಿಕ-ನೈಸರ್ಗಿಕ ಪ್ರತಿರೋಧಕ ಶಕ್ತಿಯಿರುವುದಿಲ್ಲ.

ಲಸಿಕೆಯ ಪ್ರಯೋಗಕ್ಕೆ ಉಪಯೋಗಿಸುವ ಹಂದಿ ಆರ್ಮಡಿಲ್ಲೊ ಜಾತಿಯದು.

ಸಂಪಾದಕರೆ, ವೈದ್ಯಕೀಯ ಲೇಖನಗಳನ್ನು ಪ್ರಕಟಿಸುವಾಗ ತಜ್ಞರಿಗೆ ಮುಂಚೆಯೇ ತೋರಿಸಿ ಸರಿಪಡಿಸಿಕೊಳ್ಳುವುದು ಸೂಕ್ತವಲ್ಲವೆ?

ವಿಜಾಪುರ —ಬಾಲಕೃಷ್ಣ ಕುಲಕರ್ಣಿ
ವೈದ್ಯಕೀಯ ಅಧಿಕಾರಿ
ಕುಷ್ಠರೋಗ ಮತ್ತು ಸಮಾಜಕಲ್ಯಾಣ ಕೇಂದ್ರ

ಉತ್ತಮ ಲೇಖನ

ಜನೆವರಿ 'ಕಸ್ತೂರಿ'ಯ ಪುಸ್ತಕ ವಿಭಾಗದಲ್ಲಿ ಬಂದ 'ಕರ್ನಾಟಕ ಭಾಷಾಭಿವೃದ್ಧಿ ಆಗುವುದೆಂತು?' ವಿಚಾರಾರ್ಹ ಲೇಖನ, ಈ ಶತಮಾನದ ಪ್ರಾರಂಭ ಕಾಲದಲ್ಲಿ ಇಷ್ಟೊಂದು ದಿಟ್ಟ ವಿಚಾರಗಳನ್ನು ವ್ಯಕ್ತಪಡಿಸಿದ ಡಾ. ಎಸ್. ಜಿ. ನರಸಿಂಹಾಚಾರ್ಯರನ್ನು ಇಂದಿನ ಕನ್ನಡಿಗರಿಗೆ ಪರಿಚಯಿಸಿ ಸ್ತುತ್ಯ ಕಾರ್ಯ ಮಾಡಿದ್ದೀರಿ. ಕನ್ನಡ ಭಾಷಾಭಿವೃದ್ಧಿಯಲ್ಲಿ ಕತ್ತಲೆಯುಗವೊಂದು ಆಗಿಹೋಗಿದ್ದುದಕ್ಕೆ ನಾಡು ತುಂಡು ತುಂಡಾಗಿ ಹಂಚಿಹೋದದ್ದೇ ಕಾರಣವೆಂದು ಬೇರೂರಿದ್ದ ನಂಬಿಕೆ ಸಾಧುವಲ್ಲ; ಇನ್ನೂ ಆಳ ಕಾರಣವೊಂದಿರಬೇಕು ಎಂದು ಅವರು ಅಸಮರ್ಥವಾಗಿ ಪ್ರತಿಪಾದಿಸಿದ್ದಾರೆ.

ಬೆಳಗಾಂವಿ —ಬಿ. ಎಂ. ಕಾಮತ

'ಚದುರಂಗ'ರು ಬರೆದ 'ವೈಶಾಖ' ಕಾದಂಬರಿ ಪ್ರಕಟವಾದದ್ದು ೧೯೮೧ ರಲ್ಲಿ. ೧೧೮ನೆಯ ಪುಟದಲ್ಲಿ ಬಂದ ಅವರ ಪರಿಚಯದಲ್ಲಿ ೭೦ರ ದಶಕದಲ್ಲಿ 'ವೈಶಾಖ' ಪ್ರಕಟವಾಯಿತೆಂದು ಮುದ್ರಿಸಲ್ಪಟ್ಟಿದೆ. ದಯಮಾಡಿ ತಿದ್ದಿಕೊಳ್ಳಿ.

—ಸಂ.



ಕಸ್ತೂರಿ

ವರ್ಷ: ೨೭ | ಫೆಬ್ರುವರಿ ೧೯೮೩ | ಸಂಚಿಕೆ: ೬

ಮಂಡೂಕ ಮಾನಸ

ರಾಮಕೃಷ್ಣ ಪರಮಹಂಸ

ಬಾವಿಯಲ್ಲೊಂದು ಚಿಕ್ಕ ಕಪ್ಪೆಯಿತ್ತು— ಅದೇ ಬಾವಿಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದದ್ದು. ಒಂದೊಮ್ಮೆ ಅದಾವ ಕಡೆಯಿಂದಲೋ ಮಹಾ ನದಿಯೊಂದರಿಂದ ಒಂದು ಕಪ್ಪೆ ಬಾವಿಗೆ ಬಂದು ಬಿತ್ತು. ಬೇಗ ಎತ್ತೊ...ಬಿಟ್ಟು ಬಂದು ಬಿತ್ತು. ಅದನ್ನು ನೋಡಿ ಬಾವಿಯ ಕಪ್ಪೆ, "ಎಲ್ಲಿಯವರು ನೀವು? ಎಲ್ಲಿರುತ್ತೀರಿ?" ಎಂದು ಪ್ರಶ್ನಿಸಿತು. "ಮಹಾನದಿಯಲ್ಲಿರುವವ" ಎಂದಿತು ಆಗಂತುಕ. "ಮಹಾನದಿ ಎಷ್ಟು ದೊಡ್ಡದಿರುತ್ತದೆ?" ಹುಬ್ಬು ಹಾರಿಸಿದಂತೆ ಬಾವಿಯ ಕಪ್ಪೆ ಆಶ್ಚರ್ಯದಿಂದ ಕೇಳಿತು. "ಬಹಳ ದೊಡ್ಡದು," ಎಂದು ಉತ್ತರ ಬಂತು. "ಇಷ್ಟು ದೊಡ್ಡದೇ?" ಎಂದು ಒಂದೆಡೆಯಿಂದ ಮತ್ತೊಂದೆಡೆಗೆ ಜಿಗಿದು ಕೇಳಿತು. "ಸ್ವಾಮಿ, ಇದರ ಸಾವಿರಾರು ಸಾವಿರಾರು ಪಟ್ಟು ದೊಡ್ಡದು," ಎಂದಿತು ನದಿಯ ಕಪ್ಪೆ. "ಅಂದರೆ ಈ ಬಾವಿಗಿಂತಲೂ ದೊಡ್ಡದಾ?" ಆಗ ನದಿಯ ಕಪ್ಪೆ "ಬಾವಿಗೂ ನದಿಗೂ ಎಲ್ಲಿಯ ಹೋಲಿಕೆ? ಹೋಲಿಸಲು ಸಾಧ್ಯವೇ ಇಲ್ಲ. ಅದಂತೂ ಬಹಳ ದೊಡ್ಡದು" ಎಂದಾಗ ಬಾವಿಯ ಕಪ್ಪೆಗೆ ಸಿಟ್ಟು ಬಂತು. "ಮಹಾ ಸುಳ್ಳುಗಾರನು. ಈ ಹೊರಗಿನವನು. ಇವನನ್ನು ಒಳಗೆ ಕರೆದುಕೊಳ್ಳುವುದೇ ತಪ್ಪು. ಹೊರಗೆ ಹಾಕಬೇಕು." ಎಂದು ಕೊಳ್ಳುತ್ತ ಪಟಕ್ಕನೇ ನೀರೊಳಗೆ ಮುಳುಗಿತು.

ಎರಡು ಬಗೆಯ ಬುದ್ಧಿಯವರಿರುತ್ತಾರೆ. ಇನ್ನೊಬ್ಬರು ಏನೇ ಹೇಳಿದರೂ "ಹೌದು" ಎಂದು ಒಪ್ಪಿಕೊಂಡು ಬಿಡುವಂಥವರು ಮತ್ತು "ಹ್ಯಾಗೆ ಸಾಧ್ಯ?" ಎಂದು ಸಂಕುಚಿತತೆ ತೋರಿಸುವವರು. ಯಾರೂ ತಥ್ಯದ ಬಗ್ಗೆ ಚಿಂತಿಸುವುದೇ ಇಲ್ಲ. ★



ಚಿಲ್ಲರೆ ಯೋಚನೆ

ಕೆ. ರಾಮಮೋಹನ

ಅಬ್ಬಬ್ಬ, ಅಂತೂ ಬಸ್ ವೇಳೆಗೆ ಸರಿಯಾಗಿ ಬರಲಾಯಿತಲ್ಲಾ– ಉಸ್ಸಪ್ಪಾ" ಎಂದು ಉಸಿರ್ಗರೆಯುತ್ತಲೇ ಕೈಯಲ್ಲಿ ಹತ್ತು ರೂಪಾಯಿಯ ನೋಟು ಹಿಡಿದು ಟಿಕೆಟ್ಟಿನ ಕಿಟಕಿಗೆ ಹಾರಿ ಬಂದು, 'ಬೆಂಗಳೂರಿಗೆ ಒಂದು ಟಿಕೆಟ್' ಎನ್ನುವಾಗಲೇ, ಹಿಂದಿನಿಂದ ಯಾರೋ ಕೂಗಿದರು– 'ನಾವು ನಿಂತಿರೋದು ಕಾಣಲ್ವಾ, ಬನ್ರೀ ಹಿಂದಕ್ಕೆ,' ಅಂತ. ತಿರುಗಿ ನೋಡುವಾಗ ಮತ್ತೊಬ್ಬರು ನಗುತ್ತಿದ್ದರು. "ಇದೇ ಬೆಂಗಳೂರು ಸ್ವಾಮಿ, ತಮಗೆಲ್ಲಿ ಟಿಕೆಟ್ ?" ಗಾಬರಿಯಲ್ಲಿ ತಾವು ಬೆಂಗಳೂರಿಗೆ ಟಿಕೆಟ್ ಕೇಳಿದ್ದರ ಅರಿವಾಯಿತು ಸೆಟ್ಟರಿಗೆ. ಕ್ಯೂ ದೊಡ್ಡದೇನಲ್ಲ. ನಾಲ್ಕಾರೇ ಜನ. ಆದರೆ ಅಲ್ಲಿ ಒಬ್ಬೊಬ್ಬರಿಗೆ ಟಿಕೆಟ್ ಕೊಡುವಾಗ ಆಗುತ್ತೆ ಅರ್ಧ ಗಂಟೆ. ಹೀಗೆಂದು–ಕೊಂಡು ಕ್ಯೂ ಕಡೆ ಕಣ್ಣು ಹಾಯಿಸಿದಾಗ, ಆಗೋ, ಮಾಸ್ತರೂ ಕಂಡರು. ಅದೇ ಹೊತ್ತಿಗೆ ಅವರೂ ಈ ಕಡೆ ತಿರುಗಿ ಇವರ ಪೆಚ್ಚು ಮೋರೆಗೆ ನಸುನಗು ಬೀರಿ, "ಊರಿಗೇನು? ಕೊಡಿ, ಟಿಕೆಟ್ ಕೊಳ್ಳುವೆ," ಎಂದು ಕೈ ನೀಡಿದರು. ಕಿವಿಯವರೆಗೂ ಹಲ್ಲು ಸಾಲನ್ನೆಳೆದು, "ಹಿ, ಹಿ, ಅಷ್ಟಾದರೆ ಬಹಳ ಉಪಕಾರವಾಯಿತು," ಎಂದು ಬಂದು ನೋಟನ್ನು ಅವರ ಕೈಗೆ ಹಾಕಿದರು ಮುಂಡಯ್ಯ ಸೆಟ್ಟರು.

ಹೊರಗೆ ಬಿಸಿಲಿನ ಝಳ, ಒಳಗೆ ತನ್ನ ಪೆಚ್ಚುತನದ ಅರಿವು. ಮುಖದಲ್ಲಿ ಬೆವರು ಸುರಿದು ಹೋಗುತ್ತಿತ್ತು. ಪಂಚೆ ಒರೆ ಮಾಡಿ ಜೇಬಿನಿಂದ ಕರವಸ್ತ್ರ ತೆಗೆದು ಮುಖ, ಕತ್ತು, ಎದೆ, ತಲೆ ಕೂಡ ಒರೆಸಿ ಗಾಳಿ ಹಾಕಿಕೊಳ್ಳುತ್ತಾ ನಿಲ್ಲುವಾಗ, ಮಾಸ್ತರು ಟಿಕೆಟ್ ತಂದುಕೊಟ್ಟರು. ಆದರೆ, ಕೈ ಮುಂದೆ ನೀಡಿ ನಿಂತಿದ್ದರೂ ಚಿಲ್ಲರೆ ಬರಲಿಲ್ಲ. ಮಾಸ್ತರರು ತಮ್ಮ ಪಾಡಿಗೆ ತಾವು ಬಸ್ ಕಡೆ ನಡೆದರು. ಅರೆ, ಇದೇನು ಹೀಗೆ ಮಾಡಿದರು? ಎಂದು ಸ್ವಲ್ಪ [illegible].

ಒಳ್ಳೆ ಮಾಸ್ತರು, ಕಂಡಕ್ಟರನಾದರೆ ಚಿಲ್ಲರೆ ಬಾಕಿ ಟಿಕೆಟ್ಟಿನ ಹಿಂದೆ ಬರೆದು, ನಾವು ಮರೆತಾಗ ಜೇಬಿಗೆ ಸೇರಿಸುತ್ತಾನೆ. ಆದರೆ ಮಾಸ್ತರು ಹಾಗೇ ನನಗೆ ನಾಮ ಹಾಕಿದರಲ್ಲಾ– ಇವತ್ತು ಶ್ರಾವಣ ಶನಿವಾರ ಅಲ್ಲದಿದ್ದರೂ ! ಕಂಡಕ್ಟರನ್ನಾದರೆ ಕೇಳಬಹುದು, ಇವರನ್ನು ಹೇಗೆ ಕೇಳುವುದು? ಎಂದು ಸಮಸ್ಯೆಯಾಯಿತು ಸೆಟ್ಟರಿಗೆ. ಹಾಗೇ ಮರುನಿಮಿಷವೇ, 'ಛೆ, ಛೆ, ಎಲ್ಲಾ ಬಿಟ್ಟು ಮಾಸ್ತರ ಮಂದಿ ಹೀಂಗ ಮಾಡುವವರಲ್ಲ, ಇದೇನಿದ್ದರೂ ಈ ಕೆಂಪು ಬಸ್ಸಿನದೇ, ಆರಾರು ತಿಂಗಳಿಗೆ ದರ ಏರಿಸುವುದೇ. ಊರಿಗೆ ಕೊಡುತ್ತಿದ್ದುದು ಐದು ರೂಪಾಯಿ, ಆಮೇಲೆ ಆರು, ಒಮ್ಮೆಗೇ ಎಂಟು– ಯಾವಾಗಲೂ ತೂಕಡಿಸುವ ನಮ್ಮ ಸಪ್ಪೆ ಜನವೂ ಕೂಗಾಡಿದಾಗ ಎಂಟರಿಂದ ಏಳಕ್ಕೆ ಇಳಿಸಿದ್ದರು– ಸ್ವಲ್ಪ ದಿನ ಮಾತ್ರ. ಮತ್ತೆ ಎಂಟು ಆಗಿ ಆಗಲೇ ವರ್ಷ ಆಗ್ತಾ ಬಂದಿರಬೇಕು. ಈಗ ಹತ್ತು ರೂಪಾಯೇ ಮಾಡಿದರೋ ಏನೋ! ಅಂತೂ

ದುಡ್ಡು ಕೊಟ್ಟರೆ ಚಿಲ್ಲರೆ ಬರೋಹಾಂಗಿಲ್ಲ. ಹಾ, ಹಾ, ಹೌದು. ಹಾಗೇ ಪಟ್ಟಣದಲ್ಲಿ ಕಾಫಿಗೇಂತ ಹೋಟಲಿಗೆ ಹೋದರೆ, ಅಬ್ಬಬ್ಬ! ಕಷಾಯವೊ, ಅಂದೆಂತದೋ ಕಾಫಿಯಂತೂ ಅಲ್ಲ; ಆದರೆ ಒಂದು ರೂಪಾಯಿ ನೋಟು ಕೊಟ್ಟರೆ ಚಿಲ್ಲರೆ ಬರಾಣೀ ಇಲ್ಲ, ಎದುರಿಗೇ ನಿಂತರೂ. ಎಲ್ಲಪ್ಪಾ, ಚಿಲ್ಲರೆ ತಾ ಅಂದರೆ ಸಮಾ ಆಯ್ತು, ಅಂತ ಕೈ ಅಲ್ಲಾಡಿಸಿದ್ದೇ. ಅದೇನು ಕಮಾಲೊ, ಇಗೋ, ಹಿಂಗೇ ಆತು ನಮ್ಮ ಬಸ್ಸಿನ ಸಮಾಚಾರ. ಕರ್ಮಾ, ಕರ್ಮಾ, ಎರಡು ರೂಪಾಯಿ ಉಂಡಂಗಲ್ಲ, ತಿಂದಂಗಲ್ಲ ಎಂದು ಗೊಣಗಿದರು ಸೆಟ್ಟರು. ಟಿಕೆಟ್ ಬಿಡಿಸಿ ನೋಡಿದರೆ ಎರಡೋ ಮೂರೋ ತುಂಡು. 'ಕಂಡ್ಯಾ, ಬೇರೆ ಅನುಕೂಲ ಹೆಚ್ಚಾಗದಿದ್ದರೂ ಟಿಕೆಟ್‌ಗಳ ಸಂಖೆ ಹೆಚ್ಚಾಗತೈತೆ' ಎಂದು ಬೆರಳು ಮಡಿಸಿ ಎಣಿಕೆ ಹಾಕಿದರು. ಮೊದಲಿನದು ಏಳು ರೂಪಾಯಿ; ಅನಂತರ ಒಂದು; ಮತ್ತಿನ್ನೊಂದು ಎರಡು ರೂಪಾಯಿ. "ಹೌದಲೇ! ಬರೋಬ್ಬರಿ ಹತ್ತಾಯ್ತಲ್ಲಾ! ಏ, ಮತ್ತೆ ಸುಮ್ಮಗೆ ಆ ಮಾಸ್ತರ ಮೇಲೆ ಸಂಶಯಾ ಪಟ್ನೆಲ್ಲಾ! ಅದಕ್ಕೇ, ಮತ್ತೆ ವಿದ್ಯಾ ಹತ್ತದೆ ನೈವೇದ್ಯ ಆದದ್ದು. ಭಗವಂತಾ, ತಪ್ಪಾತಪ್ಪಾ," ಎಂದು ಕಣ್ಣು ಮುಚ್ಚಿ ಮನಸ್ಸಿನಲ್ಲಿ ಕೈಮುಗಿದರು.

ಬರೀ ಭಗವಂತಾ ಅಂದರೆ ಕೇಳ್ತಾನೆಲ್ಲಿ? ಮಾಸ್ತರ ಹತ್ತಿರ ಕ್ಷಮಾನೂ ಕೇಳಬೇಕು. ಹಂಗಾದರೆ ಮುಂದಿನ ಜನ್ಮಕ್ಕಾದರೂ ನಾಲ್ಕಕ್ಷರ ಕಂಡೇನು. ಹೇಗೆ ಕೇಳೋಣು— ಸರ್, ಮಾಸ್ತರೇ, ಅನ್ನಬೇಕು. ತಪ್ಪು ನಂದೈತಿ. ಮುಂದಕ್ಕೆ ತಲೆ ಕರೆದುಕೊಳ್ಳುವ ಹಾಗಾಗುತ್ತೆ. ಏನಂತ ಹೇಳಬೇಕು. ಹೀಗೆ ಯೋಚನೆ ಮಾಡಿದ್ದು ತಪ್ಪು, ಅದೂ ನಿಮ್ಮಂಥ ಮಂದಿ ಬಗ್ಗೆ ಹಂಗರ ಯಾಕ ತಿಳೀ



ಬೇಕು? ಕ್ಷಮಾ ಸೀಡ್ರಿ ಅನ್ನುವ ಎಂದು ತನ್ನ ಕ್ಷಮಾಯಾಚನೆಯ ಮಾತನ್ನು ಜೋಡಿಸಿಕೊಳ್ಳುವಾಗಲೇ ಮಾಸ್ತರರ ಕೂಗಿಗೆ ಬೆಚ್ಚಿ ಬಿದ್ದರು.

ಆಗಲೇ ಕಂಡಕ್ಟರನೂ ಎರಡು ಗಂಟೆ ಬಡಿದಿದ್ದ. ಮಾಸ್ತರರು ಕೂಗುತ್ತಿದ್ದರು: "ಏನ್ರೀ ಸೆಟ್ಟರೇ, ಏನು ಲೆಕ್ಕಾಚಾರ ಮಾಡ್ತಿದ್ದೀರಿ, ಬರುವುದಿಲ್ಲವೇನು? ಬಸ್ಸು ಹೊರಟಿದೆ ನೋಡಿ." ಸೀಟಿನ ಬಳಿ ಬರುವಾಗ ಮುಖ ಕೆಂಪಾಗಿತ್ತು, ಮೈ ಬೆವರುತ್ತಿತ್ತು.

ಕಿಟಕಿ ತೆಗೆದ ಮೇಲೆ ಓಡುವ ಬಸ್ಸಿನ ಒಳಗೆ ಹಾಡುತ್ತಾ ಬರುವ ತಿಳಿಗಾಳಿಯಿಂದ ಮೈ ಕಾವು ಸ್ವಲ್ಪ ಇಳಿಯಿತು, ಮನಸ್ಸೂ ಹಗುರಾಯಿತು. ಮನಸ್ಸು ಹಗುರಾಯಿತು ಎನ್ನುವುದಷ್ಟೆ, ಒಂದು ಅಲೆ ಹಿಂದೋಡಿದೊಡನೆ ಸಮುದ್ರ ಶಾಂತವಾಗಿದೆ ಎಂದ ಹಾಗೆ. ಮತ್ತೆ ಮತ್ತೆ ಬಂದು ಅಪ್ಪಳಿಸುವ ಯೋಚನಾ ತರಂಗವನ್ನು ನಿಲ್ಲಿಸುವುದಾದರೂ ಹೇಗೆ? ಯೋಚನೆ–ಗಂತೂ ಏನಾದರೂ ಸಿಗುತ್ತೆ–ಅದೂ ಕಂಡೂ ಕಾಣುವಾಗಲೇ ಎರಡು ರೂಪಾಯಿ ಕೈ ಬಿಟ್ಟರೆ ಊಟ ಮುಗಿಸಿ ತೃಪ್ತವಾದ ದೇಹ, ಒಳಗಿನ ಸೆಖೆಯನ್ನು ಶಮನ ಮಾಡುವಷ್ಟು ಮಾತ್ರ ತಂಪಾಗಿ ಬೀಸುವ ಮೃದುಗಾಳಿ, ನಿದ್ದೆ ಒತ್ತರಿಸಿ ಬರಬೇಕು. ಆದರೆ, ಒಳಗಿನ ಚಿಲ್ಲರೆ ಯೋಚನೆಯ ಮುಳ್ಳು ನಿದ್ದೆಗೆ ಅವಕಾಶ ಕೊಡಬೇಕಲ್ಲ? ಒಂದೇ ಸಮನೆ ಈ ಚಿಲ್ಲರೆ ಮಥನ ನಡೆಯುತ್ತಲೇ ಇದೆ.

"ಅಬ್ಬಾ, ಏನು ಕಾಲ! ಹೀಗೆ ವರ್ಷ ವರ್ಷಕ್ಕೆ, ತಿಂಗಳು ತಿಂಗಳಿಗೆ ಬೆಲೆ ಏರಿ ಕುಳಿತರೆ ನಮ್ಮ ಗತಿ ಹೇಗೆ? ದುಡ್ಡಿಗೆ ಬೆಲೆಯೇ ಇಲ್ಲ. ಎರಡು ರೂಪಾಯಿ ಎಂದರೆ ಏನು ಆಯಿತು? ಕಡಿಮೆಯೆ? ಬೆಳಗಿನಿಂದ ಕಷ್ಟಪಟ್ಟು, ಆಟೋರಿಕ್ಷಕ್ಕೂ ಕೊಡದಂತೆ ನಡೆದು, ಕಾಫಿ ತಿಂಡಿಗೂ ಹೋಗದೆ ಉಳಿಸಿದ್ದೆಲ್ಲಾ ಇಲ್ಲಿ ಮಣ್ಣಾಯಿತಲ್ಲಾ. ದೇಹದಂಡನೆಯೆಲ್ಲಾ ಈ ಬಸ್ಸಿನ ಭೂತತೃಪ್ತಿಗಾಯಿತು. ಖಾಸಗಿ ಬಸ್ಸಾಗಿದ್ದರೆ ದುಡ್ಡೂ ಕಡಿಮೆ, ಬೇಗ ಊರಾದರೂ ಸೇರಬಹುದಿತ್ತು," ಎಂದು ಗೊಣಗಿಕೊಂಡರು ಸೆಟ್ಟರು.

ಇನ್ನೂ ನಗರದ ಎಲ್ಲೆಯನ್ನು ಬಿಟ್ಟಿರಲಿಲ್ಲ ಬಸ್. ದಾರಿಯ ನಿಲ್ದಾಣದಲ್ಲಿ ಇನ್ನು ಹೊರಡುವಂತೆಯೇ ಇಲ್ಲ ಎನ್ನುವಂತೆ ನಿಂತಿದೆ. ಪಕ್ಕದಲ್ಲಿ ಕಂಗೊಳಿಸುವ ಸೇಬಿನ ಹಣ್ಣು, ಬಾಯಲ್ಲಿ ನೀರು ರಖಲ್ ಎಂದು ಬಂತು. ಕೊಳ್ಳೋಣ ಎಂಬ ಆತುರ. ತಕ್ಷಣ ಎರಡು ರೂಪಾಯಿನ ನೆನಪಾಯಿತು. "ಹೌದು, ಎರಡು ರೂಪಾಯಿ ಉಳಿದಿದ್ದರೆ ಒಂದೆರಡು ಸೇಬು ಕೊಳ್ಳಬಹುದಾಗಿತ್ತು. ಈಗ ಕೊಳ್ಳುವುದೆಂದರೆ... ಅಯ್ಯಯ್ಯೋ, ಸೇಬು ಬಹಳ ದುಬಾರಿ. ಅಷ್ಟು ಗಾತ್ರದ ಹಣ್ಣಿಗೆ ಒಂದು ರೂಪಾಯಿನೇ ಕೇಳುತ್ತಾನೇನೋ! ಕೊಂಡ ಮೇಲೆ ಇಲ್ಲಿ ತಿನ್ನಲು ಒಂದು; ಮನೆಗೆ ಅಷ್ಟು ಜನಕ್ಕೆಲ್ಲಾ ನಾಲ್ಕೈದಾದರೂ ಬೇಕು– ಅಂದರೆ, ಮತ್ತೆ ಐದಾರು ರೂಪಾಯಿ, ಅಬ್ಬಾ, ಛೆ, ಛೆ, ಸೇಬು ನಮ್ಮ ಜೀವನಕ್ಕೆ ಹೆಚ್ಚೇ. ಯಾಕೆ ಬೇಕು? ಈಗ ನಾವೆಲ್ಲಾ ಹಳ್ಳಿಯಲ್ಲಿ ಸೇಬು ಉಂಡೇ ಬೆಳೆದೇವೇನು? ಹೋಗೋ ಆಸೆ. ಮನಸ್ಸು ಹಿಡಿತದಲ್ಲಿರಬೇಕು." ಎಂದು ಕಲ್ಲು ಮನಸ್ಸಿನಿಂದ ನಿಧಾನವಾಗಿ ನಾಲಗೆಯಿಂದ ತುಟಿ ಸವರುತ್ತಾ, ಪರೀಕ್ಷೆ ಮುಖವನ್ನು ತಿರುಗಿಸಿದರು. ಅಷ್ಟರಲ್ಲೇ, "ಟಿಕೆಟ್ ಯಾರ್ರೀ," ಎಂಬ ಕಂಡಕ್ಟರನ ಕೂಗು. ಹಿಂದೆ ತಿರುಗಿ ನೋಡುವಾಗ ತಮ್ಮ ಊರಿಗೇ ಇಬ್ಬರು ಟಿಕೆಟ್ ಕೊಂಡರು. ಕೊಟ್ಟಿದ್ದೂ ಹತ್ತು ರೂಪಾಯಿನ ನೋಟೇ! "ಅರೆ, ಕಂಡಕ್ಟರ್ ಚಿಲ್ಲರೆ ಕೊಡುತ್ತಿದ್ದಾನೆ." ಸೆಟ್ಟರ ಮುಖ ಆಶ್ಚರ್ಯದಿಂದ ಅರಳಿತು. ಮರುಕ್ಷಣದಲ್ಲೇ ತಮ್ಮ ಟಿಕೆಟ್ ಕೈಗೆ ಬಂದಿತ್ತು ಜೋಬಿನಿಂದ. ಹೌದು, ಅದೇ ೭.೨.೧. ಇದೇನು ಹೀಗೆ? ಎಂದು ತಿರುಗಿಸಿ ತಿರುಗಿಸಿ ನೋಡುವಾಗ ಎರಡು ರೂಪಾಯಿನ ಟಿಕೆಟ್ ಮೇಲೆ ರಬ್ಬರ್ ಸೀಲಿನ ಮುದ್ರೆ ಕಾಣಿಸಿತು— ೦–೧೫ ಒತ್ತಿದ್ದಾನೆ. ಹಾಗಾದರೆ... ಬೆರಳು ಮಡಿಚಿ, ಕಣ್ಣು ಮುಚ್ಚಿ, ತೆರೆದು ಎಣಿಕೆ ಹಾಕಿದರು. ಹೌದು ೮–೧೫ ಆಯಿತು. ಅಲ್ಲಿಗೆ ೧–೮೫ ವಾಪಸ್ ಬರಬೇಕು.

"ಎಲಾ ಮಾಸ್ತರಾ, ಏನೋ ಅಂತಿದ್ದೆ. ಚಿಲ್ಲರೆ ಕೊಡುವುದೇ ಬೇಡವೇ? ಕೇಳಿ ಬಿಡೋಣ," ಎಂದು ತಿರುಗಿದಾಗ, ಅವರೂ ಈ ಕಡೆಯೇ

ನೋಡುತ್ತಿದ್ದಾರೆ– ಏನು ಸೆಟ್ಟರೇ, ಟಿಕೆಟ್ ಹಿಡಿದಿರಿ ಎಂಬ ಭಾವ ಮುಖದಲ್ಲಿ. ಸೆಟ್ಟರ ಬಿರುಸು ಅರ್ಧ ತಗ್ಗಿತು. ಇಷ್ಟೊಂದು ಸಂಪಾದನೆ ಮಾಡುವ ಸೆಟ್ಟಿ ಸಣ್ಣ ಚಿಲ್ಲರೆ ಮುಖ ನೋಡಿ ಅಂತಹ ಸಂಪನ್ನ ಮಾಸ್ತರ ಬಗ್ಗೆ ಅನುಮಾನಪಟ್ಟ ಎಂದು ಜನ ನಕ್ಕರೆ ತಾನು ಕೆಟ್ಟೆ ಎಂದು ಹೆದರಿಕೆಯಾಯಿತು. ಕೂಡಲೇ, ತಾನಾಗಿಯೇ, 'ಹಾ, ಊ... ಟಿಕೆಟ್ ಎಂದನಲ್ಲ, ಕಂಡಕ್ಟರು, ಎಲ್ಲಿಟ್ಟಿದ್ದೆ ಅಂತ ಹುಡುಕಿ ತೆಗೆದೆ. ಈಗೇನೋ ಟಿಕೆಟ್ ಇಲ್ಲದಿದ್ದರೆ ನಮಗೇ ಶಿಕ್ಷೆ ಅಂತಲ್ಲಾ,' ಎಂಬ ವಿವರಣೆ ಹೇಳಿದರು. ಮಾಸ್ತರು ಬರಿದೆ ನಕ್ಕು, ಆ ಕಡೆ ತಿರುಗಿದರು. "ಎಲಾ ಇವರ! ನಕ್ಕಿದ್ದೇಕೆ? 'ಲೋ ಮಂಕ, ನಿನಗೆ ಇನ್ನೂ ಗೊತ್ತೇ ಇಲ್ಲ, ನಾನಾಗಲೇ ಚಿಲ್ಲರೆ ಹಾರಿಸಿದೆ,' ಎಂದಿರಬೇಕು. ಹಾಗಲ್ಲದಿದ್ದರೆ ಅಯ್ಯೋ ಮಂಕೆ, ನಿನಗೊತ್ತಿಲ್ಲವೇ ನನ್ನ ಸಣ್ಣತನ? ನಾನು ಚಿಲ್ಲರೆ ಕೊಟ್ಟಿಲ್ಲಾಂತ ಹೇಳಿಕೆ ಹಾಕುಕ್ಕೆ ತೆಗೆದಿಟ್ಟೆ ಅಲ್ವಾ ಎಂಬ ಭಾವ ಇರಬೇಕು ಎನಿಸಿತು. ಮೈ ಮತ್ತೆ ಬೆವರಿತು, ಕ್ಷಣ ಸಿಟ್ಟೂ ಬಂತು. "ಹೌದು, ಅಷ್ಟು ಯೋಗ್ಯರಾಗಿ ದೊಡ್ಡವರಾದರೆ ಎಸೀಬೇಕು ನನ್ನ ಚಿಲ್ಲರೇನಾ! ಆಗ ಮರೆತಿದ್ದರೆ, ಈಗ ಟಿಕೆಟ್ ತೆಗೆದು, ಅದರ ವಿಷಯ ಮಾತನಾಡಿದಾಗ ಜ್ಞಾಪಕ ಆಗಬೇಕು.

ಖರೇ ಅಂದರೆ, ಈ ಮಾಸ್ತರು ಸಣ್ಣ ಜನ. ಸರ್ಕಾರ ಅದಕ್ಕೇ ಮತ್ತೆ ಅಷ್ಟು ಕಡಿಮೆ ಸಂಬಳ ಕೊಡೋದು. ಮಾಡೋ ಕೆಲಸೇನು, ಆಡೋ ಮಾತೇನು! ಹುಡುಗರಿಗೆ ಹೆದರಿಕೆ ಹಾಕಿ ದುಡ್ಡಿಗಾಗಿ ಟೀಷನ್ (tease one) ಮಾಡೋದು. ಅಂತಾವ್ರು ಎರಡು ರೂಪಾಯಿ ಕೂಡ ಬಿಡಲೊಲ್ಲರು. ಚಿಲ್ಲರೆ ಕೊಡ್ತೀರಾ? ಅಂತ ಕೇಳೇ ಬಿಡುವುದು," ಎಂದುಕೊಳ್ಳುವರು. ಆದರೆ ಧೈರ್ಯ ಸಾಲದು. "ಮಾಸ್ತರರೆಂದರೆ ದೊಡ್ಡವರು. ಕೇಳಿದರೆ ನಿಜಕ್ಕೂ ಎಂತಹ ಸಣ್ಣ ಮನುಷ್ಯ ಎಂದುಕೊಂಡಾರು. ಇನ್ನೂ ಊರು ತಲುಪುವವರೆಗೂ ವೇಳೆ ಇದೆಯಲ್ಲಾ. ಕೊಟ್ಟಾರು, ಕೊಡದಿದ್ದರೆ.. ಹಾ! ನಿಜ. ಊರಿನಲ್ಲಿ ಗುಂಪಾಗಿ ಮಾತಿಗೆ ಕೂತಾಗ ಎಲ್ಲರೂ ಎಷ್ಟು ಚೆಂದ ಮಾತಾಡ್ತಾರೆ– ಒಂದೊಂದು ಸಂಗತಿಗೂ ಮಾಸ್ತರ ಅನುಭವದ ಕಥೆ ಇದ್ದೇ ಇರುತ್ತದೆ. ನಾನೇ ಎಷ್ಟು ಸಲ ಅಂದುಕೊಂಡಿಲ್ಲ – ನನಗೆ ಹೇಳಲು ಬರದು ಎಂದು. ಛೇಷ್, ಹೋದದ್ದು ಎರಡೇ ರೂಪಾಯಿ ತಾನೇ, ಆದರೆ ಮಾತನಾಡಲು ಮಾಸ್ತರರ ಬಗ್ಗೆ ಒಂದು ಕಥೆ ಸಿಕ್ಕಿತಲ್ಲಾ. ಅದನ್ನೂ ಹೇಗೆ ಹೇಳಬಹುದು ಅಲ್ವಾ," ಎಂದುಕೊಂಡರು.

'ಛೆ, ಮಾಸ್ತರರಂತಹವರ ಬಗ್ಗೆ ಹಾಗೆ ಮಾತನಾಡುವುದೆ! ಆ ಪಾಪಕ್ಕೆ ಮತ್ತೆ ಯಾವ ಪ್ರಾಯಶ್ಚಿತ್ತವೋ! ಬೇಡಪ್ಪಾ ಬೇಡ, ಯಾವುದಕ್ಕೊ ಖರ್ಚು ಮಾಡಿದೆ ಅಂದುಕೊಳ್ಳುವುದು, ಯಾರಿಗೂ ಹೇಳುವುದೇ ಬೇಡ... ಸರಿ, ಆದರೆ ನಿಜವಾಗಿಯೂ ಎರಡು ರೂಪಾಯಿ ವ್ಯರ್ಥ ದಂಡ ಆಯ್ತಲ್ಲಾ, ನಾನೇ ಕೈ ಎತ್ತಿ ಮಾಸ್ತರಿಗೆ ಕೊಟ್ಟರೆ ಒಂದು ತರಹ. ಅದೂ, ಮಾಸ್ತರಿಗೇಕೆ? ಶಾಲೆ ಸಂಬಳ, ಟೀಸಸ್ ಮತ್ತೇನೋ ಅಂತ ದುಡೀತಾರೆ, ಯಾರಾದರೂ ಬಡವರಿಗೆ ಕೊಟ್ಟಿದ್ದರೆ ಅಷ್ಟು ಪುಣ್ಯವಾದರೂ ಬರುತ್ತಿತ್ತು. ಅಂದ ಹಾಗೆ, ಅಷ್ಟು ದುಡಿಯೋ ಮಾಸ್ತರು ಈ ಸಣ್ಣ ಚಿಲ್ಲರೆಗೆ ಯಾಕೆ ಆಸೆ ಪಟ್ಟಾರು, ಮರೆತಿರಬೇಕು, ಮರೆತರೆ ಎರಡೇ ರೂಪಾಯಿ ಅಂತ ಸುಮ್ಮನಾಗಬಹುದು. ಆದರೆ... ಆದರೆ...ನಾನು ದುಡ್ಡು ಕೊಟ್ಟಿದ್ದೇ ಮರೆತಿದ್ರೆ...' ಈ ಚಿಲ್ಲರೆ ಯೋಚನೆಯ ಮಧ್ಯೆ ಈ ಹೊಸ ಯೋಚನೆ ತೂರಿ ಬಂದಾಗ ಸೆಟ್ಟರು ಬೆಚ್ಚಿದರು. ಕೂತಲ್ಲೇ ಹೈ ಜಂಪ್ ಮಾಡಿದರು. 'ಹೌದು. ನನ್ನ ಚಿಲ್ಲರೆಯ ಮಾತಿರಲಿ, ನಾನು ದುಡ್ಡು ಕೊಟ್ಟಿದ್ದೇ ಅವರು ಮರೆತಿದ್ದರೆ... ಅಗೋ, ಅವರೇ ನನ್ನ ಕಡೆ ತಿರುಗಿ ನೋಡ್ತಿದ್ದಾರೆ. ಮುಖ ನೋಡಿದರೆ ಹಾಗೇ ಕಾಣುತ್ತೆ—ಸೆಟ್ಟರೇ, ಟಿಕೆಟ್ಟಿನ ದುಡ್ಡೆಲ್ಲಿ, ಎನ್ನುವ ಹಾಗೆ—ಅಯ್ಯೋ, ದೇವರೆ. ಒಳ್ಳೆ ಗ್ರಹಚಾರ ಆಯ್ತಲ್ಲಾ. ಎಲ್ಲಾ ಬಸ್ಸಿನಲ್ಲಿ ನನ್ನ ಮರ್ಯಾದೆ. ದುಡ್ಡು ಬರುವುದು ಕಷ್ಟ. ಖರ್ಚು ಮಾತ್ರ ಹೇಳದೆ ಕೇಳದೆ ಆಗುತ್ತೆ. ಮೊನ್ನೆ ಅನಾಮ ದುಡ್ಡು ಕೊಟ್ಟೆನಲ್ಲಾ ನನ್ನ, ಎಂದು ಚೆಕ್ ತೆಗೆದುಕೊಂಡರೆ, ಬ್ಯಾಂಕಿನವರೂ ಮುರಿದರು ಎರಡು ರೂಪಾಯಿ ಕಮೀಷನ್. ಅಪರೂಪಕ್ಕೆ ಕಾಗದ ಬಂದರೆ, ತೂಕ ಜಾಸ್ತಿ ಅಂದು ಮೂವತ್ತು


ಪೈಸೆ ಹಿಡಿವ. ಕಾಫಿ ಕುಡಿಯಲು ೪೦ ಪೈಸೆ. ಈಗ ಎರಡು ರೂಪಾಯಿ ಹೋಯ್ತು ಅಂತ ಕೊರ್ಗಿದರೆ, ಮತ್ತೆ ಹತ್ತು ರೂಪಾಯಿಗೇ ಬಂತು ಸಂಚಕಾರ… ಅದೂ ಸರಿ ಎಂದರೆ, ಅವರು ಈಗ ಸುಮ್ಮನಿದ್ದು ಊರಿಗೆ ಹೋಗಿ ಇಳಿದೊಡನೆ 'ಇಷ್ಟೆ ಕೇಳಿದೆಯೇನು ನಮ್ಮ ಸೆಟ್ಟರ ಕಥೆ, ಪಾಪ ಅಂತ ಟಿಕೆಟ್ ತೆಗೆದುಕೊಟ್ಟರೆ ದುಡ್ಡೇ ಕೊಡುವುದು ಬೇಡವೆ?' ಎಂದು ಶುರು ಮಾಡಿದರೆ, ನನ್ನ ಮರ್ಯಾದೆಯೂ ಹೋಗುತ್ತೆ. ಅಳುಕುತ್ತಾ ಮೆಲ್ಲಗೆ ತಿರುಗಿ ನೋಡಿದರೆ ಅವರೂ ಈ ಕಡೆಯೇ ನೋಡುತ್ತಿದ್ದಾರೆ. ಅಂದರೆ ಅವರ ಮನಸ್ಸಿನಲ್ಲಿಯೂ ಹೀಗೇ ಯೋಚನೆ ಇರಬೇಕು. 'ಹೇಗಾದರೂ ಮಾಡಿ ಈ ಸಂಕಟ ಪಾರು ಮಾಡಪ್ಪಾ ದೇವರೇ' ಎಂದು ಕೊರಗುತ್ತಾ ಸೆಟ್ಟರು ಮಂಕಾದರು.

ಸೆಟ್ಟರು ಮಂಕಾದರೇನು? ಅವರ ಯೋಚನೆ ಓಟ ತೆಗೆಯಿತು. ಅದೇ ಎರಡು ರೂಪಾಯಿನ ಸುತ್ತು. ಹೇಗೂ ಮುಂದಿನ ಊರಿಗೆ ಹತ್ತು ಹದಿನೈದು ಮೈಲಿ. ಇಳಿಯುವಾಗ, 'ಮಾಸ್ತರೆ ಚಿಲ್ಲರೆ ಕೊಡ್ತೀರೇನು, ಕಾಫಿಗೆ ಹೋಗಿ ಬರೋಣ,' ಎಂದು ಕೇಳುವುದು. ಆದರೆ ತಾನು ಸ್ಟ್ಯಾಂಡಿನಲ್ಲಿ ಕಿಸೆಗೆ ಸೇರಿಸಿದ ನೋಟಿನ ಕಟ್ಟನ್ನು ಮಾಸ್ತರರು ಕಂಡಿರಬೇಕು. ಪ್ರಾಣಿ ಎರಡು ಚಿಲ್ಲರೆ ಕಾಸಿಗೆ ಪ್ರಾಣ ಬಿಟ್ಟಿತು ಎಂದುಕೊಂಡಾರು. ಛೆ ಕಂಡಕ್ಟರನಾಗಿದ್ದರೆ ರಾಜಾರೋಷವಾಗಿ ಕೇಳಬಹುದಿತ್ತು. ಕೊಡದಿದ್ದಾಗ ಜಗಳ ಆಡಿದರೆ ಹತ್ತು ಜನರ ಹಿಮ್ಮೇಳ ಇರ್ತಿತ್ತು. ಈಗ ಹಾಗಿಲ್ಲ. ಗುಂಡಿಗೆ ಬಿದ್ದೆ ನಾನು ಎಂದು ಮುಖ ತಗ್ಗಿಸಿದರು ಸೆಟ್ಟರು.

ಯಾರೋ ಕಂಡಕ್ಟರನನ್ನು ಚಿಲ್ಲರೆ ಕೇಳ್ತಿದ್ದರು. ಮಾಸ್ತರೂ ತಿರುಗಿ ನೋಡಿದರು. ಅಪಕಾಶ ಬಿಟ್ಟವರುಂಟೇ ಎಂದು ಸೆಟ್ಟರು ರಾಗ ತೆಗೆದರು. ಈ ಬಸ್ಸೇ ಹೀಗೆ 'ಚಿಲ್ಲರೇನೇ ಇಲ್ಲ ಅಂತಾರೆ ಯಾವಾಗಲೂ, ಮರೆತರೆ ಹೋಯ್ತು! ಯಾಕ್ರೀ ಮಾಸ್ತರೇ', ಅನ್ನುವಾಗ ಖಂಡಿತಾ ಮಾಸ್ತರರಿಗೆ ಚಿಲ್ಲರೆಯ ನೆನಪಾಗುತ್ತೆ ಎಂಬ ಭರವಸೆಯಿಂದ ಮುಖ ಅರಳಿಸಿ ಕುಳಿತರು ಸೆಟ್ಟರು. "ಎಲ್ಲಾ ಹತ್ತು ರೂಪಾಯಿ ಕೊಟ್ಟರೆ, ಚಿಲ್ಲರೆ ಎಲ್ಲಿ ಬರಬೇಕ್ರೀ ಸೆಟ್ಟರೆ,. ಅಲ್ಲದೆ ಕೆಲವರು ಟಿಕೆಟ್ಟಿಗೇ ದುಡ್ಡೇ ಕೊಟ್ಟಿರುವುದಿಲ್ಲ. ಕೇಳುವವರೆಗೂ". ತಿರುಗಿ ಬಂತು ಬಾಣ ಹಾಗಾದರೆ ನಾನಂದುಕೊಂಡಂತೆಯೇ ಸರಿ. ನಾನು ದುಡ್ಡು ಕೊಟ್ಟಿಲ್ಲ ಎಂದುಕೊಂಡಿದ್ದಾರೆ ಮಾಸ್ತರು. ಒಳ್ಳೆ ಕಥೆ. ಎರಡು ರೂಪಾಯಿ ಹೊರಡಿಸಹೋಗಿ, ಮತ್ತೆ ಎಂಟು ರೂಪಾಯಿ ತೆರಬೇಕಾಯಿತು ಎಂದು ಖಿನ್ನರಾಗಿ ಕುಳಿತರು.

ಆಗೊಮ್ಮೆ, ಈಗೊಮ್ಮೆ ಕದ್ದು ಮಾಸ್ತರನ್ನ ನೋಡಿದರೆ, 'ಛೆ' ಎಂತಹ ಸಹವಾಸ, ಇಂತಹ ಸಣ್ಣ ಮನಸ್ಸಿನಲ್ಲಿ ಪ್ರಾಣಿ ಪಕ್ಕದಲ್ಲಿ ಕೂತ್ರಲ್ಲಾ ಎನ್ನುವ ಭಾವದಲ್ಲಿ ಕುಳಿತಿದ್ದಾರೆ! ಮುಖ ತಿರುಗಿಸಿ. ದುಡ್ಡು ಹೋದರೂ ಪರವಾಗಿಲ್ಲ—ಮಾಸ್ತರಂತಹವರು ಹೀನ ಎಂದು ಅಂದುಕೊಂಡರಲ್ಲಾ ಎಂಬ ವ್ಯಥೆ. ಏನಾದರೂ ಸರಿ, ಎರಡು ರೂಪಾಯಿ ಹೋದರೂ ಪರವಾಗಿಲ್ಲ, ಪುಣ್ಯಾತ್ಮ ಮತ್ತೆ ಟಿಕೆಟ್ಟಿನ ದುಡ್ಡು ಕೇಳದಿದ್ದರೆ ಸರಿ ಎಂದು ಜಪ ಮಾಡುತ್ತಾ ಕುಳಿತರು.

ನಿರೀಕ್ಷಿಸಿದಂತೆ ಮಾಸ್ತರು ತಿರುಗೇಬಿಟ್ಟರು. ಕೊನೆಗೂ, "ಸೆಟ್ಟರೇ, ದುಡ್ಡು ಕೊಡ್ತೀರೇನು?" ಮಾಸ್ತರ ಮಾತು ಮುಂದುವರಿಯುವುದರಲ್ಲಿ ಸೆಟ್ಟರ ಮುಖ ಬಿಳಿಚಿ, ಬೆವರಿತು. ಹೋಯ್ತೋ ಮತ್ತಷ್ಟು, ಎಂದು ಹೃದಯ ಹಿಂಡಿತು. ಮಾಸ್ತರು ಮುಂದುವರಿಸಿದರು: "ಹದಿನೈದು ಪೈಸೆ ಕೊಡಿ, ಎರಡು ರೂಪಾಯಿ ಕೊಡ್ತೇನೆ. ಆಗಿನಿಂದ ಚಿಲ್ಲರೆ ಇಲ್ಲದೆ, ಹೇಗೆ ೧೫ [ಹದಿನೈದು] ಪೈಸೆ ಕೊಡಿ ಅಂತ ಕೇಳೋದು ಅಂತ ಚಿಂತೆ ಮಾಡ್ತಿದ್ದೆ. ಇಗೋ, ಹಿಡೀರಿ ಎಂದು ಗರಿಗರಿ ನೋಟು ಹಿಡಿದರು. ಮುಂದೇನಮಳ್ಳಿ ನೋಟೇನೋ ಅಂತ ಕ್ಷಣ ಮಾತ್ರ ಅನ್ನಿಸಿದರೂ, ಮುಖ ಅರಳಿ ಬಿರಿದಿತ್ತು.' ಹೆ, ಹೆ, ಏನವಸರ ಮಾಸ್ತರೇ. ನಿಮ್ಮತ್ರ ಇದ್ರೆ ಎಲ್ಹೋಗುತ್ತೆ?' ಎನ್ನುವವರೊಳಗಾಗಲೇ ನೋಟು ಕಿಸೆ ಸೇರಿತ್ತು ಚಿಲ್ಲರೆ ಯೋಚನೆ ಒಮ್ಮೆಲೆ ಕಡಿದುಬಿತ್ತು. ✡



ಮೇಧಾವಿ ಕನ್ನಡಿಗ

ಎಂ.ಎಸ್. ಕೇಶವ

ಡಾ. ವಸಂತ ಗುಮಾಸ್ತೆ

ಕಳೆದ ಮಾರ್ಚ್‌ನಲ್ಲಿ ನಾನು ದಿಲ್ಲಿಗೆ ಹೋಗಿದ್ದೆ. ಅಸಫ್ ಅಲಿ ರಸ್ತೆಯ ಮೇಲೆ ಒಂದೆಡೆ ಜನ ಜಾತ್ರೆ! ಬಜಾಜ್ ಕಂಪನಿಯವರು ಹೊಸದಾಗಿ ತೆಗೆಯಬೇಕೆಂದಿದ್ದ ಎಂ-೫೦ ಎಂಬ ಹಗುರ ಮೋಟರ್ ಸೈಕಲ್ಲುಗಳಿಗೆ ೫೦೦ ರೂಪಾಯಿ ಕೊಟ್ಟು ಹೆಸರು ನೊಂದಾಯಿಸಲು ಆ ಜನ ನೆರೆದಿದ್ದರು. ತಮಗೆ ಯಾವಾಗ ಮೋಟರ್ ಸೈಕಲ್ ಸಿಗುತ್ತದೆ ಎಂಬುದೂ ಗೊತ್ತಿಲ್ಲ! ಕೇವಲ ೧೫ ದಿನಗಳಲ್ಲಿ ಭಾರತವಾದ್ಯಂತ ೧೧.೫ ಲಕ್ಷ ಜನ ಈ ಹೊಸ ಮೋಟರ್ ಸೈಕಲ್ ಕೊಳ್ಳಲು ಹೆಸರು ನೊಂದಾಯಿಸುವ ಮೂಲಕ ೫೮ ಕೋಟಿ ರೂಪಾಯಿಗಳು ಬಜಾಜ್ ಕಂಪನಿಗೆ ದೊರೆತವೆಂದು ವೃತ್ತಪತ್ರಗಳು ವರದಿಮಾಡಿದವು!

ಇದಕ್ಕೇನು ಕಾರಣ?

ಸ್ಕೂಟರ್ ಉತ್ಪಾದನೆಯಲ್ಲಿ ಬಜಾಜ್ ಕಂಪನಿಗೆ ಜಗತ್ತಿನಲ್ಲೇ ಎರಡನೇ ಸ್ಥಾನ. ಬಜಾಜ್ ಸ್ಕೂಟರುಗಳಿಗೆ ಎಷ್ಟು ಬೇಡಿಕೆಯೆಂದರೆ ಈಗ ಹೆಸರು ನೊಂದಾಯಿಸಿ ಈ ಶತಮಾನದ ಅಂತ್ಯಕ್ಕೆ ನಿಮಗೆ ಸ್ಕೂಟರ್ ದೊರೆತರೆ ನೀವು ಸುದೈವಿಗಳು. ಐದಾರು ವರ್ಷ ಉಪಯೋಗಿಸಿದರೂ ಬಜಾಜ್ ಸ್ಕೂಟರನ್ನು ಕೊಂಡ ಬೆಲೆಗೇ ಮಾರಬಹುದಂತೆ! ಈ ಕಂಪನಿಯ ತಂತ್ರಜ್ಞಾನದಿಂದಲೇ ರೂಪಿಸಲ್ಪಟ್ಟು ಉತ್ಪಾದಿಸಲ್ಪಡುತ್ತಿರುವ ಮಹಾರಾಷ್ಟ್ರ ಸ್ಕೂಟರ್ ಕಂಪನಿಯ "ಪ್ರಿಯಾ" ಎಂಬ ಸ್ಕೂಟರಿಗೂ ಇದೇ ಗುಣ ಪಟ್ಟ. ಬಜಾಜ್ ನಿರ್ಮಿಸಿರುವ "ಚೇತಕ್" ಸ್ಕೂಟರಿಗೆ ವಿದೇಶಗಳಲ್ಲಿ ಬೇಡಿಕೆ ಎಷ್ಟೆಂದರೆ ಕಳೆದ ವರ್ಷ ಈ ಸ್ಕೂಟರುಗಳನ್ನು ರಫ್ತುಮಾಡುವುದರ ಮೂಲಕ ೨೪.೫ ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ದೊರೆಯಿತು. ಇದರಿಂದಾಗಿ ವಿದೇಶೀ ಸ್ಕೂಟರ್ ಉತ್ಪಾದಕ ಕಂಪನಿಗಳು ನಾಬರಿಯಾಗಿವೆಯಂತೆ. ಅಮೇರಿಕದಲ್ಲಿ ಮಾರುವುದಕ್ಕಾಗಿ ಬಜಾಜ್ ಸ್ಕೂಟರುಗಳನ್ನು [ಅಲ್ಲಿಯ ಕಾನೂನು ರೀತ್ಯ] ಕಡಿಮೆ ಪ್ರದೂಷಣ ತಂತ್ರಜ್ಞಾನದ ಬಳಕೆಯಿಂದ ನಿರ್ಮಿಸಲಾಗುತ್ತಿದೆ. ಇಂಡೋನೇಶಿಯ ಹಾಗೂ ತೈವಾನ್‌ಗಳು ಬಜಾಜ್ ಕಂಪನಿಯಿಂದ ಪ್ರತಿ ವರ್ಷ ತಾಂತ್ರಿಕ ಜ್ಞಾನದ ಸಲಹೆ ಪಡೆದು ಸ್ವತಶ್ಚ ಲಿಗಳನ್ನು ರೂಪಿಸುತ್ತಿವೆ. ಈ ರೀತಿ ಆ ದೇಶಗಳಿಗೆ ತಂತ್ರಜ್ಞಾನದ ಸಲಹೆ ನೀಡುವದರ ಮೂಲಕ ಕಂಪನಿಯು ೩೦.೫ ಲಕ್ಷ ರೂಪಾಯಿಗಳಷ್ಟು ವಿದೇಶೀ ವಿನಿಮಯ ಗಳಿಸಿತು. ಬಜಾಜ್ ಪ್ರತಿಷ್ಠಿತ ಉತ್ಪಾದಕ ಸಂಸ್ಥೆಗಳಲ್ಲೇ ಅಂತಾರಾಷ್ಟ್ರೀಯ ಮನ್ನಣೆ ಪಡೆದಿದೆಯೆಂಬುದಕ್ಕೆ "ಟೈಮ್" ಸಾಪ್ತಾಹಿಕದಲ್ಲಿ ಜಾಹೀರಾತು ಕಾಣಿಸಿಕೊಳ್ಳುವ ಏಕಮೇವ ಭಾರತೀಯ ಕಂಪನಿಯೆಂಬುದೇ ಸಾಕ್ಷಿ.

ಇಂತಹ ಕಣ್ಣು ಕುಕ್ಕುವ ಯಶದ ಹಿಂದುಗಡೆ ಆ ಕಂಪನಿಯ ಉದ್ಯೋಗಪತಿಗಳ ಹಾಗೂ ವ್ಯವಸ್ಥಾಪಕರ ಜತೆಜತೆಗೆ ಒಬ್ಬ ಕನ್ನಡಿಗನ ಜಾಣ್ಮೆಯೂ ಸೇರಿದೆ ಎಂಬುದು ಅಭಿಮಾನಾಸ್ಪದವಲ್ಲವೆ? ಈ ಯಶಕ್ಕೆ ಕಾರಣರಾದ ಕನ್ನಡಿಗ ಆ ಕಂಪನಿಯ ಸಂಶೋಧನ ಹಾಗೂ ಅಭಿವೃದ್ಧಿ ವಿಭಾಗದ ವ್ಯವಸ್ಥಾಪಕ ಮೈಸೂರು ಸುಬ್ಬರಾಯರ ಚಿರಂಜೀವ ಕೇಶವ ಅವರು.

ಅಭಿಯಾಂತ್ರಿಕ ವಸ್ತುಗಳ ಯಶಸ್ಸು ಆ ವಸ್ತುಗಳ ಭದ್ರ ತಂತ್ರಜ್ಞಾನವನ್ನೇ ಆಧರಿಸುತ್ತದೆ. ತಂತ್ರಜ್ಞಾನದ ಉತ್ಪತ್ತಿ, ಸಂಶೋಧನೆ



ಹಾಗೂ ಅಭಿವೃದ್ಧಿ ವಿಭಾಗದ ಮೇಲೆ ಅವಲಂಬಿಸಿರುತ್ತದೆ. ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗವೆಂದರೆ ಆ ಕಂಪನಿಯ ಮಿದುಳು ಎಂದೇ ಹೇಳಬೇಕು. ಹೊಸ ವಸ್ತುವಿನ ಕಲ್ಪನೆ ಅದರ ಅಭಿವೃದ್ಧಿ, ಮತ್ತು ಕೊನೆಯಲ್ಲಿ ಅದರ ಉತ್ಪಾದನೆ ಇವು ಕಂಪನಿಯ ಹೊಸ ವಸ್ತುವಿನ ಸ್ಥೂಲ ಅವಸ್ಥೆಗಳು.

ಎಂ. ಎಸ್. ಕೇಶವರು ಬಜಾಜ್ ಆಟೋ ಕಂಪನಿಯ ಅನೇಕ ವಸ್ತುಗಳ ಪೋಷಕರು. ಅವರು ಇತ್ತೀಚೆಗೆ ಪರಿಷ್ಕರಿಸಿ ರೂಪಿಸಿದ್ದು ಬಜಾಜ್ ಎಂ-೫೦ ಮೋಟಾರ್ ಸೈಕಲ್. ಇಂತಹ ಇನ್ನೂ ಅನೇಕ ಇಂಧನ ಮಿತವ್ಯಯದ ನವೀನ ವಾಹನಗಳು ಇದೀಗ ಅಭಿವೃದ್ಧಿಯ ಅವಸ್ಥೆಯಲ್ಲಿವೆ. ಒಂದೆರಡು ವರ್ಷಗಳಲ್ಲಿ ನಮಗೆ ಈ ಹೊಸ ವಸ್ತುಗಳ ಸೌಕರ್ಯ ದೊರೆಯಲಿದೆ.

ಕೇಶವ [ಜನನ ೧೯೩೫] ಮೈಸೂರಿನವರು. ತಂದೆ ಎಂ. ಸುಬ್ಬರಾಯರು ಚಾರ್ಟರ್ಡ್ ಅಕೌಂಟೆಂಟರು. ಕೆಲ ಕಾಲ ಮಾರಾಟ ಕರ ನ್ಯಾಯಾಧೀಶರಾಗಿದ್ದರು. ಬೆಂಗಳೂರಿನ ಬೆಂಗಳೂರು ಹೈಸ್ಕೂಲಲ್ಲಿ ಮಾಧ್ಯಮಿಕ ಹಾಗೂ ನ್ಯಾಷನಲ್ ಕಾಲೇಜಿನಲ್ಲಿ ಇಂಟರ್‌ಮಿಡಿಯೆಟ್ ವರೆಗೆ ಓದಿ ರಾಂಚಿಯಲ್ಲಿರುವ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್

ಹಿಂದೆ ಎಂಜಿನ್ನಿರುವ ಆಟೋರಿಕ್ಷಾ ಬಜಾಜ್ ಆರ್.ಇ.

ಟೆಕ್ನಾಲಜಿಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು [೧೯೬೦]. ೧೯೬೨ರಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನಿಂದ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ [ಎಂ. ಇ.] ಪದವೀಧರರಾದರು. ಅಂತರ್ದಹನ ಯಂತ್ರಗಳು ಅವರ ಸ್ನಾತಕೋತ್ತರ ಪದವಿಯ ಪ್ರಮುಖ ವಿಷಯ.

ಎಂ. ಇ. ಪದವಿ ಪಡೆದಾದ ನಂತರ ಕೇಶವರು ದುರ್ಗಾಪುರದಲ್ಲಿಯ ಸೆಂಟ್ರಲ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ರೀಸರ್ಚ್ ಇನ್ಸ್ಟಿಟ್ಯೂಟನ್ನು ಸೇರಿದರು. ಅಲ್ಲಿ ಅವರು ಆಟೊಮೊಬೈಲ್ ಇಂಜಿನ್ಸ್ ಪ್ರಮುಖರಾಗಿ ಕಾರ್ಯ ನಿರ್ವಹಿಸಿದರು. ೧೯೬೪ರಲ್ಲಿ ಯುನೆಸ್ಕೋದ ವಿದ್ಯಾರ್ಥಿ ವೇತನ ಪಡೆದು ಇಂಗ್ಲಂಡಿಗೆ ಹೋಗಿ ಕ್ರ್ಯಾನ್‌ಫೀಲ್ಡ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಿಂದ ಆಟೋಮೊಬೈಲ್ ಡಿಸೈನಿಂಗ್ ವಿಷಯದಲ್ಲಿ ಎಂ. ಎಸ್ಸಿ. ಪದವಿ ಪಡೆದರು. ಇದೇ ಅಭ್ಯಾಸಕ್ರಮದ ಒಂದು ಅಂಗವಾಗಿ ಯುರೋಪಿನ ಪ್ರಮುಖ ಆಟೋಮೊಬಾಯಿಲ್ ಕಂಪನಿಗಳಾದ ಲೇಲ್ಯಾಂಡ್, ಫಿಯಟ್, ಫೋಕ್ಸ್‌ವ್ಯಾಗನ್, ರೆನಾಲ್ಟ್ ಮುಂತಾದವುಗಳ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗಗಳಲ್ಲಿ ಕೆಲಸ ಮಾಡಿ ನೈಪುಣ್ಯ ಗಳಿಸಿದರು.

ಭಾರತಕ್ಕೆ ಮರಳಿದ ಕೇಶವರು ದುರ್ಗಾಪುರದ ಮೆಕ್ಯಾನಿಕಲ್ ಎಂಜಿನಿಯರಿಂಗ್ ರೀಸರ್ಚ್ ಇನ್ಸ್ಟಿಟ್ಯೂಟನಲ್ಲಿ ಕೆಲಸ ಮಾಡಿ ೧೯೬೮ರಲ್ಲಿ ಪುಣೆಯ ಕಿರ್ಲೋಸ್ಕರ್ ನ್ಯೂಮ್ಯಾಟಿಕ್ ಕಂಪನಿ ಸೇರಿದರು. ಅಲ್ಲಿ ಭಾರಿ ಕಾರ್ಯ ಪ್ರವಹನ ತಂತ್ರಜ್ಞಾನವನ್ನು ನಿರ್ಮಿಸಿದರು. ಅವರ ಈ ಕಾರ್ಯ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಒಂದು ಮೈಲುಗಲ್ಲು ಎಂದು ಆ ಕ್ಷೇತ್ರದಲ್ಲಿ ಪರಿಗಣಿಸಲಾಗುತ್ತದೆ.

೧೯೭೦ ರಲ್ಲಿ ಕೇಶವ ಬಜಾಜ್ ಆಟೋ ಕಂಪನಿಯನ್ನು ಸೇರಿದರು. ಆ ದಿನಗಳಲ್ಲಿ ಬಜಾಜ್ ಕಂಪನಿ ಇಟಲಿಯ ಸುಪ್ರಸಿದ್ಧ ಪಿಯಾಗಿಯೋ ಕಂಪನಿಯ ತಂತ್ರಜ್ಞಾನದ ಮೇಲೆ ವೆಸ್ಪಾ ಸ್ಕೂಟರುಗಳನ್ನು ಉತ್ಪಾದಿಸುತ್ತಿತ್ತು. ಬಜಾಜ್ ಪಿಯಾಗಿಯೋ ಸಹಯೋಗದ ಅವಧಿ ಆಗ ಮುಗಿಯುತ್ತ ಬಂದಿದ್ದರಿಂದ ಮುಂದೆ ಬಜಾಜ್ ಕಂಪನಿಯಲ್ಲಿಯ ತಂತ್ರಜ್ಞಾನದ ಹೊಣೆ ಕೇಶವರ ಹೆಗಲಿಗೆ ಏರಿತು.

ಕೇಶವರಂತಹ ಸಂಶೋಧನೆ ಹಾಗೂ ಅಭಿವೃದ್ಧಿ ನಿಪುಣತರನ್ನು ಪಡೆದ ಬಜಾಜ್ ಆಟೋ ಕಂಪನಿಯು ತನ್ನಷ್ಟಕ್ಕೆ ತಾನೇ ಕೃತಾರ್ಥವಾಯಿತು. ಪಿಯಾಗಿಯೊ ಕಂಪನಿಯಿಂದ ಸ್ಕೂಟರಿನ ತಂತ್ರಜ್ಞಾನವನ್ನು ಅರಿತುಕೊಂಡು ಅದೇ ಕಂಪನಿಯನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಹಿಂದೆ ಹಾಕುವ ಅದ್ಭುತವನ್ನು ಬಜಾಜ್ ಆಟೋ ಕಂಪನಿ ಸಾಧಿಸಿತು. ಈ ಅದ್ಭುತ ಸಾಧನೆಗೆ ಕೇಶವರೇ ನಿರ್ಣಾಯಕ ಘಟಕವಾದರು ಎಂದು ಬೇರೆ ಹೇಳಬೇಕಿಲ್ಲ.

ಬಹುತೇಕ ದೊಡ್ಡ ಕಂಪನಿಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗವಿರುತ್ತದೆ. ಒಂದು ದೇಶದ ಆರ್ಥಿಕ ಅಭಿವೃದ್ಧಿ ಆ ದೇಶದ ತಂತ್ರಜ್ಞಾನದ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ಈ ಸಂಗತಿಯನ್ನು ಸರಿಯಾಗಿ ಗುರುತಿಸಿ ಸಂಶೋಧನೆಗೆ ಹಾಗೂ ಅಭಿವೃದ್ಧಿಗಾಗಿ ಮೇಲಾಗುವ ವೆಚ್ಚವನ್ನು ಭಾರತ ಸರಕಾರ ಕರಮುಕ್ತ ಮಾಡಿದೆಯಷ್ಟೇ ಅಲ್ಲದೆ ಈ ರೀತಿ ಪ್ರತಿ ೧೦೦ ರೂಪಾಯಿಗಳಿಗೆ ಪ್ರತಿಯಾಗಿ ಸರಕಾರ ೧೨೦ ರೂಪಾಯಿ ಮರಳಿ ಕೊಡುತ್ತದೆ. ಇದಲ್ಲದೆ ಸಂಶೋಧನೆಗೆ ಸಂಬಂಧಿಸಿರುವ ಉಪಕರಣಗಳ ಆಯಾತಕ್ಕೆ ಪ್ರಾಧಾನ್ಯ ಕೂಡಾ ಸಿಗುತ್ತದೆ. ಔದ್ಯೋಗಿಕ ಸಂಶೋಧನೆಗೆ ಸಿಗುತ್ತಿರುವ ಸರಕಾರದ ಈ ಪ್ರೋತ್ಸಾಹವನ್ನು ಕೆಲವು ಕಂಪನಿಗಳು ಸದುಪಯೋಗ ಮಾಡಿಕೊಂಡು ಆಶ್ಚರ್ಯದ ಅಭಿವೃದ್ಧಿಯ ಗುರಿಗಳನ್ನು ಸಾಧಿಸುತ್ತವೆ. ಆದರೆ ಬಜಾಜ್ ಆಟೋದವರು ಇದಕ್ಕೂ ಮುಂದುವರಿದು ತಾವು ಬೆಳೆಸಿದ ತಂತ್ರಜ್ಞಾನವನ್ನು ಪರದೇಶಗಳಿಗೆ ರಫ್ತು ಮಾಡುತ್ತಾರೆ. ಈ ವೈಶಿಷ್ಟ್ಯಪೂರ್ಣ ಸಾಧನೆಯ ಹಿಂದಿರುವ ಶಕ್ತಿ ಕೇಶವ ಅವರು.

ಹಿಂಬದಿ ಎಂಜಿನ್ನಿನ ಆಟೋರಿಕ್ಷಾ

ಕೈಗಾರಿಕೆ ಹಾಗೂ ಕೃಷಿ ಅಭಿವೃದ್ಧಿ ಒಂದೆಡೆ, ನಗರಗಳ ಬೆಳವಣಿಗೆ ಇನ್ನೊಂದೆಡೆ. ನಗರ

ಸೇರಿ ಜನ ಮತ್ತು ಸರಕುಗಳ ಸಾಗಾಟಗಳನ್ನು ನಡೆಸುತ್ತವೆ. ಸಾಗಾಟದ ಈ ಸಮಸ್ಯೆಗೆ ಆಟೋರಿಕ್ಷಾ ಒಂದು ಸಮಾಧಾನವಾಗಿದೆ. ಅದರ ಪ್ರಯಾಣಿಕನಿಗೆ ಅದು ಅವಶ್ಯಕತೆಗೆ ಅನುಸಾರ ದಾರಿ, ಬೇಕಾದಲ್ಲಿ ಒಯ್ಯಲು ಬರುವಂಥದು. ಸಾರ್ವಜನಿಕ ವಾಹನ ವ್ಯವಸ್ಥೆಗಿಂತ ಶೀಘ್ರ ಗತಿಯ ಸಾಗಾಟ ಮತ್ತು ಇವೆಲ್ಲಕ್ಕೂ ಮಿಗಿಲಾಗಿ ಅಲ್ಪ ದರದ ಬಾಡಿಗೆಗಳು ಕಾರಣ.

ಆದರೆ ಸಾಂಪ್ರದಾಯಿಕ ಆಟೋರಿಕ್ಷಾಗಳಲ್ಲಿ ಕೀಸರು ಹಿಡಿಯುವ ಸಪ್ಪಳ ಮತ್ತು ಸ್ಥಳಾಭಾವದಿಂದ ಶಾರೀರಕ ಅಸೌಕರ್ಯಗಳು ಪ್ರಯಾಣಿಕನ ದೃಷ್ಟಿಯಿಂದ ಕುಂದುಗಳೆನಿಸಿದರೆ ಚಾಲಕನ ದೃಷ್ಟಿಯಿಂದ ವಿಪರೀತ ಶಾಖೋತ್ಪನ್ನ, ಕರ್ಕಶ ಸದ್ದು ಹಾಗೂ ಅತೀವ ಕಂಪನಗಳು [illegible]ತ್ತವೆ.

ಪ್ರತಿನಿತ್ಯ ೧೦-೧೨ ಗಂಟೆಗಳ ಕಾಲ ಇಂಥ ಕುಂದಿರುವ ರಿಕ್ಷಾ ನಡೆಸುವವನ ಆರೋಗ್ಯ ಕೆಡುವುದು ಸ್ವಾಭಾವಿಕವಿದೆ. ಕೇವಲ ಕೆಲವೇ ವರ್ಷಗಳ ವರೆಗೆ ಇಂಥ ರಿಕ್ಷಾಗಳನ್ನು ನಡೆಸುವಾತನ ಶರೀರದ ಅವಯವಗಳು ನಿಷ್ಕ್ರಿಯವಾಗುತ್ತವೆ. ಇಲ್ಲವೆ ಮಂದವಾಗುತ್ತ ಹೋಗುತ್ತವೆ. ಇಂತಹ ಅನಿಷ್ಟ ಪರಿಣಾಮಗಳಿಂದಾಗಿ ಚಾಲಕನ ಕಾರ್ಯ ಸಾಮರ್ಥ್ಯ ಕುಂದುತ್ತ ಹೋಗುತ್ತದೆ.

ಇದನ್ನು ನಿವಾರಿಸಲು ಉಪಾಯವೇನು? ಕೆಲವರು ಈ ಸಾಮಾಜಿಕ ಸಮಸ್ಯೆಗೆ ತಂತ್ರಜ್ಞಾನದ ಉಪಾಯ ಹುಡುಕಲು ಉದ್ಯುಕ್ತರಾದರು. ಅವರ ಪರಿಶ್ರಮ ಹಾಗೂ ದೃಢ ಸಂಕಲ್ಪಗಳ ಫಲವಾಗಿ ಹೊರಬಂತು ಹಿಂಬದಿ ಇಂಜಿನ್ನಿನ ಆಟೋ ರಿಕ್ಷಾ. ಪಾರಂಪರಿಕ ಆಟೋ ರಿಕ್ಷಾಗಳಲ್ಲಿ ಇಂಜಿನ್ನು ಚಾಲಕನ ಆಸನದ ಕೆಳಗಡೆಯೇ ಇರುವುದರಿಂದ ಇಂಜಿನ್ನಿನ ಕರ್ಕಶ ಧ್ವನಿ, ಅದು ನಿರ್ಮಿಸುವ ಅಸಹ್ಯ ಉಷ್ಣತೆ ಮತ್ತು ಕಂಪನಗಳಿಗೆ ತುತ್ತಾಗುವವನು



"ನಿಮ್ಮ ಅಂಗಡಿ ಮುಚ್ಚುವ ಸಮಯವಾಯಿತೆಂದು ಹೇಳಿ ಬೇಗ ಮುಗಿಸಲು ಸೂಚಿಸಲೂ ಬಹುದಿತ್ತಲ್ಲ!"

ಆತನೇ. ಈ ಯಾತನೆಗಳಿಂದ ಆತನನ್ನು ಉಳಿಸ ಬೇಕಾದರೆ ಇಂಜಿನ್ನನ್ನು ಅವನ ಆಸನದ ಕೆಳಗಡೆ ಯಿಂದ ತೆಗೆಯಬೇಕು. ಆದರೆ ಅದನ್ನು ಇಡು ವುದೆಲ್ಲಿ? ಇಂಜಿನ್ನಿಗೆ ಹೊಸ ಸ್ಥಳ ಹುಡುಕುವುದಕ್ಕೆ ಮೊದಲು ಪ್ರಯಾಣಿಕರ ಅಸೌಕರ್ಯಗಳ ಸಮಸ್ಯೆಗೂ ಉತ್ತರ ಹುಡುಕಬೇಕಲ್ಲ. ಕೇಶವರು ಈ ಎರಡೂ ಸಮಸ್ಯೆಗಳಿಗೆ ಏಕಕಾಲಕ್ಕೆ ಪರಿಹಾರ ಸಿಗುವಂತೆ ಹಿಂಬದಿ ಇಂಜಿನ್ನಿನ ರಿಕ್ಷಾ ನಿರ್ಮಿಸಿದರು. ಅದಕ್ಕೆ ಬಜಾಜ್ ಆರ್. ಈ. ಎಂದು ಹೆಸರಿಡಲಾಯಿತು [ಆಕೃತಿ ನೋಡಿರಿ]. ಈ ಹೊಸ ರಿಕ್ಷಾ ಮೊದಲಿನಂತ ಹೆಚ್ಚು ಇಂಧನ ಮಿತವ್ಯಯದ ವಾಹನವೂ ಆಗಿದೆ.*

ಕೇಶವರು ನಿರ್ಮಿಸಿದ ಹೊಸ ರಿಕ್ಷಾಕ್ಕೆ ದೇಶ ದಲ್ಲಿ ಎಷ್ಟೊಂದು ಬೇಡಿಕೆ ಇದೆ ಎಂಬುದನ್ನು ಅರಿಯಲು ಓದುಗರು ತಮ್ಮ ಸ್ಥಳೀಯ ವಿತರಕರಿಂದ ಅರಿತುಕೊಳ್ಳುವುದೇ ಒಳಿತು. ಈ ರಿಕ್ಷಾ ಭಾರತದ ಸೀಮೆಗಳನ್ನು ಭೇದಿಸಿ ಶ್ರೀ ಲಂಕಾದಲ್ಲಿ ಕೂಡ ಮಾರಾಟವಾಗುತ್ತಿದೆ. ಅಮೇ ರಿಕದಲ್ಲಿ ಕೂಡ ಈ ರಿಕ್ಷಾಕ್ಕೆ ಬೇಡಿಕೆ ಬಂದಿತಾ ದ್ದರಿಂದ ಅಲ್ಲಿಯ ತಾಂತ್ರಿಕ ಪರಿಣಾಮಗಳಿಗೆ ಅನುಸಾರವಾಗಿ ಸುರಕ್ಷಿತತೆ ಹಾಗೂ ವಾಯು ಪ್ರದೂಷಣಗಳಲ್ಲಿ ಕೆಲ ಸಂಶೋಧನೆಗಳನ್ನು ಮಾಡಿ ಈ ರೀಕ್ಷಾವನ್ನು ಪಿಕ್ ಅಪ್ ಕ್ಯಾಬಿನ್ ಎಂದು ರಫ್ತು ಮಾಡಲಾಗುತ್ತಿದೆ. ಈಚೆಗೆ ಲಂಡನ್ನಿನಲ್ಲಿ ನಡೆದ ಫೆಸ್ಟಿವಲ್ ಆಫ್ ಇಂಡಿಯಾ ಎಂಬ ಪ್ರದರ್ಶನದಲ್ಲಿ ಭಾರತ ನಿರ್ಮಿತ ಪ್ರಮುಖ ಯಾಂತ್ರಿಕ ವಸ್ತುವೆಂದು ಹಿಂಬದಿ ಇಂಜಿನ್ನಿನ ರಿಕ್ಷಾ ಪ್ರದರ್ಶಿಸಲ್ಪಟ್ಟಿತು.

ಎಂ. ೫೦ ಮೋಟರ್ ಸೈಕಲ್

ಭಾರತದಲ್ಲಿ ಮೊಪೆಡ್ ಯುಗ ಬಂದಿದೆ ಯಷ್ಟೆ. ಮೊಪೆಡ್‌ಗಳಿಗಿರುವ ಈ ಬೇಡಿಕೆಯನ್ನು ಗಮನಿಸಿ ಹಗುರವಾದ ಮೋಟರ್ ಸೈಕಲ್‌ಗಳ ಉತ್ಪಾದನೆಗೆ ಇಳಿಯಬೇಕು ಎಂದು ಕೇಶವ ತಮ್ಮ ಕಂಪನಿಗೆ ಒತ್ತಾಯಮಾಡಿದರು. ಅದಕ್ಕೆ ಅವಶ್ಯ ವಿರುವ ತಂತ್ರಜ್ಞಾನವನ್ನು ನಿರ್ಮಿಸುವ ಆತ್ಮ ವಿಶ್ವಾಸ ಅವರಲ್ಲಿತ್ತು.

ಆದರೆ ಉಳಿದೆಲ್ಲ ಕಂಪನಿಗಳಂತೆ ತಾವು ಒಂದು ಸರ್ವಸಾಧಾರಣ ಮೊಪೆಡ್ಡನ್ನು ಉತ್ಪಾ ದಿಸಿದರೆ ಅದರಲ್ಲಿ ಬಜಾಜದ ವೈಶಿಷ್ಟ್ಯವೇನು ಬಂತು? ಬಜಾಜ್ ಮೊಪೆಡ್‌ನಲ್ಲಿ ಅನೇಕ ಸಾಧನ್ಯ ಗಳು? ಇಂಧನದ ಮಿತವ್ಯಯ ಹಾಗೂ ಆಕರ್ಷಕ ವಿನ್ಯಾಸಗಳು ಇರಬೇಕು? ತಾನೆ ಈ ದಿಶೆಯಲ್ಲಿ ಕೇಶವ ಗಿಯರುಗಳುಳ್ಳ* ಹಗುರವಾದ ಮೋಟರ್ ಸೈಕಲ್ ನಿರ್ಮಿಸಿದರು. ಈ ಮೋಟರ್ ಸೈಕಲ್ ಇಂಜಿನ್ನು ಹಾಗೂ ಚಾಲಕನನ್ನು ಧೂಳು ಕೊಳಚೆ ಗಳಿಂದ ರಕ್ಷಿಸಲು ಸದೃಢ ಪ್ಲಾಸ್ಟಿಕ್ ಕವಚಗಳನ್ನು ಕೂಡಿಸಲಾಗಿದೆ. ಈ ವಾಹನ ಭಾರತದ ಪ್ರಮುಖ ನಗರಗಳಲ್ಲಿ ಈಗಾಗಲೇ ಓಡಾಡುತ್ತಿದ್ದು ಅದು ವಿಶೇಷತಃ ಯುವಕರ ಮೆಚ್ಚುಗೆ ಪಡೆದಿದೆ. ಅದಕ್ಕಿರುವ ಇರುವೆ ಸಾಲಿನ ಕ್ಯೂದಿಂದಲೇ ಅದರ ಬೇಡಿಕೆ ಎಷ್ಟು ಎಂಬುದನ್ನು ಅರಿಯ ಬಹುದು.

ಭಾರತೀಯ ಇಂಜಿನಿಯರರು ವಿಜ್ಞಾನಿಗಳು

ಭಾರತ ಹಿಂದುಳಿದ ದೇಶ. ಆದರೆ ನಮ್ಮ ದೇಶವು ವಿಜ್ಞಾನಿಗಳು ಹಾಗು ಇಂಜನಿಯರನ್ನು ನಿರ್ಮಿಸು ವದರಲ್ಲಿ ಅಮೇರಿಕ ರಶಿಯಗಳ ನಂತರ, ಮೂರ ನೆಯ ಸ್ಥಾನದಲ್ಲಿದೆ. ಇಷ್ಟಿದ್ದೂ ನಾವೇಕೆ ಹಿಂದುಳಿ ದಿದ್ದೇವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಾಗಾ ದರೆ ನಮ್ಮ ಜನ ದಡ್ಡರೆ?

ಈ ಪ್ರಶ್ನೆಗಳಿಗೆ ಕೇಶವ ಅವರು ಕೊಡುವ ಉತ್ತರ ವಿಚಾರಾರ್ಹವಾಗಿದೆ. ಅವರ ಪ್ರಕಾರ ನಮ್ಮ ವಿಜ್ಞಾನಿಗಳಾಗಲಿ ಇಂಜನಿಯರರಾಗಲಿ ದಡ್ಡರಂತೂ ಅಲ್ಲವೇ ಅಲ್ಲ. ನಾವು ಯಾರಿಗೂ

---

* ಮುಂದೆ ಎಂಜಿನ್ ಇರುವ ಮತ್ತು ಹಿಂಬದಿ ಎಂಜಿನ್ನಿರುವ ರಿಕ್ಷಾಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ ಎನ್ನುವುದನ್ನು ಗಮನದಲ್ಲಿಡಬೇಕು. ಆದರೆ ಈ ಹೊಸ ರಿಕ್ಷಾ ಮೂವರನ್ನು ಸಾಗಿಸುವು ದರಿಂದ ಚಾಲಕನ ಗಳಿಕೆ ಹೆಚ್ಚುತ್ತದೆ.

* ಮೊಪೆಡ್‌ಗಳಲ್ಲಿ ಗಿಯರುಗಳಿರುವದಿಲ್ಲ. ಆದ ಇದೀಗ ಬಜಾಜನ ಅನುಕರಣೆ ಮಾಡಿ ಬೇರೆ ಕಂಪನಿಗಳು ಕೂಡ ಗಿಯರುಗಳುಳ್ಳ ಮೊಪೆಡ್ ಗಳ ಉತ್ಪಾದನೆಗೆ ತೊಡಗಿದ್ದಾರೆ.

ಕೊಡೆಯುವಾದಲ್ಲ. ಆದರೆ ನಮ್ಮಲ್ಲಿರುವ ಮುಖ್ಯ ಅವಗುಣವೆಂದರೆ ನಮಗೆ ಸಮೂಹ ಕಾರ್ಯಭಾವ (team work spirit) ಇಲ್ಲ. ನಮಗೆ ವ್ಯಕ್ತಿಗತ ಶ್ರೇಯ–ಗೌರವದ ಭೂತ ಹಿಡಿದು ಕೊಂಡಿದೆ. ಸಮೂಹ ಕಾರ್ಯಭಾವವನ್ನು ಬೆಳ ಸಿಕೊಂಡರೆ ನಾವು ಜಗತ್ತಿನಲ್ಲಿ ಯಾವ ದೇಶ ವನ್ನೂ ಮೀರಿಸುವುದು ಅಸಾಧ್ಯವಲ್ಲ. ಈಚಿನ ದಿನಗಳಲ್ಲಿ ನಾವೂ ಸಾಕಷ್ಟು ಮುಂದೆ ಬರುತ್ತಿದ್ದೇವೆ. ನಾವು ಉತ್ಪಾದಿಸುತ್ತಿರುವ ವಸ್ತುಗಳಲ್ಲಿ ವೈವಿಧ್ಯ ಇಲ್ಲದೆ ಹೋದರೂ ಗುಣ ಮಟ್ಟದಲ್ಲಿ ನಮ್ಮ ವಸ್ತುಗಳು ಕಡಿಮೆಯೇನಿಲ್ಲ ಎನ್ನುತ್ತಾರೆ ಕೇಶವ ಅವರು.* ನಮ್ಮ ವಸ್ತುಗಳಿಗೆ ವಿದೇಶ ಗಳಲ್ಲಿ ಬಹಳ ಬೇಡಿಕೆ ಇದ್ದು ಇದನ್ನು ನಾವು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದು ಬೇಕು.

ಕೇಶವರು ಹಲವು ಸಲ ವಿದೇಶ ಪ್ರವಾಸ ಮಾಡಿ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ, ವಿಚಾರಗೋಷ್ಠಿಗಳಲ್ಲಿ ಪಾಲುಗೊಂಡಿದ್ದಾರೆ. ವಿಶ್ವಸಂಸ್ಥೆ ರಾಷ್ಟ್ರ ಸಂಘದ ಅಲ್ಪ ವಿಕಸಿತ ದೇಶಗಳ ವಿಚಾರಗೋಷ್ಠಿಗಾಗಿ ಅವರು ಆಸ್ಟ್ರೇಲಿಯಕ್ಕೆ ಹೋಗಿದ್ದರು. ರೈಲು ಪ್ರವಹನ (railway transmission) ತಂತ್ರಜ್ಞಾನದಲ್ಲಿ ಕೂಡ ಅವರು ಕೆಲಸ ಮಾಡಿರುವರು. ಈ ಕೆಲಸ ಮಾಡುವಾಗ ಸ್ವಿಜ ಇಂಜಿನಿಯರಿಂಗ್‌ನಲ್ಲಿಯ ಸೂಕ್ಷ್ಮ ಒಳನೋಟ ಅವರಿಗೆ ಲಭಿಸಿತು. ಅಖಿಲ ಭಾರತೀಯ ಅಭಿಯಾಂತ್ರಿಕ ಕೈಗಾರಿಕೆ ಸಂಘದ ಸಂಶೋಧನೆ ಹಾಗೂ ಅಭಿವೃದ್ಧಿ ಸಮಿತಿಯಲ್ಲಿ ಅವರು ಸದಸ್ಯರಾಗಿರುವರು.

ಕೇಶವರು ಆರು ಅಡಿ ಎತ್ತರ, ಆಜಾನುಬಾಹು ಸದೃಢ ಶರೀರ ಸೌಷ್ಟವ. ಅಸ್ಖಲಿತವಾಣಿ. ಸುಂದರ ಮಾತನ್ನಾಡುವ ಕೇಶವ ಅವರದು ಪ್ರಭಾವೀ ವ್ಯಕ್ತಿತ್ವ. ಮೊದಲ ನೋಟಕ್ಕೆ ಅವರನ್ನು ಸೈನ್ಯದಲ್ಲಿಯ ದೊಡ್ಡ ಮಟ್ಟದ ಅಧಿಕಾರಿಯಿರ ಬಹುದೆಂದು ತಿಳಿದುಕೊಂಡರೆ ಅದರಲ್ಲಿ ಸೋಜಿಗ ವೇನಿಲ್ಲ. ತಂತ್ರಜ್ಞಾನದಂತಹ ಕ್ಲಿಷ್ಟ ಕಾರ್ಯದಲ್ಲಿ ನಿರತರಾದರೂ ಅವರು ತಮ್ಮ ಇನ್ನೊಂದು ಆಸಕ್ತಿಯನ್ನು ಸುತರಾಂ ದುರ್ಲಕ್ಷಿಸಿಲ್ಲ. ಅವರು ಚುರುಕಾದ ಕ್ರೀಡಾಪಟು. ಕ್ರಿಕೆಟ್, ಬಾಸ್ಕೆಟ್ ಬಾಲ್, ಶಟಲ್‌ಕಾಕ್ ಅವರ ಮೆಚ್ಚಿನ ಆಟಗಳು. ವಿದ್ಯಾರ್ಥಿಯಾಗಿದ್ದಾಗ ಬಾಸ್ಕೆಟ್ ಬಾಲ್ ಆಟದಲ್ಲಿ ಅವರು ಅಂತರ್ ವಿಶ್ವ ವಿದ್ಯಾಲಯ ಪಂದ್ಯಗಳಲ್ಲಿ ಬಿಹಾರ ವಿಶ್ವವಿದ್ಯಾಲಯಕ್ಕಾಗಿ ಆಡಿ ಜಯ ತಂದಿದ್ದರು. ಇಂದಿಗೂ ಅವರು ಆಟೋಟಗಳಲ್ಲಿಯ ತಮ್ಮ ರುಚಿಯನ್ನು ಉಳಿಸಿಕೊಂಡಿರುವರು.

ಕನ್ನಡ ನಾಡಿನ ಮೇಧಾವಿ ಜನರೆಲ್ಲ ಬೆಳಗಿದ್ದು ಬಹುಶಃ ಕನ್ನಡ ನಾಡಿನ ಹೊರಗೇ. ಕರ್ನಾಟಕ ಕೇಶವರಂಥ ಮೇಧಾವಿಗಳಿಗೇಕೆ ಅವಕಾಶ ಕೊಡುತ್ತಿಲ್ಲ? ✡

* ಹೋದ ವರುಷ ಮುಂಬಯಿಯಲ್ಲಿ ನಡೆದ IMTEX ಎಂಬ ಯಂತ್ರೋಪಕರಣಗಳ ಪ್ರದರ್ಶನದಲ್ಲಿ ಕೂಡ ಇದೇ ಸಂಗತಿಯನ್ನು ವೃತ್ತಪತ್ರಗಳು ವರದಿ ಮಾಡಿದವು. ಕೆಲ ಯಂತ್ರೋಪಕರಣಗಳಂತೂ ಪಾಶ್ಚಿಮಾತ್ಯ ದೇಶಗಳನ್ನು ಗುಣ ಹಾಗೂ ಬೆಲೆಗಳಲ್ಲಿ ಸಾಕಷ್ಟು ಹಿಂದೆ ಹಾಕಿವೆ.



ಮನೋರೋಗಿಯೊಬ್ಬ ಏದುತ್ತಾ ಡಾಕ್ಟರಲ್ಲಿ ಬಂದು, "ಅಯ್ಯಯ್ಯೋ, ನನ್ನ ಯಕೃತ್ತಿಗೆ ರೋಗ ಬಂದುಬಿಟ್ಟದೆ ಡಾಕ್ಟ್ರೆ. ಬೇಗ ವಾಸಿ ಮಾಡಿ, ಇಲ್ಲವಾದರೆ ಸತ್ತೇ ಹೋದೇನು," ಎಂದ ತುಂಬಾ ಭಯಗ್ರಸ್ತನಾಗಿ. ಆದರೆ ಇವನ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಡಾಕ್ಟರು, "ಹಾಗೆಲ್ಲಾ ಭಯಪಡಬಾರದಪ್ಪಾ, ಉಳಿದೆಲ್ಲಾ ರೋಗಗಳ ಸಂಗತಿಯೇ ಬೇರೆ, ಇದರದ್ದೇ ಬೇರೆ. ರೋಗ ಬಂದರೂ ಅದರಿಂದ ನಿನಗೆ ತೊಂದರೆಯೇನೂ ಆಗುವುದಿಲ್ಲ," ಎಂದು ಡಾಕ್ಟರರು ಹೇಳಿದಾಗ, "ಹೌದು ಸಾರ್, ಆದ್ದರಿಂದಲೆ ನನಗೆ ರೋಗ ಬಂದಿದೆಯೆಂದು ಹೇಳುತ್ತಿರೋದು. ನನಗೂ ಯಾವ ತೊಂದರೆ ಆಗುತ್ತಾ ಇಲ್ಲ" ವೆಂಬುದೇ ಸಮಸ್ಯೆ! ಎಂದ ಆ ಮಹಾನುಭಾವ.

'ಬುದ್ಧ' ಬೇಕಾಗಿದ್ದಾನೆ!

ಎ. ಮಾಧವ ಉಡುಪ

ಬುದ್ಧದೇವ ಸಾವತ್ಥಿಯ ಜೇತವನ ಸೇರಿ ಹೆಚ್ಚು ಹೊತ್ತಾಗಿರಲಿಲ್ಲ. ಆತನ ಸ್ವಾಗತದ ಸಂಭ್ರಮವಿನ್ನೂ ಅಡಗಿರಲಿಲ್ಲ. ಅದರೆ ಅಷ್ಟರಲ್ಲೇ ನಗರದಲ್ಲಿ ಒಮ್ಮಿಂದೊಮ್ಮೆಗೇ ಕೋಲಾಹಲವೆದ್ದಿತು. ಅಂಗುಲೀಮಾಲನ ದಾಳಿಯ ಸುದ್ದಿ ಕಾಡ್ಗಿಚ್ಚಿನಂತೆ ಜನರನ್ನು ಕಂಗೆಡಿಸಿತು. ಮನುಷ್ಯರ ಶಿರವನ್ನು ಚೆಂಡಾಡಿ, ಅವರ ಕೈಬೆರಳುಗಳ ಮಾಲೆಯಿಂದ ಅಲಂಕೃತನಾಗಿ ಮೆರೆಯುವ ಆತನ ಕ್ರೂರ ಬಯಕೆಗೆ ಬಲಿಯಾದವರು ಎಷ್ಟೋ ಮಂದಿ. ಹಿಂಸೆಯೇ ಮೈವೆತ್ತಂತಿರುವ ಆವನ ಖಡ್ಗಕ್ಕೆ ನಾಳೆ ಇನ್ನಾರು ಬಲಿಯೆಂದು ಜನ ತಲ್ಲಣಗೊಂಡಿರುವಾಗಲೇ ಬುದ್ಧದೇವ ಊರ ಹೊರಗೆ ಬೀಡು ಬಿಟ್ಟಿದ್ದ ಅಂಗುಲೀಮಾಲನನ್ನೇ ನೇರವಾಗಿ ಸಮೀಪಿಸಿದ. ಕತ್ತಿಯನ್ನೆತ್ತಿ ಮೇಲೇರಿ ಬಂದ ಅಂಗುಲೀಮಾಲನಿಗೆ, ಬುದ್ಧನ ಕಂಗಳ ಪ್ರೀತಿಯ ಸಂದೇಶದ ಮಿಂಚು ಬಡಿದಂತಾಯಿತು. ಕತ್ತಿ ಕೆಳಗುರುಳಿ, ಬುದ್ಧನ ಅಡಿಗಳಲ್ಲಿ ಆತ ಶರಣಾದ. ಬುದ್ಧನ ಮಾತು ಆವನ ಹೃದಯವನ್ನು ಮುಟ್ಟಿ, ಹಿಂಸೆಯ ಹಂಬಲವನ್ನೇ ಕುಟ್ಟಿ ಪುಡಿಮಾಡಿತು. ಇದು ಅಂದಿನ ಕತೆಯಾದರೆ ಇಂದಿನ ಕತೆಯೇ ಬೇರೆ.

ಇಂದು ಭಯಂಕರ ಮಾರಕಾಸ್ತ್ರಗಳು ಅಂಗುಲೀಮಾಲನಂತೆ ಜಗತ್ತನ್ನೇ ಹೆದರಿಸುತ್ತಿವೆ. ಯುದ್ಧಭೂಮಿಯನ್ನು ಒಮ್ಮಿಂದೊಮ್ಮೆಗೇ ರುದ್ರಭೂಮಿಯನ್ನಾಗಿಸಬಲ್ಲ ಹೈಡ್ರೋಜನ್ ಸಯನೈಡ್, ಮಸ್ಟರ್ಡ್ ಗ್ಯಾಸ್, ನರ್ವ್ ಗ್ಯಾಸ್‌ಗಳಂತಹ ವಿಷ ಅನಿಲಗಳ ರಾಸಾಯನಿಕ ಅಸ್ತ್ರಗಳು ಒಂದೆಡೆಯಾದರೆ, ಒಮ್ಮಿಂದೊಮ್ಮೆಗೇ ಅಪಾರ ಸಾವು ನೋವುಗಳೊಂದಿಗೆ ನಾಗರಿಕತೆಯನ್ನು ನೆಲಸಮ ಮಾಡಬಲ್ಲ ಅಣ್ವಸ್ತ್ರಗಳು ಇನ್ನೊಂದೆಡೆ. ಜಗತ್ತಿನ ಸಶಸ್ತ್ರರಾಷ್ಟ್ರಗಳ ಬಳಿಯಿರುವ ಆ ಅಣ್ವಸ್ತ್ರಗಳ ಸಂಖ್ಯೆ ೫೦,೦೦೦ಕ್ಕೂ ಅಧಿಕ. ಅವುಗಳ ಸಾಮರ್ಥ್ಯ ೭೦೦ ಕೋಟಿ ಟನ್ ಟಿ. ಎನ್. ಟಿ. ಗಳಿಗೆ ಸರಿಗಟ್ಟುವಷ್ಟು. ಅಂದರೆ ಹಿರೋಷಿಮಾವನ್ನು ನಾಶಮಾಡಿದ ಬಾಂಬಿನ ಸಾಮರ್ಥ್ಯದ ಹತ್ತು ಲಕ್ಷದ ಆರು ನೂರು ಸಾವಿರ ಪಾಲು ಹೆಚ್ಚು. ಹಿರೋಷಿಮಾದ ಮೇಲೆ ೧೯೪೫ರ ಆಗಸ್ಟ್ ಆರರಂದು ಪ್ರಯೋಗಿಸಿದ ಪರಮಾಣು ಬಾಂಬು ಪಟ್ಟಣದ ಕಟ್ಟಡ, ಕಾರ್ಖಾನೆಗಳನ್ನೆಲ್ಲ ನಾಶಮಾಡಿ, ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಕೊಂದು, ಲಕ್ಷಾಂತರ ಜನರನ್ನು ವಿಸರಣ ವ್ಯಾಧಿಯಿಂದ ತೊಳಲಾಡಿ ಸಾಯಿಸಿದ್ದನ್ನು ನೆನೆದಾಗ ಈ ಅಣ್ವಸ್ತ್ರಗಳ ರುದ್ರ ಭೀಕರ ವಿನಾಶ ಪ್ರವೃತ್ತಿಯು ಅರಿವಾದೀತು. ತಜ್ಞರ ಎಣಿಕೆಯಂತೆ ಈಗಿರುವ ಅಣ್ವಸ್ತ್ರಗಳ ಮೊತ್ತ ಜಗತ್ತಿನ ಎಲ್ಲ ದೊಡ್ಡ ದೊಡ್ಡ ನಗರಗಳನ್ನು ನಾಶಮಾಡಲು ಬೇಕಾದುದಕ್ಕಿಂತಲೂ ಸುಮಾರು ೧೦೦ ಪಾಲು ಅಧಿಕ.

ಈ ಅಣ್ವಸ್ತ್ರಗಳ ರಾಶಿಯನ್ನು ಪ್ರಪಂಚದ



ಪ್ರತಿಯೊಬ್ಬರಿಗೂ ಹಂಚಿದರೆ ದೊರೆಯುವುದು ೫೦ ಟನ್ ಟಿ. ಎನ್.ಟಿ. ಯಷ್ಟು ಸ್ಫೋಟಕ ಸಾಮಗ್ರಿ. ಅಷ್ಟು ಆಹಾರ ಪೂರೈಕೆಯೂ ಆಗದ ಹೊಟ್ಟೆಗಳೆಷ್ಟೋ ಇರುವಾಗ, ತಲೆಯ ಮೇಲಿನ ಈ ಬಾಂಬುಗಳ ಹೊರೆ ಎಂತಹ ವಿಪರ್ಯಾಸ! ವಿಶ್ವಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಈ ಜಗತ್ತಿನ ೫೭ ಕೋಟಿ ಜನ ಪುಷ್ಟಿಕರ ಆಹಾರವಿಲ್ಲದೆ ನರಳುತ್ತಿದ್ದಾರೆ: ೧೫೦ ಕೋಟಿ ಜನ ಕನಿಷ್ಟ ವೈದ್ಯಕೀಯ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ: ೨೫ ಕೋಟಿ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯೇ ಇಲ್ಲ. ಆದರೆ ಜನಜೀವನವನ್ನು ಹಾಳುಗೆಡವಿ ಸಾವು ನೋವಿನ ಹೊನೆಗರೆಯುವ ಶಸ್ತ್ರಾಸ್ತ್ರಗಳಿಗೆ ಕೋಟಿಗಟ್ಟಲೆ ಹಣ ವರ್ಷ ವರ್ಷವೂ ಹರಿದು ಹೋಗುತ್ತಿದೆ. ವಿಶ್ವದ ಶಸ್ತ್ರಾಸ್ತ್ರಗಳ ಮಾರುಕಟ್ಟೆಯಲ್ಲಿ ಪ್ರತಿ ವರ್ಷ ೨೬ ಸಾವಿರ ಕೋಟಿ ಡಾಲರುಗಳ ವ್ಯಾಪಾರ ನಡೆಯುತ್ತಿದೆ. ಈಗ ಇರುವ ಮಾರಕಾಸ್ತ್ರಗಳು ಸಾಲದೆಂಬಂತೆ ೪ ಸಾವಿರ ಕೋಟಿ ಡಾಲರು ವೆಚ್ಚದಲ್ಲಿ ನ್ಯೂಟ್ರಾನ್ ಬಾಂಬಿನ ತಯಾರಿಕೆಗೆ ಅಮೇರಿಕ ಕೈ ಹಾಕಿದೆ. ವಿನಾಶದ ಹೆಡಂಭೂತವೀಗ ಅಣ್ವಸ್ತ್ರಗಳ ಬೆನ್ನೇರಿ ನಾಗರಿಕತೆಯ ಕದ ತಟ್ಟುತ್ತಿದೆ. ಅಣ್ವಸ್ತ್ರಯುದ್ಧದ ಭೀತಿಯ ನೆಡೆಯಡಿಯಲ್ಲೇ ಮನುಷ್ಯ ಕುಲವೆಲ್ಲ ಬದುಕುವಂತಾಗಿದೆ. ಪ್ರಬಲ ರಾಷ್ಟ್ರಗಳು ಯುದ್ಧಕ್ಕೆ ಎಷ್ಟು ಸಜ್ಜಾಗಿವೆಯೆಂದರೆ, ಕಂಪ್ಯೂಟರಿನ ಒಂದು ಗುಂಡಿ ಒತ್ತಿದರೂ ಸಾಕು, ರಾಕೆಟ್ಟುಗಳು ಅಣ್ವಸ್ತ್ರಗಳನ್ನು ಶರವೇಗದಿಂದ ವೈರಿ ರಾಷ್ಟ್ರಗಳ ಮೇಲೆ ಒಯ್ದು, ಭರದಿಂದ ಸ್ಫೋಟಿಸಿ, ಅವುಗಳನ್ನು ಧ್ವಂಸಮಾಡಬಲ್ಲವು. ಆಗ ಹೊರಹೊಮ್ಮುವ ಮಾರಕ ವಿಕಿರಣಗಳು ಸುತ್ತಮುತ್ತಲಿನ ರಾಷ್ಟ್ರಗಳಿಗೆಲ್ಲ ವ್ಯಾಪಿಸಿ, ಅಲ್ಲಿ ಸಾವಿನ ಮಳೆಗರೆಯಬಲ್ಲವು. ಈ ಅಗಾಧ ನಷ್ಟ, ಸಾವು, ನೋವುಗಳಿಗಿಂತಲೂ ಹೆಚ್ಚಾಗಿ ಅಸ್ಫೋಟನದ ಹೊಡತಕ್ಕೆ ವಾತಾವರಣದ ಎತ್ತರದಲ್ಲಿರುವ ಓಝೋನ್ ಆವರಣವೇ ನುಚ್ಚುನೂರಾಗಿ ಮಾರಕವಾದ ನೀಲಾತೀತ ಕಿರಣಗಳು ಭೂಮಿಗೆ ಇಳಿದರಂತೂ ಸರ್ವನಾಶ ತಪ್ಪಿದ್ದಲ್ಲ. ಅಣ್ವಸ್ತ್ರಗಳ ಉಪಯೋಗದಿಂದಾಗುವ ಸಾವು ಹಾನಿಯ ಭೀಕರತೆಯನ್ನು ಮನಗಂಡಿದ್ದ ಆಲ್ಬರ್ಟ್ ಐನ್‌ಸ್ಟೈನ್ ಒಮ್ಮೆ ನುಡಿದಿದ್ದರು– "ಮೂರನೇ ಮಹಾಯುದ್ಧದಲ್ಲಿ ಅಣ್ವಸ್ತ್ರಗಳನ್ನು ಉಪಯೋಗಿಸಿದಲ್ಲಿ ನಾಲ್ಕನೇ ಮಹಾಯುದ್ಧದ ಆಯುಧ ಕಲ್ಲುಗುಂಡು ಮಾತ್ರ" ಎಂದು. ಅಣ್ವಸ್ತ್ರಯುದ್ಧ ಈ ರೀತಿ ನಾಗರಿಕತೆಯ ಸೌಧವನ್ನೇ ಕೆಡವಿ, ಪುನಃ ಶಿಲಾಯುಗದ ಮೊದಲ ದಿನಗಳಿಗೇ ಮಾನವನನ್ನು ತಳ್ಳಬಲ್ಲದು! ಜಗತ್ತಿನ ೧೫೭ ರಾಷ್ಟ್ರಗಳಲ್ಲೀಗ ೩೦ ರಾಷ್ಟ್ರಗಳು ಅಂತಹ ಅಣ್ವಸ್ತ್ರಗಳ ಉತ್ಪಾದನೆಯಲ್ಲಿ ತೊಡಗಿ, ಇತರ ರಾಷ್ಟ್ರಗಳಿಗೆ ಮಾರುತ್ತಿವೆ. ಆ ರಾಷ್ಟ್ರಗಳಿಗೆ ಆ ಮಾರಕಾಸ್ತ್ರಗಳ ತಯಾರಿ, ಪ್ರಯೋಗ, ಮಾರಾಟವನ್ನು ನಿಲ್ಲಿಸುವಂತೆ ಬೋಧಿಸಿ, ಶಾಂತಿ–ಸಹಜೀವನದ ಮಂತ್ರವನ್ನು ಉಪದೇಶಿಸುವ 'ಬುದ್ಧನ' ಅವಶ್ಯಕತೆ ಇಂದೀಗ ತೀವ್ರವಾಗಿದೆ. ವಿಶ್ವಸಂಸ್ಥೆ ಆ ಪಾತ್ರ ನಿರ್ವಹಿಸುವಲ್ಲಿ ಸೋತಿದೆ. ಇಂದೀಗ ಜಗತ್ತಿನ ಜನಮಾನವೆಲ್ಲ ಒಂದಾದ ಆ ರೂಪ ತಳೆಯಬೇಕಾಗಿದೆ. ಜನಮನಸ್ಸಿನ ಒಕ್ಕೊರಲ ಕರೆ ಮಾತ್ರ, ಅಣ್ವಸ್ತ್ರಗಳಿಂದ ಸಜ್ಜಾಗಿ ಯುದ್ಧಕ್ಕೆ ಕಾಲು ಕೆರೆಯುತ್ತಿರುವ ಪ್ರಬಲ ರಾಷ್ಟ್ರಗಳ ಮನಃಪರಿವರ್ತನೆಗೈದು, ವಿಶ್ವಶಾಂತಿಗೆ ದಾರಿಮಾಡಿಕೊಟ್ಟೀತು. ✩

←— ಅಂಗೈಯಲ್ಲಿಟ್ಟುಕೊಂಡು ಪ್ರಪಂಚವನ್ನು ಪರಿಪಾಲಿಸಬೇಕಾದ ಪರಿಸ್ಥಿತಿಯೊದಗಿದೆ ಈಗ. ಅದಕ್ಕೆ ಕಾರಣ ಅಣ್ವಸ್ತ್ರಗಳನ್ನು ಅಂಗೈ ನೆಲ್ಲಿಕಾಯಿಯನ್ನಾಗಿಸಿಕೊಂಡ ಪ್ರಬಲ ರಾಷ್ಟ್ರಗಳು.

ಶಾಂತಿ ಮಂತ್ರವನ್ನು, ಅಹಿಂಸಾ ಬೋಧನೆಯನ್ನು ನೀಡಬಲ್ಲ 'ಬುದ್ಧ' ಬರಬೇಕೆಂಬ ಆಶಯವನ್ನೇ ಹೊತ್ತಿದೆ ಈ ಚಿತ್ರ. 'ಶಾಂತಿ-ಸಹಜೀವನದಿಂದ ಭದ್ರತೆ' ಎಂಬ ಶೀರ್ಷಿಕೆಯಿರುವ ಈ ಚಿತ್ರ ಸೋವಿಯತ್ ರಷ್ಯ ಏರ್ಪಡಿಸಿದ ಅಂತರಾಷ್ಟ್ರೀಯ ಭಿತ್ತಿಪತ್ರಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ ಪೋಲೆಂಡಿನ ರೋಮನ್ಸ್ಕಿಲ್ ಸೋಚಾರ ಕೃತಿ.

ಜನಸಂಖ್ಯಾ ಸ್ಫೋಟದಿಂದ ಏನೆಲ್ಲ ಆಗಲಿದೆಯೊ....

ಬರಲಿದೆ ಜಗತ್ಪ್ರಳಯ!

ಹೆಚ್. ರಾಮಚಂದ್ರಸ್ವಾಮಿ

ಶಕ್ತಿ ಮೂಲಗಳು ಮಾನವ ಸಮಾಜದ ಆಗು ಹೋಗುಗಳನ್ನು ರೂಪಿಸಲಿವೆಯೆಂದು ಕೆಲವೇ ವರ್ಷಗಳ ಹಿಂದೆ ಯಾರಿಗೂ ಅನ್ನಿಸಿರಲಿಲ್ಲ. ಆದರೆ ಇಂದಿನ ಸ್ಥಿತಿ ಹಾಗಿದೆ. ಹೊರಗಿನಿಂದ ನೋಡು ವವರಿಗೆ – ಉದಾಹರಣೆಗೆ ಸೌರಮಂಡಲದಾಚೆ ಯಿಂದ ನಮ್ಮೆಡೆಗೆ ಬರುತ್ತಿರುವ ಬುದ್ಧಿಜೀವಿ ಯೊಬ್ಬನಿಗೆ – ಈ ಭೂಮಿಯ ಮೇಲೆ ಶಕ್ತಿಯ ಬಿಕ್ಕಟ್ಟು ಏರ್ಪಟ್ಟಿರಬಹುದೆಂದನಿಸಲಾರದು. [illegible] ಕಿರಣಗಳಿಂದಾಗಿ ನಾವು [illegible] [illegible] ಪ್ರಮಾಣವೇ ನಮ್ಮ ವಿಜ್ಞಾನದ [illegible], ತಾಂತ್ರಿಕ ಸಿದ್ಧಿಯ ಅಳತೆಗೋಲು. [illegible] ಮಾನವ ಆಹಾರವಾಗಿ ತಿನ್ನುವ ಶಕ್ತಿಯ [illegible] ಶಕ್ತಿಯನ್ನು ತನ್ನ ಇತರ ಸೌಕರ್ಯ ಗಳಿಗಾಗಿ ಬಳಸುತ್ತಾನೆ. ಆದರೂ ದೈಹಿಕವಾಗಿ [illegible] ತಿಂದ ಆಹಾರದ ಐವತ್ತ ರಲ್ಲೊಂದು ಪಾಲೂ ಆಗದು. ಇದು ಕೇವಲ ಸರಾಸರಿ. ಮುಂದುವರೆದ ರಾಷ್ಟ್ರಗಳಲ್ಲಿ ಕೈಗಾರಿ [illegible] ಹಾಗೂ ಇತರ ರೂಪದ ಶಕ್ತಿಪಾತ [illegible] ಹೆಚ್ಚು. ಬೃಹತ್ ಪ್ರಮಾಣದಲ್ಲಿ ಶಕ್ತಿ [illegible] ನಾವಿನ್ನೂ ಸಮರ್ಥ ರಾಗಿಲ್ಲ. ಕಲ್ಲಿದ್ದಲು ಕಲ್ಲೆಣ್ಣೆಗಳಂತಹ ಮಾನವ ನಿಗೆ ಸುಲಭವಾಗಿ ಸಿಕ್ಕುವ ಶಕ್ತಿಯ ನಿಕ್ಷೇಪಗಳೆಲ್ಲ ಮುಗಿಯುತ್ತ ಬಂದಿವೆ. ಆಹಾರ ಕ್ಷಾಮ ಎಲ್ಲೆ ಲ್ಲಿಯೂ ತನ್ನ ಕೋರೆ ದಾಡೆಗಳನ್ನು ತೋರಿಸು ತ್ತಿದೆ. ಪರಿಸರ ಮಾಲಿನ್ಯ ಹಾಗೂ ಅದರ ಪರಿ ಣಾಮಗಳು ಬಗೆಹರಿಯದ ಸಮಸ್ಯೆಗಳಾಗುತ್ತಿವೆ. ಶಕ್ತಿಗಾಗಿ ನಾಗರಿಕ ಬೇಡಿಕೆ ಒಂದೇ ಸಮನೆ ಹೆಚ್ಚು ತ್ತಿದೆ. ಈ ಆತಂಕಕಾರಿ ಪರಿಸ್ಥಿತಿಯನ್ನೆದುರಿಸಲು ನಮ್ಮ ತಾಂತ್ರಿಕ ಬುದ್ಧಿ ಏನೇನೂ ಸಾಲದು.

ಮುಂದುವರೆದ ರಾಷ್ಟ್ರಗಳ ಜನಸಂಖ್ಯೆ ಇಡೀ ಪ್ರಪಂಚದ ಜನಸಂಖ್ಯೆಯ ಕೇವಲ ಕಾಲುಭಾಗ ವಿದ್ದುದರಿಂದ ಮಾನವ ಶಕ್ತಿ ಬಳಕೆಯ ವಿಶ್ವ ಸರಾಸರಿ ಕೇವಲ ಒಬ್ಬನಿಗೆ ಒಂದು ವರ್ಷಕ್ಕೆ ಎರಡು ಟನ್ ಕಲ್ಲಿದ್ದಲಿನಷ್ಟಾಗುವುದು. ಇದು ಪಾಶ್ಚಾತ್ಯ ರಾಷ್ಟ್ರಗಳ ಪೌರನೊಬ್ಬನ ಸಾಮಾನ್ಯ ಬಳಕೆ ಗಿಂತಲೂ ಕಡಿಮೆ. ಹೀಗಿರುವಾಗ ಹೊರಗಿನಿಂದ ನೋಡುವವರಿಗೆ ನಮ್ಮ ಪರಿಸ್ಥಿತಿ ತುಂಬಾ ತೃಪ್ತಿಕರ ವಾಗಿ ತೋರುವುದರಲ್ಲಿ ಆಶ್ಚರ್ಯವಿಲ್ಲ. ಶಕ್ತಿಯ ದುರ್ಲಭತೆಯಿಂದಾಗಿ ಆತಂಕಕಾರಿ ಪರಿಸ್ಥಿತಿ ಯನ್ನೆದುರಿಸಲಿರುವುದು ಮುಖ್ಯವಾಗಿ ಮುಂದು ವರೆದ ಪಾಶ್ಚಾತ್ಯ ಸಮಾಜ. ಆದರೆ ಇದರಿಂದಾಗಿ ಇತರ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಹದಗೆಡು ತ್ತಿರುವುದೂ ನಾವು ಕಾಣುತ್ತಿರುವಂತೆ ಸ್ವತಸ್ಸಿದ್ಧ. ಕಾಡು ಕಲ್ಲಿದ್ದಲು ಕಲ್ಲೆಣ್ಣೆ ಮುಂತಾದವು ತೀರಿದ ಮೇಲೆ ಉಳಿಯುವ ಸುಲಭದ ಶಕ್ತಿ ಮೂಲವೆಂದರೆ ಜಲವಿದ್ಯುತ್ತು. ಆದರೆ ಜಗತ್ತಿನ ಅರ್ಧಕ್ಕಿಂತಲೂ ಹೆಚ್ಚು ಜಲವಿದ್ಯುತ್‌ಸ್ಥಾವರಗಳು ದಕ್ಷಿಣ ಅಮೇರಿಕ ಹಾಗೂ ಆಫ್ರಿಕಗಳಲ್ಲಿರುವುದರಿಂದ, ಯುರೋಪು ಹಾಗೂ ಉತ್ತರ ಅಮೇರಿಕ ಸೌರಶಕ್ತಿ ಹಾಗೂ ಅಣುಶಕ್ತಿಗಳ ಕಡೆಗೆ ಗಮನ


ಹರಿಸಬೇಕಾಗುತ್ತದೆ. ಸೌರಶಕ್ತಿಯನ್ನು ಸಂಗ್ರಹಿಸಿ ಉಪಯೋಗಿಸಲು ಸಾಧ್ಯವಾಗುವುದಾದರೆ ಒಂದು ಮನೆಯ ಮೇಲೆ ಬೀಳುವ ಸೂರ್ಯನ ಬೆಳಕು ಆ ಮನೆಯ ಎಲ್ಲರಿಗೂ ಇಡೀ ವರ್ಷಕ್ಕೆ ಸಾಕಾಗುವಷ್ಟು ಶಕ್ತಿಯನ್ನು ಕೊಡಬಲ್ಲದು. ಆದರೆ ಬೇಸಿಗೆಯಲ್ಲಿ ಬಿದ್ದ ಶಕ್ತಿಯನ್ನು ಚಳಿಗಾಲಕ್ಕಾಗಿ ಸಂಗ್ರಹಿಸಿಡುವುದೇ ಸಮಸ್ಯೆ. ಇಂದಿನ ವಿಜ್ಞಾನ ನೀಡುವ ದುಬಾರಿ ವೆಚ್ಚದ ಅತಿ ಕಡಿಮೆ ಕಾರ್ಯಸಾಮರ್ಥ್ಯದ ಸೌರಕೋಶಗಳು ಈ ಸಮಸ್ಯೆಗೆ ಪರಿಹಾರವೆನಿಸಲಾರವು. ಹಾಗೆ ನೋಡಿದರೆ ಬೇಸಿಗೆಯಲ್ಲಿ ಮರ ಬೆಳೆಸಿ ಚಳಿಗಾಲದಲ್ಲಿ ಕಡಿದು ಉರಿಸುವ ಹಳೆಯ ವಿಧಾನವೇ ಇದಕ್ಕಿಂತ ಎಷ್ಟೋ ವಾಸಿ ಎನ್ನಬಹುದು. ಪರಮಾಣುವಿನಿಂದ ಶಕ್ತಿಯನ್ನು ಎರಡು ರೀತಿಗಳಿಂದ ಪಡೆಯಬಹುದು – ಥೋರಿಯಂ ಯುರೇನಿಯಂಗಳಂಥ ದೊಡ್ಡ ಪರಮಾಣುಕೇಂದ್ರಗಳ ವಿದಳನ (fission) ಹಾಗೂ ಜಲಜನಕ ಡಾಯ್ಟೀರಿಗಳಂಥ ಚಿಕ್ಕ ಪರಮಾಣು ಕೇಂದ್ರಗಳನ್ನು ಐಕ್ಯಗೊಳಿಸುವುದು. ನಮ್ಮಲ್ಲಿ ಥೋರಿಯಂ ಯುರೇನಿಯಂ, ಆದಿರುಗಳ ನಿಕ್ಷೇಪ ಧಾರಾಳವಾಗಿದೆಯಲ್ಲದೆ ಕೇಂದ್ರ ವಿದಳದನ ತಂತ್ರವೂ ಕೈಗೂಡಿದೆ. ಪ್ರಶ್ನೆಯೆಂದರೆ ನಮಗೆ ಅಗತ್ಯವಾದಷ್ಟು ಬೇಗ–ಎಂದರೆ ಪಾಶ್ಚಾತ್ಯರಾಷ್ಟ್ರಗಳ ಸಮಾಜ ಜೀವನ ಏರುಪೇರಾಗದಿರುವಷ್ಟು ಜಾಗ್ರತೆಯಾಗಿ–ಈ ಅಣು ಶಕ್ತಿಯನ್ನು ಹಿಂಡಿತೆಗೆಯಲು ಸಾಧ್ಯವೆ ಎಂಬುದು. ಇನ್ನು ಸಮುದ್ರಗಳಲ್ಲಿನ ಭಾರಜಲವನ್ನು ಪ್ರತ್ಯೇಕಿಸಿ ಅದರಲ್ಲಿರುವ ಡಾಯ್ಟೀರಿಯಮ್ಮನ್ನು ಹೀಲಿಯಮ್ಮನ್ನಾಗಿ ಬೆಸೆಯುವ ಮೂಲಕ ಅಗಾಧ ಪ್ರಮಾಣದ ಶಕ್ತಿಯನ್ನು ಪಡೆಯಬಹುದಾದರೂ ಇದಕ್ಕೆ ಅಗತ್ಯವಾದ ತಂತ್ರಸಿದ್ಧಿ ಮಾನವನಿಗೆ ಇನ್ನೂ ಲಭಿಸಿಲ್ಲ. ಶೀಘ್ರದಲ್ಲಿಯೇ ಪಾಶ್ಚಾತ್ಯ ರಾಷ್ಟ್ರಗಳು ತಮ್ಮೆಲ್ಲ ಬಳಕೆಗೂ ಅಣುಶಕ್ತಿಯನ್ನೇ ಅವಲಂಬಿಸಬೇಕಾಗುತ್ತದೆ: ಇದರಿಂದ ಏಳುವ ಹೊಸ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಶಕ್ತಿ ಮೂಲಗಳೆಲ್ಲ ಮುಗಿದು ಮಾನವ ಕಂಗಾಲಾಗುವ ಭಯ ಬಿಡಬೇಕಿಲ್ಲದ್ದು. ಹೊಸ ತಂತ್ರಗಳ ಮೂಲಕ ಹೊಸ ರೂಪದ ಶಕ್ತಿಗಳನ್ನು ಪಡೆಯುವುದು ಹಾಗೂ ಆ ಮೂಲಕ ಉಂಟಾಗುವ ಸಾಮಾಜಿಕ ಬದಲಾವಣೆಗಳನ್ನೆದುರಿಸುವುದು ಕಷ್ಟಸಾಧ್ಯವಾದರೂ ಅಸಾಧ್ಯವೇನಲ್ಲ. ಇಂದು ಮಾನವ ಎದುರಿಸಬೇಕಾದ ಅಸಾಧ್ಯವೆನ್ನಿಸುವ ಬೃಹತ್ ಸಮಸ್ಯೆಯೆಂದರೆ ಜನಸಂಖ್ಯಾಸ್ಫೋಟ. ಪುರಾತನ ನೆಂದರನಂತೆ ಬೇಟೆಯಾಡಿಕೊಂಡು ಬದುಕಿರಬಲ್ಲ ಸ್ವತಂತ್ರ ಜೀವಿ ಅವನಲ್ಲ. ಆರು ಸಾವಿರವರ್ಷಗಳ ಹಿಂದೆ ನದೀಮುಖಜ ಭೂಮಿಗಳಲ್ಲಿ ಗುಂಪು ಗುಂಪಾಗಿ ನೆಲೆಸಲಾರಂಭಿಸಿದಾಗಿನಿಂದಲೇ ಅವನು ಸಾಮಾಜಿಕ ಸಹವರ್ತನೆಯಿಂದ ಸಿಕ್ಕುವ ಸೌಲಭ್ಯಗಳನ್ನು ಕಂಡುಕೊಂಡಿದ್ದಾನೆ. ಒಗ್ಗಟ್ಟು ಆಹಾರದ ಹಾಗೂ ಸಂಪತ್ತಿನ ಉತ್ಪಾದನೆಗೂ ಸಾಮಾಜಿಕ ಭದ್ರತೆಗೂ ಆ ಮೂಲಕ ಅಧಿಕ ಸಂತಾನೋತ್ಪತ್ತಿಗೂ ಕಾರಣವಾಗಿದೆ. ಪ್ರಜಾಸಂಖ್ಯೆ ಹಾಗೂ ಉತ್ಪಾದನೆ ಪರಸ್ಪರ ಹೆಮ್ಮೆಕೊಂಡಿವೆ. ಸಂಪತ್ತಿನ ಉತ್ಪಾದನೆಗೆ ಹೊಸ ಹೊಸ ವೈಜ್ಞಾನಿಕ ತಂತ್ರಗಳ ಆವಿಷ್ಕಾರ ಅಗತ್ಯ: ಇದು ಸಂತಾನೋತ್ಪತ್ತಿಯಂತೆ ನಿರಂತರ ನಡೆಯುವಂಥದಲ್ಲ. ವಿಜ್ಞಾನ ಹಾಗೂ ತಾಂತ್ರಿಕತೆಗಳ ಮುನ್ನಡೆ ಮೇಲುಗೈಯಾದಾಗ ಸಮೃದ್ಧಿ: ಜನಸಂಖ್ಯೆಯ ಮೇಲುಗೈಯಾದಾಗ ಕ್ಷಾಮ. ಇದನ್ನು ನಾವು ಮಾನವ ಇತಿಹಾಸದುದ್ದಕ್ಕೂ ಕಾಣುತ್ತೇವೆ.

ಸಂಸ್ಕೃತಿಗಳನ್ನು ಜನಾಂಗಗಳನ್ನು ರಾಷ್ಟ್ರಗಳನ್ನು ಇಂದಿನ ವಿಜ್ಞಾನ ಒಂದುಗೂಡಿಸುತ್ತಿರುವ ವೇಗ ಆಶ್ಚರ್ಯಕರವಾದುದು. ಇನ್ನು ಕೇವಲ ಕೆಲವೇ ದಶಕಗಳಲ್ಲಿ ಮಾನವ ಸಮಾಜವೆಲ್ಲ ವೈಜ್ಞಾನಿಕವಾಗಿ ಒಂದಾಗುವುದು. ಇಂದಿನಂತ ನೂರರಷ್ಟೋ ಸಾವಿರದಷ್ಟೋ ಹೆಚ್ಚಿನ ಶಕ್ತಿ ಅಣುವಿಜ್ಞಾನದ ಮೂಲಕ ಮುಂದಿನ ಶತಮಾನದ ಮಾನವನಿಗೆ ಲಭಿಸೀತೆಂದಿಟ್ಟುಕೊಳ್ಳೋಣ. ಆದರೆ ಪ್ರಜಾವೃದ್ಧಿಗೆ ಮಿತಿಯುಂಟೇ? ಇಂದು ವಿಶ್ವದ ಪ್ರಜಾಭಿವೃದ್ಧಿಯ ದರ ವರ್ಷಕ್ಕೆ ಶೇಕಡ ೨ರಷ್ಟಿದ್ದರೂ. ಈ ವೃದ್ಧಿಯ ದರ ಸಹ ಸ್ಥಿರವಾಗಿ ಉಳಿಯದೆ ಈ ಹತ್ತಿಪ್ಪತ್ತು ವರ್ಷಗಳಲ್ಲಿ ಮಿತಿ ಮೀರಿ ಹೆಚ್ಚುತ್ತಿದೆ. ಹೀಗೆಯೇ ಮುಂದುವರೆ

ವರೆ ಸುಮಾರು ಕ್ರಿ.ಶ. ೨೦೦೦ದ ಹೊತ್ತಿಗೆ ಈ ಭೂಮಿಯ ಮೇಲಿನ ಪ್ರಜಾಸಂಖ್ಯೆಯು ಸಂಪತ್ವೃದ್ಧಿ ಭರಿಸಲಾರದಷ್ಟು ಅಗಾಧವಾಗುವುದು. ಇದು ಸ್ವಾಭಾವಿಕ. ಏಕೆಂದರೆ ಸಂಪತ್ವೃದ್ಧಿ ಮಾನವನ ಶ್ರಮದಿಂದ ಸ್ಥಾಪಿತವಾಗಬೇಕಾದ್ದು. ಪ್ರಜಾವೃದ್ಧಿ ಪ್ರಕೃತಿಧರ್ಮಸಹಜವಾಗಿ ಶ್ರಮವಿಲ್ಲದೆ ಆಗುವಂಥದ್ದು. ಹೀಗೆ ಪ್ರಜಾಸಂಖ್ಯೆ ಅತಿಯಾಗಿ ಸಂಪತ್ತು ಕಡಿಮೆಯಾದಾಗ ಬೇಡಿಕೆ ಆಧಿಕ್ಯವು ಅತಿ ತಾರಕಕ್ಕೇ ಏರುತ್ತದೆ. ಸಮಾಜ ರಚನೆ ಮುರಿದು ಬೀಳುತ್ತದೆ. ಅನಾವೃಷ್ಟಿಯೊಂದು ರೂಪದ ಪ್ರಳಯ ಅನಿವಾರ್ಯವಾಗುವುದು. ಮಾನವನೇ ಅದಕ್ಕೆ ಕಾರಣನಾಗುವ ಸಂಭವವೇ ಹೆಚ್ಚು. ರೋಮನ್ ಸಾಮ್ರಾಜ್ಯಪತನ ಇಂಥದೊಂದು ಪ್ರಳಯಕ್ಕೆ ಇತಿಹಾಸ ನೀಡುವ ಒಳ್ಳೆಯ ಉದಾಹರಣೆ. ದಂಗೆಗಳು. ಕ್ಷಾಮ. ರೋಗಗಳು

ಕಟ್ಟುಪಾಡುಗಳು. ಸೈನಿಕ ತರಬೇತಿ ಎಲ್ಲದರಲ್ಲೂ ಮುಂದಿದ್ದ ರೋಮನ್ನರಿಗೆ ಸಾಮ್ರಾಜ್ಯಪತನದ ನಂತರ ಸಾಂಸ್ಕೃತಿಕ ಪುನರುತ್ಥಾನದ ನಿರ್ವಹಣೆ ಅಸಾಧ್ಯವಾಯಿತು. ಕಷ್ಟವಾಯಿತು. ಕ್ರಿ. ಶ. ೪೫೦ ರಿಂದ ೯೦೦ ವರೆಗೆ ರೋಮನ್ ಇತಿಹಾಸದ ಬಗ್ಗೆ ನಮಗೆ ತಿಳಿದಿರುವುದು ಸ್ವಲ್ಪವೇ. ನಮಗೆ ಅದು ಕತ್ತಲ ಯುಗವೆನ್ನಿಸಿದರೂ ಆಗಿನ ಜನರ ಬದುಕು ಸಾಧಾರಣ ಸಮೃದ್ಧವೇ ಆಗಿದ್ದಿರಬೇಕು. ಏಕೆಂದರೆ ಮಹತ್ವದ ಆವಿಷ್ಕಾರಗಳಾಗದ್ದು ಆಗಲೇ. ತಾಂತ್ರಿಕತೆ ಹೊಸ ಹುಟ್ಟನ್ನು ಪಡೆದು ಬೆಳೆದದ್ದು ಆಗಲೇ. ಅಗ ವಿಕಾಸಗೊಂಡದ್ದೇ ಈಗಿನ ನಮ್ಮ ಸಂಸ್ಕೃತಿ. ಒಟ್ಟಿನಲ್ಲಿ ಪ್ರಳಯದ ನಂತರದ ಇಂತಹ ಪುನರುಜ್ಜೀವನಕಾಲದಲ್ಲಿ ಬದುಕುವವರು ಪುಣ್ಯವಂತರು: ಸ್ವಲ್ಪ ಜನ. ತುಂಬಾ ಸಂಪತ್ತು: ಏರಿದಷ್ಟಿಲ್ಲ ಕಾಡು. ಹಾದಿ ನೋಡಿದ್ದೆಲ್ಲ ವಿಸ್ತಾರ. ಅಧಿಕ



'ವಿನಾಕಾರಣ ನನ್ನನ್ನಷ್ಟೇ ಏಕೆ ದೂರುತ್ತೀರಿ? ನ್ಯಾಯವೋ ಅನ್ಯಾಯವೋ ನೆಲ ಕಬಳಿಸವುದು ನಮ್ಮಲ್ಲಿ ಬಹು ಪ್ರಾಚೀನ ಪರಂಪರೆ. ಭಗವಾನ್ ವಿಷ್ಣುವೂ ಅದನ್ನೇ ಮಾಡಿದನಲ್ಲ!'

ದ್ಧಿಯ ಅಲೆಯ ತುಟ್ಟ ತುದಿಯ ಹತ್ತಿರವಿದ್ದ ಮಾನವ ಸಮಾಜ ಮುರಿದು ಬೀಳುವುದನ್ನೇ ನಿರೀಕ್ಷಿಸುತ್ತಿರುವ ಇಂದಿನ ಕಾಲದಂಥ – ಅಸಹ್ಯವಾಗುವಷ್ಟು ಜನಸಂಖ್ಯೆಯ, ಸಹಿಸಲಸಾಧ್ಯವಾಗುವಷ್ಟು ಆರ್ಥಿಕ ಒತ್ತಡ, ಕಂಡು ಕೇಳರಿಯದಂಥ ಹೊಸ ರೋಗಗಳ, ನಿರ್ಭಾವುಕ ಹೃದಯಹೀನತೆಯ, ಶೋಷಿತ – ಶೋಷಕಾನ್ಯಾಯದ. ಕಾಲಕ್ಕಿಂತ ಅಂತಹ ನಿಧಾನ ಅಭಿವೃದ್ಧಿಯ ಅವಧಿಯೇ ಹೆಚ್ಚೋ ಆನಂದದಾಯಕವಾಗಿದ್ದೀತು. ಸಾಮಾಜಿಕ ಪ್ರಳಯದೆಡೆ ಭರದಿಂದ ಮುನ್ನುಗುತ್ತಿರುವ ನಾವು ರೋಮನ್ ಇತಿಹಾಸದಿಂದ ಕಲಿಯಬೇಕಾದದ್ದು ಬಹಳವಿದೆ.

ಮುಂದಿನ ಐವತ್ತು ವರ್ಷಗಳಲ್ಲಿ ಏನೇನೆಲ್ಲ ಆಗಬಹುದು? ಇಂದು ಅಭಿವೃದ್ಧ ರಾಷ್ಟ್ರಗಳು (ಯೂರೋಪು ಅಮೇರಿಕ ಜಪಾನು ಆಸ್ಟ್ರೇಲಿಯ ನ್ಯೂಜಿಲೆಂಡ್), ಕಮ್ಯುನಿಸ್ಟ ರಾಷ್ಟ್ರಗಳು (ಚೈನಾ ರಷ್ಯಾ ಹಾಗೂ ಅವುಗಳ ಅಧೀನ ರಾಷ್ಟ್ರಗಳು) ಹಾಗೂ ಜನಸಂಖ್ಯಾಸ್ಫೋಟವನ್ನನುಭವಿಸುತ್ತಿರುವ ಹಿಂದುಳಿದ ರಾಷ್ಟ್ರಗಳೆಂಬ ಮೂರು ತರಹ ಮಾನವ ಬಣಗಳಿವೆ. ಈ ಭೇದವಳಿಯದೆ ವಿಶ್ವಸಮಾಜ ರೂಪುಗೊಳ್ಳುವಂತಿಲ್ಲ. ವ್ಯಕ್ತಿಸ್ವಾತಂತ್ರ್ಯವೇ ಇಲ್ಲದ ಕಮ್ಯೂನಿಸರಿಗಿಂತ ಪ್ರಜಾಸತ್ತೆಯಲ್ಲಿ ನಂಬಿಕೆ ಇರಿಸಿದ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಸಂಪತ್ತು ಹಾಗೂ ವಿದ್ಯೆಗಳನ್ನು ಹಿಂದುಳಿದ ರಾಷ್ಟ್ರಗಳೊಡನೆ ಹಂಚಿಕೊಂಡು ಮುನ್ನಡೆಯಲು ಬದ್ಧವಾಗಿರುವಂತೆ ತೋರುತ್ತದೆ. ಅವರ ನಂಬಿಕೆಗಳಿಂದಾಗಿ ಹುಟ್ಟಿದ ಈ ಆಂತರಿಕ ಒತ್ತಡದ ವಿರುದ್ಧ ಅಭಿವೃದ್ಧ ರಾಷ್ಟ್ರಗಳು ಅಸಹಾಯವಾಗಿವೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಮುಂದಾಳುಗಳು 'ಚುನಾಯಿತ'ರಾಗುತ್ತಿರುವವರೆಗೆ ಅಧಿಕ ಸಂಖ್ಯೆಯ ಮಂದಗಾಮಿಗಳ ಮಾತೇ ನಡೆಯುತ್ತದೆ – ಎಂದರೆ ಎಲ್ಲರೊಡನೆ 'ಶಾಂತಿಯುತ ಸಹಜೀವನ'ಕ್ಕಾಗಿಯೇ ಅವರು ಶಾಸನ ಮಾಡುತ್ತಿರಬೇಕಾಗುತ್ತದೆ. ಸಂಪತ್ತನ್ನು ಎಲ್ಲರ ಹಿತಕ್ಕಾಗಿ 'ರಾಷ್ಟ್ರೀಕರಿಸ'ಬೇಕಾಗುತ್ತದೆ. ಇಂತಹ ಧೋರಣೆ ರಾಷ್ಟ್ರೀಯತೆಯ ಎಲ್ಲೆಯಲ್ಲಿ ನಿಲ್ಲದೆ ವಿದೇಶಾಂಗ ನೀತಿಯ ಮೂಲಕ ಹೊರಕ್ಕೆ ಹರಿಯುತ್ತದೆ. ಅನೇಕ ರಾಷ್ಟ್ರಗಳು ಒಟ್ಟಿಗೆ ಇಂಥ ಸಂದರ್ಭದಲ್ಲಿರುವಂತಾದಾಗ 'ವಿಶ್ವಸಂಸ್ಥೆ'ಯು 'ವಿಶ್ವಸರಕಾರ'ದ ರೂಪ ತಳೆಯುತ್ತದೆ: ರಾಷ್ಟ್ರೀಯತೆಯ ಸಂಕೋಚೆಗಳು ಮುರಿದುಬೀಳುತ್ತವೆ. ಕಳೆದ ಮೂವತ್ತು ವರ್ಷಗಳಲ್ಲಿ ಆದದೂ ಇದೇ. ಇಪ್ಪತ್ತೈದು ವರ್ಷಗಳ ಹಿಂದೆ ಅಮೇರಿಕ ವಿಶ್ವಸಂಸ್ಥೆಯಲ್ಲಿ ತನಗೆ ಬೇಕಾದಷ್ಟು ಓಟುಗಳನ್ನು ಸುಲಭವಾಗಿ ಗಳಿಸುತ್ತಿತ್ತು: ಇಂದು ಅದೇ ಅಮೇರಿಕಕ್ಕೆ ಓಟುಗಳು ದುರ್ಲಭವಾಗಿವೆ. ಇತರ ರಾಷ್ಟ್ರಗಳು ರಾಜಕೀಯವಾಗಿ ಅಮೇರಿಕಕ್ಕೆ ಸರಿದೊರೆಯಾಗಿ ನಿಂತಿವೆ. ವಿಶ್ವಸಂಸ್ಥೆಯಲ್ಲಿ ಪ್ರಜಾಸತ್ತೆ 'ಒಂದು ರಾಷ್ಟ್ರ ಒಂದು ಓಟು' ಆಗಿ ಮೈತಳೆದಿದೆ. ಅನಭಿವೃದ್ಧ ರಾಷ್ಟ್ರಗಳ ಜತೆ ತಮ್ಮನ್ನು ಮಟ್ಟಸ ಮಾಡುವ ಈ ಸ್ವಯಂಕೃತ ರೋಡ್‌ರೋಲರ್ ರುವದು ಅಮೇರಿಕದಂಥ ಅಭಿವೃದ್ಧ ರಾಷ್ಟ್ರಗಳು ಏನನ್ನೂ ಮಾಡಲೂ ಸಾಧ್ಯವಾಗದಂತಾಗಿದೆ. ದುರದೃಷ್ಟದ ಸಂಗತಿಯೆಂದರೆ ಇಂತಹ ಸಮೀಕರಣದಿಂದ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯಾಗುವ ಬದಲು ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಅವುಗಳ ಅವಲಂಬನೆ ಅತ್ಯಧಿಕವಾಗುತ್ತಿದ್ದು ಕಮ್ಯುನಿಸ್ಟ ರಾಷ್ಟ್ರಗಳ ಹೊರತಾಗಿ ಉಳಿದೆಲ್ಲ ರಾಷ್ಟ್ರಗಳು ಸಂಪತ್ತಿನ ಸಮನ್ವಯವನ್ನು ಸಾಧಿಸಲಾರದೆ ಪ್ರಳಯವನ್ನೆದುರಿಸಲಿವೆ


ರೋಮನ್ ಇತಿಹಾಸದ ಪುನರಾವರ್ತನೆಯಾಗಲಿದೆ. ಕಮ್ಯೂನಿಸ್ಟ ರಾಷ್ಟ್ರಗಳ ಇರುವಿಕೆ ವಸ್ತುಸ್ಥಿತಿಯನ್ನು ಸಂಕೀರ್ಣವಾಗಿಸಿದೆ. 'ಒಂದೋ ಅವು ಪ್ರಳಯಕ್ಕೆ ಆಹುತಿಯಾಗಿ 'ಕತ್ತಲ ಯುಗ'ಕ್ಕೆ ಪದಾರ್ಪಣಮಾಡುತ್ತವೆ: 'ಇಲ್ಲವೇ ಪಾಶ್ಚಾತ್ಯ ಪ್ರಳಯದ ಪ್ರಭಾವಕ್ಕೆ ಸಿಕ್ಕು ತಾತ್ಕಾಲಿಕವಾಗಿ ತಗ್ಗಿದರೂ ತಮ್ಮ ಉದ್ಯಮ ಶೀಲ ಸಾಮರ್ಥ್ಯದಿಂದಾಗಿ ಬೇಗ ಚೇತರಿಸಿಕೊಳ್ಳುತ್ತವೆ. ಹಾಗೆ ಚೇತರಿಸಿಕೊಂಡರೆ ಅನಂತರ ಕಮ್ಯೂನಿಸಂ ಪ್ರಭಾವ ಈ ಭೂಮಂಡಲದ ಮೇಲೆ ತಾನೇ ತಾನಾಗುತ್ತದೆ. ಪ್ರಜಾಸತ್ತೆ ವ್ಯಕ್ತಿಸ್ವಾತಂತ್ರ್ಯಗಳು ಹೇಳಹೆಸರಿಲ್ಲದಂತಾಗಿ ಹೋಗುತ್ತವೆ.

ವಿಶ್ವದ ಸಂಪತ್ಸೃಷ್ಟಿಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ದುಡಿಯಲೇಬೇಕಾಗುತ್ತದೆ. ದುಡಿಮೆಯು ಉದ್ಯೋಗ ಅಭಿವೃದ್ಧಿಯನ್ನು ಸಾಧಿಸಿ ಪ್ರಜಾಸಂಖ್ಯೆಯನ್ನು ಹಿಡಿತದಲ್ಲಿಡುತ್ತದೆ. ಮುಂದಿನ ಸಾಮಾಜಿಕ ಪ್ರಳಯ ಹೆಚ್ಚು ಹೆಚ್ಚು ಮುಂದೂಡಲ್ಪಡುತ್ತದೆ. ಆದರೆ ಇದು ಕೇವಲ ಊಹೆಯಷ್ಟೆ

ಮಾನವನ ಇತಿಹಾಸದಲ್ಲಿ ವ್ಯಕ್ತಿಯ ಇತರ ಎಲ್ಲ ಬಗೆಯ ಸ್ವಾತಂತ್ರ್ಯಗಳು ಲೋಪವಾದ ಉದಾಹರಣೆಗಳಿವೆಯಾದರೂ ಅವನ ಪ್ರಜನನ ಸ್ವಾತಂತ್ರ್ಯಕ್ಕೆಂದೂ ಧಕ್ಕೆ ಬಂದುದಿಲ್ಲ. ತಮಾಷೆಯೆಂದರೆ ಈ ಪ್ರಜನನ ಸ್ವಾತಂತ್ರ್ಯವು ವ್ಯಕ್ತಿ ವಿಕಾಸಕ್ಕೆ ಅಷ್ಟೇನೂ ಮುಖ್ಯವಾದದ್ದಲ್ಲ: ಪ್ರಳಯ ಸನ್ನಿಹಿತವಾದಾಗ ಲುಪ್ತವಾಗುವ ಇತರ ಸ್ವಾತಂತ್ರ್ಯಗಳಿಗೆ ಹೋಲಿಸಿದರೆ ಇದು ತೀರಾ ಅಮುಖ್ಯ. ಯುರೋಪು ಬ್ರಿಟನ್ನುಗಳಲ್ಲಿ ಇಂದು ಜನರು ತಾವಾಗಿಯೇ ಪ್ರಜಾಸಂಖ್ಯೆಯನ್ನು ಸ್ಥಿರಗೊಳಿಸಿದ್ದಾರೆ. ಅಮೇರಿಕದಲ್ಲಿಯೂ ಈ ಸಾಧನೆ ಸನ್ನಿಹಿತವಾಗಿದೆ. ಆದರೆ ಭರದಿಂದ ಬೆಳೆಯುತ್ತಿರುವ ಹಿಂದುಳಿದ ರಾಷ್ಟ್ರಗಳ ಜನಸಂಖ್ಯೆಯನ್ನು ಅವುಗಳ ಬಡತನದಿಂದಾಗಿ ಸಹಾನುಭೂತಿಯಿಂದ ನೋಡಲಾಗುತ್ತಿದೆ. ಇದು ಸಲ್ಲದು ಏಕೆಂದರೆ ಇದು ಖಂಡಿತವಾಗಿಯೂ ದಾರಿದ್ರ್ಯ ರಾಷ್ಟ್ರಗಳ ಅಳಿವಿಗೆ ಕಾರಣವಾಗುತ್ತದೆ. ಒಂದು ಜಾತಿಯ ಪ್ರಾಣಿಗಳಲ್ಲಿ ಒಂದು ಪ್ರಭೇದವು ಉಳಿದವಕ್ಕಿಂತ ಮಿಗಿಲಾಗಿ ಸಂತಾನೋತ್ಪತ್ತಿ ಹಾಗೂ ಸಂತಾನ ರಕ್ಷಣೆಗಳಲ್ಲಿ ಸಮರ್ಥವಾದರೆ, ಕಾಲಾನುಕ್ರಮದಲ್ಲಿ ಉಳಿದವೆಲ್ಲ ಅಳಿದು ಈ ಒಂದು ಪ್ರಭೇದವೇ ಉಳಿಯುವುದು ಜೀವವಿಕಾಸದ ನಿಯಮ. ಈಗಾಗಲೇ ಏಷ್ಯಾದ ಜನಸಂಖ್ಯೆ ಪ್ರಪಂಚದ ಉಳಿದೆಲ್ಲ ದೇಶಗಳ ಒಟ್ಟು ಜನಸಂಖ್ಯೆಯ ಎರಡರಷ್ಟಕ್ಕಿಂತಲೂ ಹೆಚ್ಚಾಗಿದೆ. ಸಂತಾನ ನಿಯಂತ್ರಣ ದೊಡ್ಡ ಸಮಸ್ಯೆಯೇನಲ್ಲ. ಒಂದು ಮಾರಣಕ್ಕೆ ಒಂದು ಜನನ ಸರಿದೂಗುವಂತೆ ಮಾಡಿದರೆ ಆರು ತಿಂಗಳಲ್ಲಿ ಸಮಸ್ಯೆ ಪರಿಹಾರವಾದೀತು. ಹೀಗೆ ಮಾಡಲು ಜನಸಮಷ್ಟಿಗೆ ಇಷ್ಟವಿಲ್ಲವೆಂದೇ ಪ್ರಜಾಸಂಖ್ಯೆ ಒಂದೇ ಸಮನೆ ಏರುತ್ತಿದೆ. ಈ ಅರೆ ಮನಸ್ಸಿನ ಸಂತಾನ ನಿಯಂತ್ರಣದಿಂದ ಸನ್ನಿಹಿತವಾಗಿರುವ ಸಾಮಾಜಿಕ ಪ್ರಳಯವನ್ನು ತಪ್ಪಿಸಲಾಗದು. ಇನ್ನು ಕೇವಲ ಅರ್ಧ ಶತಮಾನದಲ್ಲಿ ಸಂಭವಿಸಲಿರುವ ಈ ಪ್ರಳಯವಾದ ಮೇಲೆ ಅಳಿದುಳಿಯುವ ಮಾನವನಾದರೂ ಬುದ್ಧಿ ಕಲಿತು ಮೊದಲಿನಿಂದಲೇ ಸಂತಾನ ನಿಯಂತ್ರಣವನ್ನು ಸಾಧಿಸಿದ್ದೇ ಆದರೆ ಅವನ ಭವಿಷ್ಯ ಅತ್ಯಂತ ಉಜ್ವಲವಾದೀತು. ಸಂಪತ್ಸೃಷ್ಟಿ ಮಿಗಿಲಾಗಿ ಮುಂದುವರೆದು ವ್ಯಕ್ತಿವ್ಯಕ್ತಿಗೂ ದೊರೆಯುತ್ತಿರುವ ಶಕ್ತಿಯ ಪ್ರಮಾಣ ಬೆಳೆಯುತ್ತ ಹೋಗುವುದು. ಉತ್ಪಾದನೆ ಹೆಚ್ಚಿದಂತೆಲ್ಲ ವಿಜ್ಞಾನ ತಾಂತ್ರಿಕತೆಗಳು ಅಧಿಕಾಧಿಕವಾಗಿ ಜೀವನದ ಸಾರ್ಥಕ್ಯ ಐಹಿಕ ಸುಖ ಸಾಧನೆಗಳೂ ಹೆಚ್ಚುವುವು. ಮುಂದಿನ ಪ್ರಳಯವನ್ನು ಅನಿರ್ದಿಷ್ಟ ಕಾಲ ಮುಂದೂಡಿ ಮಾನವನು ತನ್ನ ಸಂಸ್ಕೃತಿಯನ್ನು ಕೋಟ್ಯಂತರ ವರ್ಷಗಳ ಕಾಲ ಈ ಭೂಮಿಯ ಮೇಲೆ ಉಳಿಸುವನು. ನಮ್ಮ ಭವಿಷ್ಯದ ಸಂತಾನದ ಕುಡಿಗಳು ನಾವೀಗ ಶಿಲಾಯುಗದ ಮಾನವನನ್ನು ಸ್ಮರಿಸುವಂತೆ ನಮ್ಮನ್ನು ಸಹಾನುಭೂತಿಯಿಂದ ಸ್ಮರಿಸುವವು: ನಾವು ಭಾವದೌರ್ಬಲ್ಯ ತಾಂತ್ರಿಕ ಅಪರಿಪೂರ್ಣತೆಗಳಿಂದಾಗಿ ಸಂತಾನ ನಿಯಂತ್ರಣದ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಾರದೆ ಪ್ರಳಯದೆಡೆ ಅಸಹಾಯಕರಾಗಿ ನುಗ್ಗಿದ್ದನ್ನು ಸಾನುಕಂಪರಾಗಿ ನೆನಪಿಸಿಕೊಳ್ಳುವವು. ★

ಪ್ರಳಯವಾಗುತ್ತದಂತೆ ಎಂಬ ಮಾತಿನಿಂದ ಗಾಬರಿಗೊಂಡ ಮೂವರು, "ಎಂಥ ಪ್ರಳಯ?" "ಬೆಂಕಿಯ ಮಳೆಯೆ?" ಮಹಾಭೂಕಂಪವೆ?" ಎಂದು ಪ್ರಶ್ನಿಸಿಕೊಳ್ಳುತ್ತಿದ್ದಾಗ ಅಲ್ಲಿಗೆ ಬಂದ ಸ್ಥಿತಪ್ರಜ್ಞ "ಬರಲಿ ಬಿಡಿರೋ... ಹಾಗಾದರೂ ನಿಮ್ಮ ತೊಂದರೆಗಳು ದೂರವಾಗುತ್ತವಲ್ಲ!" ಎಂದನಂತೆ!

ಹೀಗಿದ್ದರು ನನ್ನ ತಂದೆ



ಮೂಲ: **ಅನಿಲ ಶಾಸ್ತ್ರಿ**

ಕನ್ನಡಕ್ಕೆ: **ಶಾಂತಾ ದೇಶಪಾಂಡೆ**

೧೯೫೬ರಲ್ಲಿ ದಕ್ಷಿಣ ಭಾರತದಲ್ಲಿ ಘಟಿಸಿದ ರೈಲ್ವೆ ಅಪಘಾತಕ್ಕೆ ನೈತಿಕವಾಗಿ ತಾವೇ ಹೊಣೆಗಾರರೆಂದು ಭಾವಿಸಿ ನನ್ನ ತಂದೆ ಲಾಲಬಹಾದ್ದೂರ ಶಾಸ್ತ್ರಿಯವರು ತಮ್ಮ ರೈಲ್ವೆ ಮಂತ್ರಿಪದಕ್ಕೆ ರಾಜೀನಾಮೆಯಿತ್ತು ಹೊರ ಬಿದ್ದಾಗ ನಾನು ಕೇವಲ ಎಂಟು ವರ್ಷದ ಬಾಲಕನಾಗಿದ್ದೆ. ತಮ್ಮ ಪದವಿ, ಅಧಿಕಾರವನ್ನು ತ್ಯಜಿಸಿ ಮನೆಗೆ ಬಂದೊಡನೆ "ಮಂತ್ರಿಯ ಮಗನಾಗುವ ಅವಕಾಶ ತಪ್ಪಿದುದಕ್ಕಾಗಿ ದುಃಖವೆನಿಸುತ್ತದೆಯೆ?" ಎಂದು ನನ್ನನ್ನು ಕೇಳಿದರು. "ಈ ಮಂತ್ರಿ ಪದವಿ ಹೋದುದರಿಂದ ನಿಮಗೆ ನಮ್ಮೊಡನೆ ಹೆಚ್ಚಿನ ವೇಳೆ ಕಳೆಯಲು ಸಾಧ್ಯವಾಗುತ್ತದೆಂದು ನನಗೆ ಸಂತೋಷವೇ ಆಗಿದೆ" ಎಂದು ನಾನಾಗ ಉತ್ತರಿಸಿದ್ದು ಇಪ್ಪತ್ನಾಲ್ಕು ವರ್ಷಗಳ ನಂತರವೂ ನನಗೆ ಚೆನ್ನಾಗಿ ನೆನಪಿದೆ. ನನ್ನ ತಂದೆ ಆಗ ಮುಗುಳ್ನಗುತ್ತಾ ನನ್ನನ್ನು ಮುದ್ದಿಸಿದ್ದರು.

ಆದರೆ ವಾಸ್ತವಿಕವಾಗಿ ಹಾಗೆಂದಿಗೂ ಆಗಲಿಲ್ಲವೆಂಬುದು ನನಗೆ ತೀವ್ರ ನಿರಾಶೆಯನ್ನುಂಟುಮಾಡಿತು. ಏಕೆಂದರೆ ರಾಜೀನಾಮೆಯ ನಂತರ ನನ್ನ ತಂದೆಯ ಕಾರ್ಯಭಾರವು ಇನ್ನೂ ಅಧಿಕಗೊಂಡು ಮಂತ್ರಿಯಾಗಿದ್ದಾಗಿನಿಂತ ಇನ್ನೂ ಕಡಿಮೆ ಸಮಯ ಅವರು ನಮ್ಮೊಂದಿಗೆ ಕಳೆಯುವಂತಾಯಿತು.

ಎರಡನೆಯ ಸಾರ್ವತ್ರಿಕ ಚುನಾವಣೆಯು ತ್ವರಿತ ಗತಿಯಿಂದ ಸಮೀಪಿಸುತ್ತಿದ್ದು ಹೆಚ್ಚೆಚ್ಚು ಜನರು ಅವರನ್ನು ಕಾಣಲು ಬರುತ್ತಿದ್ದರು. ಇಡೀ ದೇಶದ ತುಂಬ ಅವರ ಪ್ರವಾಸಗಳು ಹೆಚ್ಚಿದವು; ದೀರ್ಘಕಾಲೀನವೂ ಆದವು. ನಸುಕಿನಲ್ಲಿ ನಾನಿನ್ನೂ ಗಾಢನಿದ್ರೆಯಲ್ಲಿದ್ದಾಗಲೇ ಮನೆ ಬಿಟ್ಟು ಹೋದವರು ರಾತ್ರಿ ತಡವಾಗಿ ಮನೆಗೆ ಬಂದಾಗ ನಾನು ಪುನಃ ನಿದ್ರಿಸಿಬಿಟ್ಟಿರುತ್ತಿದ್ದೆ. ಹೀಗಾಗಿ ಆರೇಳು ದಿನಗಳವರೆಗೆ, ಕೆಲವು

(ಕೃಪೆ : ಡೆಕ್ಕನ ಹೆರಾಲ್ಡ್)

ಸಲ ಒಂದೊಂದು ವಾರಕ್ಕಿಂತ ಹೆಚ್ಚಾಗಿ ನನಗೆ ತಂದೆಯ ದರ್ಶನವೇ ಆಗುತ್ತಿರಲಿಲ್ಲ. ನಾವು ನಾಲ್ವರು ಸಹೋದರರು ಮತ್ತು ಇಬ್ಬರು ಸಹೋದರಿಯರು [ಒಬ್ಬ ಸೋದರಿ ಕಳೆದವರ್ಷ ತೀರಿಕೊಂಡರು]. ನಮ್ಮ ತಂದೆಗೆ ದೇಶದ ಪ್ರತಿಯೊಬ್ಬರ ಸಲುವಾಗಿ ದುಡಿಯಲು ಸಮಯವಿದೆ; ಆದರೆ ನಮಗಾಗಿ ಮಾತ್ರ ಇಲ್ಲ ಎಂಬುದೇ ನಮ್ಮೆಲ್ಲರ ಏಕಾಭಿಪ್ರಾಯದ ತಕರಾರಾಗಿತ್ತು ಅವರ ಬಗ್ಗೆ.

ನನ್ನ ತಂದೆಯ ಅನೇಕ ಒಳ್ಳೆಯ ಗುಣಗಳಲ್ಲಿ ಸರಳತೆ, ನಿಷ್ಕಪಟತೆ, ವಿನಯಗಳಿಗೆ ನನ್ನ ದೃಷ್ಟಿಯಲ್ಲಿ ಪ್ರಥಮಸ್ಥಾನ. ಅವರು ಸರ್ಕಾರದ ಅತ್ಯುನ್ನತ ಅಧಿಕಾರ ಸ್ಥಾನದಲ್ಲಿದ್ದಾಗಲೂ ಅದೇ ಸರಳತೆ, ಸೌಜನ್ಯಗಳನ್ನು ತೋರಿದರು. ಅವರು ಪ್ರಧಾನಮಂತ್ರಿಯಾದಾಗ ನಾನು ಅವರ ಮಲಗುವ ಕೋಣೆಯ ನೆಲಕ್ಕೆ ಒಂದು ರತ್ನಗಂಬಳಿಯನ್ನು ಹಾಕಿಸಬೇಕೆಂದು ಹೇಳಿದಾಗ ಅವರು ಸ್ಪಷ್ಟವಾಗಿ ನಿರಾಕರಿಸಿದರು. ಹಾಗಾದರೆ ಇನ್ನೊಂದು ಬೇರೆ ದೊಡ್ಡ ಕೋಣೆಯನ್ನು ಉಪಯೋಗಿಸಬೇಕೆಂಬ ನನ್ನ ಸೂಚನೆಯೂ ನಿರುಪಯುಕ್ತವಾಯಿತು. ಏಕೆಂದರೆ ಅವರು ಅದಕ್ಕೂ ಒಪ್ಪಲಿಲ್ಲ. ಆಗಲೂ ಅವರು ತಮ್ಮ ವರಾಂಡವನ್ನು ಪರಿವರ್ತಿಸಿ ಮಾಡಿದ್ದ ಹಳೆಯ ಕೋಣೆಯನ್ನೇ ಉಪಯೋಗಿಸಲು ಇಚ್ಛಿಸಿದರು.

ಪ್ರಧಾನಿಯಾದ ನಂತರ ಒಮ್ಮೆ ಅವರು ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು. ಆಗ ಒಬ್ಬ ಅಮೆರಿಕನ್ ವರದಿಗಾರನು, "ಶಾಸ್ತ್ರಿಗಳು ಧೋತಿ, ಕುರ್ತಾದಂತಹ ಸಾಧಾರಣವಾದ ಸರಳವಾದ ಬಟ್ಟೆಗಳನ್ನು ಧರಿಸುತ್ತಿದ್ದರೂ ಅವರ ಮಕ್ಕಳು ಮಾತ್ರ ಪ್ಯಾಂಟು ಶರ್ಟುಗಳನ್ನು ಧರಿಸುತ್ತಾರೆ" ಎಂದು ಟೀಕಿಸಿದರು. ಇದಕ್ಕೆ ಪ್ರತಿಯಾಗಿ ನನ್ನ ತಂದೆ, ತಾನು ಬಡ ಶಾಲಾ ಮಾಸ್ತರನ ಮಗನಾಗಿದ್ದೆ; ಆದರೆ ತನ್ನ ಮಕ್ಕಳು ಭಾರತದ ಪ್ರಧಾನಿಯ ಮಕ್ಕಳಾಗಿದ್ದಾರೆಂದು ಹೇಳಿದ್ದರು. ಈ ಘಟನೆಯನ್ನು ನಾನಿಲ್ಲಿ ಹೇಳುವ ಉದ್ದೇಶ ಇಷ್ಟೇ. ಕಾಲಕ್ಕೆ ತಕ್ಕಂತಹ ಬದಲಾವಣೆಯನ್ನು ಬಯಸಬೇಕೆಂಬುದಕ್ಕೆ ಅವರೆಂದೂ ವಿರೋಧಿಯಾಗಿರಲಿಲ್ಲ.

ಅವರು ಕೇಂದ್ರ ಗೃಹಮಂತ್ರಿಯಾಗಿದ್ದಾಗ ನಡೆದ ಇನ್ನೊಂದು ಘಟನೆಯನ್ನು ನಾನಿಲ್ಲಿ ಹೇಳಲು ಬಯಸುತ್ತೇನೆ. ನಾನು ಮತ್ತು ನನ್ನ ಇಬ್ಬರು ತಮ್ಮಂದಿರು ಶಾಲೆಗೆ ಕುದುರೆಬಂಡಿಯಲ್ಲಿ ಹೋಗುತ್ತಿದ್ದೆವು. ಅದೇ ಶಾಲೆಗೆ ನಮ್ಮ ಸ್ನೇಹಿತರನೇಕರು ಕಾರುಗಳಲ್ಲಿ ಬರುತ್ತಿದ್ದರು. ಅವರ ತಂದೆಯರು ಸರ್ಕಾರಿ ಅಧಿಕಾರಿಗಳು; ಹಾಗೂ ಇನ್ನೂ ಕೆಲವರು ನಮ್ಮ ತಂದೆಯ ಕೈಕೆಳಗಿನ ಗೃಹಶಾಖೆಯ ನೌಕರರು. ಹೀಗಾಗಿ ಗೃಹಮಂತ್ರಿಯ ಮಕ್ಕಳಾಗಿಯೂ ಕಾರು ಇಲ್ಲದಿರುವದು ನಮ್ಮನ್ನು ದುಃಖಕ್ಕೀಡುಮಾಡಿತ್ತು.


ಒಂದು ದಿನ ನಾವು ಮೂವರು ತಂದೆಯೊಡನೆ ಈ ವಿಷಯ ಎತ್ತಬೇಕೆಂದು ನಿರ್ಣಯಿಸಿದೆವು. ಒಂದು ರಾತ್ರಿ ತಾವು ಮನೆಗೆ ತೀರಾ ತಡವಾಗಿ ಬಂದಾಗಲೂ ನಾವೆಲ್ಲ ಎಚ್ಚರವಾಗಿಯೇ ಇರುವದನ್ನು ಕಂಡು ಅವರಿಗೆ ಅಚ್ಚರಿಯಾಯಿತು. ನಾವು ಒಬ್ಬ ಗೃಹಮಂತ್ರಿಯ ಮಕ್ಕಳಾಗಿದ್ದರೂ ಶಾಲೆಗೆ ಹೋಗಲು ನಮಗೇಕೆ ಕಾರು ಇಲ್ಲವೆಂದು ಕೇಳಿಯೇಬಿಟ್ಟೆವು. ಆಗ ಅವರು ತಮ್ಮ ಎಂದಿನ ಮುಗುಳ್ನಗೆಯೊಂದಿಗೆ ತನಗೆ ಸ್ವಂತದ ಕಾರಿಲ್ಲವೆಂದೂ ಬೇಕಿದ್ದರೆ ನಮಗಾಗಿ ಸರ್ಕಾರಿ ಕಾರನ್ನು ಒದಗಿಸಬಹುದೆಂದೂ ಹೇಳಿದರು. ನಮಗೆ ಅತ್ಯಾನಂದವಾಯಿತು. ಆದರೆ ಆಗ ಅವರು ನಮ್ಮನ್ನು ಈ ರೀತಿಯಾಗಿ ಎಚ್ಚರಿಸಿದರು: "ಈ ಸೌಲಭ್ಯವು ನಾನು ಗೃಹಮಂತ್ರಿಯಾಗಿರುವ ವರೆಗೆ ಮಾತ್ರ ಸಾಧ್ಯ. ಯಾವಾಗ ನಾನು ಆ ಅಧಿಕಾರವನ್ನು ತ್ಯಜಿಸುವೆನೋ ಆಗ ಪುನಃ ನೀವು ಕುದುರೆ ಬಂಡಿಯಲ್ಲೇ ಹೋಗಬೇಕಾಗುತ್ತದೆ." ಎಂದು. ಆಗ ನಮಗೆ ಕಾರು ಬಿಟ್ಟು ಪುನಃ ಕುದುರೆ ಬಂಡಿಯ ಪ್ರವಾಸ ಎಷ್ಟು ತಾಪದಾಯಕವಾದದ್ದೆಂಬುದು ಕೂಡಲೇ ನಮ್ಮ ಅನುಭವಕ್ಕೆ ಬಂದಿತು. ಆದ್ದರಿಂದ ಕೊನೆಗೆ ನಾವು ನಮ್ಮ ಕುದುರೆ ಬಂಡಿಯನ್ನೇ ಅವಲಂಬಿಸಲು ನಿರ್ಧರಿಸಿದೆವು.

ನಮ್ಮ ಅಂದಿನ ನಿರ್ಣಯವು ತಪ್ಪಲ್ಲವೆಂದು ಇಂದಿಗೂ ನನಗೆ ಅನಿಸುತ್ತದೆ. ಆದ್ದರಿಂದಲೇ ಇಂದು ಕೂಡ ನನಗೆ ಯಾವುದೇ ಕಠಿಣವಾದ,

ಅಪ್ರಿಯವಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಕಷ್ಟವೆನಿಸುವದಿಲ್ಲ. ಇದಕ್ಕಾಗಿ ನಾನು ನನ್ನ ತಂದೆಗೆ ಅತ್ಯಂತ ಕೃತಜ್ಞನಾಗಿದ್ದೇನೆ. ನೂರಾರು, ಸಾವಿರಾರು ಪುಸ್ತಕಗಳಿಂದ ಪಡೆಯಲಾಗದ ಕಲಿಯಲಾಗದ ಜೀವನದ ಮೌಲ್ಯಗಳನ್ನು ಅವರಿಂದ ಕಲಿತಿದ್ದೇನೆ.

ನನ್ನ ತಂದೆಯ ಸರಳತೆ ಸಂಶಯಾತೀತವಾಗಿತ್ತು. ಈ ಗುಣದಿಂದಾಗಿಯೇ ಅವರು, ಜನರಿಂದ ಗೌರವ, ವಿಶ್ವಾಸಗಳನ್ನು ಗಳಿಸಿದರು. ಒಮ್ಮೆ ಜವಾಹರಲಾಲ ನೆಹರು ಅವರು ಲಾಲಬಹಾದ್ದೂರ ಶಾಸ್ತ್ರಿಯವರಿಗಿಂತ ಉತ್ತಮ ಸ್ನೇಹಿತನನ್ನೂ ಸಹೋದ್ಯೋಗಿಯನ್ನೂ ಯಾರೂ ಬಯಸಲಾರರು; ಅವರು ಅತ್ಯಂತ ಸರಳರು, ಪ್ರಾಮಾಣಿಕರು, ನಿಷ್ಠರು, ಉನ್ನತ ಧ್ಯೇಯವಾದಿಗಳು ಮತ್ತು ವೈಚಾರಿಕ ಪ್ರಜ್ಞೆಯುಳ್ಳವರು, ಅಲ್ಲದೆ ಕಠಿಣ ಪರಿಶ್ರಮಿಗಳು ಎಂದು ವರ್ಣಿಸಿದ್ದಾರೆ.

ಒಮ್ಮೆ ನಾನು ತೀರಾ ಚಿಕ್ಕವನಿದ್ದಾಗ ನನ್ನ ತಂದೆಯನ್ನು, "ನೀವು ದೇವರ ಪ್ರಾರ್ಥನೆ ಮಾಡುತ್ತಿದ್ದೀರಾ ಅಥವಾ ತಾಯಿಯಂತೆ ನಿತ್ಯ ಪೂಜೆಯನ್ನು ಮಾಡುತ್ತಿದ್ದೀರಾ?" ಎಂದು ಕೇಳಿದ್ದೆ. ಆಗ ಅವರು ಹಾಗೆ ಮಾಡುವದಕ್ಕೆ ತಮಗೆ ತುಂಬಾ ಆಸೆ ಇದ್ದರೂ ಸಾಕಷ್ಟು ಸಮಯ ದೊರೆಯುವದಿಲ್ಲವೆಂದು ಹೇಳಿದ್ದರು. ಆದರೂ ಪ್ರತಿನಿತ್ಯ ಬೆಳಿಗ್ಗೆ ಕೇವಲ ಮೂವತ್ತು ಸೆಕೆಂಡುಗಳ ಕಾಲ ತಾನು ದೇವರ ಪ್ರಾರ್ಥನೆ ಮಾಡುವದಾಗಿ ಅವರು ಹೇಳಿದ್ದರು. ಅಷ್ಟೊಂದು ಅಲ್ಪ ಸಮಯದಲ್ಲಿ ಅವರು ಏನೆಂದು ಪ್ರಾರ್ಥಿಸುತ್ತಿರಬಹುದೆಂದು ನಾನು ಕೇಳಿದಾಗ ಅವರು ತಮ್ಮ ಇಡೀ ದಿನದ ಮಾತು ಕೃತಿಗಳಿಂದ ಯಾರ ಮನಸ್ಸಿಗೂ ನೋವುಂಟಾಗದಿರಲೆಂದು ಪ್ರಾರ್ಥಿಸುತ್ತಿದ್ದುದಾಗಿ ಹೇಳಿದ್ದರು. ನಾವೆಲ್ಲ ಈ ಮೊದಲೇ ಹೇಳಿದಂತೆ ಯಾವಾಗಲೂ ಒಂದು ಸ್ವಂತ ಕಾರನ್ನು ಹೊಂದಬೇಕೆಂಬ ಬಯಕೆಯುಳ್ಳವರಾಗಿದ್ದೆವು. ಆದ್ದರಿಂದ ಅವರು ಪ್ರಧಾನ ಮಂತ್ರಿಯಾದೊಡನೆ ಮತ್ತೊಮ್ಮೆ ನಮ್ಮ ಈ ಬೇಡಿಕೆಯನ್ನು ಅವರ ಮುಂದೆ ಇಟ್ಟೆವು. ಅನಂತರ ಒಂದು ಸಂಜೆ ನಮ್ಮನ್ನೆಲ್ಲ ಕರೆದು ತಾವು ಒಂದು ಕಾರನ್ನು ಕೊಂಡುಕೊಳ್ಳಲು ನಿರ್ಧರಿಸಿದ್ದಾಗಿ ಹೇಳಿದಾಗ ನಮ್ಮ ಸಂತೋಷ ಮೇರೆ ಮೀರಿತು. ತಮ್ಮ ಆಪ್ತ ಕಾರ್ಯದರ್ಶಿಯನ್ನು ಕರೆದು ಬ್ಯಾಂಕಿನಲ್ಲಿರುವ ತಮ್ಮ ಮೊತ್ತವನ್ನು ಹಾಗೂ ಹೊಸ ಕಾರೊಂದರ ಬೆಲೆ ಎಷ್ಟಾಗುತ್ತದೆಂಬುದನ್ನು ತಿಳಿಸಲು ಹೇಳಿದರು. ಮರುದಿನ ಬೆಳಿಗ್ಗೆ ಅವರಿಗೆ ಆವೆರಡರ ಅಂಕಿ-ಸಂಖ್ಯೆಗಳು ಲಭ್ಯವಾದವು-ಬ್ಯಾಂಕಿನಲ್ಲಿದ್ದ ಅವರ ಹಣ ೪,೦೦೦ ರೂಪಾಯಿಗಳು ಹಾಗೂ ಆಗಿನ ಕಾರಿನ ಬೆಲೆ ಸುಮಾರು ೧೨ ೦೦೦ ರೂಪಾಯಿಗಳು ಎಂದು. ಭಾರತದ ಪ್ರಧಾನ ಮಂತ್ರಿಯಾಗಿರುವ ಅವರು ಗಳಿಸಿಟ್ಟಿರುವ ಹಣ ಕೇವಲ ೪,೦೦೦ ರೂಪಾಯಿಗಳೆಂದಾಗ ನಮಗೆ ಆಘಾತವೇ ಆಯಿತು. ನಿಜವಾಗಿ ಅದೇ ಮೊದಲ ಸಲ ನನಗೆ ಅವರ ಹಣಕಾಸಿನ ಪರಿಸ್ಥಿತಿಯ ಅರಿವಾಯಿತು. ಆದರೂ ಅವರು ನಮ್ಮನ್ನು ನಿರಾಶೆಗೊಳಿಸಲಿಚ್ಛಿಸದೆ ಸಾಲವನ್ನು ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಹಣ ಪಡೆದು ನಮಗಾಗಿ ಕಾರನ್ನು ತಂದರು. ಒಂದು ವರ್ಷದ ನಂತರ ಅವರು ನಿಧನರಾಗಿ ಸಾಲ ಹಾಗೆಯೇ ಬಾಕಿ ಉಳಿಯಿತು. ಸರ್ಕಾರವೇ ಆ ಸಾಲವನ್ನು ರದ್ದು



ಗೊಳಿಸಲು ಮುಂದೆ ಬಂದರೂ ನನ್ನ ತಾಯಿ ಅದಕ್ಕೊಪ್ಪದೆ ತನ್ನ ಮಾಸಾಶನದ ಹಣ ದಿಂದ ಆ ಸಾಲವನ್ನು ತೀರಿಸಲು ನಿರ್ಧರಿಸಿದಳು. ನನ್ನ ತಂದೆ ತೀರಿದ ಮೂರು ನಾಲ್ಕು ವರ್ಷಗಳಲ್ಲಿ ಅದನ್ನು ತೀರಿಸಲಾಯಿತು.

ಇಂದು ಬೆಂಗಳೂರಿನಲ್ಲಿ ಆ ಕಾರನ್ನು ಉಪ ಯೋಗಿಸುತ್ತಿರುವ ನನಗೆ ಸಹಜವಾಗಿಯೂ ಅದರ ಬಗೆಗೆ ಅಭಿಮಾನವೆನಿಸುತ್ತದೆ. ಏಕೆಂದರೆ ನನಗೆ ಅದು ಕೇವಲ ಕಾರು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿನದು. ಅದರೊಂದಿಗೆ ಕೆಲವು ಮೌಲ್ಯಗಳನ್ನೂ ನೆನಪುಗಳನ್ನೂ ಯಾವಾಗಲೂ ಮೆಲುಕು ಹಾಕು ತ್ತಿರುತ್ತೇನೆ. ನನ್ನ ತಂದೆ ಮನೆ, ದುಡ್ಡು ಅಥವಾ ಯಾವುದೇ ಬಗೆಯ ಆಸ್ತಿಯನ್ನೂ ನನಗಾಗಿ, ನಮ್ಮ ಮನೆತನಕ್ಕಾಗಿ ಗಳಿಸಿಟ್ಟು ಹೋಗಲಿಲ್ಲ.

ಅವರು ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಅತ್ಯಲ್ಪ ಅವಧಿಯಲ್ಲಿಯೆ ಅಂದರೆ ೧೯೬೫ರಲ್ಲಿ, ಪಾಕಿಸ್ತಾನವು ಯುದ್ಧವನ್ನು ಪ್ರಾರಂಭಿಸಿದ ಬಿಕ್ಕಟ್ಟಿನ ವೇಳೆಯ ಒಂದು ಅಥವಾ ಎರಡು ಪ್ರಸಂಗಗಳನ್ನು ನಾನಿಲ್ಲಿ ಉಲ್ಲೇಖಿಸಬಯಸುತ್ತೇನೆ. ಅಂದು ರಾತ್ರಿ ಸುಮಾರು ಎಂಟು ಗಂಟೆಗೆ ಅಚ್ಚರಿಯೆಂಬಂತೆ ನನ್ನ ತಂದೆ ಬೇಗನೆ ತಮ್ಮ ರಾತ್ರಿಯ ಊಟವನ್ನು ಮಾಡು ತ್ತಿದ್ದರು. ಆಗ ಅವರ ಆಪ್ತ ಕಾರ್ಯದರ್ಶಿಯು ಅವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ, ಜನರಲ್ ಚೌಧರಿಯವರು ಮತ್ತು ಏರ್ ಮಾರ್ಶಲ್ ಅರ್ಜುನಸಿಂಗರವರು ತಮ್ಮನ್ನು ಭೇಟಿಯಾಗಲು ಬಂದಿದ್ದಾರೆಂದು ಹೇಳಿದರು. ಆಗ ಅವರು ಊಟವನ್ನು ಅರ್ಧಕ್ಕೇ ಬಿಟ್ಟು ಎದ್ದು ಆ ಸೇನಾಧಿಕಾರಿಗಳನ್ನು ಕಾಣುವುದಕ್ಕಾಗಿ ತಮ್ಮ ಬೈಠಕಖಾನೆಗೆ ಹೋದರು. ಮುಂದೆ ಸುಮಾರು ಐದು ನಿಮಿಷಗಳಲ್ಲಿ ತಿರುಗಿ ಬಂದು ತಮ್ಮ ಹಿಂದಿನ ಹಸನ್ಮುಖದಿಂದ ಊಟವನ್ನು ಮುಂದು ವರಿಸಿದರು.


ನಾವೆಲ್ಲರೂ ಸೇನಾಧಿಕಾರಿಗಳು ಅವರನ್ನು ನೋಡಲು ಏಕೆ ಬಂದಿರಬಹುದೆಂದು ಅಚ್ಚರಿ ಪಡುತ್ತಿದ್ದೆವು. ಅದನ್ನೇ ನಾವು ಪ್ರಶ್ನಿಸಿದಾಗ ತಂದೆಯವರು, "ನಾವು ಯುದ್ಧಕ್ಕೆ ಸಿದ್ಧರಾಗ ಬೇಕಾಗಿದೆ," ಎಂದಷ್ಟೇ ಹೇಳಿದರು. ಅವರ ಉತ್ತರ ದಿಂದ ನಾವೆಲ್ಲ ದಂಗಬಟ್ಟು ಹೋದೆವಲ್ಲದೆ ಅವರು ಅಂಥ ಪರಿಸ್ಥಿತಿಯಲ್ಲೂ ಶಾಂತರೂ ಸ್ಥಿರಚಿತ್ತ ರೂ ಆಗಿರುವುದನ್ನು ಕಂಡು ತಬ್ಬಿಬ್ಬಾದೆವು. ಜನರಲ್ ಚೌಧರಿ ಮತ್ತು ಏರ್ ಮಾರ್ಶಲ್ ಅರ್ಜುನಸಿಂಗರೊಂದಿಗೆ ನಡೆದ ತಮ್ಮ ಐದು ನಿಮಿಷದ ಭೇಟಿಯ ವಿಷಯವನ್ನು ಮುಂದುವ- ರಿಸಿ ವಿವರಿಸಿದರು: ಪಾಕಿಸ್ತಾನದ ಸೈನ್ಯವು ಸುಮಾರು ೧೦೦ ಪ್ಯಾಟನ್ ಟ್ಯಾಂಕುಗಳೊಂ ದಿಗೆ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಛಾಂಬ ವಿಭಾಗದಲ್ಲಿ ಕಾಲಿರಿಸಿದೆಯೆಂದು ಸೇನಾ ಧಿಕಾರಿಗಳು ತಮಗೆ ತಿಳಿಸಿದ್ದಾಗ್ಯೂ ಅದಕ್ಕಾಗಿ ತಾವು ಸಂಪೂರ್ಣ ಬಲದೊಂದಿಗೆ—ಅವರನ್ನು ಎದುರಿಸಿ ಹೋರಾಡುವಂತೆಯೂ ಅವಶ್ಯ ಬಿದ್ದರೆ ಲಾಹೋರದ ಕಡೆಗೆ ಮುನ್ನುಗ್ಗುವಂತೆಯೂ ಆಜ್ಞೆ ನೀಡಿದ್ದಾಗಿ ಹೇಳಿದರು.

ಯುದ್ಧದ ಕಾಲದಲ್ಲಿ ಆಹಾರ ಸಾಮಗ್ರಿಯ ಕೊರತೆಯುಂಟಾಗ ಅವರು ದೇಶದ ಜನತೆಯನ್ನು ವಾರದಲ್ಲಿ ಒಂದು ಒಪ್ಪೊತ್ತು ಊಟವನ್ನು ತ್ಯಜಿಸಿ ಆಹಾರವನ್ನು ಉಳಿಸಲು ಕೇಳಿಕೊಂಡರು. ಹೀಗೆ ಅವರು ದೇಶವನ್ನು ವಿನಂತಿಸುವ ಪೂರ್ವದ ಲ್ಲಿಯೇ ಸೋಮವಾರ ರಾತ್ರಿಯ ಅಡಿಗೆಯನ್ನು ಮಾಡದಿರಲು ನನ್ನ ತಾಯಿಗೆ ತಿಳಿಸಿದ್ದುದು ನನಗೆ ಚೆನ್ನಾಗಿ ನೆನಪಿದೆ. ನಮ್ಮ ಮನೆಯಲ್ಲಿ ಸೋಮವಾರ ರಾತ್ರಿ ಯಾರೂ ಊಟ ಮಾಡು ತ್ತಿರಲಿಲ್ಲ. ಯಾವುದೇ ಕೆಲಸವನ್ನೂ ಸ್ವತಃ ಅವರು ಮೊದಲು ಮಾಡಿಯೇ ನಂತರ ನಮಗೆ ಮಾಡಲು ಹೇಳುತ್ತಿದ್ದರು. 'ಸ್ವಂತ ಕೆಲಸಗಳನ್ನೆಲ್ಲ ನಾವೇ ಮಾಡಿಕೊಳ್ಳಬೇಕೆಂದು ನಮಗೆ ಹೇಳುವ ಮೊದಲು ತಮ್ಮ ಎಲ್ಲ ಕೆಲಸಗಳನ್ನೂ ತಾವೇ ಮಾಡಿಕೊಂಡಿರುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಒಗೆದು ಮಡಿಮಾಡಿಕೊಳ್ಳುತ್ತಿದ್ದರಲ್ಲದೆ ಪಾದರಕ್ಷೆಗಳನ್ನು ತಾವೇ ಪಾಲಿಶ್ ಮಾಡಿಕೊಳ್ಳು ತ್ತಿದ್ದರು. ಅವರನ್ನು ಅನುಸರಿಸಿ ನಾನು, ನನ್ನ ಸಹೋದರರು ಸಹ ನಮ್ಮ ನಮ್ಮ ಪಾದರಕ್ಷೆ ಗಳನ್ನು ಪಾಲಿಶ್ ಮಾಡಿಕೊಳ್ಳುತ್ತಿದ್ದೆವು. ಸೇವಕರ ಮೇಲೆ ರೇಗುವುದು ಮುಂತಾದವುಗಳನ್ನು ಮಾಡ

ಆಯಾಸದಿಂದ ಅಭ್ಯಾಸ ಮಾಡುವುದು ಅಸಾಧ್ಯವೆ?




ಗ್ಲುಕೋನ್-ಡಿ ®



ಗ್ಲುಕೋನ್-ಡಿ ಹೆಚ್ಚಿನ ಶಕ್ತಿಗಾಗಿ—ಅವನಿಗೆ ಬೇಕಾದಾಗ

ಉಲ್ಲಾಸ ನೀಡುವ, ತಂಪುಗೊಳಿಸುವ, ಶಕ್ತಿ ತುಂಬುವ ಗ್ಲುಕೋನ್-ಡಿ. ವಿಟಮಿನ್ ಡಿ ಮತ್ತು ಕ್ಯಾಲ್ಸಿಯಂ ಫಾಸ್‌ಫೇಟ್‌ಗಳಿಂದ ಸಮೃದ್ಧವಾದ ಅಪ್ಪಟ ಗ್ಲೂಕೋಸ್ ಪೌಡರ್—ಗ್ಲಾಕ್ಸೋ ಕಂಪೆನಿಯ ಕೊಡುಗೆ. ಹಣ್ಣಿನ ರಸ, ಹಾಲು, ಚಹಾ, ಕಾಫಿ, ನೀರು — ಯಾವುದೇ ಪೇಯಕ್ಕೆ ಅದನ್ನು ಸೇರಿಸಿ ಕುಡಿಯಿರಿ. ಅಥವಾ ಅದೊಂದನ್ನೇ ತೆಗೆದುಕೊಳ್ಳಿ. ನಿಮ್ಮ ಶಕ್ತಿ ಕೂಡಲೇ ಮರುಕಳಿಸುವ ಅನುಭವ ನಿಮಗುಂಟಾಗುವುದು.



ಗ್ಲುಕೋನ್-ಡಿ ಅದೇ ಪರಿಚಿತ ಹಸುರು ಪ್ಯಾಕ್‌ನಲ್ಲಿ ದೊರೆಯುತ್ತದೆ.

HTB-GLL-7200-KN

ಗ್ಲುಕೋನ್-ಡಿ ® ಶಕ್ತಿ ತುಂಬಿಕೊಡುವ, ವಿಶ್ವಸನೀಯ **ಗ್ಲಾಕ್ಸೋ** ತಯಾರಿಕೆ.

318–5

ದಿರಲು ಸದಾ ಹೇಳುತ್ತಿದ್ದರು. ಅವರೆಂದೂ ಸೇವಕರ ಮೇಲೆ ಕೋಪಿಸಿಕೊಂಡು ಕೂಗಾಡಿದುದನ್ನು ನಾವು ನೋಡಿಲ್ಲ.

ಒಮ್ಮೆ ನನ್ನ ತಮ್ಮ ಸುನೀಲನನ್ನು ನಾನು ಹೊಡೆದಾಗ ಅದು ಅವನ ಕಣ್ಣಿಗೆ ಪೆಟ್ಟು ತಾಕಿ ಅವನು ಜೋರಾಗಿ ಅಳಲು ಪ್ರಾರಂಭಿಸಿದ. ಅಂದು ರಾತ್ರಿ ತಂದೆ ಮನೆಗೆ ಬಂದೊಡನೆ ತಾಯಿ ನನ್ನ ಬಗೆಗೆ ದೂರು ಕೊಟ್ಟಳು. ಆ ವೇಳೆಗಾಗಲೇ ನಾನು ನಿದ್ರಿಸಿಬಿಟ್ಟಿದ್ದೆನಾದ್ದರಿಂದ ಆ ವಿಷಯ ಆಗ ಅಲ್ಲಿಗೇ ನಿಂತಿತು. ಆದರೆ ಮಾರುದಿನ ಬೆಳಿಗ್ಗೆ ತಂದೆ, ನನ್ನನ್ನು ಕರೆದು, "ಒಂದು ವಾರದ ತನಕ ನಿನ್ನೊಡನೆ ಮಾತನಾಡುವದಿಲ್ಲ," ಎಂದು ಹೇಳಿ ತಮ್ಮ ಕೋಣೆಯಿಂದ ನನ್ನನ್ನು ಹೊರಗೆ ಕಳಿಸಿದರು. ಅನಂತರ ಅವರು ನಿಜವಾಗಿಯೇ ಏಳು ದಿನಗಳ ವರೆಗೆ ನನ್ನೊಂದಿಗೆ ಮಾತನಾಡಲಿಲ್ಲ. ನಾನು ಉದ್ದೇಶಪೂರ್ವಕವಾಗಿಯೇ ಅವರ ಹತ್ತಿರ ಹತ್ತಿರವೇ ಸುಳಿದಾಡುತ್ತಾ ಅವರಿಂದ ಒಂದೇ ಒಂದು ಮಾತಿಗಾಗಿ ನಿರೀಕ್ಷಿಸುತ್ತಿದ್ದೆನಾದರೂ ಅವರು ತಾವು ಹೇಳಿದಂತೆಯೇ ನಡೆದರು. ನನ್ನ ಪಾಲಿಗೆ ಇದೇನೂ ಸಾಮಾನ್ಯ ಶಿಕ್ಷೆ ಆಗಿರಲಿಲ್ಲ. ಆ ಏಳು ದಿನಗಳ ಕಾಲ ನಾನು ನನ್ನ ಕೋಣೆಯಲ್ಲಿ ಕುಳಿತು ಎಷ್ಟೋ ಸಮಯದವರೆಗೆ ಬಿಕ್ಕಿ ಬಿಕ್ಕಿ ಅತ್ತಿದ್ದೆ. ಆ ನಂತರ ಇನ್ನೆಂದೂ ತಮ್ಮಂದಿರ ಮೇಲೆ ಕೈ ಎತ್ತಲಾರೆನೆಂದು ನಿರ್ಧರಿಸಿದ್ದೆನಷ್ಟೇ ಅಲ್ಲ, ಅದರಂತೆಯೇ ನಡೆದುಕೊಂಡಿದ್ದೇನೆ. ಒಂದು ವೇಳೆ ನನ್ನ ತಂದೆ ಅಂದು ನನ್ನನ್ನು ಹೊಡೆದು ಬುದ್ಧಿ ಕಲಿಸಿದ್ದರೆ ಅದು ಇದರಷ್ಟು ಪರಿಣಾಮಕಾರಿಯಾಗುತ್ತಿರಲಿಲ್ಲವೆನಿಸುತ್ತದೆ.

ನನ್ನ ತಂದೆ ತಾಷ್ಕೆಂಟಿಗೆ ಹೋಗುವ ಕೆಲವೇ ದಿನಗಳ ಮೊದಲು ಒಂದು ದಿನ ನಾನು ಅವರೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳಬಯಸಿದೆ. ಅಷ್ಟರವರೆಗೆ ಅವರೊಂದಿಗೆ ನನ್ನ ಒಂದೂ ಫೋಟೋ ಇದ್ದಿರಲಿಲ್ಲ. ಆಗ ಅವರು ನನ್ನ ತಾಯಿಯನ್ನೂ ಕರೆದು ನಾವು ಮೂವರೂ ಇರುವ ಒಂದು ಫೋಟೋ ತೆಗೆಸಿಕೊಂಡೆವು. ಅಷ್ಟೇ ಅಲ್ಲದೆ ಅವರೇ ಫೋಟೋದ ಮೇಲೆ ತಮ್ಮ ಹಸ್ತಾಕ್ಷರದೊಂದಿಗೆ [illegible] ಹಸ್ತಾಕ್ಷರವನ್ನೂ ನೀಡಿದ್ದನ್ನು ಇಂದಿಗೂ ಕಾದಿರಿಸಿದ್ದೇನೆ. ಕೆಲವು ಅನಿವಾರ್ಯ ಕಾರಣಗಳಿಂದಾಗಿ ತಂದೆಯೊಡನೆ ತಾಷ್ಕೆಂಟಿಗೆ ಹೋಗುವುದು ತಾಯಿಗೆ ಸಾಧ್ಯವಾಗದೆ ನಾನು ಅವರೊಂದಿಗೆ ಹೋಗಲಿರುವ ವಿಷಯ ಕೆಲವೇ ಜನರಿಗೆ ಮಾತ್ರ ತಿಳಿದಿತ್ತು. ಆದರೆ ಒಮ್ಮಿಂದೊಮ್ಮೆಲೆ ಅನಿರೀಕ್ಷಿತ ಕಾರಣದಿಂದ ಪ್ರವಾಸಕ್ಕೆ ಹೊರಡಲು ಇನ್ನು ಕೇವಲ ಒಂದೇ ಒಂದು ದಿನವಿರುವಾಗ ನನ್ನ ಪ್ರವಾಸವನ್ನೂ ರದ್ದುಪಡಿಸಲಾಯಿತು. ಸೋವಿಯತ್ ಒಕ್ಕೂಟದಂತಹ ದೊಡ್ಡ ದೇಶಕ್ಕೆ ಪ್ರಥಮ ಬಾರಿಗೆ ಹೋಗಲಿರುವೆನೆಂದು ಸ್ನೇಹಿತರೊಂದಿಗೆಲ್ಲಾ ಹೇಳಿಕೊಂಡಿದ್ದ ನಾನು ಇದರಿಂದ ತೀರಾ ವ್ಯಥಿತನಾದೆ. ಆಗ ತಂದೆಯವರು ನನ್ನನ್ನು ಕರೆದು ನಿರಾಶೆನಾಗದಿರಲು ಹೇಳಿದರಲ್ಲದೆ ಮುಂದಿನ ಸಲ ತಾವು ಭೇಟಿ ನೀಡಲಿರುವ ಅಮೇರಿಕದ ದೇಶಗಳಿಗೆ ಖಂಡಿತವಾಗಿಯೂ ಕರೆದೊಯ್ಯುತ್ತೇನೆಂದು ಭರವಸೆ ನೀಡಿದರು. ಸ್ವಲ್ಪ ಮಟ್ಟಿಗೆ ಅದು ನನಗೆ ಸಮಾಧಾನ ನೀಡಿತಾದರೂ ನಾನು ದುಃಖದಿಂದ ಅಸಂತೃಪ್ತನಾಗಿಯೇ ಇದ್ದೆ. ಅದೇ ಕಾರಣದಿಂದಾಗಿ ನಾನು ಅವರನ್ನು ತಾಷ್ಕೆಂಟ್ ಪ್ರಯಾಣಕ್ಕೆ ಬೀಳ್ಕೊಡಲು ದಿಲ್ಲಿ ವಿಮಾನ ನಿಲ್ದಾಣಕ್ಕೆ ಹೋಗಲಿಲ್ಲ. ಬಹುಶಃ ಹಾಗೆ ಅಂದು ಹೋಗದೆ ಉಳಿದವನು ನಾನೊಬ್ಬನೆ. ಏಕೆಂದರೆ ಅಂದು ಮನೆಮಂದಿಯೆಲ್ಲ ಪಾಲಂ ವಿಮಾನ ನಿಲ್ದಾಣಕ್ಕೆ ಹೋಗಿ ಅವರಿಗೆ ಶುಭ ಪ್ರಯಾಣವನ್ನೂ ತಾಷ್ಕೆಂಟಿನ ಕಾರ್ಯದಲ್ಲಿ ಯಶಸ್ಸನ್ನೂ ಹಾರೈಸಿದ್ದರು.

ಅಂದು ೧೯೬೬ ರ ಜನವರಿ ೩ನೇ ತಾರೀಖು. ಬೆಳಗಿನ ಏಳು ಗಂಟೆಗೆ ತಂದೆಯವರು ತಮ್ಮ ಮಹತ್ವಪೂರ್ಣ ತಾಷ್ಕೆಂಟ್ ಪ್ರವಾಸಕ್ಕೆ ಹೊರಡಬೇಕಿತ್ತು. ನಾನು ಎಚ್ಚರವಿದ್ದರೂ ಹಾಸಿಗೆಯಲ್ಲೇ ಮಲಗಿಕೊಂಡು [illegible]ತ್ತಿದ್ದೆ. ಆಗ ತಂದೆಯವರು ನನ್ನನ್ನು [illegible] ಹೋಗುವಾಗ [illegible] ಬಂದು [illegible]. ನಾನು ತಂದೆಯವರನ್ನು ನೋಡಿದುದು ಅದೇ ಕೊನೆಯದಾಯಿತು. ✡

ವಿದ್ಯಾಭ್ಯಾಸಕ್ರಮದಲ್ಲಿ ಆರೋಗ್ಯ ಶಿಕ್ಷಣ

ಡಾ. ಎ. ಚಂದ್ರಶೇಖರ ಉಡುಪ

ಪುಟ್ಟ ಶಾಂತಿ ಬಾಲವಾಡಿಗೆ ಹೋಗುತ್ತ ಅತೀವ ಚೂಟಿಯಾಗಿದ್ದಳು. ಮೇಡಂ ಹೇಳಿ ಕೊಟ್ಟ ಹೊಸ ಹಾಡುಗಳನ್ನೆಲ್ಲ ಮನೆಗೆ ಬಂದು ಡ್ಯಾನ್ಸ್ ಮಾಡಿ ದಿನನಿತ್ಯ ಆಕೆ ತೋರಿಸದೆ ಇಲ್ಲ; ಈಗ್ಗೆ ೩ ದಿನಗಳಿಂದ ಅವಳಿಗೆ ಎಲ್ಲಿಲ್ಲದ ಆಯಾಸ ಜಡತ್ವ ಹಾಗೂ ಸುಸ್ತು. ಅಧ್ಯಾಪಕರಾದ ಅವಳ ಅಪ್ಪ-ಅಮ್ಮನಿಗೆ ಚಿಕ್ಕಪುಟ್ಟ ಜ್ವರಕ್ಕೆಲ್ಲ ಈಕೆ ಇಷ್ಟೊಂದು ರಂಪ ಮಾಡುತ್ತಾಳಲ್ಲ, ಎಂಬ ಸಂಶಯ ಬೇರೆ. ಮನೆಯಲ್ಲಿ ಅವಳ ಕಾಟ ತಡೆಯಲಾರದೆ ಒತ್ತಾಯದಿಂದಲೆ ಇಂದವಳನ್ನು ಶಾಲೆಗೊಯ್ದಿದ್ದರು. ಶಾಲೆಯಲ್ಲಿ ಆಕೆ ಜ್ವರದ ತಾಪದಿಂದ ಮೂರ್ಛೆಗೊಳಗಾದಾಗ ಮೇಡಂ ಗಾಬರಿಗೊಂಡರು. ವೈದ್ಯರಲ್ಲಿಗೆ ಅವಸರದಲ್ಲಿ ಕೊಂಡೊಯ್ದಾಗ ಈಕೆಗೆ ಗೋರ ಅಥವಾ ದಡಾರ ರೋಗ ತಗಲಿದೆ ಎಂಬ ವಿಚಾರ ತಿಳಿದುಬಂತು.

ಮತ್ತೆ ವಿಚಾರಿಸಲಾಗಿ, ಬಾಲವಾಡಿಯ ಇನ್ನೊಬ್ಬ ಹುಡುಗನಿಗೆ ಒಂದು ತಿಂಗಳ ಹಿಂದೆ ಗೋರ ಆಗಿತ್ತಂತೆ. ಜ್ವರದ ತಾಪದಲ್ಲಿಯೆ ಅವನೂ ಶಾಲೆಗೆ ಬಂದು ಹೋಗುತ್ತಿದ್ದ. ಅವನಿಂದಲೇ ಆರಂಭದ ಈ ರೋಗ ಅಕ್ಷರಶಃ ಎಲ್ಲ ಮಕ್ಕಳಲ್ಲೂ ತಲೆದೋರಿತು. ಮೇಡಂ ಈ ಕುರಿತು ಸಾಕಷ್ಟು ಎಚ್ಚರ ವಹಿಸದ ಕಾರಣ ಎಲ್ಲ ಮಕ್ಕಳೂ ರೋಗಕ್ಕೆ ತುತ್ತಾದರು.

ಇದೊಂದು ನೈಜ ಘಟನೆ. ಇಂಥ ಹಲವು ಸನ್ನಿವೇಶಗಳು ನಮ್ಮ ದಿನ ನಿತ್ಯದ ಜೀವನದಲ್ಲಿ ಕಂಡು ಬರುತ್ತವೆ. ಸಾಮಾನ್ಯವಾಗಿ ಬಾಲ್ಯದಲ್ಲಿ ಕಂಡು ಬರುವ ಕೆಪ್ಪಟೆ, ಗೋರ, ಸೀತಾಳಿ, ನಾಯಿಕೆಮ್ಮು ಮುಂತಾದ ರೋಗಗಳು ಬಹಳ ಬೇಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂಥವು. ರೋಗಿಯ ಸಿಂಬಳ, ಜೊಲ್ಲು, ಕಫದ ಮೂಲಕ ಹರಡುವ ಈ ರೋಗಗಳ ಬಗ್ಗೆ ಸೂಕ್ತ ಮುಂಜಾಗ್ರತೆ ವಹಿಸದಿದ್ದರೆ ಅವುಗಳು ಬಹುಬೇಗ ಸಾಂಕ್ರಾಮಿಕವಾಗಿ ಹಬ್ಬುತ್ತವೆ. ಬಾಲವಾಡಿಯ ಮೇಡಂ ಗೋರದ ಲಕ್ಷಣ ಕಂಡುಬಂದ ಹುಡುಗನನ್ನು ಶಾಲೆಗೆ ಬಾರದಂತೆ ಮೊದಲೇ ಎಚ್ಚರವಹಿಸಿದ್ದರೆ ಪುಟಾಣಿ ಶಾಂತಿ ಗೋರದ ಘೋರ ತಾಪಕ್ಕೆ ಬಲಿಬೀಳುತ್ತಿರಲಿಲ್ಲ. ಆದರೆ ಆ ಮೇಡಂಗೆ ಈ ಬಗ್ಗೆ ಪರಿಜ್ಞಾನವಿಲ್ಲದಾಗ ಆಗುವ ಅನಾಹುತ ಎಷ್ಟೆಂದು ನೀವೇ ಊಹಿಸಿ.

ರೋಗಾಣುಗಳು ಸಾಮಾನ್ಯವಾಗಿ ನೀರು, ಆಹಾರ ಹಾಗೂ ಗಾಳಿಯ ಮೂಲಕ ಹರಡುತ್ತವೆ. ನೀರನ್ನು ಚೆನ್ನಾಗಿ ಕುದಿಸಿ ಉಪಯೋಗಿಸಿದಾಗ ಎಷ್ಟೋ ರೋಗಾಣುಗಳು ನಾಶಹೊಂದುತ್ತವೆ. ಅರಿಶಿನ ಮುಂಡಿಗೆ, ಆಮಶಂಕೆ, ಭೇದಿ, ಟೈಫಾಯಿಡ್, ಪ್ಯಾರಾ ಟೈಫಾಯಿಡ್, ಕಾಲರಾ ಮುಂತಾದ ಹಲವು ರೋಗಗಳು ನಾವು ಸೇವಿಸುವ ಆಹಾರ ಅಥವಾ ನೀರಿನ ಮೂಲಕ ಸುಲಭದಲ್ಲಿ ಹರಡುತ್ತವೆ. ಹೋಟೆಲಿನ ಅಥವಾ ಹಾಸ್ಟೆಲಿನ ಅಡುಗೆ ಭಟ್ಟನಿಗೆ ಟೈಫಾಯಿಡ್ ರೋಗ ಇತ್ತೀಚೆಗೆ ಬಂದು ಹೋಗಿದ್ದರೆ ಅಥವಾ

ಆಮಶಂಕೆ ಆಗುತ್ತಿದ್ದರೆ, ಅಷ್ಟೇಕೆ ಅರಸಿನ ಮುಂಡಿಗೆಯ 'ಸೋಂಕು' ತಗಲಿದ್ದರೆ ಅವನು ಮಾಡುವ ಅಡುಗೆಯ ಮೂಲಕ ಅದು ಸಲೀಸಾಗಿ ಪ್ರಸಾರಗೊಳ್ಳುತ್ತದೆ. ಆಮಶಂಕೆ, ಟೈಫಾಯ್ಡ್ [illegible] ಮಲದಲ್ಲಿ ಜೀವಂತ ರೋಗಾಣುಗಳೇ ಇರು[illegible] ತೊಳೆದುಕೊಳ್ಳಬೇಕು. ಇಲ್ಲವಾದರೆ ನೀರನ್ನೋ ಆಹಾರವನ್ನೋ ಈ ರೋಗಾಣು ಸುಲಭದಲ್ಲಿ ಅದನ್ನು ಉಪಯೋಗಿಸುವ ಮನೆಮಂದಿಗೆಲ್ಲ ಸೇರಿ ಈ ರೋಗ ಬರಬಹುದು. ನಿಗದಿತವಾದ ಕಕ್ಕಸು ಇಲ್ಲದಾಗ ಹಾದಿಯಲ್ಲೊ ಹೊಳೆಯ ಬದಿಯಲ್ಲೋ ಮಲವಿಸರ್ಜನೆಗೆ ಹೋದರಂತೂ ಕೈಕಾಲುಗಳಿಗೆ ಅಂಟಿದ ಈ ರೋಗಾಣುಗಳು ಸುಲಭದಲ್ಲಿ ನೀರನ್ನೋ ಆಹಾರವಸ್ತುವನ್ನೋ ಸೇರಿ ರೋಗ ಹಬ್ಬಬಹುದು. ಕೇರಿಗೊಂದು ಬಾವಿಯೋ ಕೆರೆಯೋ ಇದ್ದು ಈ ರೋಗಾಣುಗಳು ಆ ನೀರನ್ನು ಸೇರಿದಲ್ಲಿ ಇಡೀ ಕೇರಿಗೇ ಈ ಸಾಂಕ್ರಾಮಿಕ ರೋಗ ಹರಡಬಹುದು. ನಗರ ಪ್ರದೇಶದಲ್ಲಿ [illegible] ಈ [illegible] ರೋಗ ಹಬ್ಬಿಸಬಹುದು.

[illegible] ಬೇಯಿಸದೆ ಉಪಯೋಗಿಸುವ [illegible] ಬಗ್ಗೆ ಹೆಚ್ಚು ಗಮನಿಸಬೇಕು. [illegible] ಬದಿಯಲ್ಲೋ, ಪಾರ್ಕುಗಳಲ್ಲೋ ಕತ್ತರಿಸಿ [illegible]ಗುಂಜಿ, ಪಪಾಯ, ಅನಾನಸು, [illegible] ತೊಳೆಯದೆ ಉಪಯೋಗಿಸಲ್ಪಡುವ ದ್ರಾಕ್ಷಿ, ಚಿಕ್ಕು, ಮಾವು, ಗೇರು, ಸೇಬು, ಪೇರಳೆ, ನೆಲ್ಲಿಕಾಯಿ ಮುಂತಾದ ಹಣ್ಣುಗಳೂ ಬಯಲಾಟದ ಬಯಲಿನಲ್ಲಿ ಮಾರಲ್ಪಡುವ ಪುರಿ, ನೆಲಗಡಲೆ ಚುರಿಮುರಿಯೂ, ಜಾತ್ರೆಯ ಸಡಗರದಲ್ಲಿ ಧಿಡೀರ್ ಆಗಿ ಸಿದ್ಧವಾಗುವ ಮಿಠಾಯಿ, ಗೆಣಸು, ಚಕ್ಕುಲಿ, ಉಂಡೆ ಮುಂತಾದ ತಿಂಡಿತಿನಿಸುಗಳೂ ಸುಲಭದಲ್ಲಿ ರೋಗಪ್ರಸಾರ ಮಾಡದೆ ಇಲ್ಲ.

ಶ್ವಾಸಕೋಶದ ಕ್ಷಯ, ನ್ಯೂಮೋನಿಯ ಮುಂತಾದ ರೋಗಗಳಲ್ಲಿ ರೋಗಿಯು ಉಗುಳುವ ಕಫದ ಪ್ರಮಾಣ ಹೆಚ್ಚಾಗಿದ್ದು ಜೀವಂತ ರೋಗಾಣುಗಳು ಹೇರಳವಾಗಿ ಅದರಲ್ಲಿರುತ್ತವೆ. ರೋಗಿಯು ಕೆಮ್ಮುವಾಗ, ಸೀನುವಾಗ ಅಥವಾ ಮಾತನಾಡುವಾಗ ವಾತಾವರಣವನ್ನು ಸೇರುವ ರೋಗಾಣುಗಳಿಂದ ಇತರರೂ ಸುಲಭದಲ್ಲಿ ಅಪಾಯಕ್ಕೊಳಗಾಗಬಹುದು. ಅಧ್ಯಾಪಕರಾಗಲಿ ವಿದ್ಯಾರ್ಥಿಗಳಾಗಲಿ ಇಂಥ ರೋಗ ಬಂದಾಗ ಆದಷ್ಟು ಏಕಾಂತದಲ್ಲಿರುವುದು ಒಳಿತು.

ಸಾಮಾನ್ಯ ಜ್ಞಾನ ಅವಶ್ಯ

ದಿನ ನಿತ್ಯದ ಸಣ್ಣ ಪುಟ್ಟ ಅನಾಹುತಗಳ ಚಿಕಿತ್ಸೆಗೆ ಅಲ್ಪಸ್ವಲ್ಪ ಜ್ಞಾನವಾದರೂ ಜನ [illegible] ಉಪಕಾರಕ್ಕಿಂತ ಅಪಾಯವೇ ಜಾಸ್ತಿ. ಉದಾಹರಣೆಗೆ ಗಾಯವಾಗಿ ರಕ್ತಸ್ರಾವ ನಿಲ್ಲಿಸಲು ಸಾಮಾನ್ಯವಾಗಿ ಕಾಫಿಹುಡಿ, ಕುಂಕುಮ, ಅರಸಿನ, ಬೂದಿ ಮುಂತಾದವನ್ನೆಲ್ಲ ತುಂಬುವುದು ವಾಡಿಕೆ. ಗಾಯ [illegible]ವಾಗಿ ದೊಡ್ಡದಾಗುವಲ್ಲಿ ಇವೆಲ್ಲ ಬಹಳಷ್ಟು ಸಹಕಾರಿ. ಅದರ ಬದಲು ಒದ್ದೆ ಮಾಡಿದ ಹತ್ತಿ ಅಥವಾ [illegible] ಒಳ್ಳೆಯದು. [illegible] ಈ ಸರಳ ವಿಧಾನವನ್ನು ನಮ್ಮ ಪಾಠಕ್ರಮದಿಂದು [illegible]ವಾಗಿ ಸೀರೆಗೆ ಬೆಂಕಿ ತಗಲಿದರೆ ಅದನ್ನು ನಂದಿಸುವ [illegible] ಮಹಿಳೆಯ ಅವಸ್ಥೆ[illegible] ಊಹಿಸಿ. ಹಾವು ಕಚ್ಚಿದಾಗ, ಪಟಾಕಿಯಿಂದ ಮೈ ಸುಟ್ಟುಕೊಂಡಾಗ, ನೀರಿನಲ್ಲಿ ಮುಳುಗಿದ ವ್ಯಕ್ತಿ ಏದುಸಿರು ಬಿಡುತ್ತಿರುವಾಗ, ವಿಷ ಸೇವನೆ ಮಾಡಿದಾತ ಅರೆಮೂರ್ಛಾವಸ್ಥೆಯಲ್ಲಿರುವಾಗ, ಕಣ್ಣಿನೊಳಗೆ ಕಸ ಬಿದ್ದು ಕಣ್ಣೀರು ಸುರಿಸುತ್ತಿರುವಾಗ, ಮಗುವೊಂದು ತನ್ನ ಮೂಗಿನೊಳಗೆ ಬಳಪವನ್ನು ಹಾಕಿಕೊಂಡು ಅಳುತ್ತಿರುವಾಗ, ಜೇನ್ನೊಣವೊಂದು ಹಾರಿ ಬಂದು ಕಡಿದಾಗ, ಅಂಗಳದಲ್ಲಿ ಕಾಲು ಜಾರಿ ಬಿದ್ದು ಕೈಕಾಲು ನೋವಾಗಿ ಊದಿಕೊಂಡಾಗ ಇವೇ

ಮುಂತಾದ ಸಂದರ್ಭಗಳಲ್ಲಿ ಕೊಡುವ ಪ್ರಥಮ ಚಿಕಿತ್ಸೆಯ ಕುರಿತು ವಿದ್ಯಾಭ್ಯಾಸ ಕ್ರಮದಲ್ಲಿರುವುದು ಅತ್ಯವಶ್ಯ. ಬಿದ್ದಾಗ ನೋವಾಗಿ ಬೀಗಿದ ಅಂಗಾಗಕ್ಕೆ ನೋವಿನೆಣ್ಣೆಯನ್ನು ಚೆನ್ನಾಗಿ ತಿಕ್ಕಿ ತೀಡುವ ಅಭ್ಯಾಸ ನಮ್ಮಲ್ಲಿದೆ. ಒಂದೊಮ್ಮೆ ಒಳಗಿನ ಮೂಳೆ ಮುರಿದು ಹೋಗಿದ್ದಲ್ಲಿ. ಈ ರೀತಿ ತಿಕ್ಕುವಾಗಿನ ಒತ್ತಡದಿಂದ ಮೂಳೆಯ ಸ್ಥಿತಿ ಬಹಳ ಗಂಭೀರವಾಗಿ, ಕೆಲವೊಮ್ಮೆ ಶಾಶ್ವತ ನ್ಯೂನತೆಯೂ ಕಂಡುಬಂದೀತು.

ವೈರಸ್ ರೋಗಾಣುಗಳಿಂದ ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಪ್ಪಟರೋಗ, ಕಿವಿಯ ಮುಂಭಾಗದ ಜೊಲ್ಲುಗ್ರಂಥಿ ಊದಿ–ಕೊಳ್ಳುವುದರಿಂದ ಉಂಟಾಗುತ್ತದೆ. ಮಕ್ಕಳಲ್ಲಿ ಒಂದು ವಾರದಲ್ಲಿ ಈ ರೋಗ ವಾಸಿಯಾದರೂ ವಯಸ್ಕ ಪುರುಷರಲ್ಲಿ ಇದು ಅಪರೂಪಕ್ಕೊಮ್ಮೆ ಬಂತೆಂದರೆ ವೃಷಣಗಳೆರಡೂ ನಾಶಗೊಂಡು ವ್ಯಕ್ತಿ ನಿರ್ವೀರ್ಯನಾಗುವ ಸಂಭವವಿದೆ. ಅಂತಿರುವಾಗ ಕೆಪ್ಪಟದಂಥ ಸಾಮಾನ್ಯ ರೋಗದ ಬಗ್ಗೆಯೂ ಸೂಕ್ತ ಎಚ್ಚರಿಕೆ ವಹಿಸುವುದು ಒಳಿತಲ್ಲವೆ?

ತಾಯಿ ಹಾಗೂ ಮಗುವಿನ ಆರೋಗ್ಯದ ಸಾಮಾನ್ಯ ಮಾಹಿತಿಯನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ಅಳವಡಿಸಬೇಕು. ಮಗುವಿಗೆ ಸರ್ವ ಕಾಲದಲ್ಲೂ ಶ್ರೇಷ್ಠವಾದ ಮೊಲೆಹಾಲಿನ ಔಚಿತ್ಯದ ಕುರಿತು ಅನ್ನ ಉಣಿಸುವ ತನಕ ಆದರ ಪಥ್ಯಪಾನದ ಕುರಿತೂ, ಡಿಫ್ತೀರಿಯ ನಾಯಿಕೆಮ್ಮು, ಧನುರ್ವಾಯು, ಪೋಲಿಯೋ ಕ್ಷಯ, ಮುಂತಾದ ರೋಗ ನಿರೋಧಕ ಚುಚ್ಚುಮದ್ದಿನ ಬಗ್ಗೆಯೂ ಮಕ್ಕಳ ಬುದ್ಧಿಮತ್ತೆಯನ್ನು ಪರೀಕ್ಷಿಸಿ ಅವರ ಜಾಣ್ಮೆಯನ್ನು ಹೆಚ್ಚಿಸುವ ಬಗ್ಗೆಯೂ ಮಕ್ಕಳ ತೂಕ ಮತ್ತು ಎತ್ತರಗಳ ಮೂಲಕ ಅವರ ಬೆಳವಣಿಗೆಯನ್ನು ತಿಳಿಯಲೂ ಆಹಾರಾಂಶಗಳ ಕೊರತೆಯಿಂದ, ಸಾಕುಪ್ರಾಣಿಗಳ ಸಹವಾಸದಿಂದ ಹಾಗೂ ಮಣ್ಣಿನಾಟದಿಂದ ಬರುವ ರೋಗಗಳ ಮತ್ತು ಅವುಗಳ ನಿವಾರಣೆಯ ಕುರಿತೂ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಸೇರಿಸಬೇಕು. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ?' ಎಂಬ ಆಶಾವಾಶದ ಸಂಕೋಲೆ ತೊಟ್ಟು ಜನಿಸುವ ಕಂದನಿಂದು ತನ್ನ ಬಾಳಿನ ಗೋಳನ್ನೂ ಅದೇ ಧ್ಯೇಯವಾಕ್ಯದ ಪುನರುಚ್ಚಾರದಿಂದಲೇ ಎದುರಿಸುತ್ತಿರುವುದು ನಮ್ಮ ದುರ್ದೈವವೆ! ರಕ್ತಹೀನತೆಯಿಂದಾಗಿ ಮೈಕೈ ಊದಿಕೊಂಡು ಮಗು ದುಂಡುದುಂಡಾಗಿ ವಿಪರೀತ ಸುಸ್ತಿನಿಂದ ಏದುಸಿರು ಬಿಡುತ್ತಿದ್ದರೂ 'ಈ ಚಿಕ್ಕ ವಯಸ್ಸಿನಲ್ಲಿ ನಿನಗೇನೋ ಬಂತು ಗ್ರಹಚಾರ?' ಎಂದು ದರ್ಪ ತೋರಿಸುವವರೇ ನಮ್ಮಲ್ಲಿಂದು ಬಹಳಷ್ಟು ಮಂದಿ!

ಸ್ತ್ರೀ ಆರೋಗ್ಯ

ಹೆಂಗಸರು ನಾಚಿಕೆ ಸ್ವಭಾವದಿಂದಾಗಿ ತಮ್ಮ ವಚ್ಚಿನ ತೊಂದರೆಗಳಿಗೆ ಚಿಕಿತ್ಸೆಯ ಮೊರೆ ಹೋಗುವುದಿಲ್ಲ. ಅವರಿಗೇ ಮೀಸಲಾದ ಮುಟ್ಟಿನ ದೋಷದ ಬಗ್ಗೆ, ಬಿಳುಪು ಹೋಗುವ ಬಗ್ಗೆ, ಗರ್ಭಧರಿಸಿದಾಗ ಹಾಗೂ ಹೆರಿಗೆಯ ನಂತರದ ತೊಂದರೆಗಳ ಬಗ್ಗೆ, ಹೆಚ್ಚೇಕೆ, ಬಂಜೆತನದ ಅಥವಾ ಲೈಂಗಿಕ ಜೀವನದ ಬೇರಾವುದೇ ಸಮಸ್ಯೆಯ ಬಗ್ಗೆ ತುಟಿ ಬಿಚ್ಚಲು ಕೂಡಾ ಹೆಚ್ಚಿನವರು ಮುಂದಾಗುವುದಿಲ್ಲ! ಗರ್ಭಿಣಿಯಾಗಿರುವಾಗ, ತಜ್ಞ ವೈದ್ಯರ ಬಳಿ-ಹೋಗಿ ಪರೀಕ್ಷೆ ಮಾಡಿಸಿಕೊಳ್ಳದಿದ್ದಲ್ಲಿ ಮಗುವಿನ ಬೆಳವಣಿಗೆ ಸರಿಯಾಗಿದರಲ್ಲಿ, ಅದು ಗರ್ಭಾಶಯದಲ್ಲಿ ಅಸ್ತವ್ಯಸ್ತವಾಗಿದ್ದಲ್ಲಿ, ದ್ವಾರ ಚಿಕ್ಕದಾಗಿದ್ದಲ್ಲಿ, ಅಷ್ಟೇಕೆ, ತಾಯಿ–ಮಗುವಿನ ರಕ್ತದ ಹೊಂದಾಣಿಕೆ ಸರಿಯಾಗಿಲ್ಲದಿದ್ದಲ್ಲಿ ಅವೆಷ್ಟೋ ಗಂಡಾಂತರಗಳು ಒದಗಬಂದಾವು. ಗರ್ಭಿಣಿಯ ಮಾನಸಿಕ ಯಾತನೆಯಿಂದ ಹಿಸ್ಟೀರಿಯ ರೋಗ ಬರಬಹುದು. ಕೆಲವೊಮ್ಮೆ ಮಾನಸಿಕ ಆಘಾತಕ್ಕೊಳಗಾದ ಬಾಣಂತಿಯು ಪೂರ್ವಾಪರ ವಿವೇಚನಾ ಸಾಮರ್ಥ್ಯವನ್ನೂ ಕಳೆದುಕೊಂಡು ಹುಚ್ಚಿಯಂತೆ ವರ್ತಿಸಬಹುದು. ಈ ಎಲ್ಲ ಸಂದರ್ಭಗಳಲ್ಲಿ ಭೂತಪ್ರೇತ ಪಿಶಾಚಿಯ ಉಪದ್ರವವೆಂದೋ, ಬೇಕೆಂದೇ ಮಾಡುವ ನಾಟಕವೆಂದೋ, ಶನಿಕಾಟ ಕೊಡುವ ಕಿರುಕುಳವೆಂದೋ ತಿಳಿದು ಕಾಲಹರಣ ಮಾಡುತ್ತಿದ್ದರೆ ಹೆಂಗಸಿನ ಬಾಳೇ ಹಾಳಾಗಿ ಹೋದೀತು. ವೃಥಾ ಕಾಲಹರಣ ಮಾಡದೆ ಸೂಕ್ತ ವೈದ್ಯಕೀಯ ಚಿಕಿತ್ಸೆಯಿಂದ

ಖಚಿತವಾಗಿಯೂ ಆಕೆ ಶೇ. ೧೦೦ ರಷ್ಟು ಗುಣ ಹೊಂದುತ್ತಾಳೆ.

ಆರೋಗ್ಯ ನಿಯಮ

ಮನುಷ್ಯ ಶರೀರದ ಅಂಗಾಂಗಗಳ ಕುರಿತು ನಾಲ್ಕನೆಯ ದರ್ಜೆಯಲ್ಲಿಯೇ ನಮಗೆ ತಿಳಿದು ಬರುತ್ತದೆ. ಆದರೆ ಆ ಅಮೂಲ್ಯ ದೇಹದ ರಕ್ಷಣಾ ವಿಧಾನದ ಸ್ಪಷ್ಟ ತಿಳಿವು ನಮಗೆಂದೂ ಆಗುವುದೇ ಇಲ್ಲ ಎನ್ನಬಹುದು. ದೊರೆತ ಜ್ಞಾನದ ಎಳ್ಳಷ್ಟನ್ನಾದರೂ ನಮ್ಮ ದಿನಚರಿಯಲ್ಲಿ ಅಳವಡಿಸಲೂ ನಾವು ಮುಂದಾಗಬೇಕು. ಹೀಗೆ, ಬೆಳಿಗ್ಗೆ ಎದ್ದೊಡನೆ ಹಲ್ಲುಜ್ಜುವದು, ದಿನಕ್ಕೊಮ್ಮೆ ಮೈ ತಿಕ್ಕಿ ಸ್ನಾನಮಾಡುವುದು, ಊಟಕ್ಕೆ ಮೊದಲು ಚೆನ್ನಾಗಿ ಕೈ ತೊಳೆದುಕೊಳ್ಳುವುದು, ಊಟ ತಿಂಡಿ ಸೇವನೆಯ ನಂತರ ಬಾಯಿ ಮುಕ್ಕಳಿಸುವದು, ಉಗುರುಗಳನ್ನು ಕತ್ತರಿಸಿಕೊಳ್ಳುವುದು ಇವೆಲ್ಲ ರೂಢಿಸಿಕೊಳ್ಳಬಹುದಾದ ಸುಲಭ ವಿಚಾರಗಳು.

ಹೈಸ್ಕೂಲು ಪಠ್ಯಕ್ರಮದಲ್ಲಿ ಧೂಮಪಾನ, ಮದ್ಯಪಾನದ ಅನಾಹುತಗಳ ಬಗ್ಗೆ, ವ್ಯಭಿಚಾರದಿಂದುಂಟಾಗುವ ಲೈಂಗಿಕ ರೋಗಗಳ ಭೀಕರತೆಯ

ಕಸ್ತೂರಿ

ಶ್ರೀ ಎಸ್. ಶಿವಮೂರ್ತಿ
೪೫, ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ
ಬೆಂಗಳೂರು-೪

ಹುಬ್ಬಳ್ಳಿ-೨೦
ಜನವರಿ ೧, ೧೯೮೩

ಮಹನೀಯರೆ,

ನೀವು ಕಳಿಸಿದ್ದ ಒಂದು ಕವನ('ನಿನ್ನ ನೆನಪು')ವನ್ನು ಅದರ ಮಟ್ಟವನ್ನು ಗಮನಿಸಿ, ನೀವು ತಿಳಿಸಿದ್ದಂತೆಯೆ ಅದು ಶ್ರೀ ಸುಲೇಮಾನ್ ಖುಮಾರರ ಉರ್ದು ಕವನದ ಅನುವಾದವೆಂದು ನಂಬಿ, ನಮ್ಮ ಜೂನ್ ೧೯೮೧ರ ಸಂಚಿಕೆಯಲ್ಲಿ ಪ್ರಕಟಿಸಿದೆವು. ನಂತರದ ಘಟನೆಗಳ ಅರಿವು ನಿಮಗೂ ಇದೆ. ಶ್ರೀ ಸುಲೇಮಾನರ ಸರಿಯಾದ ವಿಳಾಸವನ್ನು ನೀವು ನಮಗೆ ನೀಡಲಿಲ್ಲವಿಷ್ಟೇ ಅಲ್ಲ, ಅದೇ ಕವನ ಶ್ರೀ ರಮುಜಾನ್ ದರ್ಗಾರವರದು-ಅವರ 'ಕಾವ್ಯ ಬಂತು ಬೀದಿಗೆ' ಸಂಗ್ರಹದಲ್ಲಿ ಬಂದಿದೆಯೆಂಬುದನ್ನು ನಿಮ್ಮ ಗಮನಕ್ಕೆ ತಂದಾಗ, ಈ ಹೆಸರಿನ ಕವನ ಸಂಕಲನವನ್ನೇ ನೋಡಿಲ್ಲವಾಗಿ ಬರೆದಿರಿ. ನೀವು ಮಾಡಿದ್ದು ಕೃತಿಚೌರ್ಯವೆಂದು ನಮಗೆ ಮನದಟ್ಟಾದಾಗ ಮಾರ್ಚ್ ೧೯೮೨ರ ಸಂಚಿಕೆಯಲ್ಲಿ ನಿಮ್ಮ ಕೃತಿಯನ್ನು ಖಂಡಿಸಿದೆವು. ಒಂದು ವಾರದಲ್ಲೇ ಇಂಥ ತಪ್ಪನ್ನು ಪುನಃ ಮಾಡುವುದಿಲ್ಲವಾಗಿ ತಪ್ಪೊಪ್ಪಿಕೊಳ್ಳುವ ನಿಮ್ಮ ಪತ್ರ ಬಂತು. 'ನಿನ್ನ ನೆನಪು' ಒಂದು ಆಕಸ್ಮಿಕ ಪ್ರಮಾದವೆಂದು ಮರೆತುಬಿಟ್ಟು ಮತ್ತೆ ನೀವು ಕಳಿಸಿದ 'ರಕ್ತ ಕಾಣಿಕೆಯ ಅರ್ಪಿಸುತ್ತಿದೆ ಬದುಕು' (ಮೂ: ಸಾಹಿರ್ ಲುಧಿಯಾನ್ವಿ) ಎಂಬ ಅನುವಾದಿತ ಕವನವನ್ನು ನಮ್ಮ ೧೯೮೨ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟಿಸಿಬಿಟ್ಟೆವು. ಆದರೇನು ಸ್ವಾಮಿ, ಈ ಸಲ ನೀವು ಆಯ್ದುಕೊಂಡುದು ಶ್ರೀ ಅಬ್ದುಲ್ ಮಜೀದ್ ಖಾನರು ಅನುವಾದಿಸಿ ಪ್ರಕಟಿಸಿದ 'ನೆರಳುಗಳು' ಸಂಕಲನದಲ್ಲಿ ೩೬-೩೭ನೆಯ ಪುಟಗಳಲ್ಲಿ ಬಂದ ಇದೇ ಹೆಸರಿನ ಕವನವನ್ನು. ಇಲ್ಲಿರುವುದಕ್ಕೂ ನೀವು ಕಳಿಸಿರುವುದಕ್ಕೂ ಅಂತರ ನಾಲ್ಕೈದು ಶಬ್ದಗಳು ಮಾತ್ರ!

ಈ ದಾರಿಯಲ್ಲಿ ನಡೆದರೆ ಸಾಹಿತ್ಯದಲ್ಲಿ ನೀವು ಎಲ್ಲಿಗೂ ತಲಪಲಾರಿರಿ. ಖಾಸಗಿಯಾಗಿ ನೀವು ಯಾರ ಕ್ಷಮೆ ಕೇಳಿದರೂ ತಕ್ಕ ಪ್ರಾಯಶ್ಚಿತ್ತವಾಗುವುದಿಲ್ಲ. ತೀರ ಕಡಿಮೆಯೆಂದರೆ

ಬಗ್ಗೆ, ಅಲರ್ಜಿ, ಕಜ್ಜಿ, ಸಿಹಿಮೂತ್ರರೋಗ, ರಕ್ತದ ಏರೊತ್ತಡ, ಹೃದಯಾಘಾತ, ಕ್ಯಾನ್ಸರ್, ಕಣ್ಣುನೋವು, ಹಲ್ಲುನೋವು ಮುಂತಾದ ಸರ್ವೇ ಸಾಮಾನ್ಯ ರೋಗಗಳ ಬಗ್ಗೆ ತಿಳಿಸಿ ಅವರಲ್ಲಿ ಜ್ಞಾನವಾಹವನ್ನುಂಟುಮಾಡಬೇಕು. ಈ ಎಲ್ಲ ರೋಗಗಳ ಕೆಲವು ಮುಖ್ಯ ಲಕ್ಷಣಗಳನ್ನೂ ಸುಲಭದಲ್ಲಿ ಪತ್ತೆ ಹಚ್ಚಿ ಅವನ್ನು ನಿಯಂತ್ರಿಸುವ ಒಂದೆರಡು ಮಾರ್ಗಗಳನ್ನಾದರೂ ತಿಳಿಸಿದರೆ ಸಾಕು.

ಆರೋಗ್ಯಾಭಿವೃದ್ಧಿಗೆ ಬೇಕಾದ ಸಮತೂಕದ ಆಹಾರದ ಬಗ್ಗೆ ನಾವು ಶಾಲೆಯಲ್ಲಿ ಅಭ್ಯಸಿಸುತ್ತೇವೆ. ಆದರೆ ಮಾನಸಿಕ ಆರೋಗ್ಯದ ಲವಲೇಶವೂ ನಮಗೆ ತಿಳಿದಿರುವುದಿಲ್ಲ. ಪರೀಕ್ಷೆಗಾಗಿ ರಾತ್ರಿಯಿಡೀ ನಿದ್ರೆ ಬಿಟ್ಟು ಓದಿ, ತಲೆ ಕೆಡಿಸಿಕೊಂಡು ಪರೀಕ್ಷಾ ಪ್ರಶ್ನಪತ್ರಿಕೆ ಕಂಡೊಡನೆ ತಲೆ ಸಿಡಿತ, ಕಣ್ಣು ಕತ್ತಲೆಯುಂಟಾಗಿ, ಮೈಕೈ ಬೆವರಿ ಏನು ಬರೆಯುವುದೆಂದೇ ಹೆಚ್ಚಿನ ವಿದ್ಯಾರ್ಥಿಗಳಿಗೆ ತೋಚುವುದಿಲ್ಲ. ಶಾಲೆಯಲ್ಲಿ ಪಾಠ ಕೇಳುವುದಲ್ಲದೆ, ಟ್ಯೂಷನ್ ಬೇರೆ ಪಡೆದು, ಗೈಡುಗಳನ್ನೂ ಅಭ್ಯಸಿಸಿ ಸಂಗ್ರಹಿಸಿದ ಜ್ಞಾನ

ಈ ಪತ್ರ ತಲಪಿದ ಒಂದು ವಾರದಲ್ಲಿ ಶ್ರೀ ಅಬ್ದುಲ್ ಮಜೀದ್ ಖಾನರ ಕ್ಷಮೆ ಕೋರಿ ನೀವು 'ಕಸ್ತೂರಿ'ಗೆ ಬರೆಯಿರಿ. ಕಾಪೀರೈಟ್ ಉಲ್ಲಂಘನೆಯ ಬಗ್ಗೆ ಕ್ರಮ ಕೈಕೊಂಡರೆ ನೀವು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವುದು ಖಂಡಿತ.

ಇಂತಿ ನಮಸ್ಕಾರಗಳು.

ನಿಮ್ಮ,
ಮಾಧವ ನಾ. ಮಹಿಷಿ
ಸಹಾಯಕ ಸಂಪಾದಕ

ಸಂಪಾದಕರೆ,

'ರಕ್ತ ಕಾಣಿಕೆಯ ಅರ್ಪಿಸುತ್ತಿದೆ ಬದುಕು' ಕವನ 'ಸಂಕ್ರಮಣ' ದಲ್ಲಿ ಮೊದಲು (೧೯೭೮-ಏಪ್ರಿಲ್) ಪ್ರಕಟವಾಗಿತ್ತು. ಅದರ ಹಿಂದಿನ ಸಂಚಿಕೆಯಲ್ಲಿಯೇ ರಮಜಾನ್ ದರ್ಗಾ ಅವರ 'ನಿನ್ನ ನೆನಪು' ಕವನವೂ ಅಚ್ಚಾಗಿತ್ತು. ಈ ಎರಡೂ ಕವನಗಳೂ ತುಂಬ ಚೆನ್ನಾಗಿವೆ ಎಂದು ಸಂತೋಷಪಟ್ಟಿದ್ದೆ. ಆದರೆ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೇ ಅವುಗಳನ್ನು ಅನಾಮತ್ತಾಗಿ ಬರೆದು ನಿಮ್ಮ ಪತ್ರಿಕೆಗೆ ಕಳುಹಿಸಿಬಿಟ್ಟೆ. ನಿಜಕ್ಕೂ ಇದೊಂದು ಅಕ್ಷಮ್ಯವಾದ ಅಪರಾಧ ಎಂದು ನನಗೀಗನಿಸುತ್ತಿದೆ.

ಆದರೆ (ರಮಜಾನ್ ದರ್ಗಾ) ಅವರ 'ಕಾವ್ಯ ಬಂತು ಬೀದಿಗೆ' ಸಂಕಲನವನ್ನಾಗಲಿ ಅಬ್ದುಲ್ ಮಜೀದ್ ಖಾನರ 'ನೆರಳುಗಳು' ಸಂಕಲನವನ್ನಾಗಲಿ ನಾನು ಓದಿಲ್ಲ, ಖಂಡಿತವಾಗಿಯೂ ನೋಡಿಲ್ಲ. 'ಸಂಕ್ರಮಣ'ದಲ್ಲಿ ಅಚ್ಚಾಗಿದ್ದುದನ್ನೇ ನಾನು ಮೂಲವಾಗಿ ಪರಿಗಣಿಸಿಬಿಟ್ಟಿದ್ದೆ.

ಈ ಮೂಲಕ ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾ ರಮಜಾನ್ ದರ್ಗಾ ಮತ್ತು ಅಬ್ದುಲ್ ಮಜೀದ್ ಖಾನ್‌ರವರ ಕ್ಷಮೆಯನ್ನು ಕೋರುತ್ತೇನೆ. ದಯವಿಟ್ಟು, ನನ್ನ ಈ ಅನುಚಿತ ವರ್ತನೆಗೆ ಸಂಪಾದಕ ವರ್ಗದವರಲ್ಲೂ ಕ್ಷಮೆಯ ನಮ್ರ ವಿನಂತಿಯನ್ನೂ ಕೋರುತ್ತೇನೆ. ಅಲ್ಲದೆ ನನ್ನ ಅಡ್ಡಹಾದಿಯನ್ನು ಇಲ್ಲಿಗೆ ನಿಲ್ಲಿಸಿದ್ದೇನೆ.

ಪ್ರೀತಿಯ ಮಾಧವ ನಾ. ಮಹಿಷಿಯವರೆ,

ನೀವು ದಯವಿಟ್ಟು ಈ ಪತ್ರವನ್ನು 'ಕಸ್ತೂರಿ'ಯಲ್ಲಿ ಪ್ರಕಟಿಸಿ ಹಾಗೂ ನೀವು ಬರೆದ ಖಾಸಗಿ ಪತ್ರವನ್ನೂ ಮುದ್ರಿಸಿ ಎಂದು ಕೋರುತ್ತೇನೆ.

ಬೆಂಗಳೂರು
೭-೧-೧೯೮೩

ನಿಮ್ಮ ಮಿತ್ರ,
ಶಿವಮೂರ್ತಿ

ವನ್ನು ಉತ್ತರ ಪತ್ರಿಕೆಯಲ್ಲಿ ಬಟ್ಟಿಯಿಳಿಸುವಲ್ಲಿ ಎಷ್ಟೋ ಮಂದಿ ವಿಫಲರಾಗುತ್ತಾರೆ. ಇದಕ್ಕೇನು ಕಾರಣ? ಕಾರಣವಿಷ್ಟೇ ನಮ್ಮ ಮನಸ್ಸಿನ ಇತಿ ಮಿತಿ ನಮಗೇನೇ ತಿಳಿದಿಲ್ಲ.

ಪಂಚೇಂದ್ರಿಯಗಳಿಂದ ಸಂಗ್ರಹಿಸಿದ ಜ್ಞಾನ ಸಂಚಯನದ ಕೆಲಸ ಮಾತ್ರವನ್ನಲ್ಲದೆ ನಮ್ಮ ಮಿದುಳು ಅಸಾಮಾನ್ಯ ವಿವೇಚನಾ ಶಕ್ತಿಯನ್ನೂ ಪಡೆದಿದೆ ಎಂಬ ಸತ್ಯದ ಅರಿವು ನಮಗಾಗುತ್ತಿಲ್ಲ.

ವೈದ್ಯಕೀಯ ಕ್ಷೇತ್ರದಲ್ಲಿ ಸೂಚನಾಚಿಕಿತ್ಸೆಯ ಪ್ರಯೋಗವನ್ನು ಕ್ರಿ. ಶ. ೧೯೨೦ ರಷ್ಟು ಹಿಂದೆಯೇ ಇಂಗ್ಲೆಂಡಿನಲ್ಲಿ ಎಮಿಲಿ ಕ್ಯೂ ಎಂಬುವರು ನಡೆಸುತ್ತಿದ್ದರು. ಅಸಾಧ್ಯ, ಕಷ್ಟ, ಕಷ್ಟಸಾಧ್ಯ ಎಂಬೀ ಶಬ್ದಗಳ ಬಳಕೆಯನ್ನೇ ಮಾಡಿದವರಲ್ಲ ಅವರು. ಮನಸ್ಸಿಗೆ ಸೂಕ್ತ ಸೂಚನೆಕೊಟ್ಟು ಎಂಥ ಅದ್ಭುತವನ್ನೂ ಸಾಧಿಸಬಹುದೆಂದು ತೋರಿಸಿಕೊಟ್ಟಿರುವರು.

“ದಿನೇ ದಿನೇ ಎಲ್ಲ ವಿಧದಲ್ಲೂ ನಾನು ಉತ್ತಮಗೊಳ್ಳುತ್ತಿದ್ದೇನೆ” ಎಂದು ಪ್ರತಿದಿನ ಮುಂಜಾನೆ ಹಾಸಿಗೆಯಿಂದ ಎದ್ದೊಡನೆ ಮತ್ತು ರಾತ್ರಿ ಮಲಗುವ ಮುನ್ನ ೨೦ ಬಾರಿ ಪೂರ್ಣ ಆತ್ಮವಿಶ್ವಾಸದಿಂದ ಉಚ್ಚರಿಸಿದಲ್ಲಿ ಏನು ತೊಂದರೆ ಇದ್ದರೂ ಕ್ರಮೇಣ ಕಣ್ಮರೆಯಾಗುತ್ತದೆಂದೂ ಸಾಕ್ಷ್ಯಾಧಾರಗಳ ಮೂಲಕ ಅವರು ಹೇಳಿದ್ದರು. ಅತಿ ತೀವ್ರವಾದ ಉಬ್ಬಸರೋಗವನ್ನೂ ಶಸ್ತ್ರಚಿಕಿತ್ಸೆಯೊಂದೇ ಮಾರ್ಗವೆಂದಿದ್ದ ಕ್ಷಯರೋಗವನ್ನೂ ಈ ವಿಧಾನದಿಂದ ಅವರು ವಾಸಿಮಾಡಿದ್ದರು.

ಗರ್ಭಿಣಿಯರು ತಮ್ಮ ಗರ್ಭಸ್ಥ ಶಿಶುವಿಗೆ ಉತ್ತಮ ಸೂಚನೆಗಳನ್ನು ನೀಡುತ್ತಿದ್ದಲ್ಲಿ ಅವರ ಇಚ್ಛೆಗನುಸಾರವಾಗಿಯೇ ಕಂದನನ್ನು ಪಡೆಯಬಹುದೆಂದೂ ತೋರಿಸಿದ್ದರವರು.

ಜಾಗ್ರತಾವಸ್ಥೆಯಲ್ಲಿ ಉತ್ತಮ ಸೂಚನೆಗಳಿಂದ ನಮ್ಮ ಮನಸ್ಸು ಪಡೆಯುವ ಶಕ್ತಿಯ ವಿಚಾರ ಹೇಳಿದ್ದಾಯಿತು. ಈಗ ಸುಪ್ತಾವಸ್ಥೆಯಲ್ಲಿ ನಮ್ಮ ಮನಸ್ಸು ನಡೆಸುವ ಪವಾಡದ ಬಗ್ಗೆ ತಿಳಿಯೋಣ. ಅಮೇರಿಕ ಹಾಗೂ ರಶಿಯದಲ್ಲಿ ಸುಪ್ತಾವಸ್ಥೆಗೆ ವ್ಯಕ್ತಿಯನ್ನು ಕೊಂಡೊಯ್ದು ಉತ್ತಮ ಸೂಚನೆಗಳನ್ನು ಕೊಟ್ಟು, ತಾತ್ಕಾಲಿಕ ತಲೆನೋವು, ಬೆನ್ನುನೋವು, ಮುಟ್ಟಿನ ನೋವು, ಬಂಜೆತನ, ಹೊಟ್ಟೆ ಹುಣ್ಣು, ರಕ್ತದ ಏರೊತ್ತಡ, ತೊದಲುವಿಕೆ, ಉಬ್ಬಸರೋಗ, ಅಂಧತೆ, ಸಭಾಕಂಪನ, ಹಾಸಿಗೆಯಲ್ಲಿ ಮೂತ್ರ ಹೊಯ್ಯುವುದು, ಚರ್ಮರೋಗ, ಕಾಮಾಲೆರೋಗ, ಮೂರ್ಛಾರೋಗಗಳಿಗೆಲ್ಲ ಚಿಕಿತ್ಸೆ ನೀಡುತ್ತಿದ್ದಾರೆ. ಯಾವ ಇಂಜೆಕ್ಷನ್ನೂ ಇಲ್ಲದೆ ಸುಪ್ತಾವಸ್ಥೆಯಲ್ಲಿನ ಕೇವಲ ಸೂಚನೆಗಳಿಗೆ ಮಣಿದು ಅಲ್ಲಿನ ಮಹಿಳೆಯರಿಂದು ಸ್ವಲ್ಪವೂ ನೋವಿಲ್ಲದೆ ಹೆರುತ್ತಿದ್ದಾರೆ. ಅಲ್ಲಿಂದು ಕ್ರೀಡಾಪಟುವಿನ ದೈಹಿಕ ಆಯಾಸ ಕಡಿಮೆ ಮಾಡಿ ಅವನಲ್ಲಿ ಹೆಚ್ಚಿನ ಶಕ್ತಿ ತುಂಬಲು, ವಿದ್ಯಾರ್ಥಿಗಳು ಸುಲಭದಲ್ಲಿ ಪಾಠಗಳನ್ನೂ ಅರಗಿಸಿಕೊಂಡು ಅವರಲ್ಲಿ ಆಸಕ್ತಿ ಉತ್ಸಾಹ ತುಂಬಲು, ಅವರ ಸ್ಮರಣ ಶಕ್ತಿ ಹೆಚ್ಚಿಸಲೂ ಈ ವಿಧಾನದ ಉಪಯೋಗ ಪ್ರಚಲಿತವಾಗಿದೆ. ಆದರೆ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ, ಸಾಮಾನ್ಯ ವಿದ್ಯಾಭ್ಯಾಸ ಕ್ರಮದಲ್ಲಿ. ವೈದ್ಯಕೀಯ ಶಿಕ್ಷಣ ಪದ್ಧತಿಯಲ್ಲೂ ಈ ವಿಚಾರಗಳಲ್ಲಿ ಇನ್ನೂ ಸೇರಿಕೊಂಡಿಲ್ಲ!

[illegible]. ಮನುಷ್ಯ ಜೀವನವನ್ನು [illegible] [illegible] [illegible] [illegible] ವಿದ್ಯೆ ನೆಮ್ಮದಿಯಿಂದು ಬೇಕಾಗಿದೆ. ಗಣಿತ, ವಿಜ್ಞಾನ, ಭೂಗೋಳ ಮುಂತಾದ ವಿಷಯ ವಿಚಾರಗಳೊಂದಿಗೆ ದೈಹಿಕ ಮಾನಸಿಕ ಬೌದ್ಧಿಕ ಆರೋಗ್ಯದ ಲಕ್ಷಣಗಳನ್ನೂ ಮನಸ್ಸಿನ ಸ್ವರೂಪ ಮತ್ತು ಬೆಳವಣಿಗೆಯ ಸಾಧ್ಯಾಸಾಧ್ಯತೆಯನ್ನೂ, ಪ್ರಚಲಿತ ಸಾಂಕ್ರಾಮಿಕ ಹಾಗೂ ಇತರ ರೋಗಗಳ ಬಗ್ಗೆ ತುಸು ಮಾಹಿತಿಯನ್ನೂ ರೋಗ ತಡೆಯುವಲ್ಲಿ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಯ ಕ್ರಮಗಳನ್ನೂ ತಿಳಿಯಪಡಿಸುವ ಆರೋಗ್ಯ ಪಾಠವು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಸೇರಿಕೊಳ್ಳಬೇಕು. ಹಾಗಾದಾಗ ನೋವಿಲ್ಲದ ನಲಿವಿನ ಬಾಳಿಗೆ ಬುನಾದಿ ಹಾಕಿಕೊಟ್ಟಂತಾದೀತು.



ಆಲಮೇಲಕರ್ ಅವರು

ಚಿತ್ರಕಲೆಯಲ್ಲಿ ಜೆಮಿನಿ ರಾಯರ ಜಾಡಿನಲ್ಲಿ ನಡೆದು, ರೇಖೆಗಳಲ್ಲಿ ತಮ್ಮತನವನ್ನು ಸಾಧಿಸಿ ಕಲಾವಿದರ ವಲಯಗಳಲ್ಲಿ 'ಆಲಮೇಲಕರ್ ಶೈಲಿ'ಯೆಂದು ಗುರುತಿಸಲ್ಪಡುವಷ್ಟು ವೈಶಿಷ್ಟ್ಯಪೂರ್ಣ ಶೈಲಿಯಿಂದ ಖ್ಯಾತರಾದ ಅಬ್ದುಲ್ ರಹೀಮ್ ಅಪ್ಪಾಭಾಯಿ ಆಲಮೇಲಕರರು ಮೊನ್ನೆ ಡಿಸೆಂಬರಿನಲ್ಲಿ ನಿಧನರಾದಾಗ ಕಲಾಪ್ರಪಂಚ ಅಪ್ಪಟ ಭಾರತೀಯ ಸಂಪ್ರದಾಯದ ಕಲಾರಾಧಕನೊಬ್ಬನನ್ನು ಕಳೆದುಕೊಂಡಂತಾಯಿತು.

ಅವರು ಮೂಲತಃ ವಿಜಾಪುರ ಜಿಲ್ಲೆಯ ಆಲಮೇಲದವರಾದರೂ ಹುಟ್ಟಿಬೆಳೆದದ್ದು ಸೊಲ್ಲಾಪುರದಲ್ಲಿ. ಕೆಲವು ವರ್ಷಗಳ ಹಿಂದೆ ಅವರು 'ಕಸ್ತೂರಿ'ಯ ಕಾರ್ಯಾಲಯಕ್ಕೆ ಭೇಟಿಯಿತ್ತಾಗ ಅವರನ್ನು ಹತ್ತಿರದಿಂದ ನೋಡುವ ಅವಕಾಶ ಒದಗಿತ್ತು. ವೇಷಭೂಷಣ ತೀರಾ ಸರಳ. ಅಚ್ಚ ಕನ್ನಡದಲ್ಲಿ ಸಂಭಾಷಿಸುತ್ತಿದ್ದರೂ ಉಚ್ಚಾರದಲ್ಲಿ ಮರಾಠಿಯ ಛಾಯೆ ಎದ್ದುಕಾಣುತ್ತಿತ್ತು. ತುಂಬಾ ಸ್ನೇಹಮಯಿ. ಪ್ರಪಂಚದ ಶ್ರೇಷ್ಠ ಕಲಾವಿದರಲ್ಲಿ ತಾನೂ ಒಬ್ಬ ಎಂಬ ಗರ್ವ ಲವಲೇಶವೂ ಇರಲಿಲ್ಲ.

ಮೀನುಗಾರರು, ಕಾರ್ಮಿಕರು, ರೈತಾಪಿ ಜನ ಹೀಗೆ ಆಲಮೇಲಕರರು ಆರಿಸಿಕೊಂಡ ಕಲಾವಸ್ತುಗಳು ನಿತ್ಯ ಜೀವನಕ್ಕೆ ತೀರಾ ಹತ್ತಿರ. ಗೊಂಡಾರಣ್ಯಗಳಲ್ಲಿ ವಾಸಿಸುವ ಆದಿಮ ಜನಾಂಗಗಳ ವ್ಯಕ್ತಿಗಳನ್ನು ಚಿತ್ರಿಸುವುದರಲ್ಲಿ ಅವರಿಗೆ ಎಲ್ಲಿಲ್ಲದ ಹುರುಪು. ಅದಕ್ಕಾಗಿಯೆ ಅಲ್ಲಿಗೆ ಹೋಗಿ ಆ ಜನಗಳೊಂದಿಗೆ ಜೀವಿಸಿ ಅಗಾಗ ಸ್ಕೆಚ್ ಮಾಡಿಕೊಂಡು ಬಂದು ಅವುಗಳ ಪೈಕಿ ಕೆಲವನ್ನು ಚಿತ್ರಿಸುವುದು ಅವರಿಗಿದ್ದ ಹವ್ಯಾಸ. ಅವರ ಚಿತ್ರಗಳಲ್ಲಿ ಉತ್ತರ ಕನ್ನಡದ ಹಾಲಕ್ಕಿಗೌಡರದೂ ದೊಡ್ಡ ಪಾಲು.

ಆಲಮೇಲಕರರೆಂದರೆ ಉತ್ಸಾಹದ ಬುಗ್ಗೆ, ಧೃತಿಗೆಡದ ಜೀವ. ಹಿಂದೊಮ್ಮೆ ಏಕ ವ್ಯಕ್ತಿ ಕಲಾಪ್ರದರ್ಶನವನ್ನು ಏರ್ಪಡಿಸುವುದರಲ್ಲಿದ್ದಾಗ ಅವರ ಕೃತಿಗಳೆಲ್ಲ ಅಗ್ನಿಗೆ ಆಹುತಿಯಾದವು. ಆದರೆ ಇದರಿಂದ ಪ್ರದರ್ಶನಕ್ಕೇನೂ ಬಾಧೆ ಬರಲಿಲ್ಲ; ಆಲಮೇಲ ಕರರು ಅಹರ್ನಿಶಿಯಾಗಿ ಶ್ರಮಿಸಿ ಕಲಾಕೃತಿಗಳನ್ನು ಪುನಾರಚಿಸಿದರು.

ಒಳ್ಳೆಯ ಕಲೆಗಾಗಲಿ ಕಲಾವಿದನಿಗಾಗಲಿ ಮರ್ಯಾದೆಯಿದೆ ಎನ್ನುವದಕ್ಕೆ ಆಲಮೇಲಕರರೇ ಸಾಕ್ಷಿ. ಅವರ ಕೃತಿಗಳ ಪ್ರದರ್ಶನ ದೇಶದ ಒಳಗೂ ಹೊರಗೂ ಅನೇಕ ಸಲ ನಡೆದಿದೆ. ಜಗತ್ತಿನ ಪ್ರತಿಷ್ಠಿತ ಆರ್ಟ್ ಗ್ಯಾಲರಿಗಳಲ್ಲಿ ಅವರ ಚಿತ್ರಗಳು ಪ್ರದರ್ಶಿತವಾಗುತ್ತವೆ. ಕರ್ನಾಟಕದ ಸರಕಾರವಾಗಲಿ ಕನ್ನಡದ ಜನವಾಗಲಿ ಮೂಲತಃ ಕನ್ನಡಿಗನಾದ ಈ ಕಲಾವಿದನನ್ನು ಗೌರವಿಸದಿದ್ದರೂ ಮಹಾರಾಷ್ಟ್ರ ಅವರನ್ನು ಗೌರವಿಸಿದೆ, ಆಶ್ರಯವನ್ನಿತ್ತು ಪೋಷಿಸಿದೆ.

ಕುಂಚದಷ್ಟೆ ಅವರ ಲೇಖನಿಯೂ ಸಮರ್ಥವಾಗಿತ್ತು ಎನ್ನುವುದಕ್ಕೆ ಇದೇ ಸಂಚಿಕೆಯ ೬೨ ನೆಯ ಪುಟದಲ್ಲಿ ಪ್ರಾರಂಭವಾಗುವ ಅವರ ಲೇಖನವೇ ಸಾಕ್ಷಿ.


ಆಕಸ್ಮಿಕವೋ ದೈವದತ್ತವೋ?

ಡಾ. ಎಸ್. ಕೆ. ಜೋಶಿ

ನನ್ನೊಬ್ಬ ಶ್ರೀಮಂತ ಗೆಳೆಯ ರಾಮರಾಯ ವಿಶ್ವವಿದ್ಯಾಲಯದ ವ್ಯಾಸಂಗದಲ್ಲಿ ಇದ್ದಾಗ್ಗೆ, ಅವನ ತಂದೆ ತಾಯಿಗಳು ವಾಸಂತಿ ಎಂಬ ಕನ್ಯೆಯನ್ನು ಅವನ ಬಾಳ ಸಂಗಾತಿಯಾಗಲು ಆರಿಸಿದ್ದರು. ಆದರೆ ರಾಮರಾಯ ಅವಳನ್ನು ನಿರಾಕರಿಸಿದ್ದ. ಸ್ನಾತಕೋತ್ತರ ಶಿಕ್ಷಣ ಮುಗಿಸಿ, ಒಳ್ಳೆಯ ಅಧಿಕಾರಿಯೂ ಆದ. ಆದರೆ ಯಾವ ದೈವಸಂಕಲ್ಪವೋ ಏನೋ, ಮುಂದೆ ಎರಡು ದಶಕಗಳ ವರೆಗೆ ವಧು ಅನ್ವೇಷಣೆಯಲ್ಲಿ ಅಲೆದಾರಿಯಾಗಿ ಕಾಲ ನೂಕಿ, ಕೊನೆಗೆ ಮಧ್ಯ ವಯಸ್ಸಿನಲ್ಲಿ ಆತನ ಕಂಕಣಬಲ ಕೂಡಿಬಂದಿತ್ತು – ಅದೇ ಆ ವಾಸಂತಿ ಯೊಂದಿಗೆ. ಆ ಕನ್ಯೆಯ ಮಾತಾಪಿತೃಗಳು ಕೂಡ ಹಲವಾರು ಸ್ಥಳಗಳಲ್ಲಿ ಮಗಳಿಗಾಗಿ ವರಾನ್ವೇಷಣ ಕೈಕೊಂಡು ದಣಿದಿದ್ದರು. ಆದರೆ ಕೊನೆಯಲ್ಲಿ ಆ ವರನಿಗೆ ಅದೇ ಕನ್ಯೆ; ಆ ಕನ್ಯೆಗೆ ಆತನೇ ವರ. ಅವರೀಗ ಬಾಳಿನ ಉತ್ತರಾರ್ಧದಲ್ಲಿ ಜೀವನ ಕಳೆಯುತ್ತಿರುವ ಸುಖಿ ದಂಪತಿಗಳು. ಈ ಘಟನೆ ಆಕಸ್ಮಿಕವೋ? ದೈವದತ್ತವೋ?

ಮತ್ತೊಂದು. ಪ್ರೊ. ಶರ್ಮಾ ಒಂದೊಮ್ಮೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪಿಎಚ್.ಡಿ. ಸಂಶೋಧಕ ವಿದ್ಯಾರ್ಥಿಯಾಗಿ, ತಾವು ಸಾದರ ಪಡಿಸಬೇಕಾದ ಮಹಾಪ್ರಬಂಧದ ಟಿಪ್ಪಣಿಗಳನ್ನು ಮೈಕ್ರೋಫಿಲ್ಮ್‌ಗಳಲ್ಲಿ ಸಂಗ್ರಹಿಸಿಕೊಂಡು ಭಾರತಕ್ಕೆ ವಿಮಾನದ ಮೂಲಕ ಮರಳಿದರು. ಬರುವಾಗ ಕೆಲ ಪುಸ್ತಕಗಳು ಹಾಗೂ ಆ ಮೈಕ್ರೋಫಿಲ್ಮ್‌ಗಳು ಹಡಗಿನಿಂದ ಪಾರ್ಸಲ್ ಮೂಲಕ ಬರುವ ವ್ಯವಸ್ಥೆ ಮಾಡಿದ್ದರು. ಒಂದು ತಿಂಗಳು ಪ್ರವಾಸ ಮಾಡಿ ಹಡಗು ಮುಂಬೈ ತಲುಪಿದಾಗ, ಶರ್ಮಾರವರು ತಮ್ಮ ಪಾರ್ಸಲು ಬಿಡಿಸಿ ನೋಡಿದಾಗ, ಅವರ ಜೀವವೇ ಆಗಿದ್ದ ಆ ಮೈಕ್ರೋಫಿಲ್ಮ್‌ಗಳು ಮಾಯವಾಗಿದ್ದರಿಂದ ಹೌಹಾರಿ ಚಿಂತಾಕ್ರಾಂತರಾದರು. ಅವುಗಳನ್ನು ಮರಳಿ ಪಡೆಯುವ ಆಸೆಯಿಂದ ಎಷ್ಟೋ ದಿನಗಳ ವರೆಗೆ ದಿಕ್ಕು ದಿಕ್ಕು, ಮೂಲೆ ಮೂಲೆ ತಿರುಗಿ ಬೇಸತ್ತರು. ಆದರೆ, ಅದೊಂದು ದಿನ ಚರ್ಚ್‌ಗೇಟಿನ ಫೂಟ್‌ಪಾತಿನ ಮೇಲೆ ಒಬ್ಬ ಬಾಲಕ ಅವರ ಮೈಕ್ರೊಫಿಲ್ಮ್‌ಗಳನ್ನು ಪುಸ್ತಕಗಳ ಜೊತೆಗೆ ಮಾರಾಟಕ್ಕೆ ಇಟ್ಟುದುದನ್ನು ಕಂಡು, ಜಿಂಕೆಯಂತೆ ನೆಗೆದು ತಮ್ಮ ದಸ್ತಾವೇಜುಗಳನ್ನು, ತಾವೇ ಶ್ರಮಪಟ್ಟು ತೆಗೆದ ಚಿತ್ರಗಳ ಆ ಫಿಲ್ಮುಗಳನ್ನು ಮರಳಿ ಹಣ ಕೊಟ್ಟು ಕೊಂಡರು. ಈ ಘಟನೆ ಆಕಸ್ಮಿಕವೋ ದೈವ ನಿರ್ದೇಶಿತವೋ?

ಮತ್ತೊಂದು ಘಟನೆ. ಖ್ಯಾತ ನಟ ಫ್ರೆಡ್ರಿಕ್ ಫರ್ ಜೇಂಬರಿನ ನಿರ್ದೇಶಕರೊಬ್ಬರು 'ಮಾನ್' ಎಂಬ ಫಿಲ್ಮ್ ತಯಾರಿಸಲು ನಿರ್ಧರಿಸಿ, ಅದರ ಕಾದಂಬರಿ ಪುಸ್ತಕಕ್ಕೆ ಸುತ್ತಾಡಿದರು. ಕೊನೆಗೆ ಎಲ್ಲೋ ಒಂದು ಕಡೆಗೆ ಒಂದು ಪ್ರತಿ ದೊರಕಿತು. ಸಂತಸದಿಂದ ಮ್ಯಾಂಚೆಸ್ಟರಿಗೆ ಪ್ರಯಾಣ ಬೆಳೆಸಿದರು ರೈಲಿನಲ್ಲಿ. ಆದರೆ ದಾರಿಯಲ್ಲಿ ತನ್ನ ಗೆಳೆಯನಿಗೆ ಭೆಟ್ಟಿಯಾಗಬೇಕಾಗಿ ಬಂದ್ದರಿಂದ, ಒಂದು ಚಿಕ್ಕ ಸ್ಟೇಶನ್ನ



ನಲ್ಲಿ ರೈಲಿನಿಂದ ಇಳಿದು ಹೋದರು. ಅವರ ಕೈಯಿಂದ ಆ ಹಳೆಯ ಪುಸ್ತಕ ರೈಲಿನಲ್ಲೇ ಪ್ರವಾಸ ಮುಂದುವರಿಸಿತ್ತು. ಹಿಂದೆ ಕೆಲವು ಪುಟಗಳ ಮೇಲೆ ಮರಳು ಕಳೆಗೆ ಇಳಿದಿದ್ದವು. ಬಳಿಕ ಮುಂದಿನ ಸ್ಟೇಶನ್ನಿನಿಂದ ಒಬ್ಬ ಪ್ರಯಾಣಿಕನು ಅದೇ ಡಬ್ಬಿಯನ್ನೇರಿದ. ಅವ ಆ ಪುಸ್ತಕವನ್ನು ನೋಡಿ ಪುಟ್ಟ ಅವುಗಳಲ್ಲಿ ಡೈರೆಕ್ಟರರು ಮಾಡಿದ ಕೆಲಗುರುತುಗಳ ಮೂಲಕ ಅದು ಆ ಫಿಲ್ಮ್ ಡೈರೆಕ್ಟರರದೇ ಎಂದು ನಿರ್ಧರಿಸಿ. ಸುಮಾರು ಒಂದು ತಿಂಗಳು ಕಳೆದ ತರುವಾಯ. ಡೈರೆಕ್ಟರ್ ಮಹಾಶಯರಿಗೆ ಅದನ್ನು ಮರಳಿಸಿದನು. ಅವರೆ ಆ ಹೊತ್ತಿಗಾಗಲೇ ಅವರು ಇದ್ದ ಒಂದೇ ಪುಸ್ತಕ ಕಳೆದು ಹೋದ ನಿರಾಶೆಯಿಂದ ಆ ಚಿತ್ರವನ್ನು ಚಿತ್ರೀಕರಿಸುವ ಯೋಜನೆಗೆ ನೀರು ಚೆಲ್ಲಿದ್ದರು. ಅಂಥ ಕ್ಷಣದಲ್ಲೇ ಈ ವ್ಯಕ್ತಿಯು ಅವರ ಮನೆಗೆ ಹೋಗಿ. ಅಮೂಲ್ಯ ಪುಸ್ತಕವನ್ನು ಅವರ ಕೈಗಿತ್ತಾಗ ಆ ಡೈರೆಕ್ಟರಿಗೆ ಅಮಿತಾನಂದ ಆಶ್ಚರ್ಯ. ವಿಶೇಷವೇನೆಂದರೆ ಆ ಪುಸ್ತಕ ತಂದ ವ್ಯಕ್ತಿಯು 'ತಾನ್' ಫಿಲ್ಮಿನಲ್ಲಿ ಆಯ್ಕೆಯಾದ ನಾಯಕ ನಟನಾಗಿದ್ದನು. ಇದು ಆಕಸ್ಮಿಕವೋ? ದೈವ ನಿದರ್ಶನದ ಘಟನೆಯೋ?

ಮೆಕ್ಸಿಕೋ ಆಖಾತದಲ್ಲಿ ಎರಡನೆಯ ಜಾಗತಿಕ ಯುದ್ಧದಲ್ಲಿ ಮೃತನಾದ ಕ್ಯಾಪ್ಟನ್ ಜೇಮ್ಸನ ಘಟನೆ. ಅವನ ಶವವನ್ನು ಭದ್ರವಾದ ಶವಪೆಟ್ಟಿಗೆಯಲ್ಲಿ ಹಾಕಿ, ಸೈನಿಕ ಮರ್ಯಾದೆಯೊಂದಿಗೆ ಆ ಸಮುದ್ರದ ತಟದಲ್ಲಿ ಸಂಗಮರವರಿ ಕಲ್ಲಿನ ಸಮಾಧಿ ಕಟ್ಟಿ ಇಳಿಸಲಾಗಿತ್ತು ೧೯೪೫ರಲ್ಲಿ. ಆ ನಂತರ ೧೯೫೦ರಲ್ಲಿ ಮೆಕ್ಸಿಕೋವನ್ನೇ ನಡುಗಿಸಿದ ಚಂಡಮಾರುತ ಹಾಗೂ ಭೂಕಂಪಗಳು ಆ ಕಲ್ಲಿನ ಸಮಾಧಿಯನ್ನು ಸಡಿಲಿಸಿ, ಆ ಶವಪೆಟ್ಟಿಗೆಯನ್ನು ಸಾಗರದ ತರಂಗಗಳಿಗೆ ನೀಡಿದವು. ಅದು ಮುಂದೆ ತೇಲುತ್ತ ಅಟ್ಲಾಂಟಿಕ್ ಸಾಗರ ಪ್ರವಾಹಕ್ಕೆ ಸಿಲುಕಿ, ದಕ್ಷಿಣ ಅಮೇರಿಕವನ್ನು ಸುತ್ತಿ, ಪೆಸಿಫಿಕ್ ಸಾಗರದ ಮೂಲಕ ಪಶ್ಚಿಮ ಕೆನಡಾದ ದಂಡೆಯನ್ನು ಎಂಟು ವರುಷಗಳ ತರುವಾಯ ತೇಲುತ್ತ ತಲುಪಿತ್ತು. ಅಲ್ಲಿ ಬೆಸ್ತರ ಗುಂಪೊಂದು ಮಿಂಚುತ್ತಿದ್ದ ಆ ಪೆಟ್ಟಿಗೆಯನ್ನು ಕಂಡು ಅದನ್ನು ನಾವೆಯ ಮೂಲಕ ದಡಕ್ಕೆ ತಂದಿತು. ಅದರ ಮೇಲೆ ಕ್ಯಾಪ್ಟನ್ ಜೇಮ್ಸ್ ಅವನ ಜನನ, ಮರಣ ಹುಟ್ಟಿದ ಊರು ಜಿಲ್ಲೆ. ತೀರಿದ ಊರು ಜಿಲ್ಲೆ ಹಾಗೂ ದುರಂತಕ್ಕೆ ಕಾರಣಗಳ ಬಗ್ಗೆ ಒಂದು ಹಿತ್ತಾಳೆಯ ಪಟ್ಟಿಯ ಮೇಲೆ ಕೊರೆಯಲಾಗಿತ್ತು. ಅಲ್ಲಿಯ ಜನರಿಗೆ ಆಶ್ಚರ್ಯವಾಯಿತು. ಆ ಪೆಟ್ಟಿಗೆಯು ತಲುಪಿದ ಊರು ಕ್ಯಾಪ್ಟನ್ ಜೇಮ್ಸ್ ಹುಟ್ಟಿ ಬೆಳೆದ ಊರು. ಅದನ್ನು ಮತ್ತೆ ಅವನ ಹುಟ್ಟೂರಿನ ಸಮುದ್ರದಂಚಿನಲ್ಲೇ ಕಲ್ಲಿನ ಸಮಾಧಿಯಿಂದ ಸಮಾಧಿಸಲಾಯಿತು. ಆ ಸಮಾಧಿ ಮೂರು ವರುಷಗಳ ತರುವಾಯ ಮರಳಿ ಮಣ್ಣಿಗೆ ಬಂದಿದ್ದೆ. ಈ ಘಟನೆ ಎಂಥದು? ಆಕಸ್ಮಿಕವೋ ದೈವದತ್ತವೋ?

ಈ ರೀತಿ ನೂರಾರು ಸಾವಿರಾರು. ಘಟನೆಗಳು ನಡೆಯುತ್ತಲೇ ಇರುತ್ತವೆ. ನಾವೆಂದು ಬದುಕುವ ನಾಲ್ಕುನೂರು ಕೋಟಿ ಜನ. ಅವಾಗ್ಗೆ ಒಬ್ಬ-ನೊಂದರಂತೆ. ದಿನಂಪ್ರತಿ ಕಷ್ಟ ನೂರು ಕೋಟಿ ಘಟನೆಗಳು ಆಗುತ್ತಿರಲೂ ಸಾಕು. ಅವುಗಳು ಆಕಸ್ಮಿಕಗಳೋ ಅಥವಾ ದೈವದತ್ತವೋ? ನಿರ್ಧರಿಸುವವರಾದರೂ ಯಾರು?

ಕನ್ಯಾಶುಲ್ಕ

ಡಾ. ಕೆ. ಶ್ರೀಕಂಠಯ್ಯ

ಮದುವೆಯ ದುಂದುವೆಚ್ಚಗಳ ಮೇಲೆ ಮಿತಿ ಹಾಕಿ, ವರದಕ್ಷಿಣೆಯನ್ನು ನಿಷೇಧಿಸುವ ಕಾನೂನು ಮಾಡಬೇಕೆಂಬ ವಿಚಾರದಲ್ಲಿ ಸರಕಾರ ಇನ್ನೂ ಹಿಂದೆ–ಮುಂದೆ ನೋಡುತ್ತಿದೆ. ಆದರೆ ಈಗ್ಗೆ ಸುಮಾರು ೫೦೦ ವರ್ಷಗಳ ಹಿಂದೆಯೇ ಸರಕಾರದ ನೆರವಾಗಿ ಜನರೇ ಒಂದುಗೂಡಿ ಮದುವೆಯಿಂದ ಆಗುತ್ತಿರುವ ಅನರ್ಥಗಳಿಗಾಗಿ ಬೇಸತ್ತು, ತಮ್ಮ ಮೇಲೆ ತಾವೇ ಮದುವೆಯ ಖರ್ಚುವೆಚ್ಚಗಳ ಬಗೆಗೆ ಮಿತಿ ಹಾಕಿಕೊಳ್ಳಬೇಕೆಂದು ಒಂದಾಗಿ ಒಂದು ನಿರ್ಣಯ ಮಾಡಿ ರಾಜನ ಮುಂದಿಟ್ಟು ಅದನ್ನು ಅನುಮೋದಿಸುವಂತೆ ಮಾಡಿದ ಕುತೂಹಲಕರ ವಿಷಯವೊಂದನ್ನು ದಕ್ಷಿಣ ಭಾರತದ ಶಾಸನವೊಂದು ಹೇಳುತ್ತದೆ.


ನಾಲ್ಕು ಆಶ್ರಮಗಳಲ್ಲಿ ನಮ್ಮವರು ಗೃಹಸ್ಥಾಶ್ರಮಕ್ಕೆ ಒಂದು ಮುಖ್ಯಸ್ಥಾನವನ್ನು ಕೊಟ್ಟು ವಿವಾಹ ವಿಷಯದಲ್ಲಿ ಧಾರ್ಮಿಕ ದೃಷ್ಟಿಯನ್ನು ಮೂಡಿಸಿದ್ದಾರೆ. ಬ್ರಹ್ಮಚರ್ಯಾಶ್ರಮ ವಾನಪ್ರಸ್ಥ ಸನ್ಯಾಸಾಶ್ರಮ ಗೃಹಸ್ಥಾಶ್ರಮವೇ ಉತ್ತಮವೆಂದು ಪಂಡಿತರು ಹೇಳುವರು. ಹಿಂದೂ ವಿವಾಹವು ಒಂದು ಕರಾರಲ್ಲ, ಸಂಸ್ಕಾರ ಎಂದು ಡಾ. ಶ್ರೀಕಂಠ ಶಾಸ್ತ್ರಿಗಳು ಭಾರತೀಯ ಸಂಸ್ಕೃತಿಯನ್ನು ಕುರಿತು ಒಂದೆಡೆ ಹೇಳಿ, ಧರ್ಮದ ಬುನಾದಿಯ ಮೇಲೆ ಹಿಂದೂ ವಿವಾಹ ಪದ್ಧತಿಯು ಬೆಳೆದು ನಿಂತು ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆರೆತುಹೋಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಆದರೆ ಇವೆಲ್ಲ ನಮ್ಮ ಸಂಸ್ಕೃತಿಯ ಹಿರಿಮೆಗರಿಮೆಗಳ ಬಗೆಗೆ ಕೇಳುವುದಕ್ಕೆ ಹಿತಕರವಾದ ಮಾತುಗಳು. ವಾಸ್ತವಾಂಶಗಳು ಏನಾದುವು? ಅಂದರೆ ಶಾಸನಗಳು, ಶಾಸನಾಧಾರಿತ ವರದಿಗಳು ವಿದೇಶಿ ಪ್ರವಾಸಿಗರ ಲೇಖನಗಳು, ಕವಿಗಳು, ಸಂತರು. ಸುಧಾರಕರ ನುಡಿಗಳು ಇವುಗಳು ಕೊಡುವ ಚಿತ್ರವೇ ಬೇರೆ. ಅವುಗಳನ್ನು ವಿವರವಾಗಿ ಪರಿಶೀಲಿಸಿದರೆ ಡಾ. ಶ್ರೀಕಂಠ ಶಾಸ್ತ್ರಿಗಳ ಹೇಳಿಕೆಯನ್ನು ಸ್ವಲ್ಪ ಮಾರ್ಪಡಿಸಿ, ಇಂದು ವಿವಾಹವು ಒಂದು ಸಂಸ್ಕಾರವಲ್ಲ, ಕರಾರು ಎಂದು ಹೇಳಬೇಕಾಗುತ್ತದೆ. ಕೈಲಾಸಂ ಮಾತಿನಲ್ಲಿ ಹೇಳಬಹುದಾದರೆ, Matrimony is a matter of money.

ಹಿಂದೂ ವಿವಾಹಗಳು ನಡೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡಿದರೆ ಆಗ ಇತ್ತೀಚಿನವರೇ ಆದ ಅನಕೃ ಅವರು ಹೇಳಿದ, "ಮದುವೆಯೋ ಮನೆ ಹಾಳೋ" ಎಂಬ ಮಾತೂ ಕೈಲಾಸಂರವರು ಹೇಳಿದ "ತಾಳಿ ಕಟ್ಟೋಕೂಲೀನೆ?" ಎಂಬ ಮಾತು ಎಷ್ಟು ಅರ್ಥವತ್ತಾಗಿ ಹೊಂದಿಕೊಳ್ಳುತ್ತವೆ ಎಂಬುದಕ್ಕೆ ಮುಂದಿನ ಸಮೀಕ್ಷೆಯೇ ಸಾಕ್ಷಿ.

"ಕನ್ಯಾಶುಲ್ಕಂ ಅತಿ ದೂಷಿತಂ" ಎಂಬ ಮಾತು ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುತ್ತದೆ. ಮದುವೆಯ ಸಂದರ್ಭದಲ್ಲಿ ಯಾವ ರೂಪದಲ್ಲೇ ಆಗಲಿ ಕನ್ಯಾಶುಲ್ಕವನ್ನು ಪಡೆಯುವುದು ಸಲ್ಲದು; ಹಾಗೆ ಮಾಡಿದರೆ ಮಗಳನ್ನು ಮಾರಿದಂತಾಗುತ್ತದೆ ಎಂಬುದು ಮನುವಿನ ಮತ. ಆದರೆ ಬರಬರುತ್ತ ಜನರು ಹಣದಾಸೆಗಾಗಿ ಮದುವೆಯನ್ನು ಒಂದು ವ್ಯವಹಾರವನ್ನಾಗಿ ಮಾಡಿದರು. ಕ್ರಮೇಣ ಈ ಪದ್ಧತಿ ತೀವ್ರವಾಗಿ ಹಿಂದೂ ಕುಟುಂಬಗಳ ಆರ್ಥಿಕ ಸ್ಥಿತಿಯ ಮೇಲೆ ವಿಪರೀತ ಪರಿಣಾಮವನ್ನುಂಟುಮಾಡಿತು. ಅನುಕೂಲಸ್ಥರು ಇಡೀ ಹಳ್ಳಿಯನ್ನೇ ಮದುವೆಯ ಸಂದರ್ಭದಲ್ಲಿ ಕನ್ಯಾಶುಲ್ಕವಾಗಿ ಕೊಡುವ ಪದ್ಧತಿ ಇತ್ತೆಂದು ಇಮ್ಮಡಿ ದೇವರಾಯನ ಕಾಲದ (ಕ್ರಿ.ಶ. [illegible]) ಒಂದು ಶಾಸನ ಹೇಳುತ್ತದೆ.

ಬರಬರುತ್ತ ಈ ಪದ್ಧತಿ ಸಮಾಜದಲ್ಲಿ ಒಂದು ಶಾಪವಾಗಿ, ಇದರ ಪರಿಣಾಮ ಅನುಭವಿಸುವುದಕ್ಕೆ ಬಹಳ ಕಷ್ಟವಾಗಿ ಕೊನೆಗೆ ಜನರು [illegible] ಒಂದು ಸಂದರ್ಭದಲ್ಲಿ ತಮ್ಮ ಮೇಲೆ ತಾವೇ ಒಂದು ರೀತಿಯ ಸಾಮಾಜಿಕ ನಿರ್ಬಂಧವನ್ನು ಹಾಕಿಕೊಳ್ಳಲು ಯತ್ನಿಸಿದರು. ತಾವೇ ಕಟ್ಟಳೆಯನ್ನು ರೂಪಿಸಿ, ಸಹಿ ಹಾಕಿ ಶಾಸನ ಮೂಲಕ ಅದನ್ನು ಘೋಷಿಸಿದರು. ಕ್ರಿ.ಶ. [illegible] ರ ದಕ್ಷಿಣ ಭಾರತದ ಶಾಸನವೊಂದು (South Indian Inscriptions No· 56) ಪಡೈವೀಡು



"ನನ್ನ ಮಗಳ ತೀರ ಇತ್ತೀಚಿನ ಫೋಟೊ ನೋಡಬೇಕೆಂದಿದ್ದರು ನಿಮ್ಮ ತೀರ್ಥರೂಪರು."

ರಾಜ್ಯಕ್ಕೆ ಸೇರಿದ ಕರ್ನಾಟಕ, ತಮಿಳು ಮತ್ತು ತೆಲುಗು ಮತ್ತು ಲಾಟ ಬ್ರಾಹ್ಮಣರು ತಮ್ಮ ತಮ್ಮಲ್ಲಿ ಈ ರೀತಿ ಒಂದು ಒಪ್ಪಂದಕ್ಕೆ ಬಂದ ರೆಂದು ಹೇಳುತ್ತದೆ. ಆ ಒಪ್ಪಂದದ ಮುಖ್ಯ ವಿಷಯ ವಿವಾಹ ಧರ್ಮಕ್ಕೆ ಸಂಬಂಧಿಸಿದ್ದು ಹೆಣ್ಣಿನ ತಂದೆ ಗಂಡಿಗೆ ದಾನವಾಗಿ ಮಗಳನ್ನು ಕೊಡ ತಕ್ಕದ್ದು. ಈ ವ್ಯವಹಾರದಲ್ಲಿ ಹೆಣ್ಣಿನ ತಂದೆ ಗಂಡಿನ ತಂದೆಯಿಂದ ಹಣವನ್ನು ಪಡೆದದ್ದೇ ಆದರೂ, ಅಥವಾ ಗಂಡಿನ ತಂದೆ ಹೆಣ್ಣಿನ ತಂದೆಗೆ ಹಣ ವನ್ನು ಕೊಟ್ಟಿದ್ದೇ ಆದರೂ ಎರಡೂ ಶಿಕ್ಷಾರ್ಹ ಅಪರಾಧಗಳು. ರಾಜನು ಅವರನ್ನು ಶಿಕ್ಷಿಸಿ ಜಾತಿ ಯಿಂದ ಹೊರಗೆ ಹಾಕತಕ್ಕದ್ದು.

ಈ ಒಪ್ಪಂದಕ್ಕೆ ಧಾರ್ಮಿಕ ಕ್ಷೇತ್ರದಲ್ಲಿ ಮಹಾ ಪವಿತ್ರತೆ-[illegible]ದವರ ಸಹಿಗಳಿವೆ.

ಕೃಷ್ಣ ಶಾಸ್ತ್ರಿಗಳೆಂಬವರು ೧೯೦೭-೮ರ ಆರ್ಕಿ ಯಾಲಾಜಿಕಲ್ ಸರ್ವೆ ರಿಪೋರ್ಟಿನಲ್ಲಿ ಬರೆಯುತ್ತಾ ಕ್ರಿ.ಶ. [illegible] ರಲ್ಲಿ ಈ ಕನ್ಯಾಶುಲ್ಕದ ಹಾವಳಿ ಈಗಿನಷ್ಟೇ ತೀವ್ರವಾಗಿತ್ತೆಂದು ಹೇಳಿ, ಈಗಲೂ ಈ ಕನ್ಯಾಶುಲ್ಕದ ಹಾವಳಿ ತಪ್ಪಿಲ್ಲ ಎಂದು ಒತ್ತು ಕೊಟ್ಟು ಹೇಳಿದ್ದಾರೆ. ಇದು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ, ಆರ್ಥಿಕ ಪಿಡುಗಾಗಿ ಇದಕ್ಕೊಂದು ನಿವಾರಣೆ ಕಂಡುಕೊಳ್ಳದಿದ್ದರೆ, ನಾವು ಬದುಕುವುದೇ ಕಷ್ಟ ಎಂದು ಜನರು ಹತಾಶ ರಾಗಿ ಇಂತಹ ಒಂದು ಒಪ್ಪಂದಕ್ಕೆ ಬರುವ ಧೈರ್ಯ ಮಾಡಿದರೆಂದು ತೋರುತ್ತದೆ. ಮದುವೆ [illegible] ಶುಲ್ಕ, ಮಿತಿ ಮಿರಿದ ಖರ್ಚು ಇವು ಗಳ ಪರಿಣಾಮವಾಗಿ ಜನರು ತಮ್ಮ ಆಸ್ತಿ ಯನ್ನೇ ಮಾರಿದ ದಾರುಣ ಪ್ರಸಂಗಗಳನ್ನು [illegible] ಕೆಲವು ಶಾಸನಗಳು ಹೇಳುತ್ತವೆ. ಭೂಮಿಯ ಕ್ರಯಕ್ಕೆ ಸಂಬಂಧಿಸಿದ ವಿಚಾರವೊಂ- ದನ್ನು ಹೇಳುತ್ತ ಕ್ರಿ.ಶ. ೧೪೦೪ ರ ಒಂದು ಶಾಸನ (Ec. viii T 1/34) "ನಾವು ನಮ್ಮ ಮಕ್ಕಳ ನಿಮಿತ್ತವಾಗಿ ನಮಗೆ ಕ್ರಯವಾಗಿ ಕೊಟ್ಟ" ಎಂಬ ವಿಷಯವನ್ನು ತಿಳಿಸುತ್ತದೆ.

ಡಾ. ಸಾಲೆತೊರೆ ಅವರು ನಮ್ಮಲ್ಲಿ ಹಿಂದಿ- [illegible] ಈ ಕನ್ಯಾಶುಲ್ಕ ಮತ್ತು ಮದುವೆಯ ಖರ್ಚುವೆಚ್ಚಗಳು ಮಾಡು ತ್ತಿರುವ ಹಾನಿಯನ್ನು ಕುರಿತು ವಿವೇಚನೆ ಮಾಡುತ್ತಾ ಅವು ಮನೆ ಮಠಗಳನ್ನು ಮಾರಿಸಿ ಜನರನ್ನು ನಿರ್ಗತಿಕರನ್ನಾಗಿಸುವ ಎಂದು ನೊಂದು ನುಡಿದು ಇಂದಿಗೂ ಆ ಪದ್ಧತಿಗಳು ಉಳಿದುಕೊಂಡಿರುವುದು ಅತ್ಯಂತ ವಿಷಾದದ ಸಂಗತಿ ಎಂದು ಹೇಳಿದ್ದಾರೆ.

ಪುರಂದರದಾಸರ ಕೀರ್ತನೆಯೊಂದರಲ್ಲಿ ಬರುವ, "[illegible] ಮದುವೆಗೂ ಆಗದ ಮದುವೆಗೂ [illegible] ಸಾಲ ಕೊಟ್ಟು ಬಡ್ಡಿ [illegible] [illegible] ಹೇಗೆ ಬರಲೋ?" ಎಂಬ [illegible] ಪೂರ್ಣವಾಗಿದೆ. ದಾಸರ ಕೀರ್ತನೆಯಲ್ಲಿನ ಈ [illegible] ಮದುವೆಗಳು ಹೇಗೆ ಒಂದು [illegible] ವ್ಯವಹಾರವಾಗಿ ಜನರು [illegible] ಬಡ್ಡಿ ತೆತ್ತು ಸಾಲವಾಗಿ ಹಣವನ್ನು ತಂದು ಮದುವೆ ಮಾಡುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಯಮದೂತರು ಕರೆದೊಯ್ಯಲು ಬಂದಾಗ ಒಪ್ಪಿ ಬಡ್ಡಿಯಾಸೆಗಾಗಿ ಸಾಲಕೊಟ್ಟವನು ಹೀಗೆ ಗೋಳಿಡುತ್ತಾನಂತೆ: ಶಾಸನಗಳು ಕೊಡುವ ವಿವರಣೆ ಸ್ವಲ್ಪ ಹಣವಂತರು ತಮ್ಮ [illegible] ಕಾಣಿ ಹಣವನ್ನೇ [illegible] ತೂಗಿಸುತ್ತಿದ್ದರೆಂದರೆ, ದಾಸರು ಕೊಡುವ ಈ ವಿವರಣೆ ಜನಸಾಮಾನ್ಯರೂ ಬಡ್ಡಿ ತೆತ್ತು ಸಾಲ ತಂದು ಮದುವೆ ಮಾಡುತ್ತಿದ್ದರು ಎಂಬುವದನ್ನು ಸೂಚಿಸುತ್ತದೆ. ✡



ಎಲ್ಲರ ಜೀವನವೂ ದೇವರ ಹಸ್ತದಿಂದ ಬರೆಯಲ್ಪಟ್ಟ ಒಂದು ಕಥೆಯೆ.

—ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್‌ಸನ್

'ಭಗವಂತ'ನ ಮೂಲ

ಗೌರೀಶ ಕಾಯ್ಕಿಣಿ

ಡಾ. ಶಂ.ಬಾ.ಜೋಶಿಯವರ ಈಚಿನ ಅನೇಕ ಗ್ರಂಥ, ಪ್ರಬಂಧಗಳಿಂದಾಗಿ 'ಭಗ', 'ಭಗವಂತ' ಎಂಬ ಪದಗಳು ತೀವ್ರ ಬೆಳಕಿನಲ್ಲಿ ಬಂದಿವೆ. ವಿಶೇಷ ಹಾಗೂ ಸಮ್ಮಿಶ್ರ ಗಮನ ಸೆಳೆದಿವೆ ವಿದ್ವಾಂಸರ ವಲಯಗಳಲ್ಲಿ. ಈ ವಿದ್ವತ್ಪ್ರಪಂಚದ ಅವಗಾಹನೆಗಾಗಿಯೋ ಇದೊಂದು ಸಣ್ಣ ಸಾಹಸ.

ಇಂದಿಗೆ ಪ್ರಚಲಿತವಿದ್ದಂತೆ 'ಭಗ' ಶಬ್ದಕ್ಕೆ ಯೋನಿ (ಹೆಣ್ಣಿನ ಜನನೇಂದ್ರಿಯ) ಎಂಬ ಅರ್ಥ. ಅದನ್ನೇ ಡಾ. ಜೋಶಿಯವರು ಎತ್ತಿ, ಒತ್ತಿ ತಮ್ಮ ಪ್ರತಿಪಾದನೆಗಳಲ್ಲಿ ಉಪಯೋಗಿಸಿದ್ದಾಗಿದೆ. ಈ ಅರ್ಥದ ಬಗೆಗೆ ನನ್ನ ಆಕ್ಷೇಪಣೆ ಇಲ್ಲ. ಇದೂ ಪ್ರಾಚೀನ ಕಾಲದಿಂದ(-ದಲ್ಲಿ) ಒಪ್ಪಿಕೊಂಡು ಬಂದ ಅರ್ಥವೇ. ಆದರೆ 'ಭಗ' ಶಬ್ದಕ್ಕೆ ಇದೊಂದೇ ಅರ್ಥ ಪರ್ಯಾಪ್ತವಾಗಿ, ಯಥಾರ್ಥವಾಗಿ ಸಲ್ಲುತ್ತದೆಯೇ?

'ಮೃಚ್ಛಕಟಿಕ' ನಾಟಕದಲ್ಲಿ ಖಳನಾಯಕ ಶಕಾರನು ರಾಜ ಶಾಲಕನಾದುದರಿಂದ "ಭಗಿನೀ ಭಗ ಭಾಗ್ಯ"ದ ಬಲದಿಂದ ತಾನು ಅಧಿಕಾರಕ್ಕೇರಿದವನೆಂದು ಕೊಚ್ಚಿಕೊಳ್ಳುತ್ತಾನೆ. ದೊರೆಯ ಹೆಂಡತಿಯ ತಮ್ಮ (ಅಣ್ಣ?) ಹಿಂದಿಯಲ್ಲಿ ಒಂದು ಗಾದೆಯೇ ಇದೆ: "ಜೋರೂಕಾ ಭಾಯಿ ಏಕ ತರಫ, ಸಾರೀ ಖುದಾಯೀ ಏಕ ತರಫ್" (ಹೆಂಡತಿಯ ಸೋದರ ಒಂದು ಕಡೆಗೆ, ದೇವರ ಸೃಷ್ಟಿಯೆಲ್ಲ ಒಂದು ಕಡೆಗೆ- ಎರಡೂ ಸರಿ ತೂಕ!). ಈ ಅಶಿಷ್ಟ ಉಲ್ಲೇಖದಲ್ಲಿ 'ಭಗಿನಿ'ಯ 'ಭಗ'ದ [illegible] 'ಭಗಿನೀ' ಶಬ್ದದ ಅರ್ಥಮೂಲವೂ ಸೂಚಿತವಾಗುತ್ತದೆ. ಸ್ತ್ರೀಲಿಂಗ-ಯೋನಿ-ಸೂಚನೆಯಿಂದ.

ಆದರೆ 'ಭಗವಂತ'? ಅವನು ಭಗ ಉಳ್ಳವನಲ್ಲವಲ್ಲ. ಭಗದ ಒಡೆತನದ, ಭೋಗದ ಭಾಗ್ಯಕ್ಕೆ ಸ್ವಾಮಿ ಎಂದು ಈ ಅರ್ಥವೇ? ಆದರೆ ಭಗವಾನ್ ಶಬ್ದಕ್ಕೆ ಪ್ರತಿಯಾಗಿ 'ಭಗವತಿ' ರೂಢವಾದಾಗ ಈ ಶಬ್ದಗಳಲ್ಲಿಯ 'ಭಗ'ದ ಭಾಗ ತನ್ನ ಹಿಂದಿನ ಲೈಂಗಿಕ ಅರ್ಥವನ್ನು ಪೂರ್ತಿ ಕಳೆದು ಕೊಂಡಿರಬೇಕು- 'ಪೀತಾಂಬರ' ಹಳದಿಯಾಗಿ ಉಳಿಯದೆ ಯಾವುದೇ ಮಡಿ ಬಟ್ಟೆ ಆದಂತೆ, 'ಚೀನಾಂಬರ' ಚೀನದ್ದಲ್ಲದೆ ಯಾವುದೇ ರೇಶಿಮೆ ಬಟ್ಟೆ ಆದಂತೆ. 'ಭಗ'ವೂ 'ಯೋನಿ' ಎಂಬ ಅರ್ಥವು ಲೋಪವಾಗಿ ಕವಿ ಭಾಸ ಕಾಲಿದಾಸರ ಕಾಲದಲ್ಲಿ ಪರಮೈಶ್ವರ್ಯವೆಂಬ ಹೊಸ ಅರ್ಥವನ್ನು ಹೇಗೋ ಪಡೆದಿರಬೇಕು. ಕೇವಲ [illegible], ಪೂಜ್ಯತೆಯ ಗೌರವದ್ಯೋತಕವಾಗಿ, ದಿವ್ಯತ್ವದ ಸಂಜ್ಞೆಯಾಗಿ (ಭಾಸ "ಭಗವಾನ್ ದ್ವೈ[illegible]" ಎಂದಾಗ, ಕಾಲಿದಾಸನ ಶಕುಂತಲೆ "ಭಗ[illegible] ವಸುಧೇ" ಎಂದಾಗ, ಇದೊಂದೇ ಅರ್ಥ ಕವಿಗಳ ಪ್ರಜ್ಞೆಯಲ್ಲಿ ಇದ್ದಿರಬೇಕು? ಉಪನಿಷತ್ತಿನ ಕಾಲದಲ್ಲಿಯೇ 'ಭಗ' ಭಾಗ್ಯವೆಂದೋ [illegible]ವೆಂದೋ ಹೊಸ ಅರ್ಥ ತಳೆಯಿತು. 'ಅಸ್ತಿ ಭಗ ಅಸೀನಸ್ಯ ಇತ್ಯಾದಿ" ಪ್ರಸಿದ್ಧ ಶ್ಲೋಕವೇ ಇದಕ್ಕೆ ಸಾಕ್ಷಿ! ಮುಂದೆ 'ಭಗವಂತಿಕೆ'ಯ ವ್ಯಾಖ್ಯೆಯಾಗಿ ವಿಶಿಷ್ಟ ಗುಣಗಳ ಪಟ್ಟಿ ಮಾಡಿ ಹೇಳುವ ಒಂದು ಶ್ಲೋಕವೇ ಸಿದ್ಧವಾಯಿತು. ಅಂದರೆ 'ಭಗ' ಶಬ್ದದ ಯೋನಿ ಎಂಬ [illegible] ವೇದೋತ್ತರ ಕಾಲದಲ್ಲಿ ಯಾವ ಪ್ರಾಜ್ಞರ ಜಾಗೃತ ಪ್ರಜ್ಞೆಯಲ್ಲಿಯೂ ಉಳಿದಂತೆ ಇಲ್ಲ- ಬಿಲ್ಹಣನ ಪ್ರಸಿದ್ಧ ಶ್ಲೋಕ ಒಂದನ್ನು ಬಿಟ್ಟರೆ (ಅದು ಇಲ್ಲಿ ಅಪ್ರಸ್ತುತ).

'ಭಗವಾನ್'ಗೆ ಪ್ರತಿಯಾಗಿ 'ಭಗವತಿ' ಆದರೆ 'ಭಗಿನಿ'ಗೆ ಪ್ರತಿಯಾಗಿ ಗಂಡು ರೂಪ ಯಾವುದು? ನಾಗ-ನಾಗಿಣಿ, ಯೋಗಿನ್-ಯೋಗಿನಿ ಈ ಬಗೆಯ ಗಂಡು-ಹೆಣ್ಣು ಲಿಂಗವಾಚಕ ದ್ವಂದ್ವ ಶಬ್ದಗಳು ಭಗಿನಿಯೊಂದಿಗೆ ರೂಢವಿಲ್ಲ. ಭಗಿನಿಗೆ ಪ್ರತಿಯಾಗಿ 'ಬಂಧು', ಇದೂ ಅಲ್ಲದೆ ಸೋದರಿಯನ್ನು

ಹೀಗೆ ಭಗವುಳ್ಳವಳೆಂದು ನಿರ್ದೇಶಿಸುವುದರ ಔಚಿತ್ಯ, ಸ್ವಾರಸ್ಯವೇನಿದೆ? 'ಭಗ'ದ ಅರ್ಥ ಸ್ತ್ರೀ-ಲಿಂಗವೆಂದು ಒಂದೇ ಆಗಿದ್ದರೆ 'ಭಗಿನಿ' ಸ್ತ್ರೀ ಪರ್ಯಾಯವಾದ ಹೆಸರಾಗಬೇಡವೆ? ಅಂಥ ದಾಖಲೆಗಳು ವೈದಿಕ ಸಂಸ್ಕೃತದಲ್ಲಿ ಇವೆಯೇ? ಅಲ್ಲಿ 'ಭಗ' ಶಬ್ದವಾದರೂ ಎಷ್ಟು ಸಲ, ಎಷ್ಟು ಕಡೆ ಬಳಕೆಯಲ್ಲಿದೆ?

ಸಾರ್ವತ್ರಿಕ ಬಳಕೆಯಲ್ಲಿ ಇದ್ದ ದ್ವಂದ್ವ ಯೋನಿ-ಲಿಂಗಗಳದೇ. ಇಲ್ಲಿಯೂ 'ಲಿಂಗ' ಪುರುಷವಾಚಕ. ಜೊತೆಗೆ ಒಂದು ಸಂಜ್ಞೆ, ಚಿನ್ಹೆ ಎಂಬ ಅರ್ಥದಲ್ಲಿಯೂ ಪ್ರಾಚೀನ ಕಾಲದಿಂದ ರೂಢವಾಗಿದೆ. (ಉದಾ: 'ಮಂತ್ರ ಲಿಂಗ', 'ಸ್ತ್ರೀ ಲಿಂಗ', 'ನಪುಂಸಕ-ಲಿಂಗ' ಇತ್ಯಾದಿ) ಅದರೆ 'ಲಿಂಗ' ವೆಂದರೆ ಮೂಲದಲ್ಲಿ ಪುರುಷವಾಚಿಯೇ ಎಂಬುದಕ್ಕೆ 'ಲಿಂಗ ಪುರಾಣ'ವೇ ಸಾಕ್ಷಿ. "ಆಕಾಶಂ ಲಿಂಗಮಿತಿ ಅಹುಃ ಪೃಥ್ವೀತಸ್ಯ ಪೀಠಿಕಾ" ಎಂಬಲ್ಲಿಯೂ ಆಕಾಶ ಗಂಡು, ಪೃಥ್ವೀ ಹೆಣ್ಣು.

ಅಂದರೆ ಯೋನಿ ಎಂಬ ಅರ್ಥದಲ್ಲಿ 'ಭಗ' ಶಬ್ದಪ್ರಯೋಗ ತೀರ ಹಳೆಯದು. ಅಷ್ಟೇ ಖಚಿತವೆನ್ನಬಹುದು. ನಮ್ಮ ಪುರಾಣಾಂತರ ದಲ್ಲಿ ಬರುವ ಭಗೀರಥ, ಭಗದತ್ತ ಮುಂತಾದ ನಾಮಾಂಕಿತಗಳೂ 'ಸುಭಗ'ದಂಥ ವಿಶೇಷಣ ಗಳೂ ಒಳಗೊಂಡ 'ಭಗ' ಶಬ್ದವು ಏನನ್ನು ಸೂಚಿ ಸುತ್ತದು? 'ಸುಭಗ'ಕ್ಕೆ ಹಲವು ಹೆಣ್ಣುಗಳ ಒಲವು ಪಡೆದವನೆಂದು ಅರ್ಥವಿದೆಯಂತೆ. ಅಂದರೆ ಇದು ಗಂಡಿಗೆ ಒಪ್ಪುವ ವಿಶೇಷಣ. ಆದರೆ ಇದರ ನಾಮರೂಪವಾದ 'ಸೌಭಾಗ್ಯ' ಇಂದು ಹೆಣ್ಣಿನ ಸೊತ್ತಾಗಿದೆ! ಕನ್ನಡದ 'ಸೊಬಗು' ಈ 'ಸುಭಗ'ದ್ದ ತದ್ಭವರೂಪವೇ?

ಹಿಂದುಗಳಿಗೆ 'ಭಗವಾ' ಧ್ವಜ ಪವಿತ್ರ, ಪೂಜ್ಯ, ಈ ಭಗವಾ ಧ್ವಜ ಏಕಲಿಂಗಜೀ- ಶಂಕರನ ಉಪಾ ಸಕರಾದ ರಜಪೂತ ರಾಜವಂಶಗಳಿಗೆಲ್ಲ ಶಿರಸಾ ವಂದ್ಯ. ಶಿವ ಛತ್ರಪತಿಯ ಧ್ವಜವೂ ಅವನ ತಂದೆ ಶಹಾಜಿಯ ಧ್ವಜವೂ "ಭಗವಾ" ಬಣ್ಣದ್ದೇ ಆಗಿತ್ತು. (ಹೊರತು ಅದು ಸಮರ್ಥ ರಾಮದಾಸ ಸ್ವಾಮಿಗಳು ಶಿವಾಜಿಗೆ ಪ್ರಸಾದ ವಾಗಿ ನೀಡಿದ ಕೌಪೀನ ಧ್ವಜವಲ್ಲ.)

'ಭಗ-ವಾ' ಇದು ವಿಶೇಷಣ-'ಗೇರುವಾ' 'ಮಧುವಾ'ಗಳಂತೆ. 'ಭಗ' ಬಣ್ಣವುಳ್ಳದ್ದು. ಆ ಬಣ್ಣ ನಮಗೆ ಗೊತ್ತು. ಅದು ಬೆಂಕಿಯ ಜ್ವಾಲೆಯ ಬಣ್ಣ. ನನ್ನ ಊಹೆಯಂತೆ ಅದು ಬೆಂಕಿಯ, ಯಜ್ಞಶಿಖೆಯ ದ್ಯೋತಕ. ಕನ್ನಡ ದಲ್ಲಿ ಬೆಂಕಿ "ಭಗಭಗ"ನೆ ಉರಿಯುತ್ತದೆ. 'ಭಗ' ಎಂಬ ಮಾತು ಇತರ ಆರ್ಯ ಭಾಷೆಗಳಲ್ಲಿ ಬೆಂಕಿಯು ಉರಿಯುವುದರ ವರ್ಣನೆ ಯಾಗಿ ಬಳಕೆಯಲ್ಲಿದೆ. ಹೀಗೆ "ಭಗ" ಶಬ್ದ ಅಗ್ನಿಗೆ ಯಜ್ಞಕುಂಡಕ್ಕೆ ದ್ಯೋತಕವಾಯಿತು. ಪುರಾಣ ಕಥೆಗಳಲ್ಲಿ ಯಜ್ಞಕುಂಡದಿಂದ ಅಗ್ನಿ ದೇವತೆಯ ಅನುಗ್ರಹದಿಂದ ಸಂತತಿ ಪಡೆದ ಸಂದರ್ಭಗಳು ಹೇರಳ. ಭಗದತ್ತ, ಭಗೀರಥ ಅಂಥ ಸಂದರ್ಭಗಳಿಂದ ಹುಟ್ಟಿದ ಹೆಸರುಗಳು. ಕೆಂಪಾಗಿ ಉರಿಯುವ ಕುಂಡವಾಗಿ ತೋರುವ ಕುರು 'ಭಗಂದರ' (Carbuncle). ಯೋನಿಗೂ ಅದೇ ಹೆಸರು ಪರ್ಯಾಯವಾಗಿ ಬಂದಿರ ಬಹುದೇ?

ಹೀಗೆ 'ಭಗ' ಶಬ್ದ ಅಗ್ನಿವಾಚಕವೆಂದು ಒಪ್ಪಿ ಕೊಂಡರೆ ಯಜ್ಞಪುರುಷ, ಅಗ್ನಿನಾರಾಯಣ, ಭಗವಂತನೆನಿಸಿಕೊಳ್ಳುವುದು ಸಹಜ. ಕಿರಣ ವಾಚಕವಾದ 'ಗಭಸ್ತಿ'ಯಲ್ಲಿ 'ಗರ್ಭ' 'ಬೀಗ' ಶಬ್ದದ್ದೇ ಅಕ್ಷರ ವಿಪರ್ಯಾಸವೇ? 'ಆರ' ಭಾಷೆ ಗಳಾದ ಮರಾಠಿ, ಕೊಂಕಣಿಗಳಲ್ಲಿ 'ಸುಡು' ಎಂಬ ಅರ್ಥದಲ್ಲಿ ಪ್ರಯೋಗಿಸುವ 'ಭಾಜ'ದ ಮೂಲ ಈ 'ಭಗ'ದಲ್ಲಿ ಇದೆಯೇ? (ಯಜ್, ಯುಜ್ ಧಾತುಗಳು ನಾಮರೂಪದಲ್ಲಿ 'ಜ'ಕಾರ ಕಳೆದು 'ಗ' ಕಾರ ಹೊಂದುತ್ತವೆ.)

'ಭಗ' ಶಬ್ದಕ್ಕೆ, ಹೀಗೆ ಬೇರೊಂದು ಅರ್ಥಾ ನ್ವೇಷಣೆ ನಾನು ಇಲ್ಲಿ ಮಾಡುತ್ತಿದ್ದೇನೆ. ಈ ಕುರಿತು 'ಶಬ್ದಾರ್ಥ ಚಿಂತಾಮಣಿ'ಯಲ್ಲಿ ನಮ್ಮ ವಿದ್ವಾನ್ ಮಿತ್ರ ಪಾ. ವೆಂ. ಪಟ್ಟಿನ ಮೀಮಾಂಸೆ ಒದ ಗಿಸುವದಾಗಿ ನಂಬಿದ್ದೇನೆ.

✡

ಕ ... ೧೯೮೩ 1983

ಪುನರ್ಜನ್ಮ: ತಥ್ಯವೆ? ಕಾಲ್ಪನಿಕ ಕಥೆಯೆ?

ಎ. ವಿ. ಗೋವಿಂದರಾವ್

ಹುಟ್ಟು–ಸಾವು, ಈ ಕ್ರಿಯೆಗಳ ಮರ್ಮವೇನು? "ಒಬ್ಬ ವ್ಯಕ್ತಿ ಜೀರ್ಣವಾದ ಉಡುಪನ್ನು ತೊರೆದು ಹೊಸ ವಸ್ತ್ರ ಧರಿಸುವಂತೆ, ಆತ್ಮ ಜೀರ್ಣವಾದ ಶರೀರವನ್ನು ತೊರೆದು ಹೊಸ ಶರೀರ ಪ್ರವೇಶಿಸುತ್ತದೆ" ಎನ್ನುತ್ತದೆ ಭಗವದ್ಗೀತೆ. ಶರೀರ ರಥ, ಆತ್ಮ ರಥಿ. ರಥ ಮುರಿದಾಗ ರಥಿ ಹೊಸದೊಂದು ರಥ ಏರಿ ಪ್ರಯಾಣ ಮುಂದುವರಿಸುತ್ತಾನೆ ಅನ್ನುತ್ತದೆ ಉಪನಿಷತ್ತು. ಆತ್ಮದ ಈ ಪಯಣದ ಅಂತಿಮ ಗುರಿ ಯಾವುದು ? ವಿಶ್ವದ ಸೃಷ್ಟಿಗೆ ಕಾರಣವಾದ ಅಗೋಚರ ಶಕ್ತಿಯೊಂದಿಗೆ ಅರ್ಥಾತ್ ಪರಮಾತ್ಮದೊಂದಿಗೆ ಲೀನವಾಗುವುದೇ ಅಂತಿಮ ಗುರಿ ಎಂದು ಸಾರಿವೆ ಧರ್ಮಗ್ರಂಥಗಳು. ಅಂತಿಮ ಗುರಿಯನ್ನು ಆತ್ಮ ಎಂದು ಮುಟ್ಟುತ್ತದೆ? ಅದು ತನ್ನ ನಿಜ ಸ್ವರೂಪ ತಿಳಿದಾಗ ಎಂದಿದ್ದಾರೆ ಜ್ಞಾನಿಗಳು. ತಿಳಿಯಲು ಅನುಸರಿಸಬೇಕಾದ ವಿಧಾನಗಳನ್ನು ಕೂಡ ಸೂಚಿಸಿದ್ದಾರೆ. "ಪ್ರವಚನದಿಂದಾಗಲಿ ಮೇಧಾಶಕ್ತಿಯಿಂದಾಗಲಿ ಶ್ರವಣದಿಂದಾಗಲಿ ಆತ್ಮ ಲಭ್ಯವಲ್ಲ. ದುರಾಚಾರದಿಂದ ಮುಕ್ತನಾದ ಶಾಂತನಾದ, ಸಮಾಹಿತ ಮನಸ್ಕನ, ಮನಶ್ಶಾಂತಿ ಇರುವ ಸಾಧಕನಿಗೆ ಮಾತ್ರ ಆತ್ಮ ತನ್ನ ತನುವನ್ನು ತೋರುತ್ತದೆ" ಅಂದಿದ್ದಾನೆ ಯಮ ನಚಿಕೇತನಿಗೆ. ಆ ತನಕ "ಪುನರಪಿ ಜನನಂ, ಪುನರಪಿ ಮರಣಂ..." ಪುನರ್ಜನ್ಮದ ಪರಿಕಲ್ಪನೆಯನ್ನು ಹೀಗೆ ನಿರೂಪಿಸಿವೆ ಹಿಂದೂ ಧರ್ಮ ಗ್ರಂಥಗಳು. ಬಳಸಿದ ಪದಗಳಲ್ಲಿ ವ್ಯತ್ಯಾಸ ಇದ್ದರೂ ಜಗತ್ತಿನ ಬಹುತೇಕ ಧರ್ಮಗಳು ಪುನರ್ಜನ್ಮದ ಪರಿಕಲ್ಪನೆಯನ್ನು ಒಪ್ಪಿವೆ.

ಸಾವಿನ ಬಗ್ಗೆ ಭಯಪೂರಿತ ನಿಲುವನ್ನು ತಳೆದವರ ಕಲ್ಪನೆಯ ಶಿಶು 'ಪುನರ್ಜನ್ಮದ ಪರಿಕಲ್ಪನೆ' ಅನ್ನುವವರೂ ಇದ್ದಾರೆ. ಪ್ರಕೃತಿಯಲ್ಲಿ ಆಕಸ್ಮಿಕವಾಗಿ ಜರುಗಿದ ಕಣಗಳ ವಿಶಿಷ್ಟ ಸಂಘಟನೆಯ ಫಲಿತವೇ ಜೀವರಾಶಿಯ ಸೃಷ್ಟಿ. ನಿರ್ದಿಷ್ಟ ಸಂಘಟನೆ ಪೂರ್ಣಗೊಳ್ಳುವುದೇ ಜನನ, ಶಿಥಿಲಗೊಳ್ಳುವುದೇ ಸಾವು. ಈ ಸಹಜ ಕ್ರಿಯೆಗಳಿಗೆ ಇಲ್ಲದ ಗೂಢಾರ್ಥ ಆರೋಪಿಸುವುದು, ಬಳಿಕ ಅದನ್ನು ಹುಡುಕತೊಡಗುವುದು ಕತ್ತಲೆ ಕೋಣೆಯಲ್ಲಿ ಇಲ್ಲದ ಕಪ್ಪು ಬೆಕ್ಕನ್ನು ಹುಡುಕುವ ಮೂರ್ಖತನ ಅನ್ನುತ್ತಾರೆ ಇವರು. ಮಾನವನಿಗೆ ಇನ್ನೂ ಅರ್ಥ ಮಾಡಿಕೊಳ್ಳಲು ಆಗದ್ದೆಲ್ಲ ಮಾನವಾತೀತ ಶಕ್ತಿ ಪ್ರೇರಿತ ಅನ್ನುವ ಅವೈಜ್ಞಾನಿಕ ತರ್ಕದ ಕೂಸು 'ಆತ್ಮ' ಮತ್ತು 'ಪುನರ್ಜನ್ಮ' ಅನ್ನುತ್ತಾರೆ ಕೆಲವರು. ಈ ವಾದದ ಮೂಲ ಪುರುಷ ಚಾರ್ವಾಕ "ಸುಟ್ಟು ಬೂದಿ ಆಗುವ ಈ ದೇಹದ ಪುನರಾಗಮನ ಎಲ್ಲಿಂದ?" ಎಂದು ಕೇಳಿ, "ಬದುಕಿರುವಷ್ಟು ಕಾಲ ಸುಖವನ್ನು ಅನುಭವಿಸು. ಸಾಲ ಮಾಡಿ ಆದರೂ ತುಪ್ಪ ತಿನ್ನು," ಎಂದು ಉಪದೇಶಿಸಿದ್ದಾನೆ.

ಅನಾದಿ ಕಾಲದಿಂದಲೂ ನಡೆಯುತ್ತಿರುವ ಈ ಚರ್ಚೆಯ ಬಗ್ಗೆ ಆಧುನಿಕ ವಿಜ್ಞಾನಿಗಳ ನಿಲುವೇನು ? ಪ್ಯಾರಾ–ಸೈಕಾಲಜಿ ಕ್ಷೇತ್ರದ ಕಾರ್ಯ

ಕೆಲವರು ಪುನರ್ಜನ್ಮದ ಪರಿಕಲ್ಪನೆ ತಥ್ಯ, ಆದರೆ ಈ ಕ್ರಿಯೆಯನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಅಗತ್ಯವಾದ ವೈಜ್ಞಾನಿಕ ವಿಧಾನ ರೂಪಿಸಲು ಸಾಧ್ಯವಾಗಿಲ್ಲ ಅಂದಿದ್ದಾರೆ. ಭೌತ ಮತ್ತು ಪ್ರಕೃತಿ ಮನೋವಿಜ್ಞಾನಿಗಳಲ್ಲಿ ಅನೇಕರು ಈ ಬಗ್ಗೆ ಚಿಂತಿಸುವುದೇ ವ್ಯರ್ಥ ಅನ್ನುವ ನಿಲುವು ತಳೆದಿದ್ದಾರೆ. ಇನ್ನು ಕೆಲವರು ಅನಿಶ್ಚಯ ಮತಿಗಳಾಗಿದ್ದಾರೆ. ಇವರ ಪ್ರಕಾರ ಪುನರ್ಜನ್ಮದ ಪರಿಕಲ್ಪನೆಯಲ್ಲಿ ಏನೋ ಹುರುಳಿದೆ ಅನ್ನಬಹುದಾದಷ್ಟು ಪುರಾವೆಗಳು ಲಭಿಸಿವೆಯೇ ವಿನಾ ವೈಜ್ಞಾನಿಕ ತಥ್ಯ ಅನ್ನಲು ಪುರಾವೆಗಳಿಲ್ಲ. ಈಗ ಈ ಬಗ್ಗೆ ಲಭ್ಯವಿರುವ ಪುರಾವೆಗಳನ್ನು ಪರಿಶೀಲಿಸೋಣ.

(೧) ಹಿಂದಿನ ಜನ್ಮದ ಸ್ಮರಣೆಗಳು

ಸುಮಾರು ಎರಡರಿಂದ ನಾಲ್ಕು ವರ್ಷದ ಮಕ್ಕಳು ತಮ್ಮ ಹಿಂದಿನ ಜನ್ಮದ ಅನುಭವಗಳನ್ನು ಇದ್ದಕ್ಕಿದ್ದಂತೆ ಸ್ಮರಿಸಿದ ಘಟನೆಗಳು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ನಡೆದಿವೆ.

ಉದಾಹರಣೆ: ಹೆಚ್. ಎ. ವಿಜೆರತ್ನೆ. ಊರು–ಸಿಂಹಳದ ಉಗ್ಗಲ್ ಕಲ್ಟೋಟ್ ಎಂಬ ಹಳ್ಳಿ. ಶ್ರೀ ಎಚ್.ಎ. ತಿಲೆರತ್ನೆ ಹಮಿ ಮತ್ತು ಶ್ರೀಮತಿ ಇ. ಎ. ಹಮಿ ಇವನ ತಂದೆ ತಾಯಿಯರು. ಬಲ ಎದೆಯ ಭಾಗ ಮತ್ತು ಬಲಗೈ ಊನವಾಗಿದ್ದ ಈ ಮಗ ೧೯೪೭, ಜನವರಿ ೧೭ರಂದು ಜನಿಸಿದಾಗ ತಂದೆಗೆ ಅನೇಕ ವರ್ಷಗಳ ಹಿಂದೆ ಗತಿಸಿದ್ದ ತನ್ನ ಸಹೋದರನ ನೆನಪಾಯಿತು–ಅವನ ಬಣ್ಣ ಮತ್ತು ಮುಖ ಚಹರೆ ಅವನ ಹೋಲುತ್ತಿದ್ದುವು ಎಂಬ ಕಾರಣದಿಂದ. ಮಗು ೨–೨½ ವರ್ಷ ವಯಸ್ಸಿನಲ್ಲಿ ವಿಜೆರತ್ನೆ ತನ್ನಷ್ಟಕ್ಕೆ ತಾನೇ ಗೊಣಗಿಕೊಳ್ಳುತ್ತ ಒಂಟಿಯಾಗಿ ಮನೆ ಸುತ್ತತೊಡಗಿದ. ಮಗನ ಈ ವಿಚಿತ್ರ ವರ್ತನೆಯಿಂದ ಅಚ್ಚರಿಗೊಂಡ ತಾಯಿ ಅವನ ಮಾತುಗಳನ್ನು ಕದ್ದು ಕೇಳಿದಳು. ಹಿಂದಿನ ಜನ್ಮದಲ್ಲಿ ಪತ್ನಿಯನ್ನು ಕೊಲೆ ಮಾಡಿದ್ದಕ್ಕಾಗಿ ತನ್ನ ಕೈ ಊನವಾಗಿದೆ ಎಂದಾತ ಗೊಣಗುತ್ತಿದ್ದ. ವಿಚಾರಿಸಿದಾಗ, ಕೊಲೆಯ ವಿವರಗಳು, ತತ್ಪರಿಣಾಮವಾಗಿ ತಾನು ಬಂಧಿಸಲ್ಪಟ್ಟ ಘಟನೆಯ ವಿವರಗಳು ಮತ್ತು ಗಲ್ಲಿಗೇರಿಸಲ್ಪಟ್ಟ ವಿಷಯ ತಿಳಿಸಿದ. ಇವು ೧೯೨೮ರಲ್ಲಿ ಪತ್ನಿಯ ಕೊಲೆಗೈದ ಅಪರಾಧಕ್ಕಾಗಿ ಗಲ್ಲಿಗೇರಿಸಲ್ಪಟ್ಟ ರತ್ರಾನ್ ಹಮಿ ಎಂಬಾತನ ಜೀವನದ ಘಟನೆಗಳಾಗಿದ್ದವು. ರತ್ರಾನ್ ಹಮಿ ತಿಲೆರತ್ನೆ ಹಮಿಯ ಸಹೋದರ. ಆದರೆ ವಿಜೆರತ್ನೆ ಹೇಳುವ ತನಕ ಅವನ ತಾಯಿಗೆ ಅಷ್ಟು ವಿಷಯ ತಿಳಿದಿರಲಿಲ್ಲ. ಈ ಕಥೆಯನ್ನು ಕಲ್ಪಿಸಿಕೊಳ್ಳಲು ಪೋಷಕವಾಗಬಹುದಾದ ಯಾವ ಅನುಭವವೂ ವಿಜೆರತ್ನೆಗೆ ಆಗಿರಲಿಲ್ಲ.

ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಮೊದಲ್ಗೊಂಡು ಅನೇಕ ವಿದೇಶೀಯ ಸಂಶೋಧನ ಸಂಸ್ಥೆಗಳು ಇಂಥ ಅನೇಕ ವರದಿಗಳ ಸತ್ಯಾಸತ್ಯವನ್ನು ಪರೀಕ್ಷಿಸಿವೆ. ೧೯೬೬ರಲ್ಲಿ ಅಮೇರಿಕನ್ ಸೊಸೈಟಿ ಫಾರ್ ಸೈಕಿಕ್ ರೀಸರ್ಚ್ ಪ್ರಕಟಿಸಿದ ಇಯಾನ್ ಸ್ಟೀವನ್‌ಸನ್ನನ 'ಟ್ವೆಂಟಿ ಕೇಸಸ್ ಸಜೆಸ್ಟಿವ್ ಆಫ್ ರೀ – ಇನ್‌ಕಾರ್ನೇಶನ್' ಈ ಸಾಲಿಗೆ ಸೇರಿದ ಖ್ಯಾತ ಸಂಶೋಧನ ಪ್ರಬಂಧ. ಮೋಸ, ಭ್ರಮೆ, ಕ್ರಿಪ್ಟೋ – ಅಮ್ನೇಸಿಯಾ, ಜೆನೆಟಿಕ್ ಮೆಮರಿ ಮುಂತಾದ ಪ್ರಚಲಿತ ಸಿದ್ಧಾಂತಗಳಿಂದ ಈ ಘಟನೆಗಳನ್ನು ವಿವರಿಸಲು ಸಾಧ್ಯವಿಲ್ಲ ಎಂಬ ಜಾಗರೂಕತೆಯ ಹೇಳಿಕೆಯನ್ನು ಸಂಶೋಧಕರು ನೀಡಿದ್ದಾರೆ.

(೨) ಸಮ್ಮೋಹಿತ ಹಿಮ್ಮೆಳುವಿಕೆ (ಹಿಪ್ನಾಟಿಕ್ ರಿಗ್ರೆಸನ್)

ವ್ಯಕ್ತಿಯನ್ನು ಗಾಢ ಸಮ್ಮೋಹನಿಗೆ ಒಳಪಡಿಸಿ, ಆತನ ಆಗಿನ ವಯಸ್ಸಿಗಿಂತ ಹಿಂದಕ್ಕೆ ಹೋಗುವಂತೆ ಪ್ರೇರೇಪಿಸಿ ಯುಕ್ತ ಪ್ರಶ್ನೆಗಳ ಮೂಲಕ ಮಾಹಿತಿ ಸಂಗ್ರಹಿಸುವ ತಂತ್ರ ಇದು. ಪುನರ್ಜನ್ಮ ಒಂದು ತಥ್ಯ ಎಂದು ಈ ಅನ್ವೇಷಣೆಗಳು ಸಾಧಿಸಿವೆ ಎಂದು ಇದರ ಪ್ರವರ್ತಕರು ಹೇಳಿದ್ದಾರೆ.

ಉದಾಹರಣೆಗೆ: ಮೋರೆ ಬರ್ನ್‌ಸ್ಟೈನ್ ಎಂಬಾತ ಅಮೇರಿಕದ ಸಾಮಾನ್ಯ ಗೃಹಿಣಿ ಶ್ರೀಮತಿ ವರ್ಜೀನಿಯ ಟಿಗೆ ಎಂಬಾಕೆಯನ್ನು

ಸಮ್ಮೋಹಿನಿಗೆ ಒಳಪಡಿಸಿ 'ಹಿಮ್ಮರಳುವಂತೆ' ಪ್ರೇರೇಪಿಸಿದ. ತಾನು ೧೯ನೆ ಶತಮಾನದ ಪೂರ್ವಾರ್ಧದಲ್ಲಿ ಐರ್ಲೆಂಡಿನ ಬೆಲ್‌ಫಾಸ್ಟ್‌ನಲ್ಲಿ ಬ್ರೈಡಿ ಮರ್ಫಿ ಎಂಬ ಬಡ ಕಾರ್ಮಿಕ ಮಹಿಳೆಯಾಗಿ ಇದ್ದುದಾಗಿ ಆಕೆ ಹೇಳಿದಳು. ಆಕೆಯ ಉಚ್ಚಾರಣೆ ಬೆಲ್‌ಫಾಸ್ಟ್‌ನ ಕೊಳಚೆ ನಿವಾಸಿಗಳ ಉಚ್ಚಾರಣೆಯನ್ನು ಹೋಲುತ್ತಿತ್ತು. ಆಕೆ ತಿಳಿಸಿದ ಅನೇಕ ಸ್ಥಳ ವಿವರಣೆಗಳು ಸರಿಯಾಗಿದ್ದವು. ಆದರೆ ಬ್ರೈಡಿ ಮರ್ಫಿ ಎಂಬವಳು ವಾಸ್ತವವಾಗಿ ಆ ಕಾಲದಲ್ಲಿ ಇದ್ದಳು ಎಂಬುದನ್ನು ಸಾಧಿಸಲು ದಾಖಲೆಗಳು ಇನ್ನೂ ದೊರೆತಿಲ್ಲ. ಬರ್ನ್‌ಸ್ಟೈನ್ ತನ್ನ ಅಧ್ಯಯನದ ವಿವರಗಳನ್ನು 'ದಿ ಸರ್ಚ್ ಫಾರ್ ಬ್ರೈಡಿ ಮರ್ಫಿ' ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾನೆ.

ಸಮ್ಮೋಹಿನಿಗೆ ಒಳಗಾದ ವ್ಯಕ್ತಿಗಳು ನೀಡುವ ಮಾಹಿತಿ ಅವರಿಗೆ ಮೊದಲೇ ತಿಳಿದಿರಲಿಲ್ಲ ಎಂಬುದನ್ನು ಆಗಲಿ ಅವು ಕ್ರಿಪ್ಟೊ – ಅಮ್ನೇಶಿಯಾದ ಕ್ರಿಯೆ ಅಲ್ಲ ಎಂಬುದನ್ನೇ ಆಗಲಿ ಸರ್ವಸಮ್ಮತ ರೀತಿಯಲ್ಲಿ ಸಾಧಿಸಲು ಸಾಧ್ಯವಾಗಿಲ್ಲ. ಈ ಕಾರಣಕ್ಕಾಗಿ ಇಂಥ ಪುರಾವೆಗಳು ಸರ್ವಮಾನ್ಯ ಆಗಿಲ್ಲ.

(೩) ಸಾವಿನ ದವಡೆಯಿಂದ ಪಾರಾಗಿ ಬಂದವರ ಅನುಭವಗಳು

ವೈದ್ಯರು ಸತ್ತಿದ್ದಾನೆ ಎಂದು ತೀರ್ಮಾನಿಸಿದ ವ್ಯಕ್ತಿ ಬದುಕಿ ಬಂದ ಘಟನೆಗಳು ಬಹುಸಂಖ್ಯೆಯಲ್ಲಿ ನಡೆದಿವೆ. ಸಾವಿನ ದವಡೆಯಿಂದ ಪಾರಾಗಿ ಬಂದ ವ್ಯಕ್ತಿಗಳು ಸಾವು ಮತ್ತು ಪುನಃ ಜೀವ ತಳೆಯುವಿಕೆಗಳ ನಡುವಿನ ಅನುಭವಗಳನ್ನು ಸ್ಮರಿಸಿಕೊಂಡಿದ್ದಾರೆ.

ಉದಾಹರಣೆ: "ನಾನು ನನ್ನ ದೇಹದಿಂದ ಹೊರ ಬಂದು, ಕಟ್ಟಡದ ಗೋಡೆಗಳ ಮೂಲಕ ಮೇಲೇರಿದೆ. ನನ್ನ ದೇಹ ಅಲ್ಲಿ ಮಲಗಿರುವುದು ಕಾಣುತ್ತಿತ್ತು. ಆಗ ನನಗೆ ಬೆಳಕಿನ ಅರಿವಾಯಿತು-ಬರಿ ಬೆಳಕು—ನನ್ನ ಸುತ್ತಲೂ ಬೆಳಕು. ನನ್ನ ಸುತ್ತಲೂ ಪ್ರದರ್ಶನವೊಂದು ಕಂಡಿತು. ಪುನರಾವರ್ತನೆಗೋ ಎಂಬಂತೆ ನನ್ನ ಜೀವನದ ಘಟನೆಗಳೂ ಕಣ್ಣ ಮುಂದೆ ಹಾದು ಹೋದವು. ನಾನೆಸಗಿದ್ದ ಅನೇಕ ಕೃತ್ಯಗಳು ನನಗೆ ಬಹಳ ಬಹಳ ನಾಚಿಕೆ ಉಂಟುಮಾಡಿದವು. ಏಕೆಂದರೆ ಆಗ ನನ್ನಲ್ಲಿ ಬೇರೆ ಜ್ಞಾನ ಇತ್ತು. ಆ ಬೆಳಕು ನಾನು ಮಾಡಿದ್ದ ತಪ್ಪುಗಳನ್ನು ತೋರಿಸುತ್ತಿತ್ತು...."

ಇಂಥ ಸ್ಮರಣೆಗಳಿಗೂ ಸ್ಮರಿಸಿಕೊಂಡವನ ಸಂಸ್ಕೃತಿಗೂ ಸಂಬಂಧ ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ. ಸಾವಿನ ಭಯದಿಂದ ತತ್ತರಿಸಿದ ಮನಸ್ಸಿನ ಭ್ರಮೆ ಇವಲ್ಲ ಎಂದೂ ಸಾಧಿಸಲು ಸಾಧ್ಯವಾಗಿಲ್ಲ, ಎಂದೇ ಆಧುನಿಕ ವಿಜ್ಞಾನ ಇವನ್ನು ಪುರಾವೆಗಳಾಗಿ ಸ್ವೀಕರಿಸುವುದಿಲ್ಲ. ಪುನರ್ಜನ್ಮ ಸಿದ್ಧಾಂತಿಗಳು ಇಂಥ ಹೇಳಿಕೆಗಳಲ್ಲಿ ಇರುವ ಸಾಮಾನ್ಯ ಅಂಶಗಳತ್ತ ಗಮನ ಸೆಳೆದು, ಅವು ಭ್ರಮೆ, ಸುಳ್ಳು ಎಂಬ ವಾದವನ್ನು ಅಲ್ಲಗಳೆಯುತ್ತಾರೆ. ಹೇಳಿಕೆಯಲ್ಲಿ ಕಾಣುವ ಸಾಮಾನ್ಯ ಅಂಶಗಳು ಇಂತಿವೆ:





(೧) ದೇಹದಿಂದ ಹೊರಬಂದು, ಭೌತದೇಹ ಮತ್ತು ಸುತ್ತಲಿನ ಪರಿಸರವನ್ನು ನೋಡುವ ಅನುಭವ (ಪರಿಸರದ ಬಗ್ಗೆ ಹೇಳಿಕೆಗಳಲ್ಲಿ ಇರುವ ವಿವರಗಳು ಪೂರ್ಣ ಸರಿಯಾಗಿರುತ್ತವೆ), ನೋವಿನಿಂದ ಮುಕ್ತವಾದ ಅನುಭವ.

(೨) ಭೌತದೇಹದಿಂದ ಭಿನ್ನವಾದ ಇನ್ನೊಂದು ದೇಹದ (ಆತ್ಮ?) ಇರುವಿಕೆಯ ಅರಿವು.

(೩) ಮೃತ ಬಂಧುಗಳ ದರ್ಶನ ಅಥವಾ ಹಿತವಾದ ಅನುಭವ ನೀಡುವ ವಿಶಿಷ್ಟ ಬೆಳಕಿನ ಅನುಭವ.

(೪) ಭೂಮಿಯ ಮೇಲೆ ಕಳೆದ ಜೀವನದ ವಿಮರ್ಶೆ.

(೫) ಸುಖ, ಶಾಂತಿ, ಪ್ರೇಮದ ಅನುಭವ.

(೬) ಇಷ್ಟ ಇಲ್ಲದೆ ಇದ್ದರೂ ಹಿಮ್ಮರಳಲೇ ಬೇಕಾದ ಪರಿಸ್ಥಿತಿ, ಪುನಃ ಭೌತ ದೇಹ ಪ್ರವೇಶ, ಮೊದಲಿನ ನೋವಿನ ಅನುಭವ.

(೭) ಈ ದೇಹಾತೀತ ಅನುಭವಗಳನ್ನು ವರ್ಣಿಸಲು ಯುಕ್ತ ಪದಗಳು ಇಲ್ಲವೆಂಬ ಭಾವನೆ, ಜೀವನ ಮತ್ತು ಸಾವನ್ನು ನೋಡುವ ದೃಷ್ಟಿಕೋನದಲ್ಲಿ ಹಿತಕರ ಬದಲಾವಣೆ.

ಇಂಥ ಅನುಭವಗಳನ್ನು ದಾಖಲೆ ಮಾಡಿ, ವಿಶ್ಲೇಷಿಸಿದವರಲ್ಲೊಬ್ಬರಾದ ರೇಮಾಂಡ್ ಎ. ಮೂಡಿ (ಜ್ಯೂನಿಯರ್) ಈತನ 'ಲೈಫ್ ಆಫ್ಟರ್ ಲೈಫ್' ಮತ್ತು 'ರಿಫ್ಲೆಕ್ಷನ್ಸ್ ಆನ್ ಲೈಫ್ ಆಫ್ಟರ್ ಲೈಫ್' ಪುಸ್ತಕಗಳು ಕುತೂಹಲಕಾರಿ ವಿಷಯಗಳನ್ನು ಒಳಗೊಂಡಿವೆ.

ಎಡ್ಗರ್ ಕೇಸಿಯ ಹೇಳಿಕೆಗಳು:* ತನ್ನನ್ನು ತಾನೇ ಸಮ್ಮೋಹಿನಿಗೆ ಒಳಪಡಿಸಿಕೊಂಡು ಎಡ್ಗರ್ ಕೇಸಿ (೧೮೭೭–೧೯೪೫) ಎಂಬಾತ ಇತರರು

---

* ನೋಡಿ: ೧೯೭೬ ನವೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಬಿತ್ತಿದಂತೆ ಬೆಳೆ' ಪುಸ್ತಕ ವಿಭಾಗ


ಕೇಳಿದ ಪ್ರಶ್ನೆಗಳಿಗೆ ಖಚಿತವಾದ ಉತ್ತರ ನೀಡುತ್ತಿದ್ದ. ಈತನ ಹೇಳಿಕೆಗಳ ನಿಖರತೆಯನ್ನೂ ವಿಶ್ವಸನೀಯತೆಯನ್ನೂ ಅಲ್ಲಗಳೆಯುವ ಧೈರ್ಯ ಈ ತನಕ ಯಾರೂ ಮಾಡಿಲ್ಲ. 'ಜೀವನ ಪಠನ' ಗಳು (ಲೈಫ್ ರೀಡಿಂಗ್ಸ್) ಎಂದು ಕರೆಯಲಾಗುತ್ತಿರುವ ಈತನ ಹೇಳಿಕೆಗಳಲ್ಲಿ ವ್ಯಕ್ತಿಗಳ ಈಗಿನ ಜೀವನ ಸ್ಥಿತಿಗತಿಗಳಿಗೆ ಅವರ ಪೂರ್ವಜನ್ಮಗಳಲ್ಲಿ ಯಾವುದು ಹೇಗೆ ಕಾರಣವಾಗಿದೆ ಎಂಬ ವಿವರಣೆ ಮತ್ತು ಅವುಗಳ ಸುಧಾರಣೆಗೆ ಸಲಹೆಗಳು ಇವೆ. ಈತ ನೀಡಿದ ಪ್ರತಿಯೊಂದು ಪಠನವನ್ನೂ ನಿಖರವಾಗಿ ದಾಖಲೆ ಮಾಡಲಾಗಿದೆ. ಕೆಳಗೆ ಕೆಲವು ಪಠಣಗಳನ್ನು ಉದಾಹರಿಸಿದೆ.

ಉದಾಹರಣೆ : ಹುಟ್ಟುಗುರುಡನಾಗಿದ್ದ ಪ್ರಾಧ್ಯಾಪಕನ ಜೀವನ ಪಠನ– ಅಮೇರಿಕದ ಆಂತರಿಕ ಯುದ್ಧದ ಸಮಯದಲ್ಲಿ ಒಂದು ಜನ್ಮ, ಕ್ರೈಸ್ತರ ಧರ್ಮಯುದ್ಧ (ಕ್ರುಸೇಡ್ಸ್) ಕಾಲದಲ್ಲಿ ಫ್ರಾನ್ಸ್‌ನಲ್ಲಿ ಒಂದು ಜನ್ಮ, ಕ್ರಿ. ಪೂ. ೧೦೦೦ದ ಸುಮಾರಿಗೆ ಪರ್ಶಿಯಾದಲ್ಲಿ ಒಂದು ಜನ್ಮ, ಅಟ್ಲಾಂಟಿಸ್ ಅಂತಿಮವಾಗಿ ನಾಶವಾಗುವ ಮೊದಲು ಒಂದು ಜನ್ಮ. ಈ ಪೈಕಿ ಪರ್ಶಿಯಾದ ಅನುಭವದಲ್ಲಿ ಕ್ರೂರ ಬುಡಕಟ್ಟೊಂದರಲ್ಲಿ ಹುಟ್ಟಿದ್ದ. ಸೆರೆ ಸಿಕ್ಕಿದ ಶತ್ರುಗಳ ಕಣ್ಣು ಕಿತ್ತುವ ಕಾಯಕ ಈತನದ್ದು. ಅನುಕಂಪರಹಿತನಾಗಿ, ಮಹದಾನಂದದಿಂದ ಇತರರ ಕಣ್ಣು ತೆಗೆದದ್ದರ ಫಲವೇ ಹುಟ್ಟುಗುರುಡುತನ.

ಉದಾಹರಣೆ: ಬಾಲ್ಯದಿಂದಲೇ ದುರ್ಬಲ ಜೀರ್ಣಶಕ್ತಿಯಿಂದ ನರಳುತ್ತಿದ್ದ ೩೫ ವರ್ಷದ ವ್ಯಕ್ತಿಗೆ—

ಫ್ರಾನ್ಸಿನ ರಾಜ ೧೩ನೆ ಲೂಯಿ ಸಹಚರ–ರಕ್ಷಕ–ಉಡುಗೆ ತೊಡುಗೆಗಳ ಸಲಹೆಗಾರ. ಈ ಅನುಭವದಲ್ಲಿ ತಿಂಡಿಪೋತನಾಗಿದ್ದುದರ ಫಲವೇ ದುರ್ಬಲ ಜೀರ್ಣಶಕ್ತಿ.

ಉದಾಹರಣೆಗೆ ಕಿವುಡನೊಬ್ಬನಿಗೆ– ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಶ್ರೀಮಂತವರ್ಗದ



«ನೀವು ತುಂಬ ಜೀನುಗೊಟ್ಟರಪ್ಪ! ಗ್ಯಾರೇಜನ್ನೇ ಅಗಲಮಾಡಿಸಿಕೊಂಡುಬಿಟ್ಟರೆ ಆಗೋದಿಲ್ಲವೆ!»

ವ್ಯಕ್ತಿ ಆಗಿದ್ದ. ಸಹಾಯ ಯಾಚಿಸಿದವರ ಆರ್ತನಾದಕ್ಕೆ ಎಂದೂ ಕಿವಿಗೊಡದೆ ಇದ್ದ ಫಲ ಈ ಜನ್ಮದ ಕಿವುಡು.

ಉದಾಹರಣೆ: ಸಲಿಂಗ ರತಿಯಲ್ಲಿ ಒಲವಿದ್ದ ೨೧ ವರ್ಷದ ತರುಣನಿಗೆ– ಫ್ರಾನ್ಸಿನ ರಾಜ ದರ್ಬಾರಿನಲ್ಲಿ ವ್ಯಂಗ್ಯ ಚಿತ್ರಕಾರ ಮತ್ತು ವಿಕಟ ಕವಿಯಾಗಿ ಪಡೆದ ಅನುಭವದಲ್ಲಿ ಗಣ್ಯರ ಸಲಿಂಗ ರತಿಯ ಚಟವನ್ನು ವ್ಯಂಗ್ಯಚಿತ್ರಗಳ ಮೂಲಕ ಬಯಲುಮಾಡಿ ಆನಂದಿಸುತ್ತ ಇದ್ದುದರ ಫಲ.

ಉದಾಹರಣೆ: ಯಂತ್ರವಿಜ್ಞಾನದ ಕಾರ್ಯದಲ್ಲಿ ತೊಡಗಿ ಹತಾಶನಾಗಿದ್ದ ೨೩ ವರ್ಷದ ತರುಣನಿಗೆ ಈಜಿಪ್ಟ್, ಗ್ರೀಸ್, ರೋಮ್‌ಗಳಲ್ಲಿ ಹಿಂದಿನ ಅನುಭವಗಳು. ದೇವಾಲಯಗಳು, ನ್ಯಾಯಾಲಯಗಳು, ಸರ್ಕಾರದ ಕೇಂದ್ರಾಲಯಗಳು ಇವುಗಳಿಗೆ ಭಿತ್ತಿಚಿತ್ರಗಳನ್ನು ರೂಪಿಸುವ ಅನುಭವ ಹಿಂದಿನ ಜನ್ಮಗಳಲ್ಲಿ ಆಗಿದೆ. ಈಗಿನ ಅನುಭವದಲ್ಲಿ ವಾಸ್ತುಶಿಲ್ಪ ವೃತ್ತಿ ಕೈಗೊಳ್ಳಲಿ.

ಕೇಸೀ ಇಂಥ ೨೫೦೦ ಜೀವನ ಪಠನಗಳನ್ನು ನೀಡಿದ್ದಾನೆ. ಇವು ವಿಶ್ವಸನೀಯ ಎಂಬುದಕ್ಕೆ ಕಾರಣಗಳು ಇಂತಿವೆ:

(೧) ಪಠನಗಳಲ್ಲಿ ಹೇಳಿರುವ ಕ್ಷುಲ್ಲಕ ಚಾರಿತ್ರಿಕ ಅಂಶಗಳು ಕೂಡ ನಿಖರವಾಗಿವೆ. ಕೆಲವು ಚಾರಿತ್ರಿಕ ಅಂಶಗಳು ಕೇಸೀಯ ಮರಣಾಂತರ ದೃಢೀಕರಿಸಲ್ಪಟ್ಟಿವೆ.

(೨) ಆತನ ಎಲ್ಲ ಪಠನಗಳಲ್ಲಿ ಬರುವ ಚಾರಿತ್ರಿಕ ಅಂಶಗಳಲ್ಲಿ ಆಂತರಿಕ ಸ್ಥಿರತೆ ಇದೆ.

(೩) ದೈಹಿಕ ರೋಗಗಳಿಗೆ ಆತ ಸೂಚಿಸಿದ ಚಿಕಿತ್ಸಾಕ್ರಮ ನಿರೀಕ್ಷಿತ ಫಲ ನೀಡಿದೆ.

(೪) ಪೂರ್ವಜನ್ಮದ ಅನುಭವಗಳನ್ನು ಆಧರಿಸಿ ಆತ ನೀಡಿದ ವೃತ್ತಿ ಮಾರ್ಗದರ್ಶನಗಳು ಯಶಸ್ವಿಯಾಗಿವೆ.

(೫) ಶಿಶುಗಳ ಮುಂದಿನ ವ್ಯಕ್ತಿತ್ವದ ಬಗೆಗಿನ ಆತನ ಹೇಳಿಕೆಗಳು ಸಂಪೂರ್ಣ ಸರಿಯಾಗಿವೆ.

(೬) ವ್ಯಕ್ತಿತ್ವ ಲಕ್ಷಣಗಳ ಬಗ್ಗೆ ಆತ ನೀಡಿದ ವಿವರಣೆಗಳು ಸಮಂಜಸವಾಗಿ ತೋರುತ್ತವೆ.

(೭) ಪಠನಗಳಲ್ಲಿ ಹೇಳಿದ ಅಂಶಗಳನ್ನು ಆತ ಹಿಂದೆ ಎಂದೂ ಕಲಿತಿರಲಿಲ್ಲ.

ಈತನ ಪಠನಗಳನ್ನು ಆಧರಿಸಿ ಕೈಗೊಳ್ಳಬಹುದಾದ ತೀರ್ಮಾನಗಳಲ್ಲಿ ಕೆಲವನ್ನು ಕೆಳಗೆ ಸಂಕ್ಷಿಪ್ತವಾಗಿ ತಿಳಿಸಿದೆ:

(೧) ಭೌತ ದೇಹದಿಂದ ಭಿನ್ನವಾದ ಸೂಕ್ಷ್ಮ ದೇಹ ಅರ್ಥಾತ್ ಆತ್ಮ ಇದೆ.

(೨) ಒಮ್ಮೆ ಎಸಗಿದ ಕೃತ್ಯಕ್ಕೆ ತಕ್ಕ ಫಲ ಯಾವುದಾದರೊಂದು ಜನ್ಮದಲ್ಲಿ ಲಭಿಸುವುದು ಖಂಡಿತ.

(೩) ಕರ್ಮ (ಈ ಪದವನ್ನು ಕೇಸೀ ಬಳಸಿದ್ದಾನೆ) ಬಂಧನದಿಂದ, ಸ್ವಪ್ರಯತ್ನದಿಂದ ಮುಕ್ತನಾಗುವುದು ಸಾಧ್ಯ– ಅದೇ ಗುರಿ.

(೪) ಭೂಮಿಯಲ್ಲಿ ವಿಶೇಷ ವೈಯಕ್ತಿಕ ಸಂಬಂಧ ಹೊಂದಿದ್ದವರು ಮುಂದಿನ ಜನ್ಮಗಳಲ್ಲಿ ಕೂಡ ಒಟ್ಟಿಗೆ ಇರುವ ಸಾಧ್ಯತೆ ಹೆಚ್ಚು.

(೫) ಇತರ ಗ್ರಹಗಳಲ್ಲಿ, ಇತರ ಆಯಾಮಗಳಲ್ಲಿ ಕೂಡ ಆತ್ಮಗಳಿವೆ. ಒಂದು ಗ್ರಹದಿಂದ ಇನ್ನೊಂದು ಗ್ರಹಕ್ಕೆ, ಒಂದು ಆಯಾಮದಿಂದ ಇನ್ನೊಂದು ಆಯಾಮಕ್ಕೆ ಆತ್ಮಗಳು ಚಲಿಸುತ್ತವೆ.

(೬) ದಂಡಿಸುವುದು–ಪುರಸ್ಕರಿಸುವುದು ಪುನರ್ಜನ್ಮದ ಉದ್ದೇಶವಲ್ಲ. ಯುಕ್ತ ಅನುಭವಗಳ ಮೂಲಕ ಆತ್ಮವನ್ನು ಸಂಸ್ಕರಿಸಿ, ಮೂಲ ಚೈತನ್ಯದೊಂದಿಗೆ ವಿಲೀನಗೊಳಿಸುವುದೊಂದೇ ಉದ್ದೇಶ.

(೭) 'ನಮ್ಮ ಕೈಯಲ್ಲೇನಿದೆ, ಎಲ್ಲ ಆ ಭಗವಂತನ ಇಚ್ಛೆ,' ಎಂದು ಕೈ ಕಟ್ಟಿ ಕುಳಿತುಕೊಳ್ಳುವುದು ಮೂರ್ಖತನ. ಹಿಂದೆ ನಾವೆಸಗಿದ್ದ ಕೃತ್ಯಕ್ಕೆ ತಕ್ಕುದಾದ ಪರಿಸರದಲ್ಲಿ ನಾವು ಜನಿಸುತ್ತೇವೆ. ಈ ಪರಿಸರದಲ್ಲಿ ಇಂದು ನಾವೇನು ಮಾಡುತ್ತೇವೆ ಎಂಬುದು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ.

(೮) ವಿಶ್ವದಲ್ಲಿ ಇರುವ ಒಟ್ಟು ಆತ್ಮಗಳ ಸಂಖ್ಯೆ ಸ್ಥಿರವಾಗಿದೆ.

(೧೦) ಭೂಮಿಯ ಮೇಲೆ ೫ ಭಾಗಗಳಲ್ಲಿ ಏಕಕಾಲದಲ್ಲಿ ಮಾನವ ಕಾಣಿಸಿಕೊಂಡ.

ಈಗ ನೀವೇ ತೀರ್ಮಾನಿಸಿ: ಪುನರ್ಜನ್ಮ ತಥ್ಯವೇ, ಕಾಲ್ಪನಿಕ ಕಥೆಯೋ ಎಂಬುದನ್ನು. ✻

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಮಿಲನ
(ಅ) ಮುಚ್ಚುವುದು (ಆ) ಕಟ್ಟುವುದು (ಇ) ಸೇರುವಿಕೆ (ಈ) ಕೊಳೆ

೨. ಮೀಲನ
(ಅ) ಸೇರುವಿಕೆ (ಆ) ಕೈಗೂಡುವುದು (ಇ) ಮುಚ್ಚುವುದು (ಈ) ಮುತ್ತುವಿಕೆ

೩. ಕಾರುಬಾರು
(ಅ) ಆಡಳಿತ (ಆ) ಬಡಗಿ ಕೆಲಸ (ಇ) ಗುಂಡಿಕ್ಕುವುದು (ಈ) ರಾಜಸಭೆ

೪. ದರಕಾರ
(ಅ) ಬಡಿಗೆಯಿಂದ ಹೊಡೆಯುವುದು (ಆ) ಲಕ್ಷ್ಯವೀಯುವುದು (ಇ) ಬಾಗಿಲು ಕಾಯುವವ (ಈ) ಸಭಾಮಂಟಪ

೫. ಹುಟ್ಟುವಳಿ
(ಅ) ವಂಶ (ಆ) ಆದಾಯ (ಇ) ದೋಣಿ ನಡೆಸುವುದು (ಈ) ಹಾಳಾಗಿ ಹೋಗುವುದು

೬. ಹುಸಿಯುರುಲು
(ಅ) ಸುಳ್ಳು ಹೇಳಿ ಸಿಕ್ಕಿಸಿ ಹಾಕುವಿಕೆ (ಆ) ಸುಮ್ಮನೆ ಹೊರಳಾಡು (ಇ) ಸುಲಭವಾಗಿ ಬಿಚ್ಚುವ ಗಂಟು (ಈ) ಸುಮ್ಮನೆ ಬೊಬ್ಬೆ ಹಾಕುವಿಕೆ

೭. ಕೀನಾಶ
(ಅ) ಜಿಪುಣ (ಆ) ಬೇಗದ ಕೊಂಡಿ (ಇ) ದ್ವೇಷ (ಈ) ಕೋಪ

೮. ಕೀಲಿತ
(ಅ) ನಗುವಿನ (ಆ) ಆಟದ (ಇ) ನಾಟಿರುವ (ಈ) ತಿರಸ್ಕೃತ

೯. ಅಪೂರ್ವ
(ಅ) ದಕ್ಷಿಣ (ಆ) ಅಮಾವಾಸ್ಯೆ (ಇ) ಎದುರಿಲ್ಲದ (ಈ) ಹಿಂದೆ ಜರಗದ

೧೦. ಅಮೇಧ್ಯ
(ಅ) ಮಿದುಳಿನ ರೋಗ (ಆ) ಅಪವಿತ್ರ (ಇ) ಬುದ್ಧಿಗೇಡಿ (ಈ) ಯಜ್ಞಕ್ಕೆ ಅಧಿಕಾರವಿಲ್ಲದವ

೧೧. ಪಾತ
(ಅ) ಹಕ್ಕಿ (ಆ) ಬೆಳಗಿನ ಹೊತ್ತು (ಇ) ಬೀಳುವಿಕೆ (ಈ) ಗಿಡದ ಸುತ್ತ ಮಾಡಿದ ನೀರುಗುಳಿ

೧೨. ಪಾತಳಿ
(ಅ) ಇಂದ್ರನ ಸಾರಥಿ (ಆ) ಮಟ್ಟ (ಇ) ಮೈಮೇಲೆ ಆವೇಶ ಬಂದವ (ಈ) ಹಾಪಸೆ

ಶಬ್ದಭಾಂಡಾರದ ಸರಿಯಾದ ಅರ್ಥಗಳು

೧. **ಮಿಲನ** (ಇ) ಸೇರುವಿಕೆ, ಕೂಡುವುದು, ಸಂಧಿಸುವುದು. ಉದಾ:- ಬಹು ಕಾಲದ ನಂತರ ಇಬ್ಬರ ಮಿಲನವಾಯಿತು. [ಸಂ.]

೨. **ಮೀಲನ** (ಇ) ಮುಚ್ಚುವುದು, ಮುಚ್ಚಿಕೊಳ್ಳುವುದು. ಉದಾ:— ದೃಷ್ಟಿ ಮೀಲನ. [ಸಂ.]

೩. **ಕಾರುಬಾರು** (ಅ) ಆಡಳಿತ, ಮೇಲ್ವಿಚಾರಣೆ; (ಕೆಲ ವೇಳೆ ಕೆಟ್ಟ ಅರ್ಥದಲ್ಲಿ) ಸಲ್ಲದ ಅಧಿಕಾರ ಚಲಾವಣೆ. ಉದಾ:— ಅವನು ಭಾರಿ ಕಾರುಬಾರಿನ ಜನ [ಫಾರಸೀ — ಕಾರೋಬಾರ್ = ಕೆಲಸ, ಕಾರ್ಯ]

೪. **ದರಕಾರ** (ಅ) ಲಕ್ಷ್ಯವೀಯುವುದು, ಲಕ್ಷ್ಯ; ಚಿಂತೆ, ಕಾಳಜಿ. ಉದಾ:— ಗುರುಹಿರಿಯರ ದರಕಾರ ಇಲ್ಲದವಳು. [ಫಾರಸೀ — ದರಕಾರ = ಅವಶ್ಯಕತೆ]

೫. **ಹುಟ್ಟುವಳಿ** (ಅ) ಆದಾಯ, ಉತ್ಪತ್ತಿ, ಲಾಭ; ಆಸ್ತಿಯಿಂದ ಬರತಕ್ಕ ಗೇಣಿ ಇತ್ಯಾದಿ. ಉದಾ:— ವರ್ಷದ ಹುಟ್ಟುವಳಿ ನೋಡಿ ಖರ್ಚು ಮಾಡು. [ಕನ್ನಡ]

೬. **ಹುಸಿಯುರುಲು** (ಇ) ಸುಲಭವಾಗಿ ಸೆಳೆದು ಬಿಚ್ಚಲು ಬರುವಂತೆ ಹಾಕಿದ ಉರುಲು, ಗಂಟು. [ಕನ್ನಡ — ಹುಸಿ = ಸುಳ್ಳು + ಉರುಲು]

೭. **ಕೀನಾಶ** (ಅ) ಜಿಪುಣ, ಲೋಭಿ. ಉದಾ:— ಅವನ ಕೀನಾಶತನಕ್ಕೆ ಮಿತಿ ಇಲ್ಲ. [ಸಂ.]

೮. **ಕೀಲಿತ** (ಇ) ನಾಟಿದ, ತೊಡಕಿಕೊಂಡ; ಬಂಧಿತ, ಜೋಡಿಸಿದ. ಉದಾ:— ಅವನ ಮನಸ್ಸು ಅವಳಲ್ಲಿ ಕೀಲಿತವಾಗಿತ್ತು. [ಸಂ. ಕೀಲ = ಕೀಲು ಎಂಬುದರಿಂದ]

೯. **ಅಪೂರ್ವ** (ಈ) ಹಿಂದೆಂದೂ ಜರಗದ, ಆದ್ದರಿಂದ ಆಶ್ಚರ್ಯಕರ. ಉದಾ:— ಅಪೂರ್ವವಾದ ಅನುಭವ. [ಸಂ. ಅ = ಅಲ್ಲ, ಇಲ್ಲ + ಪೂರ್ವ = ಮೊದಲು]

೧೦. **ಅಮೇಧ್ಯ** (ಅ) ಅಪವಿತ್ರ, ಯಜ್ಞಕ್ಕೆ ಯೋಗ್ಯವಲ್ಲದ ಕೊಳಕು ಪದಾರ್ಥ; ಮಲ, ಹೇಲು. ಉದಾ:— ಅಮೇಧ್ಯಕ್ಕೆ ಬಾಯಿ ಬಿಡುವ ನಾಯಿ. [ಸಂ. ಅ = ಅಲ್ಲದ್ದು; ಮೇಧ್ಯ — ಯಜ್ಞ]

೧೧. **ಪಾತ** (ಇ) ಬೀಳುವಿಕೆ; ಕಳಂಕ ದೋಷ, ಉದಾ:— ದೃಷ್ಟಿಪಾತದಿಂದಲೇ ದೂಷಣವಾಯಿತು. [ಸಂ. ಪತ್ = ಬೀಳು — ಎಂಬುದರಿಂದ]

೧೨. **ಪಾತಳಿ** (ಅ) ಪಟ್ಟಿ; ಸಮುದ್ರದ ಮೇಲ್ಮೈ. ಉದಾ:— ನೀರಿನ ಪಾತಳಿ ಏರುತ್ತ ಇತ್ತು. [ಮರಾಠಿ]

●

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

●

ಶಿಕ್ಷಣದ ಕೇಂದ್ರಗಳಾಗಿದ್ದವೆಂದು ಶಾಸನಗಳಿಂದ ಕಂಡುಬರುತ್ತದಲ್ಲದೆ ಅನೇಕ ಸ್ಥಳನಾಮಗಳಲ್ಲಿ ಜೀವಶೇಷವಾಗಿದೆ. ಕಂಚಿಯ **ಘಟಿಕಾಸ್ಥಾನ**ದಲ್ಲಿ ಓದುತ್ತಿದ್ದಲ್ಲಿ, ಮಯೂರ ಶರ್ಮ ತನಗಾದ ಅಪಮಾನದಿಂದ ಸಿಡಿದೆದ್ದು ಬ್ರಾಹ್ಮವನ್ನು ತೊರೆದು ಕ್ಷಾತ್ರವನ್ನು ಕೈಕೊಂಡದ್ದು ಕದಂಬ ರಾಜ್ಯ ಸ್ಥಾಪನೆಗೆ ಕಾರಣವಾಯಿತು. ಆದರೆ ಈ ಘಟಿಕಾ ಸ್ಥಾನದ ಘಟಿಕಾ ಶಬ್ದ ಏನನ್ನು ಸೂಚಿಸುತ್ತದೆಂಬುದು ಸ್ಪಷ್ಟವಿಲ್ಲ. ಘಟಿಕಾ ಶಬ್ದಕ್ಕೆ **ಗಳಿಗೆ** (= ೨೪ ನಿಮಿಷ) ಎಂಬುದೊಂದು ಅರ್ಥ. ಕಾಲವನ್ನು ಅಳೆಯುವ ಈ ಕೆಲಸ ಅಂದು ತುಂಬ ಸೂಕ್ಷ್ಮ ಕೌಶಲದ ತಂತ್ರವಾಗಿದ್ದು ಗಣಿತ ಜ್ಯೋತಿಷ ಶಾಸ್ತ್ರಗಳಲ್ಲಿ ಪ್ರವೀಣರೇ ಅವಕ್ಕೆ ಬೇಕಾಗಿದ್ದರು. ಅಂಥವರು ಉಚ್ಚ ವಿದ್ಯಾ ಕೇಂದ್ರಗಳಲ್ಲಿದ್ದು ಜನಸಾಮಾನ್ಯರಿಗೆ ಈ ಸೇವೆ ಸಲ್ಲಿಸುತ್ತಿರಬಹುದು. ಆ ಕಾರಣದಿಂದ ಉಚ್ಚ ವಿದ್ಯಾಕೇಂದ್ರಗಳು ಜನರ ಮನಸ್ಸಿನಲ್ಲಿ ಕಾಲ ಗಣನೆಯೊಡನೆ ತಳಕುಬಿದ್ದಿರಬಹುದು. ಈ **ಘಟಿಕಾ ಸ್ಥಾನ**ಗಳಿಂದಲೇ ಮುಂದೆ ಹದಿನಾಲ್ಕು ವಿದ್ಯೆಗಳನ್ನು ಓದಿಸುವ **ವಿದ್ಯಾಸ್ಥಾನ**ಗಳು ರೂಪುಗೊಂಡವೆಂದು ಪ್ರೊ. ಆರ್. ಸತ್ಯನಾಥ ಅಯ್ಯರ್ ಹೇಳುತ್ತಾರೆ.

ಈ **ವಿದ್ಯಾಸ್ಥಾನ**ಗಳು ನಮ್ಮ ಪ್ರಾಚೀನ **ವಿಶ್ವವಿದ್ಯಾಲಯ**ಗಳೆನ್ನಬಹುದು. ನಾವು ಈಗ **ವಿಶ್ವವಿದ್ಯಾ(ನಿ)ಲಯ**ಗಳೆನ್ನುವುದು ಇಂಗ್ಲೀಷಿನ Universityಯ ಶಾಬ್ದಿಕ ಅನುವಾದ. ಲ್ಯಾಟಿನ್ನಿನ Universetas ಶಬ್ದದ ಅರ್ಥ ಒಬ್ಬನ **ಸಮಸ್ತ ಆಸ್ತಿ** ಎಂದು ಅರ್ಥಾತ್ **ವಿಶ್ವವೃತ್ತಿ**. ೧೩ನೇ ಶತಮಾನ ನಂತರ ಫ್ರೆಂಚ್ ಮೊದಲಾದ ಭಾಷೆಗಳಲ್ಲಿ ಈ ಶಬ್ದ ಮಹಾವಿದ್ಯಾ ಕೇಂದ್ರವೆಂಬ ಅರ್ಥದಲ್ಲಿ ಪ್ರಾಚುರ್ಯ ಪಡೆಯಿತು. ಒಂದು ದೃಷ್ಟಿಯಿಂದ ನಮ್ಮ ಪ್ರಾಚೀನ **ಗುರುಕುಲ** ವಿಶ್ವವಿದ್ಯಾಲಯಕ್ಕೆ ಹೆಚ್ಚು ಅನುರೂಪವಾಗಿದೆ (ಕುಲ = ಸಮೂಹ).

ಈಚೆಗೆ ನಮ್ಮ ದೇಶದಲ್ಲಿ ಅನೇಕ **ಅಕಾದಮಿ**ಗಳು ಹುಟ್ಟಿಕೊಂಡಿವೆ. ಇವು ನಮ್ಮಲ್ಲಿ ವಿದ್ಯಾ ಬೋಧಕ ಸಂಸ್ಥೆಗಳಲ್ಲ; ನಾನಾ ಕಲೆ, ವಿದ್ಯೆಗಳಲ್ಲಿ ಶ್ರೇಷ್ಠತ್ವ ಪಡೆದವರಿಗೆ ಪ್ರೋತ್ಸಾಹ ಕೊಡುವ ಸಂಸ್ಥೆಗಳಾಗಿವೆ. **ಅಕಾದಮಿಯ** ಎಂಬ ಗ್ರೀಕ್ ಪದಕ್ಕೆ ಮೂಲತಃ ವಿದ್ಯೆಯ ಸಂಬಂಧವೇ ಇಲ್ಲ. ಅದು ಅಥೆನ್ಸಿನ ಬಳಿ ಒಂದು ಉಪವನದ ಹೆಸರು– ಬಹುಶಃ **ಅಕಾದಮೊಸ್** ಎಂಬ ವ್ಯಕ್ತಿಯ ಹೆಸರಿಂದ ಪ್ರಸಿದ್ಧವಾದದ್ದು. ಗ್ರೀಸಿನ ಜಗತ್ಪ್ರಸಿದ್ಧ ತತ್ವಜ್ಞಾನಿ ಪ್ಲೇಟೋ ಆ ಉಪವನದಲ್ಲಿ ಶಿಷ್ಯರಿಗೆ ತತ್ವಜ್ಞಾನ ಬೋಧಿಸುತ್ತಿದ್ದುದರಿಂದ ಅದಕ್ಕೂ ತತ್ವಜ್ಞಾನವಿದ್ಯೆಗೂ ತಳಕುಬಿತ್ತು. ಉಪವನಗಳಲ್ಲಿ ತತ್ವಬೋಧೆ ಮಾಡುವ ಸಂಪ್ರದಾಯ ನಮ್ಮಲ್ಲಿಯೂ ಇತ್ತು. ವಿಶೇಷತಃ ಬುದ್ಧನು ಬಿಹಾರದಲ್ಲಿ **ಅಮ್ರವನ**, ಕಾಶಿಯ ಬಳಿ **ಸಾರಂಗವನ**ಗಳಲ್ಲಿ ತತ್ವೋಪದೇಶ ಮಾಡಿದ್ದ. ಆದರೆ ಅಕಾದಮಿ ವನದ ಭಾಗ್ಯ ಅವಾವುಗಳಿಗೂ ಬರಲಿಲ್ಲ.

ಜರ್ಮನರು ತಮ್ಮ ಮಾಧ್ಯಮಿಕ ಶಾಲೆಗಳಿಗೆ ಒಂದು ವಿಚಿತ್ರ ಶಬ್ದ ಉಪಯೋಗಿಸುತ್ತಾರೆ: **ಜಿಮ್ನಾಶಿಯಂ** ಎಂದು. ಜಿಮ್ನಾಶಿಯಂ ಅಂದರೆ ಗ್ರೀಕ್ ಭಾಷೆಯಲ್ಲಿ **ಗರಡಿಮನೆ. ಗರಡಿಮನೆ**ಯಲ್ಲಿ ಅಂಗಸಾಧನೆ ಮಾಡುವ ಹಾಗೆ ಶಾಲೆಗಳಲ್ಲಿಯೂ ವಿದ್ಯಾಸಾಧನೆ ಮಾಡುವುದಲ್ಲವೆ? ಈ ಪದವನ್ನು ಆರಿಸಿಕೊಂಡದ್ದರಲ್ಲಿ ಜರ್ಮನರ ಕಠೋರ ಶಿಸ್ತಿನ ಮತ್ತು ಮಿಲಿಟರಿ ಮನೋವೃತ್ತಿಯ ಪ್ರತಿಬಿಂಬವಿದೆಯೆಂದು ಹೇಳಲೂ ಬಹುದು. ಜರ್ಮನ್ ಮಾಧ್ಯಮಿಕ ಶಾಲೆಗಳು ತಮ್ಮ ಶಿಸ್ತು ಮತ್ತು ಸಂಪ್ರದಾಯ ಶರಣತೆಗೆ ಹೆಸರಾಗಿವೆ. ಆದರೆ ವಾಸ್ತವಿಕವಾಗಿ ಗ್ರೀಕ್ ಜಿಮ್ನೋಸ್ ಶಬ್ದದ ಅರ್ಥ **ಬೆತ್ತಲೆ** ಎಂದು. ಶರೀರವನ್ನು ಅಖಂಡವಾಗಿಯೇ ಪವಿತ್ರವೆಂದು ನಂಬುತ್ತಿದ್ದ ಗ್ರೀಕರು **ಬೆತ್ತಲೆಯಾಗಿಯೆ** ಅಂಗಸಾಧನೆ ಮಾಡುತ್ತಿದ್ದರು ಮತ್ತು ಅವರ ಆಟ ಪಾಟ ಪಂದ್ಯಗಳು ಬೆತ್ತಲೆಯಲ್ಲೇ ನಡೆಯುತ್ತಿದ್ದವು ! **ಬಾಲವಾಡಿ**ಗಳಿಗೆ ಜರ್ಮನ್ನರಿಟ್ಟ ಹೆಸರಾದ **ಕಿಂಡರ್‌ಗಾರ್ಟನ್**‌ನ ಅರ್ಥ **ಚಿಣ್ಣರ ವನ** ಎಂದು. ಬಹುಶಃ ಶಿವರಾಮ ಕಾರಂತರು ಪುತ್ತೂರಲ್ಲಿ ತಾವು ನಡೆಸುತ್ತಿದ್ದ ಚಿಕ್ಕಮಕ್ಕಳ ಶಾಲೆಗೆ **ಬಾಲವನ** ಎಂದು ಹೆಸರಿಟ್ಟದ್ದು ಇದರ ಪ್ರತಿಧ್ವನಿಯಾಗಿಯೇ. ಇಲ್ಲಿ ಮತ್ತೆ ವಿದ್ಯೆ ನೈಸರ್ಗಿಕ ಪರಿಸರಕ್ಕೆ ಮರಳುತ್ತದೆ. **—ಸಾವೆಂ**

ದೂರವಾಣಿ ಕೆಲಸಗಾರ್ತಿ ಶ್ರೀಮತಿ ಜಾನಕೀರಾವ್ ತಾವು ಹತ್ತು ವರ್ಷದ ಸಾಮಾಜಿಕ ಭದ್ರತಾ ಯೋಜನೆಯ ಸರ್ಟಿಫಿಕೇಟ್‌ಗಳನ್ನು ಏಕೆ ಕೊಂಡರೆಂದು ವಿವರಿಸುತ್ತಾರೆ.



"ನನ್ನ ಉಳಿತಾಯದ ಹಣದಲ್ಲಿ ಒಂದು ಭಾಗವನ್ನು ನನ್ನ ಮಗಳ ಭವಿಷ್ಯಕ್ಕಾಗಿ ತೆಗೆದಿಡುವ ಸಮಯ ಬಂದಿದೆ. ಹತ್ತು ವರ್ಷದ ಸಾಮಾಜಕ ಭಪ್ರತಾ ಯೋಜನೆಯ ಸರ್ಟಿಫಿಕೇಟ್‌ಗಳಿಂದಾಗಿ ನನ್ನ ಕೆಲಸ ಸುಲಭ. ಈ ಯೋಜನೆಯ ಪ್ರಕಾರ, ನನ್ನ ಉಳಿತಾಯದ ಹಣ ಹತ್ತು ವರ್ಷದಲ್ಲಿ ಮೂರರಷ್ಟಾಗುವುದಲ್ಲದೇ ಈ ಹಣ ನನ್ನ ಮಗಳ ಭವಿಷ್ಯಕ್ಕೆ ಉಪಯೋಗಿಸಬಹುದು. ಹಾಗೂ ಈ ಅವಧಿಯಲ್ಲಿ ನನಗೆ ಯಾವುದೇ ಅಹಿತಕರ ಘಟನೆಗಳಾದರೆ ನನ್ನ ಮಗಳು ಪೂರ್ಣ ಹಣವನ್ನು ಪಡೆಯಬಹುದು.

ನಿಮ್ಮ ಉಳಿತಾಯ ಮೂರರಷ್ಟು.

ಶ್ರೀಮತಿ ಜಾನಕೀ ರಾವ್ ಹೇಳುತ್ತಿದ್ದ, ಹತ್ತು ವರ್ಷದ ಸಾಮಾಜಿಕ ಭದ್ರತಾ ಯೋಜನೆಯ ಬಗ್ಗೆ ಹೆಚ್ಚಿನ ವಿವರಗಳು ಇಲ್ಲಿವೆ :

- **ಜೀವವಿಮಾ ಸೌಲಭ್ಯ**

  ಈ ಯೋಜನೆಯಲ್ಲಿ ಪಾಲ್ಗೊಂಡವರಿಗೆ, ಎರಡು ವರ್ಷದ ನಂತರ ಯಾವುದೇ ಕಾರಣದಿಂದ ಸಾವು ಸಂಭವಿಸಿದಲ್ಲಿ, ಅವರಿಂದ ಘೋಷಿಸಲ್ಪಟ್ಟವರಿಗೆ ಅಥವಾ ವಾರಸುದಾರರಿಗೆ, ಪೂರ್ಣಾವಧಿಯ ನಂತರ ನೀಡುವಷ್ಟು ಹಣವನ್ನು ತಕ್ಷಣ ಕೊಡಲಾಗುವುದು. ಮೊದಲ ಎರಡು ವರ್ಷಗಳಲ್ಲೂ, ಸಾವು ಆಕಸ್ಮಿಕ ಅಥವಾ ಪ್ರಕೃತಿಯ ಪ್ರಕೋಪದಿಂದ ಉಂಟಾದಲ್ಲಿ, ಮೇಲಿನ ಸೌಲಭ್ಯ ಅನ್ವಯವಾಗುತ್ತದೆ.

- **ಉಳಿತಾಯ, ಮೂರರಷ್ಟು**

  ಸರ್ಟಿಫಿಕೇಟ್‌ನ ಮೌಲ್ಯವು ಹತ್ತು ವರ್ಷದಲ್ಲಿ ಮೂರರಷ್ಟಾಗುತ್ತದೆ. ರೂ. 500 ಅಥವಾ ರೂ. 1000ದ ಸರ್ಟಿಫಿಕೇಟ್, ಹತ್ತು ವರ್ಷದ ನಂತರ ರೂ. 1500 ಅಥವಾ ರೂ. 3000 ನೀಡುತ್ತದೆ. ಅಂದರೆ ಶೇ. 11.3ರಷ್ಟು ಚಕ್ರ ಬಡ್ಡಿ, ಅರ್ಧವರ್ಷಕ್ಕೆ ಲೆಕ್ಕಿಸಿದಂತೆ,ಸೇರಿಸಲಾಗುವುದು. ಅಲ್ಲದೆ, ಮೂರು ವರ್ಷದ ನಂತರ ಸರ್ಟಿಫಿಕೇಟ್‌ನ್ನು ವಾಪಸ್‌ಮಾಡಬಹುದು. ಆಗ, ಸರ್ಟಿಫಿಕೇಟ್‌ನ ಮೌಲ್ಯವನ್ನು ಚಾಲ್ತಿಯಲ್ಲಿರುವ ಅಂಚೆ ಕಛೇರಿ ಉಳಿತಾಯ ಬ್ಯಾಂಕ್‌ನ ಬಡ್ಡಿದರದೊಂದಿಗೆ ಕೊಡಲಾಗುವುದು.

- **ತೆರಿಗೆ ರಹಿತ ಬಡ್ಡಿ**

  ಆದಾಯ ತೆರಿಗೆ ನಿಯಮಗಳ ಸೆಕ್ಷನ್ 80–L ರಂತೆ, ಈ ಸರ್ಟಿಫಿಕೇಟ್‌ಗಳ ಮೇಲೆ ನೀಡುವ ಬಡ್ಡಿಯು ತೆರಿಗೆಯಿಂದ ಮುಕ್ತವಾಗಿದೆ.

- **ಗಿರವಿ ಇಡಬಹುದು**

  ಈ ಸರ್ಟಿಫಿಕೇಟ್‌ನ್ನು ಕೆಲವು ಬ್ಯಾಂಕ್‌ಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಹಾಗೂ ಸ್ಥಳೀಯ ಅಧಿಕಾರಿಗಳಲ್ಲಿ ಗಿರವಿ ಇಡಬಹುದು.

- **ಸರ್ಟಿಫಿಕೇಟ್ ಕೊಳ್ಳಲು ನಿಯಮಗಳು**

  18 ರಿಂದ 45 ವರ್ಷ ವಯಸ್ಸಿನಲ್ಲಿರುವವರು ಮಾತ್ರ ಈ ಸರ್ಟಿಫಿಕೇಟ್ ಅನ್ನು ಕೊಳ್ಳಬಹುದು. ಇವರು ತಾವು ಉತ್ತಮ ಆರೋಗ್ಯ ಹೊಂದಿದ್ದೇವೆಂದು ಘೋಷಿಸಬೇಕು.

  ಸರ್ಟಿಫಿಕೇಟ್‌ಗಳು ರೂ.500 ಹಾಗೂ ರೂ.1000 ಮೌಲ್ಯದಲ್ಲಿ ದೊರೆಯುತ್ತವೆ. ಒಬ್ಬರು ರೂ. 5000 ಕ್ಕಿಂತ ಹೆಚ್ಚಿನ ಮೌಲ್ಯದ ಸರ್ಟಿಫಿಕೇಟ್‌ಗಳನ್ನು ಖರೀದಿಸಲಾಗದು. ಈ ಸರ್ಟಿಫಿಕೇಟನ್ನು ಪುರುಷರು ಮತ್ತು ಮಹಿಳೆಯರೂ ಕೊಳ್ಳಬಹುದು.

  ಹತ್ತು ವರ್ಷದ ಸಾಮಾಜಿಕ ಭದ್ರತಾ ಯೋಜನೆಯ ಸರ್ಟಿಫಿಕೇಟ್‌ಗಳು ಎಲ್ಲಾ ಅಂಚೆ ಕಛೇರಿಗಳಲ್ಲಿ ಹಾಗೂ ಅಧಿಕೃತ ಏಜೆಂಟರಲ್ಲೂ ದೊರೆಯುತ್ತವೆ.



ಸಣ್ಣ ಉಳಿತಾಯಗಳ ನಿರ್ದೇಶನಾಲಯ

3ನೇ ಹಂತ, ಮಲ್ಟಿ ಸ್ಟೋರಿಡ್ ಬಿಲ್ಡಿಂಗ್

ಡಾ। ಅಂಬೇಡ್ಕರ್ ವೀಧಿ, ಬೆಂಗಳೂರು-560 001

ಜೀವವಿಮ ಸೌಲಭ್ಯವುಂಟು.

MCA/DSS/53D/KAN

ಮೈಸೂರಿನ ಪ್ರಗತಿಶೀಲ ಮಹಾರಾಣಿಯರು

ನೀತಾ ಶೇಷಗಿರಿರಾವ್

ಮೈಸೂರಿನ ಮಹಾರಾಜರು ಜ್ಞಾನಿಗಳು, ಮೇಧಾವಿಗಳು ಮತ್ತು ಎಲ್ಲಾ ವಿಚಾರದಲ್ಲಿಯೂ ಬಹಳ ಮುಂದುವರಿದವರು. ಇದು ಎಲ್ಲರಿಗೂ ಮನದಟ್ಟಾದ ವಿಚಾರ. ಅವರು ಎಂತಹ ಜನಜನಮನೋನುರಾಗಿಗಳೆಂದರೆ ಅವರ ಹೆಸರು. ಚಿತ್ರಪಟಗಳು ಮತ್ತು ಪ್ರತಿಮೆಗಳನ್ನು ಈಗಲೂ (ಆಗಿನ ಮೈಸೂರು) ರಾಜ್ಯದ ಮೂಲೆ ಮೂಲೆಗಳಲ್ಲೂ ಕಾಣಬಹುದು.

ಆದರೆ ೧೭೯೯ರ ನಂತರ ನೂರಿಪ್ಪತ್ತು ವರ್ಷಗಳ ಒಡೆಯರ ಮನೆತನದ ಆಳ್ವಿಕೆಯಲ್ಲಿ ಇಪ್ಪತ್ತು ವರ್ಷಗಳ ಕಾಲ ರಾಣಿಯವರೇ ರಾಜಕಾರ್ಯಭಾರವನ್ನು ವಹಿಸಿದ್ದರೆಂಬ ವಿಷಯ ಅನೇಕ ಜನರಿಗೆ ತಿಳಿದಿರಲಿಕ್ಕಿಲ್ಲ. ರೀಜೆಂಟರಾಗಲಿ, ಈ ಸಂಪ್ರದಾಯಬಂಧಿತ ಸ್ತ್ರೀಯರು ಪುರುಷರಷ್ಟೇ ಧೈರ್ಯ ಶೌರ್ಯಗಳಿಂದ ಕಾರ್ಯ-ಭಾರವನ್ನು ನೆರವೇರಿಸಿದರು. ಅನೇಕ ವರ್ಷಗಳ ಹಿಂದೆ ಈ ಹೆಂಗಸರು ಯಾವ ಅಪಾರ ದೂರ ದೃಷ್ಟಿಯಿಂದ ಮುಂದಾಲೋಚನೆ ಮಾಡಿ ತಮ್ಮ ದೇಶದ ಅಭ್ಯುದಯಕ್ಕಾಗಿ ಎಂತೆಂತಹ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಂಡು ಗಂಡಭೇರುಂಡವನ್ನು ಯಾವ ಉಚ್ಚ ಸ್ಥಾನಕ್ಕೆ ಏರಿಸಿದರೆಂಬುದನ್ನು ಅರಿಯಲು ಎರಡೇ ಉದಾಹರಣೆಗಳು ಸಾಕು.

ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನರ ಸಾವು ಮತ್ತು ಸೋಲಿನ ನಂತರ ಐದು ವರ್ಷದ ಹಸುಳೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರು ಸಿಂಹಾಸನವನ್ನು ಏರಿದರಾದರೂ, ರಾಜಕಾರ್ಯಗಳನ್ನು ಆತನ ದತ್ತು ಅಜ್ಜಿ [ಅಂದರೆ ಸ್ವಂತ ತಂದೆಯವರ ದತ್ತು ತಾಯಿ] ರಾಜಮಾತೆ ಲಕ್ಷ್ಮಿ ಅಮ್ಮಣ್ಣಿಯವರೇ ನೆರವೇರಿಸುತ್ತಿದ್ದರು. ಅವರ ದಿವಾನರು ಪೂರ್ಣಯ್ಯನವರು.

೧೮೦೬ನೇ ಇಸವಿಯ ಹೊತ್ತಿಗೆ ಶ್ರೀಮನ್ಮಹಾರಾಜರು ವಿವಾಹವಯಸ್ಕರಾದರೆಂದು ಪರಿಗಣಿಸಲ್ಪಟ್ಟರು. ವಿದ್ಯಾವಂತಳೂ ಸೌಂದರ್ಯವತಿಯೂ ಆದ ಅರಸು ಮನೆತನದ ಕುಮಾರಿ ದೇವಮ್ಮಣ್ಣಿಯನ್ನು ಸೂಕ್ತ ವಧುವಾಗಿ ಆಯ್ಕೆ ಮಾಡಲಾಯಿತು. ರಾಣಿಯಾಗುವುದಕ್ಕೆ ಅಗತ್ಯ ಗುಣವನ್ನೂ ಪಡೆದಿದ್ದ ಈ ಬಾಲಿಕೆಯಲ್ಲಿ

ಇದ್ದದ್ದು ಒಂದೇ ಕೊರತೆ.

ಕನ್ಯೆಗೆ 'ಅಮ್ಮ'ನವರ ಸ್ಪರ್ಶ ಇನ್ನೂ ಆಗಿರಲಿಲ್ಲ. ಸಿಡುಬಿನ ಸೋಂಕು ಒಮ್ಮೆಯೂ ತಟ್ಟದೆ ಇರುವಾಗ ಮಹಾರಾಜರ ಧರ್ಮಪತ್ನಿ ಅರ್ಥಾತ್ ಮೈಸೂರು ಮಹಾರಾಣಿ ಆಗುವುದು ಅಸಾಧ್ಯ ರಾಜಮನೆತನದ ಪುರಾತನ ಸಂಪ್ರದಾಯದ ಪ್ರಕಾರ.

ಮಹಾಮಾತೃಶ್ರೀ ಅವರು ಇಂತಹ ಸಣ್ಣ ವಿಚಾರಗಳಿಗೆ ಸೋತವರಲ್ಲ. ಮದರಾಸಿನ ಗವರ್ನರ್ ಆಗಿದ್ದ ಜನರಲ್ ಮೇಡೋಸ್ ಅವರು ಈಕೆಯನ್ನು "ರಾಣಾ ಲಕ್ಷ್ಮೀ ಅಮ್ಮಣ್ಣಿ" ಎಂದು ವಿನಾಕಾರಣ ಸಂಬೋಧಿಸಿರಲಿಲ್ಲ. ರಾಜಮಾತೆಯವರು ಬ್ರಿಟಿಷ್ ರೆಸಿಡೆಂಟ್ ಸಾಹೇಬರ ಸಲಹೆ ಕೇಳಿದರು.

ಮೇಜರ್ ವಿಲ್ಕ್ಸ್ ತಕ್ಷಣವೇ ಮರುತ್ತರ ಕಳಿಸಿದರು. "ಇತ್ತೀಚೆಗೆ ಇಂಗ್ಲಂಡಿನಲ್ಲಿ ಹಸುವಿನ ಸಿಡುಬಿನಿಂದ ತೆಗೆದ ಹಾಲನ್ನು ಸೂಜಿಯ ಮೂಲಕ ಮನುಷ್ಯರಿಗೆ ಪ್ರಯೋಗ ಮಾಡಿ ಈ ಅಂಟು ಜಾಡ್ಯದ ನಿರೋಧ ಮಾಡಲಾಗುತ್ತಿದೆ. ನೀವೂ ಹಾಕಿಸಬಹುದು" ಎಂದು ತಿಳಿಸಿದರು.

ರೆಸಿಡೆಂಟರ ಸರ್ಜನರೇ ವಧುವಿಗೆ ದೇವಿ ಹಾಕಿದರು. ಆರು ಗುಳ್ಳೆಗಳು ಚೆನ್ನಾಗಿ ಹೊಮ್ಮಿ ಹಾಲು ತುಂಬಿಕೊಂಡವು. ಕನ್ಯೆ ಹತ್ತನೇ ದಿನ ಗುಣಮುಖಳಾದಳು. ಸಿಡುಬಿನ 'ಅಮ್ಮ'ನವರ ಆಶೀರ್ವಾದ ಸಾಂಪ್ರದಾಯಿಕವಾಗಿ ದೊರೆಯಿತು.

ಡವೇಜರ್ ಮಹಾರಾಣಿಯವರು ಸಂತೋಷ ಭರಿತರಾಗಿ, ಇಂತಹ ಕಠೋರವಾದ ಅಂಟು ಜಾಡ್ಯಕ್ಕೆ ಇಷ್ಟು ಸುಲಭವಾದ ಪರಿಹಾರವೇ? ಎಂದು ಆಶ್ಚರ್ಯಚಕಿತರಾದರು. ವಿವಾಹ ಮಹೋತ್ಸವ ಸುಗಮವಾಗಿ ನೆರವೇರಿತು. "ಇನ್ನು ಮೇಲೆ ಪ್ರಜೆಗಳೆಲ್ಲರೂ ಸಿಡುಬುದೇವಿ ಹಾಕಿಸಿಕೊಳ್ಳತಕ್ಕದ್ದು," ಎಂದು ಹಳ್ಳಿ ಹಳ್ಳಿಗಳಲ್ಲಿಯೂ ಡಂಗುರ ಸಾರಿದರು.

ನೀವೇ ಯೋಚಿಸಿ ನೋಡಿ. ಜೆನ್ನರನು ವ್ಯಾಕ್ಸಿನೇಷನ್ ಕಂಡುಹಿಡಿದು ಕೇವಲ ಹತ್ತೇ ವರ್ಷಗಳಾಗಿದ್ದವು. ಯುರೋಪಿನಲ್ಲಿ ಸಹ ಅದಿನ್ನೂ ಪೂರ್ಣ ವಾಡಿಕೆಗೆ ಬಂದಿರಲಿಲ್ಲ. ಬ್ರಿಟಿಷ್ ಭಾರತದಲ್ಲಿಯೇ ಆಗಲಿ ಇತರ ಸಂಸ್ಥಾನಗಳಲ್ಲಿಯೇ ಆಗಲಿ ಈ ಆಚರಣೆ ರೂಢಿಗೆ ಬರಲು ಇನ್ನೂ ಅನೇಕ ವರ್ಷಗಳೇ ಬೇಕಾದವು. ಭಾರತ ಸರಕಾರದವರು ಸಿಡುಬಿನ ಹತೋಟಿ ಪ್ರಚಾರದಲ್ಲಿ ಮೈಸೂರು ರಾಜಮನೆತನದ ಉದಾಹರಣೆಯನ್ನೇ ಆದರ್ಶವಾಗಿ ಕೊಡಲಾರಂಭಿಸಿದರು.

ಬೇಕಾದರೆ ಇನ್ನೂ ೮೦ ವರ್ಷ ಹಿಂದೆ ಹೋಗೋಣ. ೧೮೯೦ ರ ವೇಳೆಗೆ ಭಾರತದಲ್ಲಿ ವಿದ್ಯುಚ್ಛಕ್ತಿ ಆಗಲೇ ಸ್ವಲ್ಪ ಉಪಯೋಗಕ್ಕೆ ಬಂದಿತ್ತು. ದೀಪ ಮತ್ತು ಅನೇಕ ವಿವಿಧ ಕಾರ್ಯಗಳಿಗೆ ಶಕ್ತಿಯನ್ನು ಬಳಸುತ್ತಿದ್ದರು. ಆದರೆ ಆ ಶಕ್ತಿಯೇ ಬೇರೆ. ನಾವೀಗ ಉಪಯೋಗಿಸುವುದೇ ಬೇರೆ. ಅದು ಡೈರೆಕ್ಟ್ ಕರೆಂಟ್. ಉಪಯುಕ್ತಕರವಾದರೂ ಡಿ.ಸಿ.ಯನ್ನು ಮೂರು ಕಿಲೋಮೀಟರ್ ಮೀರಿ ಒಯ್ಯುವ ಸಾಧ್ಯತೆ ಇರಲಿಲ್ಲ. ಏಕೆಂದರೆ ಡಿ.ಸಿ.ಯ ಉತ್ಪಾದನೆ ಸಾಗಾಟ ಮತ್ತು ಉಪಯೋಗ ಇವೆಲ್ಲ ಒಂದೇ ಒತ್ತಡದಲ್ಲಿ [ವೋಲ್ಟೇಜ್] ಆಗಬೇಕು. ಇದಕ್ಕಾಗಿ ಎರಡೆರಡು ಮೈಲಿಗೂ ಒಂದು ಉತ್ಪಾದನಾ ಕೇಂದ್ರ ಬೇಕು. ರಾಜಧಾನಿ ಕಲ್ಕತ್ತಾ ಪಟ್ಟಣದ ಮೂರು ಮೂಲೆಗಳಲ್ಲಿ ಮೂರು ಜನರೇಟಿಂಗ್ ಸ್ಟೇಷನ್ ಇದ್ದವು. ಈ ಕೇಂದ್ರಗಳಲ್ಲಿ ಉರಿಸಲಿಕ್ಕಾಗಿ ರಾಣಿಗಂಜನಿಂದ ಕಲ್ಲಿದ್ದಲಿನ ಸರಬರಾಜು ಆಗುತ್ತಿತ್ತು. ಆದರೆ ಗಣಿಗಳಿಂದ ಬಹು ದೂರದಲ್ಲಿರುವ ಮೈಸೂರು ರಾಜ್ಯದಲ್ಲಿ ವಿದ್ಯುತ್ತಿನ ಉತ್ಪಾದನೆ ತುಂಬಾ ವೆಚ್ಚದ್ದಾಗುತ್ತಿತ್ತು.

ಈ ಸಮಯದಲ್ಲಿ ಛಾರ್ಲ್ಸ್ ಸ್ಟೀನ್‌ಮೆಟ್ಸ್ ಎಂಬ ಅಮೇರಿಕನ್ ವೈಜ್ಞಾನಿಕ ಆಲ್ಟರ್‌ನೇಟಿಂಗ್ ಕರೆಂಟ [ಎ.ಸಿ.] ಪ್ರಯೋಗ ಮಾಡಿ, ಅದರ ಒತ್ತಡವನ್ನು ಟ್ರಾನ್ಸ್‌ಫಾರ್ಮರ್ ಮೂಲಕ ಯಾವ ಪ್ರಮಾಣಕ್ಕಾಗಲೀ ಏರಿಸಬಹುದು ಅಥವಾ ಇಳಿಸಬಹುದು ಎಂದು ತೋರಿಸಿಕೊಟ್ಟನು. ೧೮೯೪ ನೇ ಇಸವಿಯಲ್ಲಿ ನಯಾಗರಾ ಜಲಪಾತದಿಂದ ೪೨ ಕಿಲೊಮೀಟರ್

ದೂರ ಬೆಂಗಳೂರ ನಗರಕ್ಕೆ ಎ. ಸಿ. ವಿದ್ಯುತ್ ಸರಬರಾಜು ಆರಂಭವಾಯಿತು.

ಈ ಸಮಯದಲ್ಲಿ ಮೈಸೂರಿನ ಮಹಾರಾಜರು ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಆತನ ತಾಯಿ ಕೆಂಪನಂಜಮ್ಮಣ್ಣಿ ಅವರು ರೀಜೆಂಟರಾಗಿ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರು. ಆಕೆಗೆ ಎ. ಸಿ. ಯ ವೈಶಿಷ್ಟ್ಯ ಕೇಳಿಬಂತು. ತಕ್ಷಣವೇ ಶಿವಸಮುದ್ರದ ಕಾವೇರಿ ಜಲಪಾತದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಯೋಜನೆಯನ್ನು ಆರಂಭಿಸಿದರು. ದಿವಾನ್ ಸರ್ ಶೇಷಾದ್ರಿ ಅಯ್ಯರ್ ಆಸಕ್ತಿವಹಿಸಿ ಈ ಕಾರ್ಯದಲ್ಲಿ ತೊಡಗಿದರು. ೧೯೦೦ ನೇ ಆಗಸ್ಟ್‌ನಲ್ಲಿ ಜನರಲ್ ಎಲೆಕ್ಟ್ರಿಕ್ ಕಂಪನಿಗೆ ವಿದ್ಯುಜ್ಜನಕಗಳ ಸರಬರಾಜಿಗೂ ಒಂದು ಸ್ವಿಸ್ ಕಂಪನಿಗೆ ಟರ್ಬೈನುಗಳಿಗೂ ಕಾಂಟ್ರ್ಯಾಕ್ಟ್ ಕೊಡಲಾಯಿತು.

ಕೆಲಸ ತುಂಬಾ ವೇಗದಿಂದ ಮುಂದುವರಿಯಿತು. ಜೂನ್ ೧೯೦೨ ರ ಮೂವತ್ತನೇ ತಾರೀಖು ಶಿವಸಮುದ್ರದಲ್ಲಿ ಸ್ವಿಚ್ ಹಾಕಿದರು. ೧೫೦ ಕಿಲೋಮೀಟರ್ ದೂರದ ಕೋಲಾರ ಚಿನ್ನದ ಗಣಿಗಳಲ್ಲಿ ಮೋಟಾರುಗಳು ತಿರುಗಲಾರಂಭಿಸಿದವು. ಕೆಲವು ತಿಂಗಳ ನಂತರ ಬೆಂಗಳೂರಿನಲ್ಲಿ ದೀಪಗಳು ಉಜ್ವಲಿಸಿದವು. ಮತ್ತೆ ಕೆಲವು ತಿಂಗಳುಗಳ ಮೇಲೆ ಮೈಸೂರು ಅರಮನೆಯಲ್ಲಿ ಪ್ರಕಾಶಮಾನವಾದ ದೀಪಗಳು ರಮ್ಯವಾಗಿ ಬೆಳಗಿದುವು.

ಇನ್ನೂ ಅನೇಕ ವರ್ಷಗಳಾದ ಮೇಲೆ ಎ. ಸಿ. ಶಕ್ತಿ ಬ್ರಿಟಿಷ್ ಭಾರತದಲ್ಲಿ ಆಚರಣೆಗೆ ಬಂದ ನಂತರವೇ ೫೦ ಅವರ್ತಗಳು ಭಾರತಾದ್ಯಂತ ಏಕೈಕ ಫ್ರೀಕ್ವೆನ್ಸಿ ಆಗಿ ನಿರ್ಧಾರವಾಯಿತು. ಮೈಸೂರು ದೇಶದಲ್ಲಿಯೂ ಇದು ಈಗ ಬಳಕೆಯಲ್ಲಿದೆ. ಆದರೆ ಅಮೇರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿಯವರು ಉದ್ಘಾಟಿಸಿದ ೬೦ ಮತ್ತು ೨೫ ಆವರ್ತಗಳ ವಿದ್ಯುಜ್ಜನಕಗಳು ಮೊನ್ನೆ ಮೊನ್ನೆಯವರೆಗೂ ಇದ್ದವು.

ನೀವು ಯಾವಾಗಲಾದರೂ ಶರಾವತಿಯಿಂದ ನೂರಾರು ಕಿಲೋಮೀಟರ್ ದೂರ ಜಲಶಕ್ತಿಯನ್ನು ಸಾಗಿಸುವ ಪೈಲಾನ್ ಕಂಬಗಳನ್ನು ವೀಕ್ಷಿಸಿದಾಗಲೇ ಆಗಲಿ, ಅಥವಾ ಪೃಥ್ವಿಯಾದ್ಯಂತ ಸಿಡುಬಿನ ನಿರ್ಮೂಲದ ವಿಷಯವನ್ನು ವೃತ್ತಪತ್ರಿಕೆಗಳಲ್ಲಿ ಓದಿದಾಗಲೇ ಆಗಲಿ ಕ್ಷಣ ಮಾತ್ರ ಈ ಇಬ್ಬರು ಮಹಿಳೆಯರ ದೂರದೃಷ್ಟಿಯನ್ನು ನೆನಪಿಸಿಕೊಳ್ಳಿ. ಅವರು ನೋಡುವುದಕ್ಕೆ ಹೇಗಿದ್ದರು ಎಂಬುವುದು ಕೂಡ ನಮಗೆ ಗೊತ್ತಿಲ್ಲ. ಆದರೆ ಅವರು ಬ್ರಿಟಿಷ್ ಸಮ್ರಾಟರಿಗೂ ಮೀರಿದ ಪ್ರಗತಿಶೀಲ ಮುಂದಾಲೋಚನೆಯ ಮೂಲಕ ತಮ್ಮ ಪ್ರಜೆಗಳ ಜೀವನ ಸುಖ ಸೌಕರ್ಯಗಳನ್ನೇ ಧ್ಯೇಯವಾಗಿಟ್ಟುಕೊಂಡು ದೃಢ ಸಂಕಲ್ಪದಿಂದ ಬಹುಕಾರ್ಯಗಳನ್ನು ನೆರವೇರಿಸಿದರು. ✡



ಮನೆ ಎಂದರೆ ನಿಮ್ಮ ಹೆಂಡತಿ-ಮಕ್ಕಳೊಂದಿಗೆ ಇರುವ ಜಾಗ ಎಂದು ನೀವು ತಿಳಿದಿದ್ದರೆ ಸರ್ವಥಾ ಅದು ತಪ್ಪು ಭಾವನೆ. ನಿಮಗೊಂದಿಷ್ಟು ಗೌರವ (ಹೆಂಡತಿಯಿಂದ) ಆನಂದ (ಮಕ್ಕಳಿಂದ) ಹಾಗೂ ಅಧಿಕಾರ (ಇವರ ಮೇಲೆ) ಸಿಗುವ ಸ್ಥಳವೇ ನಿಮ್ಮ ಮನೆ.

'ಹಾಗಾದರೆ ಊರಿಗೊಂದು ಮನೆ ಮಾಡು' ಎನ್ನುತ್ತಾರಲ್ಲ ಯಾಕೆ? ಒಂದು ಕಡೆಯೇ ಗೌರವ, ಆನಂದ, ಅಧಿಕಾರಿಗಳು ಸಿಗದಿದ್ದರೆ ಬೇರೆ ಬೇರೆ ಕಡೆಯಾದರೂ ಸಿಗಲಿ ಎಂಬ ಉದ್ದೇಶದಿಂದಲೇ?

ಆದರೆ ಇವುಗಳನ್ನು ಅರಸಲೂ ಪುರುಸೊತ್ತಿಲ್ಲದ ಈ ದಿನಗಳಲ್ಲಿ 'ಇಂಥ ಮನೆ' ಎಲ್ಲಿ ಸಿಕ್ಕಬೇಕು? ಮನೆ ಸಿಗುವುದು ಈ ದಿನಗಳಲ್ಲಿ ಅಷ್ಟು ಸುಲಭವೆ? —ಅಸ ಛವಿ

ಅವು ನಮ್ಮ ಜೀವನದ ಪ್ರತಿಬಿಂಬಗಳು ಎನ್ನುತ್ತವೆ. ವೈದ್ಯಕೀಯ ಸಂಶೋಧನಗಳು

ನಿಮ್ಮತನ ತೋರಿಸುವ ನಿದ್ರಾಭಂಗಿಗಳು

ಕೊಪ್ಪದ ನಾಗೇಶ

ನಾವು ಜಾಗ್ರತಾವಸ್ಥೆಯಿಂದ ನಿದ್ರಾವಸ್ಥೆಗೆ ಜಾರುತ್ತಿದ್ದಂತೆ, ಒಂದು ರೀತಿಯ ಜೀವನ ಕ್ರಮದಿಂದ ಮತ್ತೊಂದು ರೀತಿಯ ತೀರಾ ಭಿನ್ನವಾದ ಪ್ರಪಂಚಕ್ಕೆ ಕಾಲಿಡುತ್ತೇವೆ.

ನಿಜವಾಗಿ ನಾವು ಮಲಗುವ ರೀತಿಯೇ ನಾವಿರುವ ರೀತಿ. ನಾವು ಹೊಟ್ಟೆ ಕೆಳಗಾಗಿ ಮಗ್ಗುಲಾಗಿ ಅಥವಾ ಅಂಗಾತವಾಗಿ ಮಲಗುತ್ತೇವೆ. ಕಾಲುಗಳನ್ನು ಅಗಲಿಸಿರಬಹುದು ಅಥವಾ ಬಿಗಿಯಾಗಿ ಮಡಿಚಿರಬಹುದು. ಕೈಗಳನ್ನು ಹರಡಿರಬಹುದು ಇಲ್ಲವೆ ಬಿಗಿಯಾಗಿ ಮಡಿಚಿರಬಹುದು. ಈ ರೀತಿ ನಿದ್ರಾಭಂಗಿಗಳು ಬದಲಾಗುತ್ತಿರುವ ನಮ್ಮ ಜೀವನ ಕ್ರಮದ ಕಥೆ ಹೇಳುತ್ತವೆ.

'ನಾನು ಮಲಗಿದ್ದಾಗ ಹೇಗೆ ಮಲಗಿದ್ದೆ' ಎಂಬುದನ್ನು ಗಮನಿಸುವುದು ಅಷ್ಟೇನೂ ಕಷ್ಟಕರವಾದ ವಿಚಾರವಲ್ಲ. ಮಧ್ಯ ಎಚ್ಚರವಾದರೆ ಹೇಗೆ ಮಲಗಿರುವೆನೆಂಬುದನ್ನು ಗಮನಿಸಿ, ಕೊನೆಗೆ ಬೆಳಿಗ್ಗೆ ಏಳುವಾಗ ನೀವು ಹೇಗೆ ಮಲಗಿರುವಿರೆಂಬುದನ್ನು ನೆನಪಿಡಲು ಮರೆಯಬೇಡಿ.

ಒಂದು ರಾತ್ರಿಯ ಅಂತರದಲ್ಲಿ ಒಬ್ಬ ವ್ಯಕ್ತಿ ಹತ್ತು ಹನ್ನೆರಡು ಭಂಗಿಗಳಲ್ಲಿ ಮಲಗಿರಬಹುದು. ಇವುಗಳಲ್ಲಿ ಕೆಲವು ಭಂಗಿಗಳು ಅಲ್ಪಾವಧಿಯವಾಗಿದ್ದು ಬದಲಾಗುತ್ತಿರಬಹುದು. ವ್ಯಕ್ತಿಯು ಮಲಗುವಾಗ ಹಾಗೆಯೇ ಪೂರ್ಣ ಚೇತನ ತನ್ನದೇ ಎನ್ನುವ ಹಾಗೆ ಮಲಗಿರಬಹುದು. ನಿದ್ರೆ ಹೋಗುತ್ತಾ ಒಂದು ಭಂಗಿಯಿಂದ ಬಾಗಿ ಮಗ್ಗುಲಾಗಿ ಮಲಗಿಬಿಡಬಹುದು. ಆಗ ಆ ವ್ಯಕ್ತಿ ತಾನೆ ತನ್ನ ಜೀವನದ ಒಡೆಯ ಎಂಬ ಅಭಿಪ್ರಾಯವನ್ನು ತಳೆದಿರುತ್ತಾನೆ. ನಿದ್ರೆ ಹೋಗುತ್ತಲೇ ಆ ವ್ಯಕ್ತಿಯ ಹಗಲ ಜೀವನ ಕ್ರಮ ಬಯಲಿಗೆ ಬರುತ್ತದೆ.

ಈ ಕೆಳ ಕಂಡ ಎಂಟು ರೀತಿಯ ನಿದ್ರಾಭಂಗಿಗಳಲ್ಲಿ ನಿಮ್ಮ ಸ್ವಂತದ ಮಲಗುವ ಭಂಗಿ ಯಾವುದೆಂದು ನೋಡಿಕೊಳ್ಳಿ. ಅಂದರೆ ಒಂದು ರೀತಿ ಮತ್ತೊಂದು ರೀತಿಗಿಂತ ಮೇಲೆ ಎಂದೇನೂ ಅರ್ಥವಲ್ಲ. ನೆನಪಿಡಿ ನಾವು ಯಾವ ರೀತಿ ಮಲಗುತ್ತೇವೋ ಅದು ಕೇವಲ ನಮ್ಮ ಸಾಮಾನ್ಯ ಜೀವನದ ಅವಸ್ಥೆಯನ್ನು ತೋರಿಸುತ್ತದೆ. ನಮ್ಮ



೧



೨



೩



೪

ಸುಖಿಗಳು ದುಃಖಿಗಳು ಪ್ರೇಮಿಗಳು ಮತ್ತು ಭಯಂಗಳು ಇತ್ಯಾದಿ. ನೀವು ಧಾರಾಳವಾಗಿ ನಿಮ್ಮ ಮಲಗುವ ಕ್ರಮಗಳನ್ನು ನಿಮಗೆ ಸರಿ ಕಂಡಂತೆ ಅನುಸರಿಸಿಕೊಳ್ಳಿ. ಆದರೆ ಇದೇ ಕಾರಣದಿಂದ ಮಾತ್ರ ನಿಮ್ಮ ನಿದ್ರಾನಾಶ ಮಾಡಿಕೊಳ್ಳಬೇಡಿ.

ಗರ್ಭಸ್ಥ ಶಿಶುವಿನಂತೆ

ಮಲಗಿದ್ದವರು ಮಗ್ಗುಲಾಗಿ ಕೈಕಾಲುಗಳನ್ನು ಮಡಿಚಿಕೊಂಡಿರುತ್ತಾರೆ. ಅಲ್ಲದೆ ಒಂದು ಬಟ್ಟೆಯನ್ನೊ ಒಂದು ತಲೆದಿಂಬನ್ನೊ ಹೊಟ್ಟೆಗೆ ಅಮುಕಿ ಹಿಡಿದಿರುತ್ತಾರೆ. ಮೊಳಕಾಲುಗಳನ್ನು ಮೇಲಕ್ಕೆಳೆದುಕೊಂಡು ಕಾಲುಗಳನ್ನು ಜೋಡಿಸಿಟ್ಟಿರುತ್ತಾರೆ. ಕೈಗಳನ್ನು ತಲೆದಿಂಬಿನ ಸುತ್ತಲೂ ಇಟ್ಟಿರುತ್ತಾರೆ. ಅಥವಾ ತಮ್ಮ ಹೊಟ್ಟೆಯನ್ನೆ ಹಿಡಿದುಕೊಂಡಿರುತ್ತಾರೆ. ಇಂಥವರು ತಮಗೆ ಬಲವಾದ ರಕ್ಷಣೆ ಬೇಕು ಎಂದು ಆಶಿಸುತ್ತಾರೆ. ಅವರು ತಮಗೆ ಸಾಕಷ್ಟು ರಕ್ಷಣೆ ಸಿಗುವಂಥ ಬಾಂಧವ್ಯಕ್ಕೆ ಜೋತು ಬಿದ್ದಿರುತ್ತಾರೆ. (ಚಿತ್ರ : ೧).

ಮಗ್ಗುಲಾಗಿ ಮಲಗುವಿಕೆ

ಇದು ತೀರಾ ಸಾಮಾನ್ಯವಾಗಿ ಮಲಗುವ ರೀತಿ. ಇದನ್ನು ಅನುಸರಿಸುವವರು, ಜಗತ್ತಿನೊಂದಿಗೆ ಬುದ್ಧಿವಂತಿಕೆಯ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಅಂಥವರು ಸಮಚಿತ್ತರೂ ಆಗಿರುತ್ತಾರೆ. ಕಾಣದ ಭವಿಷ್ಯತ್ತಿನ ಬಗ್ಗೆ ರಕ್ಷಣೆ ಬೇಡುವುದಿಲ್ಲ. ಈ ರೀತಿ ಮಲಗುವಾತ ಮಗ್ಗಲು ಬದಲಾಯಿಸಬಹುದು. ಈ ರೀತಿ ಮಲಗುವವರಿಗೆ ಶಾರೀರಿಕ ವಿಶ್ರಾಂತಿ ದೊರೆಯುತ್ತದೆ. (ಚಿತ್ರ : ೨).

ಸ್ಫಿಂಕ್ಸ್ ಭಂಗಿ

ಈ ರೀತಿ ಹೆಚ್ಚಾಗಿ ಮಕ್ಕಳು ಮಲಗುತ್ತಾರೆ. ದೊಡ್ಡವರೂ ಒಮ್ಮೊಮ್ಮೆ ಹೀಗೆ ಮಲಗುವದುಂಟು. ತಮ್ಮ ಮೊಳಕಾಲುಗಳನ್ನು ಮಡಿಚಿ ಬೋರಲಾಗಿ ಮಲಗುತ್ತಾರೆ. ಇವರ ಬೆನ್ನು ಮೇಲಕ್ಕಿರುತ್ತದೆ. ಅವರು ಸಾಧ್ಯವಾದಷ್ಟು

ಜಾಗ್ರತೆಯಾಗಿ ತಮ್ಮ ದೈನಂದಿನ ಕೆಲಸಕ್ಕೆ ಹೊರಡಬೇಕೆಂಬ ಆತುರವುಳ್ಳವರಾಗಿರುತ್ತಾರೆ. ಏಕೆಂದರೆ, ಅವರು ದೈನಂದಿನ ಕಷ್ಟಕಾರ್ಪಣ್ಯಗಳನ್ನೆದುರಿಸಲು ಸಿದ್ಧರಾಗಿಯೇ ಇರುತ್ತಾರೆ. (ಚಿತ್ರ : ೩).


೩

ರಾಜನಿದ್ರೆ

ಒಂದು ಹಳೆಯ ಗಾದೆ ಹೇಳುತ್ತದೆ, "ಅರಸು ಬೆನ್ನ ಮೇಲೆ ಮಲಗುತ್ತಾನೆ, ಬುದ್ಧಿವಂತ ಮಗ್ಗುಲಾಗಿ ಮಲಗುತ್ತಾನೆ. ಶ್ರೀಮಂತ ಬೋರಲಾಗಿ ಮಲಗುತ್ತಾನೆ," ಎಂದು. ಯಾರು ರಾಜಾಸನದಲ್ಲಿ ಮಲಗುತ್ತಾರೋ ಅವರು ಆ ರಾತ್ರಿ ನಿದ್ರೆಯ ರಾಜ ಅಥವಾ ರಾಣಿಯೇ ಸರಿ. ತಮ್ಮ ಜಾಗ್ರತಾವಸ್ಥೆಯ ಪ್ರಪಂಚದಲ್ಲೂ ಅವರು ರಾಜರಂತೆಯೇ ಮುನ್ನಡೆಯುತ್ತಾರೆ. ಇವರು ತಮ್ಮ ಬಾಲ್ಯಾವಸ್ಥೆಯಲ್ಲಿ ತಂದೆ ತಾಯಿಗಳ ಪ್ರೀತಿಯ ಬಿಂದುವಾಗಿದ್ದವರು. ಇಂಥವರು ಸಾಮಾನ್ಯವಾಗಿ ಸುಭದ್ರತೆ, ಆತ್ಮವಿಶ್ವಾಸ ಮತ್ತು ಬಲಯುತವಾದ ವ್ಯಕ್ತಿತ್ವ ಹೊಂದಿರುತ್ತಾರೆ. ಇವರು ಎಚ್ಚರವಾಗಿರಲಿ, ನಿದ್ರೆ ಮಾಡುತ್ತಿರಲಿ ಎಲ್ಲಾ ವಿಚಾರದಲ್ಲೂ ತೆರೆದ ಮನಸ್ಸುಳ್ಳವರಾಗಿರುತ್ತಾರೆ. ಕೊಡುವ ತೆಗೆದುಕೊಳ್ಳುವುದರಲ್ಲಿ ವಿಚಾರ ಸಂತಸವುಳ್ಳರಾಗಿರುತ್ತಾರೆ. (ಚಿತ್ರ ೪)


೪

ಬಿಲ್ಲಿನಂತೆ ಬಾಗಿ ಮಲಗುವುದು

ನಾವು ನಿದ್ರೆಯಲ್ಲಿ ಯಾವ ಪ್ರಕಾರ ಕಾಲುಗಳನ್ನು ಇಟ್ಟುಕೊಂಡಿರುತ್ತೇವೋ ಅದು ಜೀವನದಲ್ಲಿಯ ನಮ್ಮ ನಿಲುವನ್ನು ತೋರಿಸುತ್ತದೆ. ಉದಾಹರಣೆಗೆ, ಯಾರಿಗೆ ಕಾಣದ ಭವಿಷ್ಯತ್ತಿನ ಬಗ್ಗೆ ಭಯವಿರುತ್ತದೋ ಅವರು ಹಾಸಿಗೆಯ ಮೇಲಿನ ಬೆಡ್‌ಷೀಟಿನೊಳಗೆ ತಮ್ಮ ಕಾಲುಗಳನ್ನು ತೂರಿಸುತ್ತಾರೆ. ಯಾವಾಗಲೂ ಪಾರಾಗುವ ದಾರಿಯನ್ನು ಹುಡುಕುತ್ತಿರುವವರು. ತಮ್ಮ ಕಾಲುಗಳನ್ನು ಹಾಸಿಗೆಯ ಹೊರಗೆ ಸಡಿಲವಾಗಿಟ್ಟಿರುತ್ತಾರೆ. ಈ ರೀತಿ ಮಲಗುವವರು ಯಾವಾಗಲೂ ಚಿಂತಾಕ್ರಾಂತರಾಗಿರುತ್ತಾರೆ. ಪ್ರಗತಿಯ ಮಾರ್ಗ ಕಾಣದವರಾಗಿರುತ್ತಾರಲ್ಲದೆ ವೈಯಕ್ತಿಕ ಸಂಬಂಧಗಳನ್ನು


೫


೬

ತೊಡಕು ಮಾಡಿಕೊಂಡಿರುತ್ತಾರೆ. (ಚಿತ್ರ ೫).

ಮುದುರಿ ಮಲಗುವುದು

ತಮ್ಮ ಹೊದಿಕೆಯನ್ನು ಪೂರ್ಣ ಹೊದ್ದು ಮುದುರಿಕೊಂಡು ರಾತ್ರಿಯನ್ನು ಕಳೆಯಲು ಸಿದ್ಧರಾಗಿರುವಂಥವರು ಜಗತ್ತಿನಿಂದ ಅಡಗಿ ಕುಳಿತಿರುತ್ತಾರೆ. ತಮ್ಮ ಮುಕ್ಕಲು ಸ್ವಭಾವ ತೋರಿಸಿ ಕೊಡುತ್ತಾರೆ. ಅವರು ಜೀವನವನ್ನು ಎದುರಿಸಲು ಸಾಮಾನ್ಯವಾಗಿ ಹೆದರುತ್ತಾರೆ. ಉದಾಹರಣೆಗೆ ಹೇಳುವುದಾದರೆ ಸಮಾರಂಭಗಳಲ್ಲಿ ಒಂದು ಮೂಲೆ ಹಿಡಿದು ಕುಳಿತಿರುತ್ತಾರೆ. (ಚಿತ್ರ ೬).

ಸಮತೋಲ ನಿದ್ರೆ

ಕೆಲವರು ಮಗ್ಗುಲಾಗಿ ಮಲಗಿ ಒಂದು ಕಾಲಿನ ಮೇಲೆ ಇನ್ನೊಂದು ಕಾಲನ್ನು ಸರಿಯಾಗಿ ಇಟ್ಟಿರುತ್ತಾರೆ. ಒಂದು ಕೈಮೇಲೆ ಇನ್ನೊಂದು ಕೈಯನ್ನು ಇಟ್ಟಿರುತ್ತಾರೆ. ಈ ರೀತಿ ಮಲಗುವಿಕೆಯು ಆ ಜನರ ಜೀವನದಲ್ಲಿರುವಂಥ ಸಮತೋಲನವನ್ನು ತೋರಿಸುತ್ತದೆ. ಮಲಗುವಾಗಲೂ ಎಚ್ಚರವಾಗಿರುವಾಗಲೂ ಇಂಥವರು ಜಗತ್ತಿನ ಜೊತೆಗೆ ಸಮತೋಲನವಿಟ್ಟುಕೊಂಡಿರುತ್ತಾರೆ. ಇವರು ಇತರರ ಅಪೇಕ್ಷೆಯಂತೆ ತಮ್ಮ ನಿರ್ಧಾರಗಳನ್ನು ಬದಲಾಯಿಸುವುದಿಲ್ಲ. (ಚಿತ್ರ ೭).

ಬೆನ್ನು ಮೇಲಾಗಿ ಮಲಗುವಿಕೆ

ಇವರು ಇಡೀ ಹಾಸಿಗೆಯ ಜಾಗವನ್ನು ಅಪೇಕ್ಷಿಸುತ್ತಾರಲ್ಲದೆ ತಮ್ಮದಾಗಿ ಮಾಡಿಕೊಳ್ಳುತ್ತಾರೆ. ಆಕ್ರಮಿಗಳಾಗದಂತೆ ಜಾಗರೂಕರಾಗಿರುತ್ತಾರೆ. ಅದೇ ಹಟದಿಂದ ತಮ್ಮ ಜಾಗೃತಾವಸ್ಥೆಯ ಆಗುಹೋಗುಗಳನ್ನು ನಿಯಂತ್ರಿಸುವ ಪ್ರಯತ್ನ ಮಾಡುತ್ತಾರೆ. ಅನಪೇಕ್ಷಿತಗಳನ್ನು ಅಪೇಕ್ಷಿಸುವುದಿಲ್ಲ; ಅಲ್ಲದೆ ಒಂದು ವೇಳೆ ಅದು ಒದಗಿದರೆ ತಪ್ಪಿಸಲು ತಮ್ಮ ಜೀವನ ಕ್ರಮಗಳನ್ನು ಹೊಂದಿಸಿಕೊಳ್ಳುತ್ತಾರೆ. ಅವರು ಯಾವಾಗಲೂ ಸಮಯನಿಷ್ಠರಾಗಿರುತ್ತಾರೆ. ಸಣ್ಣ ವಿಚಾರಗಳ ಕಡೆಗೆ ಗಮನ ಕೊಡುವುದಿಲ್ಲ. (ಚಿತ್ರ ೮).



ನಿದ್ರೆಯನ್ನು ಮೊಟ್ಟಮೊದಲ ಸಲ ಕಂಡುಹಿಡಿದಾತನಿಗೆ ನನ್ನ ನಮನ

—'ಡಾವ್‌ಕ್ಯುಹೋ'ದಿಂದ

ಎಷ್ಟು ಅಚ್ಚರಿಯದು ಈ ಚಿರನಿದ್ರೆ, ಸಾವೆಂಬರಲ್ಲ ಜನ- ಅದು ನಿದ್ರೆಯೆ ಅಣ್ಣ!

— ಶೆಲಿ

ಪತ್ರಿಕೆಯಲ್ಲೊಂದು ನಾಟಕ ವಿಮರ್ಶೆ.

"...ತಂಡ ಅಭಿನಯಿಸಿದ 'ನಿದ್ರೆ' (ರಚನೆ-ನಿರ್ದೇಶನ:' ಸೋಜಾ) ಒಂದು ವಿನೂತನ ಪ್ರಯೋಗ ಹಾಗೂ ಅವಿಸ್ಮರಣೀಯ ಅನುಭವ. ಕಲಾವಿದರೆಲ್ಲರದೂ ಹದವರಿತ ಅಭಿನಯ. ಸಹಜವಾಗೇ ನಟಿಸಿದರು. ಆದರೆ ತುಂಬ ಲೇಟಾಗಿ (ರಾತ್ರಿ ೧೧-೪೫ ಕ್ಕೆ) ಶುರುವಾದ ಈ ನಾಟಕದಲ್ಲಿ ಅಭಿನಯಿಸಿದ ಕಲಾವಿದರೆಲ್ಲ ಮೊದಲು 'ಪಾರ್ಟಿ' ಎಂಬ ನಾಟಕದಲ್ಲಿ ಕೂಡ ಚೆನ್ನಾಗಿ ಅಭಿನಯಿಸಿದ್ದರಂತೆ. ಆ ಪ್ರಯೋಗ ಮುಗಿಯುವುದೇ ತಡವಾದದ್ದು ಈ ಪ್ರಯೋಗಕ್ಕೆ ಹೆಚ್ಚು ಪ್ರಯೋಜನವಾಯಿತು. ಕಲಾವಿದರೆಲ್ಲ 'ಪಾರ್ಟಿ' ಮುಗಿಸಿ ನೇರ ರಂಗಕ್ಕೆ ಬಂದು 'ನಿದ್ರೆ'ಗೆ ತೊಡಗಿದರು. ನೋಡಲು ಹೋದ ನಾವೂ ಅದು ಚೆನ್ನಾಗಿ ಪ್ರದರ್ಶನಗೊಳ್ಳಲು ಸಹಕರಿಸಿದೆವು. ನಾಟಕ ಮುಗಿದಾಗ ಬೆಳಗಿನ ಆರು ಗಂಟೆ.

"ಇಂಥ ಅತ್ಯುತ್ತಮಪ್ರದರ್ಶನ ನೀಡಿದ', ಸೋಜಾ ಅಭಿನಂದನಾರ್ಹರು..."

ಜಾರಿಯೂ ಮೇಲೇರಿದ ಅಹಲ್ಯೆ

ಅಜ್ಜಂಪುರ ಜಿ. ಸೂರಿ

ಚಾವಡಿಯು ತುಂಬ ಜನ ಕುಳಿತಿದ್ದರು. ಅವರ ಪಕ್ಕದಲ್ಲೊಂದು ಬೇವಿನ ಮರ. ನೆರಳಿನಲ್ಲಿ ಕುಳಿತಿದ್ದವರ ದೃಷ್ಟಿಯೆಲ್ಲ ಚಾವಡಿ ನಾಯಕರುಗಳ ಮೇಲಿತ್ತು. ಹೆಂಗಸರ ದೊಡ್ಡ ಗುಂಪೊಂದು ಚಾವಡಿಯ ಪಕ್ಕದಲ್ಲಿ ಬೀಡು ಬಿಟ್ಟಿತ್ತು. ತಿಪ್ಪಜ್ಜ "ಬಿಳಿ ಬೇಕೇನಮ್ಮಾ ಬಿಳೀ...ೀ" ಎಂದು ಕೂಗುತ್ತ ಊರೆಲ್ಲ ಸುತ್ತಿ ಸಾಕಾಗಿ ಅತ್ತ ಬಂದ. ಬೆಳಗಿನಿಂದ ಬೋಣಿಗೆ ಸಹ ಆಗಿರಲಿಲ್ಲ.

"ಊರೆಲ್ಲ ಇಲ್ಲಿ ಕುಂತ್ರೆ ಮನೆಗಳ ಹತ್ರ ನನ್ನ್ಯಾರು ಕರೆದಾರು?" ಎಂದುಕೊಳ್ಳುತ್ತ ಬೇವಿನ ಮರದ ಕಟ್ಟೆಯ ಮೇಲೆ ಅಸಿವೆಮಲ್ಲಾರ ಇಳಿಸಿದ. ತಲೆಗೆ ಸುತ್ತಿದ್ದ ವಸ್ತ್ರದಿಂದ ಮುಖ, ಕತ್ತು ಒರೆಸಿಕೊಂಡು ಗಾಳಿ ಹಾಕಿಕೊಳ್ಳುತ್ತ ಕುತೂಹಲದಿಂದ ಚಾವಡಿಯತ್ತ ಹೊರಟ. ಚಾವಡಿ ಯಜಮಾನರೆಲ್ಲ ಆತ್ತಿತ್ತ ಸರಿದಾಡಿ "ಬಾ ತಿಪ್ಪಜ್ಜ ಕುಂತ್ಕ"ಎಂದರು.

ತಿಪ್ಪಜ್ಜ ಕುಳಿತುಕೊಂಡ. ಆತನೆಂದರೆ ಎಲ್ಲರಿಗೂ ಅಭಿಮಾನ. ಮೇಲಾಗಿ ಹಳೆಯ ಕಾಲದ ಮನುಷ್ಯ. ಕೂಲಿ ಮಠದಲ್ಲಿ ಕಲಿತು ಅಮರಕೋಶ, ರಾಮಾಯಣ, ಮಹಾಭಾರತ ಓದಿದವ. ಬುದ್ಧಿವಂತ. ಮೇಲಾಗಿ ಆತ್ಮಜ್ಞಾನಿ. ಯಾರೋ ಪಕ್ಕದ ಚೊಂಬಿನಿಂದ ನೀರು ಬಗ್ಗಿಸಿ ಕೊಟ್ಟರು. ಅಜ್ಜ ನೀರು ಕುಡಿದ. ಹಾಯೆನಿಸಿತು. ಒಮ್ಮೆ ಸುತ್ತಲೂ ನೋಡಿ,

"ಏನಪ್ಪಾ, ಊರೆಲ್ಲ ಸೇರ್ಯೆತೆ! ಏನ್ಸಮಾಚಾರ?" ಎಂದು ಕೇಳಿದ.

"ಏನಿಲ್ಲ ತಿಪ್ಪಜ್ಜ, ಇತಾನರಲ್ಲಿಪ್ಪ ಊರಿಗೊಂದ ಹೊಲಗೇರಿ ಅಂಯ್ತ ಸಲ್ವಲ್ಲದ ನನ್ಮಕ್ಳು." –ಎಂದು ಆನೊಂದು ರೀತಿ ರಾಗವಾಗಿ ಹೇಳಿದ ಕರಿಯಪ್ಪ ಎಲೆಯ ಬೆನ್ನಿನ ನರ ಮುಯ್ಬತ್ತ. ಅಷ್ಟರಲ್ಲಿ ನಿಂಗಣ್ಣ,

"ಇನ್ನೂ ಮುಚ್ಚಿಂಬದೇನೈತೆ ತಿಪ್ಪಜ್ಜ, ಅಲ್ನೋಡು, ಅಲ್ಲಿ ಕುಪ್ಪಲ್ಲಿದ್ರು ಕುಂತವ್ಳಲ್ಲ ಚಿನಾಲಿ ಮುಂಡೆ ರಂಗಿ, ಈ ತಿಮ್ಮನೊಟ್ಟಿಗೆ ತೋಟ್ದಲ್ಲಿ ಮಕ್ಕಂಡಿದ್ಲಂತೆ. ಇಬ್ರೂ ಗಂಡನ ಕೈಗೆ ಸಿಕ್ಕಿ ಬಿದ್ದವ್ರೆ. ನೋಡಜ್ಜ ಎಂಗೈತೆ ಕಾಲ! ಇಂಗಾದ್ರೆ ಕಾಲಕ್ಕೆ ಸರಿಯಾಗಿ ಮಳೆ ಬಂದೀತಾ, ಬೆಳೆಯಾ-ದೀತಾ?" ಎಂದು ಹೇಳಿ ಆಗಲೆ ಸಿದ್ಧಪಡಿಸಿಕೊಂಡಿದ್ದ ಎಲೆಯನ್ನು ಅಡಿಕೆ ಜೊತೆಗೆ ತುರುಕಿ ಕಚ ಕಚ

ಆಗಿದೆ.

ತಿಪ್ಪಜ್ಜಿಗೆ ಈಗ ಸಮಸ್ಯೆಯ ತೀವ್ರತೆ ಅರ್ಥವಾಯಿತು. ರಂಗಿ ಅವಮಾನ, ವ್ಯಥೆಯಿಂದ ಕುಗ್ಗಿ ತಗ್ಗಿಸಿದ ತಲೆಯ ತುಂಬ ಸೆರಗೆಳೆದುಕೊಂಡು ಯಾರಿಗೂ ಮುಖ ತೋರಿಸಲಾರದೆ ಕಣ್ಣೀರಿಡುತ್ತಿದ್ದಳು.


ತಿಪ್ಪಜ್ಜನ ಕರುಳು ಚುರುಗುಟ್ಟಿತು.

ಅಯ್ಯೋ ಪಾಪ ಎನ್ನುವಂತೆ ಕರುಣೆಯಿಂದ ನೋಡಿದ. ಅದಕ್ಕೆ ಮುಂಚೆ ತುಂಬಿದ ಪಂಚಾಯಿತಿಯಲ್ಲಿ ರಂಗಿ ಜೋರಾಗಿ ಅಳುತ್ತ "ನಾನ್ ಮಣ್ ತಿಂದೆ. ತೆಪ್ಪಾಯ್ತು. ಇನ್ಮುಂದೆ ನಾನೆಂದೂ ಜಾರಾಕಿಲ್ರಿ, ನಂಗೇನಾರ ಸಿಕ್ಷೆ ಕೊಡ್ರಿ,



ರಂಗಿ ಅವಮಾನ, ವ್ಯಥೆಯಿಂದ ತಗ್ಗಿಸಿದ ತಲೆಯ ತುಂಬ ಸೆರಗೆಳೆದುಕೊಂಡು ಕುಳಿತಿದ್ದಳು

ಆದ್ರೆ ನನ್ ಗಂಡನಿಂದ ನನ್ನ ದೂರ ಮಾಡ್ಬೇಡಿ. ನನ್ ಗಂಡ ಬೇಕಾದ್ರೆ ನಂಗೆ ಹೊಡೀಲಿ, ಬಡೀಲಿ. ಸಾಯಿಸ್ಲಿ. ಚಿಂತಿಲ್ಲ. ನಾ ಗಂಡಂತಾವ್ಲೇ ಸಾಯ್ತೀನಿ. ನಿಮ್ಮ ದಮ್ಮಯ್ಯ ಅಂತೀನಿ; ನನ್ ಗಂಡನಿಂದ ದೂರ ಮಾಡ್ಬ್ಯಾಡಿ." ಎಂದು ಹೇಳಿದ್ದನ್ನ, ಸೀನಪ್ಪ ತಿಪ್ಪಜ್ಜನ ಕಿವಿಯಲ್ಲಿ ಪಿಸುಗುಟ್ಟಿದ.



ರಂಗಿಯೊಂದಿಗೆ ಬಂದಿದ್ದ ತಿಮ್ಮ [illegible] ಮೂಲೆ ಕುಳಿತು ತನ್ನ [illegible] ಗಳಿಂದ [illegible] ದಮ್ಮಯ್ಯನ ತಲೆಯುತ್ತಿ ಕುಳಿತಿದ್ದ.

ಇಂಥಾ ಪಂಚಾಯ್ತಿಯೆಂದರೆ ಭಾರಿ ಮೋಜು. ಊರಿನ ಪಡ್ಡೆ ಹುಡುಗರ ಭಾರಿ ಗುಂಪು ನೆರೆದಿತ್ತು. ಹುಡುಗಿಯರೆಲ್ಲ ಮಾಡುಗೋಡೆಗಳ ಪಕ್ಕದಲ್ಲೆಲ್ಲ ಅಡಗಿಕೊಂಡು ಬಗ್ಗಿ ಬಗ್ಗಿ ನೋಡುತ್ತಿದ್ದರು.

"ಏನಾರ ತೀರ್ಮಾನ ಮಾಡಿದ್ರಾ?"
ಕೇಳಿದ ತಿಪ್ಪಜ್ಜ.

"ಇಲ್ಲಜ್ಜ, ಬೆಳಗ್ನಿಂದ ಇದೇ ಪಂಚಾಯ್ತಿ ಇನ್ನೂ ದಡ ಹತ್ತಲ್ಲ. ಈಗನ್ನೂ ಯಾರೊ. ಕರೆದ್ರು ಅಂತ ಸುಬ್ರಾಯ್ರು ಮನೆಗೋಗಾವ್ರೇ ಅವರನ್ನೆ ಕಾಯ್ತಾ ಕುಂತಿದ್ವಿ, ಅವ್ರು ಬಂದ್ಮೇಕೇ-

ನಿಮ್ಗೂ ತೀರ್ಮಾನ ಆದೀತು." ಎಂದರು ನಮ್ಮ ಪಂಚಾಯ್ತಿನ ಗೌಡಿಗೋಡರು.

"ಏನಂತಾನೆ ತಿಪ್ಪ್ಮ?" ಎಂದು ಕೇಳಿದ ತಿಪ್ಪಜ್ಜ.

"ಅವನೇನಂತಾನೆ ಬಿಡಜ್ಜ, ಏಷ್ಟೇ ಆಗ್ಲಿ ಅವ್ನ ಗಂಡಸ್ಸು. ನೂರು ಹಾದರ ಮಾಡಿದ್ರೂ ಅವ್ನ ಅಚ್ಚೆ ಬಂಗಾರ. ಈ ಮುಂಡೇಗೆ ನದರು ಬ್ಯಾಡೇನ್ರಜ್ಜಾ. ನಾಯಿ ಮುಟ್ಟಿದ ಮಡಕೆಯಾದವಳು ಇಷ್ಟೆ ಅಲ್ವಾ? ಈಗ ಪೆಂಡ್ತೀನೇ ಬ್ಯಾಡ ಅಂತವ್ನೆ ಈಕೆ ಗಂಡ ಹನುಮ. ಇದ್ಕೇನ್ಮಾಡೋದೀಗ?" ಎಂದ ಸೀನಣ್ಣ ಗತ್ತಿನಿಂದ.

ತಿಮ್ಮ ಗೌಡರ ಕೂಸಾ ತಮ್ಮ. ಅವನಿಗೆ ಯಾವ ಕೇಡೂ ಆಗೋಲ್ಲ. ಏನಾದರೂ ಆಗುವುದಿದ್ರೆ ರಂಗಿಗೆ ಮಾತ್ರ ಎಂದು ತಿಪ್ಪಜ್ಜನ ಅಂತರಂಗ ಹೇಳಿತು.

ಪೂರ್ವಾಗ್ರಹಪೀಡಿತರಾಗಿ ತೀರ್ಮಾನ ಹೇಳಲು ಕುಳಿತಿರೋ ಈ ಚಾವಡಿ ಯಜಮಾನರುಗಳಿಗೆ ಹೇಗೆ ಹೇಳಿದರೆ ಅರ್ಥವಾದೀತು ಎಂದು ಒಮ್ಮೆ ಯೋಚಿಸಿದ ತಿಪ್ಪಜ್ಜ ಮೆಲ್ಲಗೆ,

"ನೋಡ್ರಪ್ಪಾ, ಗಂಡ-ಹೆಂಡ್ತಿ ಸಂಬಂಧ ಅಂಬೋದು ಪ್ರಾಣಕ್ಕೆ ಸಮಾನ ಅಂತಾರೆ. ಈ ಸಂಬಂಧ ಇರೋದು ಬರೀ ಮಕ್ಕಳು ಪಡೆಯೋಕಲ್ಲ. ಹುಟ್ಟಿದ ಮಕ್ಳನ್ನ ಕಾಪಾಡಬೇಕು ಆರೋಗ್ಯವಂತ ಮಕ್ಕಳಿದ್ರೆ ಆರೋಗ್ಯವಂತ ಸಮಾಜ ಆದಿತು. ಅದಕ್ಕೆ ಅಂತ್ಲೇ ಆ ತ್ರೇತಾಯುಗ ದಿಂದಲೂ ಈ ಸಂಬಂಧಗಳನ್ನ ಕಾಪಾಡೊ ಪ್ರಯತ್ನ ನಡೀತಾನೇ ಬಂದಿದೆ. ಇವೆಲ್ಲ ಒಂದೇ ಥರ ಇರ್ಲಿಲ್ಲ: ಇರೋದೂ ಇಲ್ಲ. ಅದರ ಪರಿಣಾಮವೇ ಇವೊತ್ತಿನ ಸಮಾಜ. ಅಂಥಾ ಪರಿಣಾಮಕ್ಕೆ ಅಹಲ್ಯೆ ಒಂದು ಉದಾಹರಣೆ, ಆಕೆ ಕಥೆ ಹೇಳಲೇನು?" ಎಂದು ಅತ್ತಿತ್ತ ನೋಡಿದ.

ಸುಬ್ರಾಯರಿನ್ನೂ ಬಂದಿರಲಿಲ್ಲ. ಅವರು

ಜಾರದ ಹೊರತು ಮುಂದಿನ ಮಾತಿಲ್ಲ. ಅಲ್ಲಿಯ ವರೆಗೆ ತಿಪ್ಪಜ್ಜನ ಕತೆ ಕೇಳುವುದೆ ವಾಸಿ ಎನಿಸಿತು.

ತಿಪ್ಪಜ್ಜ ಕತೆ ಹೇಳುವುದರಲ್ಲಿ ಎತ್ತಿದ ಕೈ. ಎಲ್ಲರೂ ಕತೆ ಹೇಳಲು ಒತ್ತಾಯಿಸಿದರು. ಕೇಳುತ್ತಾ ಕುಳಿತರು.

"ಗೌತಮರಿಗೆ ಅಹಲ್ಯೆ ಅವ್ತಾ ಒಬ್ಬಳು ಹೆಂಡತಿ ಇದ್ದಳು. ಆಕೆ ಜಗದೇಕ ಸುಂದರಿ. ಗಂಡ ಹೆಂಡ್ತಿ ತಪಸ್ಸು ಮಾಡ್ತಾ ಕಾಡಿನಲ್ಲಿ ಸುಖವಾಗಿ ಇದ್ರು. ಒಂದು ದಿನ ಇಂದ್ರ ಗೌತಮರಿಲ್ಲದ ಸಮಯ ನೋಡಿ ಬಂದ. ಬಂದವನೆ ಗೌತಮನ ವೇಷ ಹಾಕಿಕೊಂಡು ಗೌತಮನ ಪರ್ಣಶಾಲೆ ಸೇರಿದ. 'ನನ್ಗೀಗ ನಿನ್ನ ದೇಹಸುಖ ಬೇಕು ಕೊಡು' ಅಂತಕೇಳಿಕೊಂಡ. ಅವನನ್ನು ನೋಡಿದ ಕೂಡ್ಲೆ ಇವನು ಇಂದ್ರನೇ ಹೊರತು ನನ್ನ ಗಂಡ ಅಲ್ಲ ಅಂಬೊ ವಿಷಯ ಆಕೆಗೆ ತಿಳಿದು ಹೋಯ್ತು. ಆದರೂ ಇಂದ್ರನಿಗೆ ಮನಸೋತಳು, ಮೈ ಒಪ್ಪಿಸಿಬಿಟ್ಟಳು. ಎಲ್ಲಾ ಮುಗೀತಲ್ಲ ಆದಷ್ಟು ಬೇಗನೆ ಇಂದ್ರನನ್ನ ಹೊರಗೆ ಕಳಿಸಿ ಬಿಟ್ಟಳು."

ಅಷ್ಟರಲ್ಲಿ ಸುಬ್ರಾಯರು ನಶ್ಯ ಏರಿಸುತ್ತ ಕೈ ಕೊಡವಿಕೊಂಡು ಚುರುಕಾಗಿ ಬಂದು ತಮ್ಮ ಸ್ಥಾನದಲ್ಲಿ ಕುಳಿತರು. ಕತೆ ನಿಲ್ಲಿಸೋಣವೆ ಎಂಬಂತೆ ತಿಪ್ಪಜ್ಜ ಅತ್ತ ನೋಡಿದಾಗ, 'ಪರವಾಗಿಲ್ಲ; ಹೇಳಿ ಹೇಳಿ' ಎಂಬಂತೆ ತಲೆ, ಕಣ್ಣುಗಳಿಂದಲೇ ಸನ್ನೆ ಮಾಡಿ ತಾವೂ ಆಸಕ್ತಿಯಿಂದ ಕೇಳುತ್ತ ಕುಳಿತರು.

"ಇಂದ್ರ ಆಶ್ರಮ ಬಿಟ್ಟು ಹೊರಗೆ ಬರೋದಕ್ಕೂ ಎದುರಿಗೆ ಗೌತಮರು ಬರೋದಕ್ಕೂ ಒಂದೇ ಆಯಿತು. ತನ್ನ ವೇಷದಲ್ಲಿರೋನು ಇಂದ್ರ ಅಂಬೋದೂ ತಿಳೀತು. ತನ್ನ ಪತ್ನಿ ಇಂದ್ರನ ಜೊತೆ ಮಲಗಿದ್ದ ಸಂಗ್ತೀನೂ ಅವರಿಗೆ ತಿಳಿದು ಹೋಯ್ತು."

"ದೇವರಾಜ ಕಾಮಾತುರಾತ್ ಅಂಬೋದು ನೋಡಿದ್ರೆ ಬಹಳ ಕಾಲ್ದಿಂದ ಅಹಲ್ಯೆಗೂ ಇಂದ್ರನ ಮೇಲೆ ಮನಸ್ಸಿತ್ತು ಅವ್ತಾ ಕಾಣತ್ತೆ. ನಿಜ, ಆದ್ರೆ ಆಕೆ ಅಷ್ಟಕ್ಕೇ ತಪ್ಪಿತಸ್ಥೆ ಆಗಲಿಲ್ಲ. ಒಂದು ಕೆಟ್ಟ ಯೋಚ್ನೆ ಅಂಬೋದು ಕಾರ್ಯ ರೂಪಕ್ಕಿಳಿದಾಗ ಅದು ಅಪರಾಧ ಹೌದೋ ಅಲ್ಲವೋ?"

ಎಂದು ತನ್ನ ಸುತ್ತಮುತ್ತ ಕುಳಿತಿದ್ದವರನ್ನೆಲ್ಲ ನೋಡುತ್ತ ಕೇಳಿದ. ಎಲ್ಲರೂ ಗಂಭೀರವಾಗಿ 'ಹೌದು ಹೌದು' ಎನ್ನುವಂತೆ ತಲೆಯಾಡಿಸಿದರು. ತಿಪ್ಪಜ್ಜ ಮತ್ತೆ ಕತೆ ಮುಂದುವರಿಸಿದ:

"ಇಂದ್ರ ಮತ್ತು ಅಹಲ್ಯೆ ಇಬ್ಬರೂ ಇದಕ್ಕೆ ಜವಾಬ್ದಾರರು. ಅದಕ್ಕಾಗಿ ಶಿಕ್ಷೆ ಕೊಡಬೇಕಾಯ್ತು. ಶಿಕ್ಷೆ ಯಾವಾಗ? ಅಪರಾಧ ಸ್ಥಿರ ಪಟ್ಟಾಗ ಅಲ್ವೆ? ಇಲ್ಲಿ ಇಂದ್ರ ಅಹಲ್ಯೆ ಇಬ್ರೂ ಗೌತಮರಿಗೆ ಸಿಕ್ಕಿಬಿದ್ದಾರಲ್ಲಾ ಅದಕ್ಕಾಗಿ ಶಿಕ್ಷೆ ಕೊಡಬೇಕಾಗ್ ಬಂತು."

ಎಂದಾಗ ಎಲ್ಲರೂ ಕುತೂಹಲದಿಂದ ಕುಲುಕಾಡಿದರು. ತಲೆ ತಗ್ಗಿಸಿ ಕುಳಿತಿದ್ದ ರಂಗಯ್ಯ ಕಿವಿ ಅಜ್ಜನ ಕಡೆ ವಾಲಿತು. ತಿಮ್ಮನ ಮನದಲ್ಲಿ ಏನೋ ಆತಂಕದ ಹೊಗೆಯಾಡಿತು.

"ವೃಷಣಗಳಿದ್ದರಿಂದ ಇಂದ್ರನಿಗೆ ತಪ್ಪು ಮಾಡೋ ಶಕ್ತಿ ಬಂತು. ಆದ್ದರಿಂದ ಅವನು ವೃಷಣಹೀನನಾಗಲಿ ಅಂತ ಗೌತಮ ಶಾಪ ಕೊಟ್ಟ.

"ಇನ್ನು ಅಹಲ್ಯೆ—'ವಿನಃ ಗರ್ಭಂ ಸವರ್ಣೇಷು, ಸತ್ಯಾಜಾಗಮನಾತ್ ಸ್ತ್ರೀಯಃ' ಸವರ್ಣೀಯರ ಸಂಗ ಮಾಡಿದ ಹೆಣ್ಣು ಬಸರಾಗ್ದೆ ಹೋದ್ರೆ ಆಕೇನ ಕೈ ಬಿಡಬಾರದು ಅಂತಾರೆ ಯಾಜ್ಞವಲ್ಕ್ಯರು.

"ಇಂದ್ರ ಗೌತಮ ಇಬ್ರೂ ಒಂದೇ ವರ್ಣದವರು ಅಂದರೆ ಬ್ರಾಹ್ಮಣರು. ಆದ್ದರಿಂದ ಹೆಂಡ್ತಿನ ಕೈಬಿಡುವಂತಿಲ್ಲ. ಆಕೆ ಗರ್ಭವತಿಯೆ ಅಲ್ಲವೆ ಅನ್ನೋದು ತಿಳಿಯೋದು ಹ್ಯಾಗೆ? ದೇವತೆಗಳಿಗೆ ಸಂತಾನವಾಗಕೂಡ್ದು ಅಂತ ಪಾರ್ವತಿಯ ಶಾಪ ಇತ್ತು. ಹಾಗಾಗಿ ಇಂದ್ರನಿಗೆ ಸಂತಾನವಂತೂ ಆಗೊಲ್ಲ. ಹೀಗಾಗಿ ಅಹಲ್ಯೇನ ಕೈ ಬಿಡೋಕಂತೂ ಸಾಧ್ಯವಿಲ್ಲ. ಇನ್ನು ಮಾಡಬೌದಾಗಿದ್ದ ಕೆಲ್ಸ ಇನ್ನೇನು ಹೇಳಿ?"

ಎಂದು ಸವಾಲು ಹಾಕಿ ಎಲ್ಲರ ಮುಖ ನೋಡಿದ ತಿಪ್ಪಜ್ಜ. ಯಾರಿಗೂ ಏನೂ ತೋಚದೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದಾಗ "ಶಿಕ್ಷೆ" ಎಂದು ಅಜ್ಜನೇ ಹೇಳಿದ.

"ಅಹಹಹ ಎಂಥಾ ಧರ್ಮಸೂಕ್ಷ್ಮ!" ಎಂದು ಲೊಚಗುಟ್ಟಿದರು ಸುಬ್ರಾಯರು. "ಅಂಥವರಿಗೆ ಎಂಥಾ ಶಿಕ್ಷೆ ಕೊಡಬೇಕು ಅಂತ ಯಾಜ್ಞವಲ್ಕ್ಯರೆ ಈಗಿನ ನಮ್ಮ ಐ. ಪಿ. ಸಿ. ಥರ ನಿಗದಿ ಮಾಡಿಬಿಟ್ಟಿದ್ರು.

"ಭೂಮೌಚ ಭಸ್ಮ ಶಯನಂ ವಾಸಂ ಭೋಗ ವಿಸರ್ಜಿತಂ' ಅಂದ್ರೆ ದಾನ ಧರ್ಮಗಳನ್ನೆಲ್ಲ ಬಿಟ್ಟು ಬೂದೀಲಿ ಬಿದ್ಕೊಂಡಿರಬೇಕು ಅಂತ.

"ಗೌತಮರು ಆಕೆಗೆ ಇದೇ ಶಿಕ್ಷೆ ಕೊಟ್ಟರು. ಇನ್ನು ಶಿಕ್ಷೆ ಎಂದ ಮೇಲೆ ಅದಕ್ಕೊಂದು ಕಾಲಮಿತಿ ಇರಬೇಕಲ್ವೆ? ಅವಧಿಯಿಲ್ಲದ ಶಿಕ್ಷೆಯನ್ನು ಯಾವ ಶಾಸ್ತ್ರವೂ ಒಪ್ಪೊಲ್ಲ. ರಾಮ ಬರೋತನಕ ಈ ಶಿಕ್ಷೆ ಅನುಭವಿಸು. ಅವನಿಗೆ ಅತಿಥಿ ಸತ್ಕಾರ ಮಾಡಿದಾಗ ಶಾಪ ವಿಮೋಚನೆ ಆಗುತ್ತೆ ಅನ್ನೋದನ್ನೂ ಹೇಳಿ ಹಿಮಾಲಯಕ್ಕೆ ಹೊರಟು ಹೋದರು."

"ಆಮೇಲೆ?" ಕೇಳಿದರು ಗೌಡರು ಉತ್ಸಾಹ ತಡೆಯಲಾರದೆ.

"ಆಮೇಲೇನು? ವಿಶ್ವಾಮಿತ್ರರ ಜೊತೆ ರಾಮಲಕ್ಷ್ಮಣರು ಆಶ್ರಮಕ್ಕೆ ಬಂದರು. ಅಹಲ್ಯೆ ಬೂದಿ ಮುಚ್ಚಿದ ಕೆಂಡದಂತಿದ್ಲು. ರಾಮಲಕ್ಷ್ಮಣರು ಆಕೆಯ ಪಾದ ಮುಟ್ಟಿ ನಮಸ್ಕಾರ ಮಾಡಿದರು. ಆಕೆಯೂ ರಾಮನ ಪಾದ ಸ್ಪರ್ಶ ಮಾಡಿದ ಕೂಡಲೆ ಶಾಪ ವಿಮೋಚನೆಯಾಯ್ತು."

"ಅಹಲ್ಯೆ ಗೌತಮರ ಶಾಪದಿಂದ ಕಲ್ಲಾಗಿ ಬಿದ್ದಿದ್ದಳು ಅಂತ ಹೇಳ್ತಾರಲ್ಲ ಅಲ್ವೆ?"

ಚಿಕ್ಕ ಅನುಮಾನ ವ್ಯಕ್ತಪಡಿಸಿದರು ಸುಬ್ರಾಯರು.

"ಇಲ್ಲ ಸುಬ್ರಾಯರೆ, ಆಕೆ ಕಲ್ಲಾಗಿದ್ದಳು ಅಂತ ಬಾಲಕಾಂಡದಲ್ಲೆಲ್ಲೂ ಹೇಳಿಲ್ಲ. ಅಂದ್ರೆ ಇದೇ ಥರ ಇನ್ನೂ ಎಷ್ಟೆಷ್ಟೋ ಅದ್ಭುತ ಕಥೆಗಳು ರಾಮಾಯಣದ ಹೆಸರಿನಲ್ಲಿ ಚಲಾವಣೆ ನಡೀತಾ ಇದೆಯಾದರೂ ಅವು ವಾಲ್ಮೀಕಿ ರಾಮಾಯಣದಲ್ಲಿ ಇಲ್ಲ. ಬಾಲಕಾಂಡದಲ್ಲಿರೋದೆ ಒಂದು ಥರ, ಉತ್ತರ ಕಾಂಡದಲ್ಲಿರೋದೇ ಒಂದು ಥರ. ಇದ್ದುದರಲ್ಲಿ ಸಹಜತೆಗೆ ಹತ್ತಿರವಾಗಿರೋದು ಅಂದ್ರೆ ಬಾಲ ಕಾಂಡದ ಘಟನೆಗಳು. ಅದಿರ್ಲಿ, ಆಕೆ ಮಾಮೂಲಿ ಮನುಷ್ಯಳಾದ ಮೇಲೆ ಎಲ್ಲಾ ಹಕ್ಕುಗಳೂ ಪುನಃ ಆಕೆಗೆ ದಕ್ಕಿದವು.

"ಪರಪುರುಷನೊಟ್ಟಿಗೆ ಸಂಭೋಗ ನಡೆಸಿದ ಹೆಂಡ್ತೀನ ಮತ್ತೆ ಗಂಡ ಸ್ವೀಕರಿಸೋದು ಇವೊತ್ತು ನಮಗೆ ಅನಾಚಾರವಾಗಿ ತೋರಬೋದು. ಉತ್ತರ ರಾಮಾಯಣವೆಲ್ಲ ಇದೇ ಮಾತಿನ ಮೇಲೆ ನಡೆಯುತ್ತೆ. ಏನೇ ಆದ್ರೂ ಅದು ಗೌತಮನ ಕಾಲದ



ವಿಚಾರ. ನಾವು ಈ ಆಚಾರಗಳನ್ನು ತಿಳಿಯಬೇಕಾದ್ರೆ ಅವುಗಳ ಕಾಲ ಪರಿಸ್ಥಿತಿ ಯೋಚಿಸಬೇಕು. ಆಗ್ಲೇ [illegible] ಮೊದ್ಲೆ [illegible] ಮಕ್ಕಳನ್ನ ಪಡದರೆ ಪುಣ್ಯವಂತೆ ಅಂತಿದ್ರು. ಅದ್ರೆ ಈಗ? ಆಚಾರಗಳೂ ಅಷ್ಟೆ, ಆಯಾ ಕಾಲಕ್ಕೆ ತಕ್ಕಂತೆ ಬದಲಾಗ್ತಾ ಇರುತ್ವೆ" ಎಂದು ಅಲ್ಲಿದ್ದವರಿಗೆ ಏನೋ ಒಂದು ರೀತಿಯ ಗೊಂದಲದ ಮೋಡಿ ಹಾಕಿದ ತಿಪ್ಪಜ್ಜ.

"ನೋಡ್ರಪ್ಪಾ, ಇದರಲ್ಲಿ ಯೋಚಿಸಬೇಕಾದ್ದು ತುಂಬಾ ಐತೆ. ಅಹಲ್ಯೆಯಿಂದ ಗೌತಮರಿಗೆ ಮೊದಲೇ ಸಂತಾನವಿತ್ತು. ಅವರಲ್ಲಿ ದೊಡ್ಡವನು ಶತಾನಂದ ಅಂತ. ಅವ್ನು ಅವನ ಅಪ್ಪನ ಹತ್ತಿರವೇ ಇದ್ದ. ಅಮ್ಮ ಮಾಡಿದ ಕೆಲಸದಿಂದಾಗಿ ಅವನಿಗೂ ನಾಚಿಕೆ ಯಾಗ್ತಿತ್ತು. ಅಹಲ್ಯೆ ಮತ್ತೆ ಗೌತಮರನ್ನ ಕೂಡಿ ಕೊಂಡಾಗ ಅವನು ಸಂತೋಷಿಸ್ತಾನೆ. ಅಂದರೆ ಆಗಿನ ಕಾಲ್ದಲ್ಲಿ ಹೆಣ್ಣು ಬೇರೆಯವರೊಂದಿಗೆ ರಮಿಸಿದರೆ ದೋಷ ಅಂದ್ಕೊಳ್ಳಲಿಲ್ಲ ಅಂತ ಅರ್ಥ.

"ಈಗಿನ ಕಾಲ್ದಲ್ಲಿ ವ್ಯಭಿಚಾರ ತಪ್ಪು ನಿಜ. ಆದ್ರೆ ಹೆಣ್ಣೂ ಗಂಡೂ ಇಬ್ರೂ ತಪ್ಪಿತಸ್ಥರಾದ್ರೂ ನಾವು ಕೇವಲ ಹೆಣ್ಣಿಗೆ ಮಾತ್ರ ಶಿಕ್ಷೆ ಕೊಡ್ತೀವಿ. ಇದ್ಯಾವ [illegible] ನ್ಯಾಯ?"

ತಿಪ್ಪಜ್ಜನ [illegible] ಕೆಲವರಿಗೆ ಚುರುಕು ಮುಟ್ಟಿಸ್ತಿತ್ತು.

"ಯಾಜ್ಞವಲ್ಕ್ಯರು ವ್ಯಭಿಚಾರದಲ್ಲಿ ಭಾಗಿಯಾಗಿದ್ದ ಹೆಣ್ಣಿಗೆ ಮಾತ್ರ ಶಿಕ್ಷೆ ಕೊಟ್ಟಿದ್ದರು. ಆದರೆ ಆ ಕಾಲ್ದಲ್ಲಿ ಗೌತಮ ಒಂದು ಹೆಜ್ಜೆ ಮುಂದೆ ಹೋಗಿ ಗಂಡಸಿಗೂ ಶಿಕ್ಷೆ ಕೊಟ್ಟ. ಹೀಗೆ ಪುರುಷನ ದೊಡ್ಡಸ್ತಿಕೆಗೆ ಪೆಟ್ಟು ಕೊಟ್ಟು ಗಂಡು ಹೆಣ್ಣಿನ ಸಮಾನತೆ ನಿರೂಪಿಸಿದವನು ಗೌತಮ."

ಅಷ್ಟರಲ್ಲಿ ಸುಬ್ಬಾಯಿಗೆ ಮತ್ತೇನೋ ಸಂಶಯ ಕಾಡಿತು. ಕೂಡಲೆ,

"ಅದು ಸರಿ ತಿಪ್ಪಜ್ಜ, ಅಹಲ್ಯೆ [illegible] ಇಂದ್ರನ ಜೊತೆ [illegible]. [illegible] ಆಕೆಯ ಕಥೆ ಪವಿತ್ರ ಅಂತಾರಲ್ಲಪ್ಪ ಅದ್ಯಾಕೆ?" ಅಂತ ಕೇಳಿದಳು.

"ನೋಡಿ, ಅಹಲ್ಯೆಗೆ ಶಿಕ್ಷೆ ಕೊಡೋಕೆ ಗೌತಮರಿಗೆ ಯಾವ ರಾಜಕೀಯ ಬಲವೂ ಇರಲಿಲ್ಲ. ಆ ಶಿಕ್ಷೆ [illegible] ಸಾಧ್ಯವಾಗೋಲ್ಲ [illegible] ಅದನ ಜಾರಿಗೆ ತರೋಕೆ ಗೌತಮರಿಂದ ಆಗ್ತಿರಲಿಲ್ಲ. [illegible]

"ಗೌತಮರು ತನಗೆ ಯಾತಕ್ಕಾಗಿ ಶಿಕ್ಷೆ ಕೊಟ್ರು ಅಂತ ಅದನ್ನ ಅಹಲ್ಯೆ ಅರ್ಥ ಮಾಡಿಕೊಂಡಳು. [illegible] ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸ್ತಾ, ಪಶ್ಚಾತ್ತಾಪದ ಅಗ್ನಿಯಲ್ಲಿ ಬೆಂದು [illegible]. ಅದನ್ನ ತಿಳಿದ ಗೌತಮರು ಮತ್ತೆ ಆಕೆಯನ್ನ ಪರಿಗ್ರಹಿಸಿದ. ಪುನಃ ಕೂಡಿ ಕೊಂಡರು. ಚದುರಿಹೋದ ಮನಸ್ಸಿನವಳು ಮತ್ತೆ ಕೂಡಿಕೊಂಡ ಕಥೆ ಇದು. ಅದಕ್ಕೇ ಅಹಲ್ಯೆಯ ಕತೆ ಪವಿತ್ರವಾದದ್ದು."

ತಿಪ್ಪಜ್ಜ ಕತೆ ಹೇಳಿ ಮುಗಿಸಿದ.

"ನಾನು ಮಣ್ ತಿಂದೆ. ತಪ್ಪಾಯ್ತು. ಇನ್ನೆಂದೂ ನಾನು ಜಾರಾಕಿಲ್ಲ. ನನ್ ಗಂಡನಿಂದ ದೂರ ಮಾಡಬ್ಯಾಡಿ. [illegible] ಸಾಯ್ಸಿದ್ರೂ ನಾನು ಗಂಡನ ತಾವ್ನೇ ಇರ್ತೀನಿ. ನಿಮ್ ದಮ್ಮಯ್ಯ ಅಂತೀನಿ." ಎಂದು ತಮ್ಮ ಕರ್ರೆ ಪಂಚಾಯ್ತಿಯ ಸಭೆಯಲ್ಲಿ ರಂಗಿ ಹೇಳಿಕೊಂಡು ಬೋರಾಡಿ ಅತ್ತ ಘಟನೆ ಎಲ್ಲರ ಎದೆ ತಟ್ಟುತ್ತಿತ್ತು. ಅಹಲ್ಯೆ ಕಥೆಯ ಸಂಬಂಧ ಕಲ್ಪನೆಯ ಕೊಂಡಿ ಬಿಡಿಸಿ ಕೊಳ್ಳಲಾರದೆ—

"ಅಂತೂ ನಾಳೆ ಮಾತಾಡೋಣ," ಎನ್ನುತ್ತ ಎಲ್ಲರೂ ಪಂಚಾಯ್ತಿ ಕಟ್ಟೆ ಖಾಲಿ ಮಾಡಿ ತಲೆ ತಗ್ಗಿಸಿಕೊಂಡು ಮೌನವಾಗಿ ಯೋಚಿಸುತ್ತಾ ತಮ್ಮ ತಮ್ಮ ಮನೆಗಳ ಕಡೆ ಹೊರಟರು. ☆

ಬೇಕು ವಿಶೇಷ ಘನ ಆಹಾರ...

ಫೆರೆಕ್ಸ್



ಯಾಕೆಂದರೆ ಫೆರೆಕ್ಸ್ ಮಕ್ಕಳ ಶೀಘ್ರ, ಸರ್ವಾಂಗೀಣ ಬೆಳವಣಿಗೆಗಾಗಿ ಅಧಿಕ ಪೋಷಕ ಘನ ಆಹಾರವಾಗಿದೆ.

ನಿಮ್ಮ ಮಗುವಿನ ಬೆಳವಣಿಗೆಗಾಗಿ ಫೆರೆಕ್ಸ್ ಪ್ರೋಟೀನ್‌ನಿಂದ ಸಮೃದ್ಧವಾಗಿದೆ.

ಮಕ್ಕಳನ್ನು ಪ್ರೋಟೀನ್ ಕೊರತೆಯಿಂದ ರಕ್ಷಿಸಲು, ವಿಶ್ವ ಆಹಾರ ಸಂಸ್ಥೆಯವರು ಬ್ರಾಂಡ್‌ಗೊಂಡ ಘನ ಆಹಾರಗಳಲ್ಲಿ ಪ್ರೋಟೀನ್ ಅಂಶ ಹಾಗೂ ಘನ ಆಹಾರವನ್ನು ತಯಾರಿಸಿ ಕೊಡುವಲ್ಲಿ, ಕೆಲವೊಂದು ಗುಣಮಟ್ಟವನ್ನು ನಿರ್ದಿಷ್ಟ ಪಡಿಸಿದ್ದಾರೆ. ನಿರ್ದೇಶನಗಳಿಗೆ ಅನುಗುಣವಾಗಿ ತಯಾರಿಸಿ ಕೊಡುವ ಫೆರೆಕ್ಸ್ ಆಹಾರವು—ನಿಮ್ಮ ಮಗುವಿನ ಬೆಳವಣಿಗೆಗೆ ಅತ್ಯವಶ್ಯಕವಾದ ಪ್ರೋಟೀನ್‌ನಿಂದ ಸಮೃದ್ಧವಾಗಿದೆ.

ಆರೋಗ್ಯಪೂರ್ಣ ರಕ್ತಕ್ಕಾಗಿ ಫೆರೆಕ್ಸ್‌ನಲ್ಲಿ ಅಧಿಕ ಕಬ್ಬಿಣ ಸತ್ವ ಇದೆ.

"ಮಗು ಜನಿಸಿದಾಗ ತಾಯಿಯಿಂದ ಬಹಳಷ್ಟು ಕಬ್ಬಿಣ ಸತ್ವದ ಸಂಗ್ರಹ ಪಡೆದಿರುತ್ತದೆ. ಆದರೆ ಈ ಸಂಗ್ರಹವು ಜನನದ ನಂತರ ಕಡಿಮೆಯಾಗುತ್ತ ಹೋಗುತ್ತದೆ. ಹಾಲು ಮಗುವಿಗೆ ಒಳ್ಳೆಯ ಆಹಾರವಾದರೂ, ಇದು ಸಂಪೂರ್ಣ ಆಹಾರ ವಾಗಿಲ್ಲ. ಯಾಕೆಂದರೆ ಇದರಲ್ಲಿ ಕಬ್ಬಿಣ ಸತ್ವ ಅಲ್ಪವಿದೆ. ಈ ಕಾರಣದಿಂದ ಮಗುವಿಗೆ ಕಬ್ಬಿಣ ಸತ್ವವುಳ್ಳ ಘನ ಆಹಾರದ ಅವಶ್ಯಕತೆ ಇದೆ."

—ಡಾ. ಸುಭಾಷ್ ಸಿ. ಆರ್ಯ

ಮಗುವಿನ ರಕ್ತ ವರ್ಧಿಸಲು, ರೋಗ ಪ್ರತಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ಸಾಮಾನ್ಯ ಆರೋಗ್ಯ ಹಾಗೂ ಬೆಳವಣಿಗೆಗಾಗಿ ಕಬ್ಬಿಣ ಸತ್ವ ಅತ್ಯವಶ್ಯಕವಾಗಿದೆ. ಈ ಕಾರಣದಿಂದಲೇ, ಇತರ ಬ್ರಾಂಡ್‌ಗೊಂಡ ಘನ ಆಹಾರಗಳಿಗಿಂತ ಫೆರೆಕ್ಸ್‌ನಲ್ಲಿ ಅಧಿಕ ಕಬ್ಬಿಣ ಸತ್ವವಿದೆ.

ಫೆರೆಕ್ಸ್‌ನಲ್ಲಿ ಮಗುವಿನ ಹಲ್ಲು ಮತ್ತು ಎಲುಬಿಗಾಗಿ ಅತ್ಯವಶ್ಯಕವಾದ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್ ಇವುಗಳ ಸುಯೋಗ್ಯ ಪ್ರಮಾಣ ಇದೆ.

ನಿಮ್ಮ ಮಗುವಿನ ಹಲ್ಲು ಮತ್ತು ಎಲುಬಿನ ಅಭಿವೃದ್ಧಿಗಾಗಿ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್ ಅವಶ್ಯಕವಾಗಿದೆ. ಆದರೆ ಇವು 2:1 ಪ್ರಮಾಣದಲ್ಲಿ ಸಂತುಲಿತವಾಗಿದ್ದರೆ ಮಾತ್ರ ನಿಮ್ಮ ಮಗುವಿಗೆ ಅವುಗಳ ಅತ್ಯಧಿಕ ಉಪಯೋಗವಾಗುತ್ತದೆ. ಈ ಅತ್ಯವಶ್ಯಕ ಘಟಕಗಳನ್ನು ಸುಯೋಗ್ಯ ಪ್ರಮಾಣದಲ್ಲಿ ಫೆರೆಕ್ಸ್ ಒದಗಿಸುತ್ತದೆ. ಇದರಿಂದಾಗಿ ನಿಮ್ಮ ಮಗುವಿಗೆ ಆರೋಗ್ಯಕರ ಎಲುಬು ಹಾಗೂ ಸುದೃಢ ಹಲ್ಲುಗಳು ದೊರೆಯುವುದು ನಿಶ್ಚಿತ.

ಅಲ್ಲದೆ ಫೆರೆಕ್ಸ್ ಸುಲಭವಾಗಿ ಪಚನಗೊಳ್ಳುತ್ತದೆ.

ಮಗುವಿನ ಕೋಮಲ ಪಚನಾಂಗಗಳಿಗೆ ಸರಿಹೊಂದುವಂತೆ ಮೊದಲೇ ಬೇಯಿಸಿ ವಿಶೇಷವಾಗಿ ಫೆರೆಕ್ಸ್‌ನ್ನು ಸಿದ್ಧಗೊಳಿಸಲಾಗಿದೆ.





ಡಾಕ್ಟರರು ಶಿಫಾರಸು ಮಾಡುತ್ತಾರೆ-

ಫೆರೆಕ್ಸ್

ಗ್ಲಾಕ್ಸೋ ಉತ್ಪಾದನೆ



ನಾನು ನೋಡಿದ ಮಲಾಯಾ

ಎ. ಆಲಮೇಲಕರ

ಚಿಕ್ಕಂದಿನಲ್ಲಿ ನಾನು ಕೊಲ್ಹಾಪುರದ ಪ್ರಭಾಯಿ ದೇವಾಲಯ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ ಅಲ್ಲಿಯ ಗೋಡೆಗಳ ಮೇಲಿದ್ದ ಕೆಲವು ಚಿತ್ರಗಳನ್ನು ಕಂಡು ನನಗೆ 'ನನಗೇನಾದರೂ ವಿದೇಶ ಪ್ರವಾಸದ ಯೋಗ ಲಭಿಸಿದರೆ ಮೊಟ್ಟ ಮೊದಲು ನಾನು ಮಲಾಯಾದ ಅಡವಿಗಳಿಗೆ ಹೋಗುತ್ತೇನೆ' ಎಂಬ ವಿಚಾರ ಬರುತ್ತಿತ್ತು. ಏಕೆಂದರೆ ಆ ಚಿತ್ರಗಳಲ್ಲಿ ಹೆಚ್ಚಿನವು ಮಲಾಯಾ ಮತ್ತು ದೂರ ಪ್ರಾಚ್ಯ ದೇಶಗಳಿಗೆ ಸಂಬಂಧಿಸಿದವೇ ಆಗಿದ್ದವು.


ಶಾಲೆ ಬಿಟ್ಟು ಇಪ್ಪತ್ತೈದು ವರ್ಷಗಳ ನಂತರ ನನ್ನ ಕನಸು ನನಸಾಗುವ ಸಂದರ್ಭ ಬಂದಿತು. ಇಷ್ಟರೊಳಗಾಗಿ ನಾನು ಭಾರತದ ಹಲವು ಪ್ರದೇಶಗಳಲ್ಲಿ ಅಲ್ಲಿಯ ಜನರ ದೈನಂದಿನ ಜೀವನದ ಬಗ್ಗೆ ನೂರಾರು ಚಿತ್ರಗಳನ್ನು ಬಿಡಿಸಿದ್ದೆ. ಈಗ ಭಾರತದ ಹೊರಗೆ ಪರನಾಡಿಗೆ ಹೋಗುವ ಸಂಧಿ ನನ್ನನ್ನು ಹುಡುಕಿಕೊಂಡು ಬಂದಿತ್ತು.


ಮಲಾಯಾದ ಪ್ರಧಾನ ಮಂತ್ರಿ ಶ್ರೀ ಅಬ್ದುಲ್ ತುಂಗರ ಪ್ರೆಸ್ ಸೆಕ್ರೆಟರಿ ಶ್ರೀ ಫ್ರಾಂಕ್ ಸಾಲ್ವಿನ್ನರು ಒಬ್ಬ ರಸಿಕರೂ ಕಲಾಪ್ರಿಯರೂ ಆದ ವ್ಯಕ್ತಿ. ಅವರ ಬಳಿ ಕೆಲ ನನ್ನ ಚಿತ್ರಗಳಿದ್ದವು. ಅವರು ಅವನ್ನು ಸದಾ ತಮ್ಮ ಮನೆಯ ಗೋಡೆಗಳಿಗೆ ತೂಗ ಹಾಕುತ್ತಾರೆ. ಅವರು ಮಲಾಯಾದಲ್ಲಿರುವ ಭಾರತದ ಹೈ ಕಮೀಶನರ್ ಶ್ರೀ ಸ್ವ. ಕೆ. ಪ್ರಭುವರಿಗೆ "ಮಲಾಯಾ ಫೆಡರೇಶನ್ ಆರ್ಟ್ ಕೌನ್ಸಿಲು ಮಲಾಯಾಕ್ಕೆ ಬಂದು ತಮ್ಮ ಚಿತ್ರಗಳ ಪ್ರದರ್ಶನವನ್ನು ಮಾಡಲು ಶ್ರೀ ಆಲಮೇಲಕರರಿಗೆ ಆಮಂತ್ರಣವೀಯಬೇಕೆನ್ನುತ್ತದೆ ಎಂಬ ವಿಚಾರವನ್ನು ಭಾರತ ಸರಕಾರಕ್ಕೆ ದಯವಿಟ್ಟು ತಿಳಿಸಿ." ಎಂದು ಕೇಳಿಕೊಂಡರು.

ನನಗೇನೂ ಇದರ ಗಂಧಗಾಳಿ ಇರಲಿಲ್ಲ. ಒಂದು ದಿನ ಅಕಸ್ಮಾತ್ತಾಗಿ ಭಾರತ ಸರಕಾರದ ಸಂಶೋಧನೆ ಮತ್ತು ಸಾಂಸ್ಕೃತಿಕ ವ್ಯವಹಾರಗಳ ಮಂತ್ರಾಲಯದಿಂದ ನನಗೊಂದು ಪತ್ರ ಬಂತು: "ಮಲಾಯಾದಲ್ಲಿ ನಿಮ್ಮ ಚಿತ್ರ ಪ್ರದರ್ಶನವನ್ನು ಮಾಡುವುದು ನಿಶ್ಚಿತವಾಗಿದೆ. ನಿಮಗೆ ಸರಕಾರದಿಂದ ಏರ್ ಇಂಡಿಯಾ ಇಂಟರ್‌ನ್ಯಾಶನಲ್ ವಿಮಾನದಲ್ಲಿ ಹೋಗಿಬರುವ ಟಿಕೆಟ್ಟನ್ನು

'ಕಸ್ತೂರಿ'ಯ ೧೯೬೨ರ ಡಿಸೆಂಬರ್ ಸಂಚಿಕೆಯಿಂದ







ಶ್ರೀ ಅಲವೇಲಕರರು (ಮೇಲ್ಗಡೆ ಎಡಕ್ಕೆ) 'ಕಸ್ತೂರಿ'ಯ ಅಭಿಮಾನಿ. ಅವರ ಹಲವಾರು ಚಿತ್ರಗಳು 'ಕಸ್ತೂರಿ'ಯ ಮುಖಪುಟವನ್ನು ಅಲಂಕರಿಸಿವೆ. ತೀರ ಇತ್ತೀಚಿನದೆಂದರೆ ಜನವರಿ ೧೯೬೦ ನೆಯ ಸಂಚಿಕೆ (ಮೇಲ್ಗಡೆ). ೧೯೫೯ರ ವಸಂತ ಸಂಚಿಕೆಯು ಅವರ ಕೃತಿಯಿಂದಲೇ ಭೂಷಿಸಿತು (ಎಡಕ್ಕೆ).

[illegible]"

[illegible] ಆನಂದಕ್ಕೆ [illegible]. ಪತ್ರವನ್ನು ಎದೆಗವಚಿಕೊಂಡು ಕುಣಿದಾಡಿದೆ.

ಸಂಗತಿಯೇನೆಂದು ತಿಳಿಯದ ನನ್ನ ಹೆಂಡತಿಗೆ ಈ [illegible] ಆಶ್ಚರ್ಯವಿಲ್ಲ. ನಾನವಳಿಗೆ ಆ [illegible] [illegible] ಆನಂದ, [illegible] ಹಾದರೆ ಕೆಲ ತಿಂಗಳ ಮಟ್ಟಿಗೆ ತನ್ನಿಂದ ದೂರ ವಾಗುತ್ತಾನಲ್ಲಾ ಎಂದು ದುಃಖವಾಗಿತ್ತು. ಅವಳ ಕಂಗಳಲ್ಲಿ ಆನಂದಮಿಶ್ರಿತ ದುಃಖಾಶ್ರುಗಳನ್ನು ಕಂಡೆ. ವಿದೇಶ ಪ್ರವಾಸದ ಸಿದ್ಧತೆಗೆ ತೊಡಗಿದೆ.

೧೯೬೦ ಅಕ್ಟೋಬರ್ ೧೮ ರಂದು ಮುಂಜಾನೆ ಸಾಂತಾಕ್ರುಝ್ ವಿಮಾನ ನಿಲ್ದಾಣದಿಂದ ಕಲ ಕತ್ತಾ, ಬ್ಯಾಂಕಾಕ್ ಮಾರ್ಗವಾಗಿ ಕೌಲಾಲಂಪುರಕ್ಕೆ [illegible].

ಪ್ರದರ್ಶನ ಕೌಲಾಲಂಪೂರದಲ್ಲಿ ಜರಗಲಿತ್ತು. [illegible] ಮಲಾಯಾ ನೋಡಲು ಹೊರಟೆ. ಮೊದಲಿಗೆ ಜಾರ್ಜ್‌ಟೌನ್ ಅಥವಾ ಪಿನಾಂಗ್ ಎಂಬ ಮಲಾಯಾದ ಅತ್ಯಂತ ಸುಂದರ ನಡುಗಡ್ಡೆಗೆ ಹೋದೆ.

[illegible] ಮುಕ್ತ ಬಂದರ. ಮೂರು ಲಕ್ಷ [illegible] "[illegible] ಆಫ್ ದಿ [illegible]" ([illegible]) [illegible] ಆಗಿದೆ.

ಪಿನಾಂಗಿನ ಸಮುದ್ರ ತೀರ ಸುಂದರವಾಗಿದೆ. ಇಲ್ಲಿ ಸೂರ್ಯಸ್ನಾನ ಮತ್ತು ಸಮುದ್ರಸ್ನಾನ ಮಾಡಲೆಂದು ಲೋಕ ಯುರೋಪಿಯನ್ನರು ಯುರೋಪಿನಿಂದ ಬರುತ್ತಾರೆ. ತಮ್ಮ ರಜಾ ದಿನಗಳನ್ನು ಸಂತಸದಿಂದ ಕಳೆಯುತ್ತಾರೆ.

ಇಲ್ಲಿ ದೊಡ್ಡದೊಂದು ಬುದ್ಧ ಪಗೋಡಾ ಇದೆ. 'ಅಯರ ಇತರಾಮ' ಎಂಬ ಹೆಸರಿನ ಇದು ತುಂಬ ಪ್ರಸಿದ್ಧವಾಗಿದೆ. ಇದರ ಮೇಲಿನ ಮಂದಿರ ಮತ್ತು ಪಾವಟಿಗೆಗಳನ್ನು ಕಂಡರೆ ಪುಣೆಯ [illegible].

[illegible] ಪಿನಾಂಗ್ [illegible]. ಎರಡು ಸಾವಿರ ಅಡಿ ಎತ್ತರವನ್ನು ಏರಿ ಹೋಗಲು [illegible] ಗಾಡಿ ಯಿದೆ. ಈ ಗಾಡಿಯನ್ನು ಒಂದು ಸರಪಳಿಯಿಂದ ಎರಡು ಡಬ್ಬಿಗಳಿಗೆ ಕಟ್ಟಿದ್ದಾರೆ. ಒಂದು ಡಬ್ಬಿ ಮೇಲೆ ಇನ್ನೊಂದು ಡಬ್ಬಿ ಕೆಳಗೆ ಇರುತ್ತದೆ. [illegible] ಅಗ ಕೆಳಗಿನ ಡಬ್ಬಿ ಮೇಲಕ್ಕೆ ಹೋಗುತ್ತದೆ, ಮೇಲಿನ ಡಬ್ಬಿ ಕೆಳಗೆ ಬರುತ್ತದೆ. ಕೆಲವೇ ಮಿನಿಟುಗಳ ಪ್ರವಾಸ ತುಂಬಾ ಆಹ್ಲಾದದಾಯಕವಾಗುತ್ತದೆ. ಗುಡ್ಡದ ಮೇಲಿಂದ ಇಡೀ ಪಿನಾಂಗ್ ನಗರದ ಸುಂದರ ದೃಶ್ಯ ಕಾಣಿಸುತ್ತದೆ.

ಪಿನಾಂಗಿನಲ್ಲಿ ರಸ್ತೆಗಳ ಮೇಲಿನ ಸ್ವಚ್ಛತೆಯ ಬಗ್ಗೆ ಅತ್ಯಂತ ದಕ್ಷತೆ ವಹಿಸುತ್ತಾರೆ. ಎಲ್ಲಿಯೂ ಸಿಗರೇಟ ಕಸಕಡ್ಡಿ, ಕಾಗದ ಚೂರು, ಹಣ್ಣಿನ ಸಿಪ್ಪೆ ಕಾಣಸಿಗದು. ಯಾರಾದರೂ ಆಕಸ್ಮಿಕವಾಗಿ ರಸ್ತೆಯ ಮೇಲೆ ಏನಾದರೂ ಚೆಲ್ಲಿದರೆ ತತ್‌ಕ್ಷಣ ಅಲ್ಲಿಯ ಪೋಲೀಸ ಅವನಿಗೆ ದಂಡ ವಿಧಿಸುತ್ತಾನೆ. ಇಲ್ಲಿಯ [illegible] ಕೂಡ ಮಾಡುತ್ತಾರೆ. ಇಡೀ ಏಶಿಯ ಖಂಡ [illegible] ಎಂಬ ಖ್ಯಾತಿ ಇದೆ.

ಮಲಾಯಾದ ಜನರ ಜೀವನ ಮಟ್ಟ ತುಂಬಾ ಉಚ್ಚವಾದದ್ದು. ಮಧ್ಯಮ ವರ್ಗದ ಜನ ತೀರ ಕಡಿಮೆ. ಇಲ್ಲಿ ಪ್ರಾಮುಖ್ಯವಾಗಿ ಶ್ರೀಮಂತರು ಮತ್ತು ಕೂಲಿಕಾರರು ಎಂಬ ಎರಡೇ ವರ್ಗಗಳಿವೆ. ಇದ್ದಬಿದ್ದ ಮಧ್ಯಮ ವರ್ಗದವರು ನಮ್ಮಲ್ಲಿಯ ಶ್ರೀಮಂತರಿಗಿಂತಲೂ ಕಡಿಮೆ ದರ್ಜೆಯವರೇನಲ್ಲ.

[illegible] ಶ್ರೀ ಆಲಮೇಲಕರರನ್ನು ಒಂದಿಷ್ಟು ನಗರದಲ್ಲಿ

ಸುತ್ತಾಡಿಸಿಕೊಂಡು ಬಾ ಎಂದು ಹೇಳಿದರು.

ಅದರಂತೆ ಆ ನೌಕರ ಪ್ರತಿನಿತ್ಯ ಸಂಜೆ ಮೂವತ್ತು ನಲವತ್ತು ಮೈಲು ನನ್ನನ್ನು ಸುತ್ತಾಡಿಸಿಕೊಂಡು ಬರಹತ್ತಿದ. ಮೂರು ನಾಲ್ಕು ದಿನಗಳ ನಂತರ ನಾನೆಂದೆ: "ಏನಪ್ಪಾ, ನಿತ್ಯವೂ ಹೀಗೆ ಪೆಟ್ರೋಲ್ ಸುಟ್ಟರೆ ನಿನ್ನ ಸಾಹೇಬರು ರೇಗಲಿಕ್ಕಿಲ್ಲವೆ?"

ಆಗ ಆತ ಹೇಳಿದ: "ಮಿಸ್ಟರ್ ಅಲಮೇಲಕರ್, ಇದು ನನ್ನ ಮೋಟರ್. ನನ್ನ ಸ್ವಂತ ಮೋಟಾರಿನಲ್ಲಿಯೇ ನಿಮ್ಮನ್ನು ಅಡ್ಡಾಡಿಸುತ್ತಿದ್ದೇನೆ. ನೀವು ಭಾರತೀಯರು. ನಾನೂ ಭಾರತೀಯನೇ. ನನ್ನಿಂದೇನಾದರೂ ನಿಮ್ಮ ಸೇವೆ ಆಗಬೇಕೆಂದೇ ನಿಮ್ಮನ್ನು ನಿತ್ಯವೂ ಅಡ್ಡಾಡಿಸಿಕೊಂಡು ಬರುತ್ತಿದ್ದೇನೆ."

ನಾನು ಅವಾಕ್ಕಾದೆ. "ನಿನಗೆಷ್ಟು ಸಂಬಳ ಸಿಗುತ್ತದೆ?" ಎಂದು ಕೇಳಿದೆ.

ಆತ ನಕ್ಕು ನುಡಿದ. "ಹೆಚ್ಚೇನಿಲ್ಲ. ಮೂರು ನೂರು ಮಲಾಯನ್ ಡಾಲರು (೪೫೦ ರೂಪಾಯಿ). ನಾವು ಏಳು ಜನ ಅಣ್ಣ ತಮ್ಮಂದಿರಿದ್ದೇವೆ. ಎಲ್ಲರೂ ದುಡಿಯುತ್ತೇವೆ. ಎಲ್ಲರದೂ ಸೇರಿದರೆ ತಿಂಗಳಿಗೆ ಎರಡು ಮೂರು ಸಾವಿರ ರೂಪಾಯಿಗಳಾಗುತ್ತವೆ."

ಇಷ್ಟೆಂದವನೆ ಆತ ಮೋಟಾರನ್ನು ತನ್ನ ಮನೆಯ ಕಡೆ ತಿರುಗಿಸಿದ. ತುಸು ಹೊತ್ತಿನಲ್ಲಿ ಒಂದು ಸುಂದರವಾದ ತೋಟದಲ್ಲಿ ನಮ್ಮ ಮೋಟಾರು ಹೊಕ್ಕಿತು. ಅಲ್ಲಿದ್ದ ಸುಂದರ ಬಂಗಲೆಯೆ ಈ ನೌಕರನ ಮನೆ. ಮನೆಯೊಳಗಿನ ಸುಂದರ ಫರ್ನೀಚರ್, ರೇಡಿಯೋ, ವಿದ್ಯುತ್ ಬೀಸಣಿಕೆ, ರೆಫ್ರಿಜರೇಟರ್ ಎಲ್ಲವನ್ನೂ ಕಂಡು ದಂಗಾದೆ.

ಚಹಾಪಾನದ ನಂತರ, "ಈ ಎಲ್ಲ ತುಟ್ಟಿ ಸಾಮಾನುಗಳನ್ನು ಹೇಗೆ ಕೊಳ್ಳುತ್ತೀರಿ?" ಎಂದು ಕೇಳಿದೆ.

"ಪಿನಾಂಗ್ ಮುಕ್ತ ಬಂದರ. ಯಾವ ಸಾಮಾನಿನ ಮೇಲೂ ಕರವಿಲ್ಲ. ಸಾಮಾನುಗಳು ಅಗ್ಗವಾಗಿ ಸಿಗುತ್ತವೆ. ಮಾತ್ರವಲ್ಲ ಕಂಪನಿಯವರೇ ತಂದು ಮನೆಯಲ್ಲಿ ಜೋಡಿಸಿ ಕೊಡುತ್ತಾರೆ. ಕಂತಿನಿಂದ ಹಣ ಮುಟ್ಟಿಸುತ್ತೇವೆ."

ಪಿನಾಂಗಿನಿಂದ ಇಪ್ಪೋಕ್ಕೆ ತೆರಳಿದೆ. ಇಪ್ಪೋ ನಗರ ರಬ್ಬರಿನ ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. ವರ್ಷಂಪ್ರತಿ ಕೋಟ್ಯಾವಧಿ ಡಾಲರುಗಳ ರಬ್ಬರಿನ ವ್ಯಾಪಾರ ಇಲ್ಲಿ ನಡೆಯುತ್ತದೆ. ನಗರ ಸಣ್ಣದೆಂದೇ ಹೇಳಬಹುದಾದರೂ ಪೇಟೆ ದೊಡ್ಡದು. ವ್ಯಾಪಾರವು ಬಹಳ ಜೋರಿನಿಂದ ನಡೆಯುತ್ತದೆ.


ಇಪ್ಪೋ ತಲುಪುವ ಮೊದಲೊಂದು ಮೋಜಿನ ಸಂಗತಿ ಹಾದಿಯಲ್ಲಿ ನಡೆಯಿತು.

ಮಲಾಯಾ ಪ್ರವೇಶಿಸುವ ಮೊದಲು ಪೋಲೀಸ್ ತಪಾಸಣೆ ನಡೆಸಿ ಪಿನಾಂಗಿನಲ್ಲಿ ಕೊಂಡ ಹೊಸ ವಸ್ತುಗಳ ಮೇಲೆ ಸುಂಕ ವಸೂಲು ಮಾಡುತ್ತಾರೆ. ಸುಂಕದ ಕಟ್ಟೆಯಲ್ಲಿ ನನ್ನ ಬ್ಯಾಗನ್ನು ತಪಾಸಿಸಿದ ಪೋಲೀಸ್, "ನೀವು ಒಬ್ಬರೇ ಪ್ರವಾಸ ಮಾಡುತ್ತಿದ್ದೀರಿ. ಆದರೆ ಬ್ಯಾಗಿನಲ್ಲಿ ಹೆಂಗಸರ ಬಟ್ಟೆಗಳು ತುಂಬಿವೆಯಲ್ಲ? ಅವೆಲ್ಲವೂ ಹೊಸವು. ಮೂರು ಡಾಲರು ಸುಂಕ ಕೊಡಿ," ಎಂದ.

ಹೆಂಗಸರ ಬಟ್ಟೆ ಎಂದೊಡನೆ ಆಶ್ಚರ್ಯವಾಯಿತು ನನಗೆ. 'ಅಯ್ಯೋ, ಇವೆಲ್ಲ ನನ್ನವು' ಎಂದೆ. ಆತ ನಗತೊಡಗಿದ. ನಾವು ತೊಡುವ ಕುರ್ತಾ ಪಾಯಜಾಮಾದಂಥವುಗಳನ್ನೇ ಮಲಾಯಾದಲ್ಲಿ ಸ್ತ್ರೀಯರು ತೊಡುತ್ತಾರೆ. ಆತ ಈ ಸತ್ಯವನ್ನು ಅಲ್ಲಿ ಅಡ್ಡಾಡುತ್ತಿದ್ದ ಸ್ತ್ರೀಯರನ್ನು ತೋರಿಸಿ ನನಗೆ ತಿಳಿಸಿದ. ಅದನ್ನು ನೋಡಿ ನನಗೂ ನಗು ಬಂತು. ಕಡೆಗೂ ಆ ಪೋಲೀಸ್ ಮೂರು ಡಾಲರು ವಸೂಲು ಮಾಡದೇ ಬಿಡಲಿಲ್ಲ.

ಇಪೊದಲ್ಲಿ ರೋಟರಿ ಕ್ಲಬ್ಬಿನವರು ನನ್ನನ್ನು ಸತ್ಕರಿಸಿದರು.

ಇಲ್ಲಿಯ ಪ್ರತಿಯೊಂದು ಕಟ್ಟಡಕ್ಕೂ ಬಣ್ಣ ಬಳಿದು ಚಂದ ಕಾಣುವಂತೆ ಮಾಡಿದ್ದರು. "ಇದೇನು, ಎಲ್ಲ ಮನೆಗಳೂ ಹೊಸದಾಗಿ ಕಟ್ಟಿದಂತೆ ತೋರುತ್ತಿವೆಯಲ್ಲ!" ಎಂದು ಚೀನಿ ಮಿತ್ರನೊಬ್ಬನೊಡನೆ ಹೇಳಿದೆ. ಆತ, "ಪ್ರತಿಯೊಬ್ಬರೂ ಮನೆಗೆ ಸುಣ್ಣ ಬಣ್ಣ ಹಚ್ಚಿಸಬೇಕೆಂದು ನಗರಸಭೆ ಆಜ್ಞೆ ಮಾಡುತ್ತದೆ. ವರ್ಷ ಮುಗಿಯುವುದರೊಳಗಾಗಿ ಹಾಗೆ ಮಾಡಿಸದವರು ದಂಡ ಕೊಡಬೇಕಾಗುತ್ತದೆ" ಎಂದ. ಹ್ಹಾ! ಎಂಥ ಒಳ್ಳೆಯ ವ್ಯವಸ್ಥೆ! ಹನಿ ಹನಿ



ಪಾಳಿ ಬೀಳುತ್ತಲಿತ್ತು. ರಬ್ಬರ್ ರಸ್ತೆಯ ಕನ್ನಡಿಯಲ್ಲಿ ಇಪೊ ನಗರದ ಪ್ರತಿಬಿಂಬ ಕಾಣಿಸುತ್ತಿತ್ತು.

ಇಪೋವಿನಿಂದ ಎರಡು ಮೈಲು ದೂರದಲ್ಲಿರುವ ಗುಡ್ಡಗಳಲ್ಲಿ ಎರಡು ಸುಂದರವಾದ ಬೌದ್ಧ ಗುಹೆಗಳಿವೆ. 'ಬಾಟು ಗವಿ'ಯ ಗೋಡೆಗಳ ಮೇಲೆ ತುಂಬಾ ಚಿತ್ರಗಳಿವೆ. ಇದನ್ನು ಸಂದರ್ಶಿಸುವ ಪ್ರತಿಯೊಬ್ಬ ಚಿತ್ರಕಾರನಿಗೂ, "ನಿಮ್ಮದೊಂದು ಸುಂದರ ಚಿತ್ರವನ್ನು ಇಲ್ಲಿ ಬಿಡಿಸಿ," ಎಂದು ವಿನಂತಿ ಮಾಡಿಕೊಳ್ಳುತ್ತಾರೆ. ಇಲ್ಲಿ ನಾನು ಪ್ರಸಿದ್ಧ ಚೀನೀ ಮತ್ತು ಜಪಾನಿ ಚಿತ್ರಕಾರರ ಚಿತ್ರಗಳನ್ನು ನೋಡಿದೆ. ಬಣ್ಣ ಕುಂಚಗಳನ್ನು ಹಿಡಿದು ನಾನೂ ಹದಿನೈದು ಅಡಿ ಎತ್ತರ ಎಂಟಡಿ ಅಗಲದ ಬುದ್ಧನ ಮೂರ್ತಿಯನ್ನು ಬಿಡಿಸಿ ನನ್ನ ಅಂಕಿತ ಹಾಕಿದೆ.

ನನ್ನ ಆ ಚಿತ್ರವನ್ನು ಕಂಡು ಗವಿಯ ವ್ಯವಸ್ಥಾಪಕರು ಬಹಳ ಸಂತೋಷಗೊಂಡು, "ಭಾರತೀಯನೊಬ್ಬ ಇಲ್ಲಿ ಚಿತ್ರ ಬಿಡಿಸಿದ್ದು ಇದೇ ಮೊದಲು. ನಿಮ್ಮ ಚಿತ್ರ ಇಲ್ಲಿರುವವರೆಗೂ ನಿಮ್ಮ ನೆನಪು ನಮಗುಳಿಯುತ್ತದೆ," ಎಂದರು.

ಪ್ರವಾಸೀ ಚಿತ್ರಕಾರರಿಂದ ಈ ರೀತಿ ಚಿತ್ರ ಬರೆಯಿಸಿಕೊಳ್ಳುವ ಕಲ್ಪನೆ ನನಗೆ ಬಲು ಆಕರ್ಷಕವೆನ್ನಿಸಿತು.

ನಾನು ನಿಜವಾದ ಮಲಾಯನ್ ಚೀನವನ್ನು ಕಂಡದ್ದು ಪನಕೋರ್‌ನಲ್ಲಿ. ಚಿಕ್ಕದೊಂದು ಬಂದರವಾದ ಫಿಶಿಂ ಐಲಂಡ್‌ಗೆ (ಮೀನು ಹಿಡಿಯುವ ದ್ವೀಪ) ಮೋಟಾರಿನಲ್ಲಿ ಹೋದೆ. ಕೆಲವರು ಇದನ್ನು ಪಿಕ್‌ನಿಕ್ ಐಲಂಡ್ (ವನಭೋಜನ ದ್ವೀಪ) ಎಂದೂ ಕರೆಯುತ್ತಾರೆ. ರಜಾ ದಿನಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಬರುತ್ತಾರೆ. ಮೀನುಗಾರಿಕೆ ಇಲ್ಲಿಯ ಮುಖ್ಯ ಉದ್ಯೋಗ. ಚೀನಿ ಮತ್ತು ಮಲಾಯನ್ ಮೀನುಗಾರರನ್ನೂ ಮೀನು ಹಿಡಿಯುವ ಅವರ ವಿವಿಧ ರೀತಿಗಳನ್ನೂ ಕಂಡ.

ಚೀನೀ ಮೀನುಗಾರರ ಬಲೆ ಮೈಲುದ್ದವಾಗಿರುತ್ತದೆ. ಆದರೆ ಮಲಾಯನ್ ಮೀನುಗಾರರು ಬಿದಿರಿನಿಂದ ತಯಾರಿಸಿದ ಚಿಕ್ಕ ಬಲೆಗಳಿಂದ ಮೀನು ಹಿಡಿಯುತ್ತಾರೆ. ಚೀನಿಯರು ತಮ್ಮ ಮನೆಗಳನ್ನು ಕಟ್ಟಿಗೆಗಳಿಂದ ಕಟ್ಟುತ್ತಾರೆ. ಮಲಾಯನ್ನರು ಬಿದಿರು, ತಾಳೆಗರಿಗಳಿಂದ ತಮ್ಮ ಮನೆಗಳನ್ನು ಕಟ್ಟುತ್ತಾರೆ. ನೆಲದಲ್ಲಿ ಐದು ಹತ್ತು ಅಡಿ ಎತ್ತರದ ಕಂಬಗಳನ್ನು ಹೂಳಿದು ಅವುಗಳ ಮೇಲೆ ಮನೆಗಳನ್ನು ಕಟ್ಟುತ್ತಾರೆ. ಈ ಮನೆಗಳು ಸುಂದರವಾಗಿರುತ್ತವೆ.

ಒಬ್ಬ ಚೀನೀ ಮೀನುಗಾರನ ಸ್ನೇಹ ಮಾಡಿಕೊಂಡು ಐದಾರು ದಿನ ಅವರ ಮನೆಯಲ್ಲಿ ಇದ್ದೆ. ಈತನ ಕುಟುಂಬ ಬಲು ಸುಖಿಯಾಗಿತ್ತು. ಮನೆಯವರೆಲ್ಲರೂ ಮೀನು ಹಿಡಿಯುವ, ಮಾರುವ ಉದ್ಯೋಗ ಮಾಡುತ್ತಾರೆ. ನಿತ್ಯವೂ ಊಟಕ್ಕೆ ಮೀನು, ಕೋಳಿ, ತತ್ತಿ, ಅನ್ನ ಇರುತ್ತಿತ್ತು. ಚೀನೀ ಜನರಿಗೆ ಒಂದು ದಿನವಾದರೂ ಹಂದಿಯ ಮಾಂಸವಿಲ್ಲದೆ ನಡೆಯುವುದಿಲ್ಲ. ಆದರೆ ನನಗಾಗಿ ಅವರು ನಾನಿರುವವರೆಗೂ ಅದನ್ನು ಮುಟ್ಟಲಿಲ್ಲ.

ಇಲ್ಲಿ ಪ್ರತಿಯೊಬ್ಬ ಮೀನುಗಾರನ ಮನೆಯಲ್ಲೂ ಇಲೆಕ್ಟ್ರಿಕ್ ಮಶಿನ್, ಬರ್ಫ ತಯಾರಿಸುವ ಮಶಿನ್, ರೆಫ್ರಿಜರೇಟರ್, ಮೀನು ಹಿಡಿಯುವ ಆಧುನಿಕ ಸಾಧನ-ಸಾಮಗ್ರಿಗಳಿರುವ ದೋಣಿ ಇವೆಲ್ಲ

ಇರುತ್ತವೆ.

ಒಂದು ದಿನ ಮಶೀದೆಯ ನೀರಿನ ಟಾಕಿಯ ಹತ್ತಿರ ಮಲಾಯನ್ ಮುಸ್ಲಿಂ ಮಹಿಳೆಯೊಬ್ಬಳನ್ನು ಕಂಡೆ. ಆಶ್ಚರ್ಯಚಕಿತನಾದೆ. ಆ ಹೆಂಗಸು ತನ್ನ ಎದೆಯ ಮೇಲೆ ಯಾವ ವಸ್ತ್ರವನ್ನೂ ತೊಟ್ಟಿರಲಿಲ್ಲ. ಈ ರೀತಿಯಾಗಿ ತೆರೆದ ಎದೆಯಿಂದ ಯಾವಳಾದರೂ ಮುಸ್ಲಿಂ ಸ್ತ್ರೀ ಮಶೀದೆಯ ಆವಾರದಲ್ಲಿ ಬಂದರೆ ನಮ್ಮ ಕಡೆಯ ಮೌಲ್ವಿಗಳು ಅವಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಿಯಾರು.

ಮಲಾಯಾದಲ್ಲಿ ಧರ್ಮಬಂಧನಗಳು ಬಿಗಿಯಾಗಿಲ್ಲ. ಮಲಾಯನ್ನರು ಮುಸ್ಲಿಮರಾದರೂ ನಮ್ಮಲ್ಲಿಯ ಮುಸ್ಲಿಮರಂತೆ ಅವರ ಜೀವನವಿಲ್ಲ. ಇಲ್ಲಿ ಹೆಂಗಸು ಕೂಡ ಒಂದೇ ಒಂದು ಲುಂಗಿ ಉಟ್ಟುಕೊಂಡು ಸಮಾಜದಲ್ಲಿ ಅಡ್ಡಾಡಬಲ್ಲಳು. ಘೋಷಾ ಪದ್ಧತಿ ಇಲ್ಲ. ಸ್ತ್ರೀಯರ ಉಡುಪೆಂದರೆ ಲುಂಗಿ ಮತ್ತು ಕುರ್ತಾ. ಪುರುಷರ ಉಡುಪು ಒಂದು ಲುಂಗಿ ಮತ್ತು ಗಂಜೀಫ್ರಾಕ್. ಪ್ರತಿಯೊಬ್ಬರ ಮನೆಯಲ್ಲೂ ನಿತ್ಯ ಕುರಾಣ ಪಠನ ನಡೆಯುತ್ತದೆ.

ವ್ಯಾಪಾರ, ಕೊಡಕೊಳ್ಳುವಿಕೆ ಇತ್ಯಾದಿ ವ್ಯವಹಾರಗಳನ್ನೆಲ್ಲ ಇಲ್ಲಿ ಸ್ತ್ರೀಯರೇ ಮಾಡುತ್ತಾರೆ. ಮನೆಗೆಲಸ ಮಕ್ಕಳ ಆರೈಕೆ ಮುಂತಾದವುಗಳನ್ನು ಗಂಡಸರು ಮಾಡುತ್ತಾರೆ.

ಅಲ್ಲಿಂದ ಕೌಲಾಲಂಪುರಕ್ಕೆ ಬಂದೆ. ಇಲ್ಲಿ ಭಾರತದ ಹೈ ಕಮೀಶನರ್ ಕಚೇರಿಯವರು ನನಗಾಗಿ ಸುಂದರ ಹೋಟೆಲೊಂದರಲ್ಲಿ ವಸತಿ ಭೋಜನಗಳ ಏರ್ಪಾಡು ಮಾಡಿದ್ದರು. ೧೯೬೧ ನವೆಂಬರ್ ೧೩ರಿಂದ ೧೮ರ ವರೆಗೆ ಇಲ್ಲಿಯ ಬ್ರಿಟಿಶ್ ಕೌನ್ಸಿಲ್ ಕಲ್ಚರಲ್ ಸೆಂಟರಿನಲ್ಲಿ ನನ್ನ ಚಿತ್ರ ಪ್ರದರ್ಶನ ನಡೆಯಲಿತ್ತು. ಪ್ರದರ್ಶನ ಯಶಸ್ವಿಯಾಯಿತು. ನನ್ನ ಚಿತ್ರಗಳೂ ಮಾರಾಟವಾದವು.

ಇಲ್ಲಿಯ ಮಲಾಯನ್ ವಿದ್ಯಾಪೀಠವನ್ನು ನೋಡಿದೆ. ಪ್ರೊಫೆಸರರ ಮನೆಗಳು ವಿದ್ಯಾಪೀಠದ ಕಂಪೌಂಡಿನಲ್ಲಿಯೇ ಇವೆ. ಹುಡುಗರು ಹುಡುಗಿಯರಿಗೆ ಪ್ರತ್ಯೇಕ ವಸತಿಗೃಹವಿರದೆ ಒಂದೇ ಇದೆ. ವಿಜ್ಞಾನ, ಸಾಹಿತ್ಯ, ವೈದ್ಯಕೀಯಶಾಸ್ತ್ರ, ಸ್ಥಾಪತ್ಯಶಾಸ್ತ್ರ ಮುಂತಾದ ಅನೇಕ ಶಾಸ್ತ್ರಗಳ



ಶಿಕ್ಷಣ ಕೊಡಲ್ಪಡುತ್ತಿವೆ. ಇಲ್ಲಿಯ ಪ್ರೊಫೆಸರರಿಗೆ ತಿಂಗಳ ೨೦೦೦–೩೦೦೦ ರೂಪಾಯಿ ಸಂಬಳ ಸಿಗುವದಾದರೂ ಅವರು ಉಳಿಸಿಕೊಳ್ಳುವುದು ತೀರ ಕಡಿಮೆ. ಕಾಲೇಜು ಬಿಟ್ಟ ನಂತರ ಇಸ್ಪೀಟು, ಕುಣಿತ, ಜುಗಾರಿಗಳಲ್ಲಿ ಹೊತ್ತು ಕಳೆಯುವವರು ತೀರ ವಿರಳ.

ಟಿನ್ನಿನ ಗಣಿಗಳಿಗಾಗಿ ಪ್ರಸಿದ್ಧವಾಗಿರುವ ಕೌಲಾಲಂಪುರದಲ್ಲಿ ಎತ್ತ ನೋಡಿದರತ್ತ ಗಣಿಗಳೇ ಗಣಿಗಳು, ನೀರೇ ನೀರು.

ಕೌಲಾಲಂಪುರ ಬಿಡುವಾಗ ಅಲ್ಲಿಯ ಚಿತ್ರಕಾರರು ಮತ್ತು ಫೆಡರೇಶನ್ ಆಫ್ ಮಲಾಯಾ ಆರ್ಟ್ ಕೌನ್ಸಿಲ್ಲಿನವರು ಶ್ರೀ ಫ್ರಾಂಕ್ ಸಾಲ್ವಿನ್ನರ ಮನೆಯಲ್ಲಿ ನನ್ನನ್ನು ಸತ್ಕರಿಸಿದರು.

ಆಮೇಲೆ ಮಲಾಯಾದ ಹಳೆಯ ರಾಜಧಾನಿಯಾದ ಅತ್ಯಂತ ಪ್ರಾಚೀನ ನಗರವೂ ಆದ ಮಲಾಕಾಕ್ಕೆ ಹೋದೆ. ಇಲ್ಲಿಯ ಹಳೆಯ ವಸ್ತು ಸಂಗ್ರಹಾಲಯ ನೋಡತಕ್ಕಂಥದು.

ಸೆರೆಂಬಾನ್ ನಗರದಲ್ಲಿ ದೊಡ್ಡ ದೊಡ್ಡ ಗಿಡಗಳ ತೋಟಗಳು ತುಂಬಿವೆ. ಇಲ್ಲಿ ಒಂದು ಚೀನೀ ಚಿತ್ರಶಾಲೆ ಮತ್ತು ೪೦೦ ವರ್ಷಗಳ ಮಲಾಯನ್ ಮನೆಯೊಂದನ್ನು ಇದ್ದಕ್ಕಿದ್ದಂತೆ ಕಾಯ್ದಿರಿಸಿದ್ದು ಅವು ನೋಡುವಂಥವಾಗಿವೆ.

ಸಿಂಗಾಪುರಕ್ಕೆ ಹೋಗುವಾಗ ಜುಹಾರ ನಗರದ ಮುಂದೆ ವಸಯಿ ಆಖಾತದಂಥ ಒಂದು ಸಣ್ಣ

ಆಧಾರವನ್ನು ನೀಡಬೇಕಾಗುತ್ತದೆ. ಇದರ ಮೇಲೆ ಕಟ್ಟುವ ಸೇತುವೆಯಿದೆ. ಅರ್ಧ ಸೇತುವೆಯ ಮೇಲೆ 'ಮಲಾಯಾ ರಾಜ್ಯ' ಎಂದು ಬರೆದಿದೆ. ಉಳಿದರ್ಧ ಸಿಂಗಾಪುರಕ್ಕೆ ಸೇರಿದ್ದು.

ಸಿಂಗಾಪುರ ೧೫ ಲಕ್ಷ ಜನರ ಶಹರ. ಅದರಲ್ಲಿ ೧೧ ಲಕ್ಷ ಚೀನೀಯರು, ಎರಡು ಲಕ್ಷ ಮಲಾಯನ್ನರು, ಒಂದು ಲಕ್ಷ ಇಂಗ್ಲೀಷರು ಮತ್ತು ಒಂದು ಲಕ್ಷ ಭಾರತೀಯರಿದ್ದಾರೆ.* ಮುಕ್ತ ಬಂದರವಾದ್ದರಿಂದ ಇಲ್ಲಿ ಜಗತ್ತಿನ ಎಲ್ಲೆಡೆಗಳಿಂದ ವ್ಯಾಪಾರಿ ಹಡಗುಗಳು ಬಂದು ಹೋಗಿ ಮಾಡುತ್ತವೆ. ಸಮುದ್ರ ತೀರದಲ್ಲಿ ೧೫-೨೦ ಅಂತಸ್ತುಗಳ ಕಟ್ಟಡಗಳು ಇವೆ.

ಚೈನಾ ಟೌನ್ ಪ್ರದೇಶದಲ್ಲಿ ಚೀನೀಯರ ದಟ್ಟ ವಸತಿಯಿದೆ. ಚೀನೀ ಖಾದ್ಯ ವಸ್ತುಗಳನ್ನು ತಯಾರಿಸುವ ಬಹಳಷ್ಟು ಚಿಕ್ಕ ದೊಡ್ಡ ಉಪಾಹಾರ ಗೃಹಗಳಿವೆ. ಇಲ್ಲಿ ಹಂದಿ ತಿನ್ನುವ ಚೀನೀ ಮನುಷ್ಯ, ಕೋಳಿ ತಿನ್ನುವ ಮುಸಲ್ಮಾನ, ಅನ್ನಸಾರು ಉಣ್ಣುವ ಹಿಂದು ಎಲ್ಲರೂ ಒಂದೇ ಮೇಜಿನ ಮೇಲೆ ಊಟ ಮಾಡುತ್ತಾರೆ. ಅವರೂ ಒಬ್ಬರನ್ನೊಬ್ಬರು ಟೀಕಿಸುವುದಿಲ್ಲ, ತಿರಸ್ಕಾರದಿಂದ ನೋಡುವುದಿಲ್ಲ.

ಚೀನೀ ಜನರ ಮನೆಗಳು ಮಕ್ಕಳಿಂದ ತುಂಬಿ ಹೋಗುತ್ತವೆ. ಚೀನೀ ಮನುಷ್ಯ ಮೂರು ನಾಲ್ಕು ಹೆಂಡಿರನ್ನು ಮದುವೆಯಾಗುವುದು ವಿಶೇಷವಲ್ಲವಾದ್ದರಿಂದ ಪ್ರತಿ ಮನೆಯಲ್ಲಿ ೨೦-೨೫ ಮಕ್ಕಳಿರುತ್ತಾರೆ. ಮನೆಯಲ್ಲಿ ತಂದೆ ಅಥವಾ ತಾಯಿ ಸತ್ತಿದ್ದರೆ ಚೀನೀಯರು ಅಂಗಿಯ ತೋಳಿನ ಮೇಲೆ ಒಂದು ಗುರುತು ಮಾಡುತ್ತಾರೆ. ಇಬ್ಬರೂ ಸತ್ತಿದ್ದರೆ ಎರಡು ಗುರುತು ಮಾಡುತ್ತಾರೆ.

ಚೀನೀ ಮನುಷ್ಯ ಸತ್ತ ಮೇಲೆ ಅವನ ಶವದ ಪೆಟ್ಟಿಗೆ ಮನೆಯಲ್ಲಿ ಕನಿಷ್ಠವೆಂದರೆ ಎಂಟು ದಿನಗಳವರೆಗಾದರೂ ಇಡುತ್ತಾರೆ. ಜೀವಹೋದವರೂ ತಿರುಗಿ ಬಂದರೆ ಬರಲಿ ಎನ್ನುವುದೇ ಇದರ ಉದ್ದೇಶ.

ಈ ದಿನಗಳಲ್ಲಿ ಊಟ, ಕುಣಿತ, ಹಾಡುಗಳು ನಡೆಯುತ್ತವೆ. ಸಾವಿರಾರು ರೂಪಾಯಿಗಳು ಧ್ವಂಸವಾಗುತ್ತವೆ. ಎಂಟು ದಿನಗಳ ನಂತರ ಇದನ್ನು ಜೀವಪರರೆಲ್ಲರು ಎತ್ತಿಕೊಂಡು ಮೆರವಣಿಗೆಯಲ್ಲಿ ಸ್ಮಶಾನದಲ್ಲಿ ಹೂಳಿದ ಮೇಲೆ ಗೋರಿ ಕಟ್ಟುತ್ತಾರೆ.

ಇಲ್ಲಿ 'ಟೈಗರ್ ಬಾಮ್' ಎಂಬ ದೊಡ್ಡ ತೋಟದಲ್ಲಿ ಚೀನೀ ಜನರ ಕಲಾಕೃತಿಗಳ ಮಾದರಿಗಳಿಲ್ಲಿ ಕಾಣಸಿಗುತ್ತವೆ. ಇಲ್ಲಿ ಒಂದು ವಾರ ನಮ್ಮ ಚಿತ್ರ ಪ್ರದರ್ಶನ ನಡೆಯಿತು. ✡


* ಇವು ೧೯೬೦ ರಲ್ಲಿಯ ಅಂಕಿಸಂಖ್ಯೆಗಳೆಂಬುದನ್ನು ಗಮನದಲ್ಲಿರಿಸಿಕೊಳ್ಳಿ.



ಕಲೆ – ವಿದ್ಯೆ

ಪ್ರಾಚೀನ ಮನುಷ್ಯರು ಗಮ್ಯವಾದ ವಿವರಗಳನ್ನೆಲ್ಲ ಕಲೆ, ವಿದ್ಯೆ, ಎಂದು ಇಬ್ಭಾಗವಾಗಿ ವಿಭಜನೆ ಮಾಡಿದರು. ವಿದ್ಯೆಯೆಂದರೆ ಅಭ್ಯಾಸಪ್ರಧಾನವಾಗಿ ಶಾಸ್ತ್ರಗಳನ್ನು ಆಲೋಚನೆ ಮಾಡಿ ಪ್ರೌಢಿಮೆಯನ್ನು ಪಡೆಯುವ ವಿಧಾನ. ವಿದ್ಯೆಯಿಂದ ಕೌಶಲ ಒದಗುತ್ತದೆ. ಆದರೆ ಕಲೆ ಎಂಬುದು ಪ್ರತಿಭಾಪ್ರಧಾನವಾದದ್ದು; ಸ್ವೋಪಜ್ಞತೆಯಿಂದ ಅದರಲ್ಲಿ ಸಾಮರ್ಥ್ಯ ಒದಗುತ್ತದೆ. ಭಾರತೀಯರಲ್ಲಿ ಮೊದಮೊದಲಿಗೆ ಈ ವಿಭಾಗ ಅಷ್ಟು ಸ್ಪಷ್ಟವಾಗಿಲ್ಲ. ಹಲವಾರು ಸಂದರ್ಭಗಳಲ್ಲಿ ಅದನ್ನು ಏಕದೇಶೀಯವಾಗಿ ಪ್ರಯೋಗ ಮಾಡುತ್ತಾರೆ. ನಿದರ್ಶನಕ್ಕೆ- ಧನುರ್ವಿದ್ಯೆ, ನಕ್ಷತ್ರವಿದ್ಯೆ, ಬ್ರಹ್ಮವಿದ್ಯೆ, ಪಾಕಕಲೆ, ಶಿಲ್ಪಕಲೆ, ನೃತ್ಯಕಲೆ ಇತ್ಯಾದಿ.

—ಕನ್ನಡ ವಿಶ್ವಕೋಶದಿಂದ



ಎಂ. ಡಿ. [illegible]

ಓದಿ ಓದಿ ಹೆಸರು ಮತ್ತು ಹಣ ಗಳಿಸುವ ಕಾಲ ಎಂದಿಗೋ ಮುಗಿಯಿತು. ನಮ್ಮ ಬಾಲ್ಯದಲ್ಲಿ ನಾವು ಆಟದಲ್ಲಿ ಮೈಮರೆಯುತ್ತಿದ್ದಂತೆಯೇ ನಮ್ಮ ಹಿರಿಯರು "ಲೋ ಕತ್ತೆ, ಬರೀ ಆಡ್ತಿಯಲ್ಲೋ, ಏನಾದರೂ ನಾಲ್ಕು ಅಕ್ಷರ ಓದೋ, ಒಂದು ಚಾಕರಿ ಸಿಗುತ್ತೆ ಕಣಯ್ಯಾ," ಎನ್ನುವ ಯುಗ ಮುಗಿಯಿತು. ನಮ್ಮ ಹುಡುಗರು ಇಂದು ಓದುತ್ತಿದ್ದಲ್ಲಿ, "ಅಯ್ಯೋ ಬೆಪ್ಪೇ, ಏನಾದರೂ ಆಡಿ ಕೈಕಾಲು ಮುರಿದುಕೊಳ್ಳಯ್ಯಾ, ನಾಳೆ ಲಕ್ಷಾಧೀಶನಾಗುವಿ," ಎಂದೆನ್ನುವ ಸಮಯ ಪ್ರಾಪ್ತವಾಗಿದೆ. ಇದರರ್ಥ ಆಡಿದವರೆಲ್ಲರೂ [illegible] ಹಣ ಸಂಪಾದಿಸುವರೆಂದೇನೂ ಅಲ್ಲ. ಆದರೆ ಏಕಲವ್ಯನ ಏಕಾಗ್ರಚಿತ್ತದಿಂದ ಪರಿಶ್ರಮ ಪಟ್ಟಲ್ಲಿ ಲಕ್ಷ್ಮೀ ಒಲಿಯುವುದರಲ್ಲಿ ಸಂಶಯವಿಲ್ಲ.

ಅತ್ಯಂತ ಕಡಿಮೆ ಸಮಯದಲ್ಲಿ ಅತ್ಯಧಿಕ ಹಣ ಗಳಿಸಬೇಕಾದ್ದಲ್ಲಿ ಟೆನಿಸ್, ಬಾಕ್ಸಿಂಗ್, ಚೆಸ್, ಫುಟ್‌ಬಾಲ್ ಅಥವಾ ಪೋಲೋ ಆಟದಲ್ಲಿ ವೃತ್ತಿಪರ ಅಂತಾರಾಷ್ಟ್ರೀಯ ಮಟ್ಟದ ಆಟಗಾರನಾದರೆ ಸಾಕು. ಅತ್ಯಧಿಕ ಹಣ ಗಳಿಸುವ [illegible] ವೆಂದರೆ ಟೆನಿಸ್. ಇಂದು ಸುಮಾರು ೫೦ ಪುರುಷ ಮತ್ತು ಮಹಿಳಾ ಟೆನಿಸ್ ಆಟಗಾರರು [illegible] ಪತಿಗಳಾಗಿದ್ದಾರೆ. ಬೋರ್ನ್ ಬೋರ್ಗನ ಪ್ರತಿದಿನದ ಗಳಿಕೆಯೇ ಸುಮಾರು ೭೦,೦೦೦ ರೂಪಾಯಿಗಳು! ಒಂದು ವರ್ಷ ಆತನು [illegible] ೪ ಕೋಟಿ ರೂಪಾಯಿಗಳನ್ನು [illegible]! ಆತನ ತಲೆಯಿಂದ ಹಿಡಿದು ಪಾದದ [illegible] ಪ್ರತಿಯೊಂದು ಅವಯವವೂ ಹಣ ಪಡೆಯುತ್ತದೆ. ಆಡುವಾಗ ಕೂದಲನ್ನು ಬಿಗಿ ಹಿಡಿಯುವುದಕ್ಕಾಗಿ ಹಣೆಗೆ ಕಟ್ಟಿಕೊಳ್ಳುವ [illegible] ಮೇಲೆ ಡೆನ್ಮಾರ್ಕಿನ ಮದ್ಯ ಕಂಪನಿಯ [illegible] ರಾತು ಇದ್ದು ಇದಕ್ಕಾಗಿ ಆ ಕಂಪನಿ [illegible] ಪ್ರತಿವರ್ಷ ೮ ಲಕ್ಷ ರೂಪಾಯಿ [illegible] ಆತನು ಎರಡು ಕಂಪನಿಗಳ [illegible] ಬಳಸುತ್ತಿದ್ದು ಅದಕ್ಕಾಗಿ ಆ ಒಂದೊಂದು ಕಂಪನಿಯೂ ಆತನಿಗೆ ವರ್ಷಕ್ಕೆ ೮ ಲಕ್ಷ ರೂಪಾಯಿ ಕೊಡುತ್ತಿದೆ. ಆತನು ಆಡುವಾಗ ಧರಿಸಿಕೊಳ್ಳುವುದು ಇಟಲಿಯ "ಫಿಲಾ" ಕಂಪನಿಯ ಬಟ್ಟೆ

ಇದಕ್ಕಾಗಿ ಆತನಿಗೆ ದೊರಕುವುದು ೩೨ ಲಕ್ಷ ರೂಪಾಯಿಗಳು. ಸ್ಪೇನಿನ ಒಂದು ಕಂಪನಿಯ ಪರವಾಗಿ ಆತನು ಕೆಲವೊಂದು ವಾರ ಮಾರ್ಬೆಲಾದಲ್ಲಿ ಆಡುವುದರಿಂದ ೮೦ ಲಕ್ಷ, ಲಾಸ್ ವೆಗಾಸ್‌ನ ಸಿಜರ್ಸ್ ಪ್ಯಾಲೆಸ್ ಆಟಗಾರನೆಂದು ೧೩ ಲಕ್ಷ, ಡಿ ಆಡೋರಾ ಕಂಪನಿಯ ಟೆನಿಸ್ ಬೂಟುಗಳನ್ನು ಧರಿಸುವುದರಿಂದ ೨೩ ಲಕ್ಷ, ಕೆಲ ಸಮಾರಂಭಗಳಲ್ಲಿ ವೇದಿಕೆಯ ಮೇಲೆ ನಿಲ್ಲುವುದಕ್ಕೆ ಫೀ ಎಂದು ೪೦ ಲಕ್ಷ, ಮದ್ಯ, ಸೋಪು, ಕ್ರೀಮ್, ತೈಲ, ಬಿಸ್ಕತ್ತು ಮುಂತಾದವುಗಳ ಜಾಹೀರಾತುಗಳ ಮೂಲಕ ೮೦ ಲಕ್ಷ ರೂಪಾಯಿಗಳು ಪ್ರತಿವರ್ಷ ದೊರಕುತ್ತಿವೆ. ಈಗ ನೀವೇ ಹೇಳಿ ಓದಬೇಕೋ, ಆಡಬೇಕೋ?

ಇವುಗಳ ಹೊರತಾಗಿ ಆತನಿಗೆ ಟೆನಿಸ್ ಆಟದಿಂದ ೧೯೭೯ ರಲ್ಲಿ ೮೦ ಲಕ್ಷ, ೧೯೮೦ ರಲ್ಲಿ ೪೨ ಲಕ್ಷ ರೂಪಾಯಿಗಳು ದೊರೆತವು. ಈ ವರ್ಷ ಆತನು ವಿಂಬಲ್ಡನ್ನಿನಲ್ಲಿ ಭಾಗವಹಿಸದಿದ್ದರೂ ಗಳಿಕೆ ಕಡಿಮೆಯಾಗಲಿಲ್ಲ. ಜುಲೈ ೧೯೮೦ ರಲ್ಲಿ ಮದುವೆಯ ಗಡಿಬಿಡಿಯಲ್ಲಿ ಬೋರ್ಗನಿಗೆ ಅನೇಕ ಟೂರ್ನಾಮೆಂಟುಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ ತನ್ನ ಮದುವೆಯ ಚಿತ್ರೀಕರಣದ ಹಕ್ಕನ್ನು ಮಾರಿ ೧೦ ಲಕ್ಷ ದೊರಕಿಸಿದನು. ಇವನಂತೆ ಜಾನ್ ಮೆಕೆನ್ರೊ, ಜಿಮ್ಮಿ ಕಾನರ್ಸ್, ಆರ್ಥರ್ ಆ್ಯಶರ ವಾರ್ಷಿಕ ಗಳಿಕೆ ಮೂರು ಕೋಟಿ ರೂಪಾಯಿಗಳು. ಆಟಗಾರನಿಗೆ ಕೇವಲ ಪ್ರತಿಫಲವೆಂದು ಮಾತ್ರ ಹಣ ದೊರೆಯುದೇ ಇತರ ಸೌಕರ್ಯಗಳೂ ಲಭ್ಯ. ಬೋರ್ಗ್ ಎಲ್ಲಿ ಹೋಗುವನೋ ಅಲ್ಲಿ ಆತನಿಗಾಗಿ ಸ್ವೀಡಿಶ್ 'ಸಾಬ್' ಕಾರು ದಾರಿ ಕಾಯುವುದು ! ಯಾವುದೋ ಪಂಚತಾರಾ ಹೋಟೇಲಿನಲ್ಲಿ ಪುಕ್ಕಟೆ ಊಟ ಮತ್ತು ವಸತಿಯ ವ್ಯವಸ್ಥೆ. ಆತನು ಆರು ದೇಶಗಳಲ್ಲಿ ಅರಮನೆಗಳನ್ನು ನಾಚಿಸುವಂಥ ಆರು ಭವ್ಯ ಸೌಧಗಳನ್ನು ನಿರ್ಮಿಸಿದ್ದಾನೆ. ೧೯೭೮ ರಲ್ಲಿ ಆತ ಸ್ವೀಡನ್ನಿನ ಸಮೀಪದಲ್ಲಿ ಒಂದು ದ್ವೀಪವನ್ನೇ ಖರೀದಿಸಿದ. ತೈಲ ಮತ್ತು ನೈಸರ್ಗಿಕ ಅನಿಲ ಉದ್ಯಮದಲ್ಲಿ ಹಣ ತೊಡಗಿಸಿದ್ದಾನೆ. ಸಾಕಷ್ಟು ಬಂಗಾರ, ವಜ್ರಗಳನ್ನು ಸಂಗ್ರಹಿಸಿದ್ದಾನೆ. ಕರದ ಕಪಿಮುಷ್ಟಿಯಿಂದ ಪಾರಾಗಲು ಕರಮುಕ್ತ ಮೊನಾಕೋ ದೇಶದಲ್ಲಿ ನೆಲೆಸಿದ್ದಾನೆ.

ಹಣ ಗಳಿಸುವುದರಲ್ಲಿ ಮಹಿಳಾ ಆಟಗಾರರೂ ಹಿಂದೆ ಬಿದ್ದಿಲ್ಲ! ಬಿಲಿ ಜೀನ್ ಕಿಂಗ್ ೮೦ ಲಕ್ಷ ಪಡೆದಿದ್ದಾಳೆ. ಕ್ರಿಸ್ ಎವರ್ಟ್ ಲಾಯ್ಡ್ ಹೆಚ್ಚು ಪಂದ್ಯಾಟಗಳನ್ನು ಆಡದಿದ್ದರೂ ಕೇವಲ ಜಾಹೀರಾತುಗಳ ಮೂಲಕ ೧ ಕೋಟಿ ೨೦ ಲಕ್ಷ ರೂಪಾಯಿ ಗಳಿಸಿದಳು! ಮಾರ್ಟಿನಾ ನವರಾತಿಲೋವಾ, ಟ್ರೇಸಿ ಆಸ್ಟಿನ್, ಇವಾನ್ ಗೂಲಾಗಾಂಗ್ ಮುಂತಾದವರ ವಾರ್ಷಿಕ ಗಳಿಕೆಯು ಸುಮಾರು ೮೦ ಲಕ್ಷ ರೂಪಾಯಿ. !

ಬಾಕ್ಸಿಂಗ್ ಅಮೇರಿಕದ ಜನಪ್ರಿಯ ಆಟ. ಕಿಂಪ್ಲಿ. [illegible], ಲಿಸ್ಟನ್, ಜಾರ್ಜ್ ಫೋರ್‌ಮನ್, ಜೋ ಫ್ರೇಜಿಯರ್, ಲಿಯೋನ್ ಸ್ಪಿಂಕ್ಸ್ ಮುಂತಾದವರು ಅತಿ ಶ್ರೀಮಂತ ಬಾಕ್ಸರುಗಳು. ಮಹಮ್ಮದ ಅಲಿ ಮತ್ತು ಜೋ ಫ್ರೇಜಿಯರ್ ಕಣದಲ್ಲಿ ಇಳಿದಾಗ ಪ್ರತಿಯೊಬ್ಬರಿಗೂ ಸಿಗುವುದು ತಲಾ ಎರಡೆರಡು ಕೋಟಿ ರೂಪಾಯಿಗಳು! ಲ್ಯಾರಿ ಹೋಮ್ಸ್‌ನಿಂದ ಸೋತರೂ ಮಹಮ್ಮದಲಿಗೆ ದೊರಕಿದ್ದು ೬ ಕೋಟಿ ೪೦ ಲಕ್ಷ. ಅಲಿ ಕಳೆದ ಎರಡು ದಶಕಗಳಲ್ಲಿ ೪೦ ಕೋಟಿ ರೂಪಾಯಿ ಗಳಿಸಿರಬಹುದು. ಅವನ ಪ್ರತಿ ದಿನದ ಖರ್ಚೇ ೮೦,೦೦೦ ರೂಪಾಯಿಗಳಂತೆ! ಅಲಿ ಇತರ ವಿಧಾನಗಳಿಂದಲೂ ಹಣ ಪಡೆಯುತ್ತಾನೆ. ಕ್ಯಾನಡಾದ ಒಂದು ಸ್ಥಳದಲ್ಲಿರುವದರಿಂದ ೪ ಲಕ್ಷ, ಲಂಡನ್ನಿನಲ್ಲಿರುವುದರಿಂದ ೮ ಲಕ್ಷ, ಸಿಜರ್ಸ್ ಪರವಾಗಿ ರೋಮ್, ಹಾಂಗ್‌ಕಾಂಗುಗಳಲ್ಲಿ ಉಪಸ್ಥಿತನಿದ್ದು ಅತಿಥಿಗಳನ್ನು ಬರಮಾಡಿಕೊಳ್ಳುವುದರ ಮೂಲಕ ೧೬ ಲಕ್ಷ ರೂಪಾಯಿಗಳು ಸಿಗುತ್ತವೆ! ಫುಟ್‌ಬಾಲ್ ಆಟಗಾರರಿಗೆ ಒಂದು ಕ್ಲಬ್ಬಿನಿಂದ ಮತ್ತೊಂದು ಕ್ಲಬ್ಬಿಗೆ ಬರಲು ಪ್ರಲೋಭನೆ, ಲಂಚ ನೀಡಲಾಗುತ್ತದೆ. ೧೯೭೮ರಲ್ಲಿ ಗಾರ್ಡನ್ ಮೆಕ್ವೀನ್ ೧ ಕೋಟಿ ರೂಪಾಯಿ ಸ್ವೀಕರಿಸಿ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ಸೇರಿದನು. ಅದೇ ವರ್ಷ ಈ ಕ್ಲಬ್ ಅರ್ಜೆಂಟೀನಾದ ಆರ್ಡಿಲೆಸ್ ಮತ್ತು ವಿಲಾ ಎಂಬ ಇಬ್ಬರು ಆಟಗಾರರಿಗೆ ತಲಾ ಒಂದೂವರೆ ಕೋಟಿ ರೂಪಾಯಿ ಕೊಟ್ಟು [illegible]

ಪರವಾಗಿ ಆಡಲು ಆಮಂತ್ರಿಸಿತು. ಬರ್ಮಿಂಗ್ ಹ್ಯಾಮ್ ಮತ್ತು ಇಂಗ್ಲಂಡಿನ ವಿಖ್ಯಾತ ಫುಟ್ ಬಾಲ್ ಸ್ಟ್ರೈಕರ್ ೨೪ ವರ್ಷದ ಟ್ರೆವರ್ ಫ್ರಾನ್ಸಿಸನು ೧೯೭೯ರಲ್ಲಿ ೨ ಕೋಟಿ ರೂಪಾಯಿ ಪಡೆದು ನಾಟಿಂಗ್ಹ್ಯಾಮ್ ಫಾರೆಸ್ಟ್ ಕ್ಲಬ್ ಸೇರಿದನು! ಪ್ರತಿಯೊಂದು ಕ್ಲಬ್ಬು ಭಾರೀ ಆಟಗಾರರನ್ನು ಪಡೆಯಲು ಪ್ರಯತ್ನಿಸುತ್ತದೆ. ಬಾರ್ಸಿಲೋನಾ (ಸ್ಪೇನ್) ಕ್ಲಬ್ಬು ಅರ್ಜೆಂಟಿನಾದ ೧೯ ವರ್ಷದ ವಿಖ್ಯಾತ ಆಟಗಾರ ಡಿಯೆಗೊ ಮಾರಾಡೋನಾಗೆ ೮ ಕೋಟಿ ರೂಪಾಯಿ ಕೊಟ್ಟು ತನ್ನ ಕ್ಲಬ್ಬಿಗೆ ಸೇರಿಸಿಕೊಳ್ಳಲು ಪ್ರಯತ್ನಿಸಿದರೆ ೩ ವರ್ಷಗಳ ಹಿಂದೆ ಇಟಲಿಯ ವಿಕೆಂಜಾ ಕ್ಲಬ್ಬು ತನ್ನ ಆಟಗಾರ ಕೆ. ಪಾವ್ಲಿ ರೋಸಿಗೆ ೫ ಕೋಟಿ ೭೫ ಲಕ್ಷ ಕೊಟ್ಟು ಆತನು ಜುವೆಂಟಸ್ ಕ್ಲಬ್ಬನ್ನು ಸೇರದಂತೆ ನೋಡಿಕೊಂಡಿತು! ಫುಟ್‌ಬಾಲ್ ಮಾಂತ್ರಿಕ ಪೀಲೇನ ಬಗ್ಗೆ ಏನು ಬರೆಯುವುದು? ೨೦ ವರ್ಷಗಳ ವರೆಗೆ ಅವನು ಸಾಂತೋಜ್ ಕ್ಲಬ್ಬಿನ ಪರವಾಗಿ ಆಡಿದನು. ಆ ಕ್ಲಬ್ಬು ಅವನಿಗೆ ತಿಂಗಳಿಗೆ ೮೦,೦೦೦ ರೂಪಾಯಿ ಕೊಡುತ್ತಿತ್ತು. ಇಷ್ಟೇ ಹಣವನ್ನು ಅವನು ಪ್ರತಿ ತಿಂಗಳಿಗೆ ಜಾಹೀರಾತುಗಳ ಮೂಲಕ ಪಡೆಯುತ್ತಿದ್ದನು. ಪ್ಲಾಸ್ಟಿಕ್ ಉದ್ಯಮದಲ್ಲೂ ಕೆಲ ಬ್ಯಾಂಕುಗಳಲ್ಲಿಯೂ ಅವನ ಪಾಲುಗಾರಿಕೆ ಇದೆ. ಕೆಲ ವರ್ಷಗಳ ಹಿಂದೆ ಸರಳ ಸ್ವಭಾವದ ಪೀಲೆ ಆರ್ಥಿಕ ವಿಪತ್ತಿಗೆ ಸಿಲುಕಿದ್ದನು. ಈಗ ಆತ ನ್ಯೂಯಾರ್ಕಿನ ಕಾಸ್ಮಸ್ ಕ್ಲಬ್ಬಿನ ಪರವಾಗಿ ೩ ವರ್ಷ ಆಟವಾಡಲು ಒಪ್ಪಂದ ಮಾಡಿಕೊಂಡಿದ್ದಾನೆ. ಕ್ಲಬ್ಬು ಅವನಿಗೆ ೩ ಕೋಟಿ ೬೦ ಲಕ್ಷ ರೂಪಾಯಿ ಕೊಡುವುದು. ಇಂದು ಆತ ಪೀಲೇ ಎಂಟರ್‌ಪ್ರೈಜ್ ಸಂಸ್ಥೆಯ ಅಧ್ಯಕ್ಷನಾಗಿ ಒಂದು ನೈಲಾನ್ ಮತ್ತು ರಬ್ಬರ್ ಕಂಪನಿಯ ಮಾಲಿಕನಾಗಿದ್ದಾನೆ.

ಗೋಲ್ಫ್ ಆಟಗಾರರೂ ಹಿಂದೆ ಬಿದ್ದಿಲ್ಲ. ಅಮೇರಿಕ, ಯುರೋಪ್ ಮತ್ತು ಜಪಾನದ ಪ್ರಮುಖ ಗೋಲ್ಫ್ ಆಟಗಾರರು ಪ್ರತಿ ವರ್ಷ ಲಕ್ಷಾವಧಿ ಡಾಲರು ಹಣ ಗಳಿಸುತ್ತಿದ್ದಾರೆ. ಅಮೇರಿಕದ ಟಾಮ್ ವಾಟ್ಸನ್ನನ ವಾರ್ಷಿಕ ಗಳಿಕೆ ಸುಮಾರು ೪೦ ಲಕ್ಷ ರೂಪಾಯಿ. ಅದೇ ದೇಶದ ಜಾಕ್ ನಿಕೋಲಸ್, ದಕ್ಷಿಣ ಆಫ್ರಿಕದ ಗ್ಯಾರಿ ಪ್ಲೇಯರ್ ಇವರು ಪ್ರಮುಖರು. ಇಂದು ವಿವಿಧ ದೇಶಗಳ ೩೦ ಆಟಗಾರರ ವಾರ್ಷಿಕ ಸಂಪಾದನೆ ೧೦ ಲಕ್ಷ ಮೀರಿದೆ.

ಚೆಸ್ ಹಣ ಸಂಪಾದನೆಯ ಮತ್ತೊಂದು ಆಟ. ಅಮೇರಿಕದ ಬಾಬಿ ಫಿಶರನು ಸ್ಪಾಸ್ಕಿಯನ್ನು ಸೋಲಿಸಿ ೧೨ ಲಕ್ಷ ೮೦ ಸಾವಿರ ರೂಪಾಯಿ ಪಡೆದಿದ್ದರೆ, ೧೯೭೮ರಲ್ಲಿ ರಶಿಯದ ಕಾರ್ಪೊವ್‌ನು, ಕೊರ್ಚನೋಯಿಯನ್ನು ಸೋಲಿಸಿ ೨೮ ಲಕ್ಷ ಪಡೆದ. ಕೊರ್ಚನೋಯಿ ೨೦ ಲಕ್ಷ ಪಡೆದ.

ಕುಸ್ತಿಯಲ್ಲಿಯೂ ಸಾಕಷ್ಟು ಹಣ ಸಿಗುವುದು. ೧೯೪೦ರಲ್ಲಿಯೇ ಅಮೇರಿಕದ ಪೈಲವಾನ ಜಾರ್ಜಿಯಸ್ ಜಾರ್ಜನ ವಾರ್ಷಿಕ ಆದಾಯ ೮ ಲಕ್ಷ ಇತ್ತು. ಇಟಲಿಯ ವಿಖ್ಯಾತ ಪೈಲವಾನ ರೋಕಾ





[illegible]ಗೆ ಹೋಗಿ ಕುಸ್ತಿ ಆಡುವುದರ ಮೂಲಕ ಒಂದು ಕೋಟಿ ರೂಪಾಯಿ ಗಳಿಸಿದನು. ಭಾರತದಲ್ಲಿಯೂ ಗಾಮಾ, ಗುಂಗಾ, ಇಮಾಮ ಬಕ್ಷ್ ಮುಂತಾದ ಪೈಲವಾನರು ಆಗಿ [illegible] ಹೋದರೂ ಅವರು ಲಕ್ಷಾಧಿಪತಿಯಾಗಲಿಲ್ಲ. (ಪಾಕಿಸ್ತಾನದಲ್ಲಿ) ಗಾಮಾ ಬಡತನದ ಬೇಗೆಯಲ್ಲಿ ಅನಾಥನಾಗಿ ಸತ್ತ.

ಬ್ಯಾಡ್ಮಿಂಟನ್ ಮತ್ತು ಟೇಬಲ್‌ಟೆನಿಸ್ ಆಟಗಳಲ್ಲಿ ಇತ್ತೀಚೆಗೆ ಮಾತ್ರ ಹಣ ಸಿಗಲಾರಂಭಿ[illegible]. ಅಥ್ಲೆಟಿಕ್ಸ್ ಆಟಗಾರರಿಗೆ ಅಷ್ಟೊಂದು ಪುರಸ್ಕಾರ ದೊರಕುವುದಿಲ್ಲ. ಬ್ರಿಟನ್ನಿನ ಉದ್ಯೋಗಪತಿಗಳು ಇತ್ತೀಚೆಗೆ ಇಂಗ್ಲೆಂಡಿನ [illegible]ರಾದ [illegible], ಓವೆಟ್ ಮುಂತಾದವರಿಗೆ ಆರ್ಥಿಕ ಸಹಾಯ ನೀಡುವುದಾಗಿ ಘೋಷಿಸಿದ್ದಾರೆ. ಬೇಸ್‌ಬಾಲ್ ಅಪ್ಪಟ ಅಮೇರಿಕನ್ ಆಟ. ಸಹಜವಾಗಿ ಅನೇಕ ಲಕ್ಷಾಧೀಶ ಆಟಗಾರರನ್ನು ಅಲ್ಲಿ ಕಾಣುತ್ತೇವೆ. ಬಿಲಿಯರ್ಡ್ಸ್ ಮತ್ತು ಸ್ನೂಕರ್ ಪ್ರಾರಂಭದಿಂದಲೂ ಶ್ರೀಮಂತರ ಆಟ. [illegible], ಹಿಗ್ಗಿನ್ಸ್, ರೇ ರಿಯರಡನ್, ಡೇವಿಡ್ ಟೇಲರ್, ಟೈರಿ ಗ್ರಿಫಿಥ್ಸ್, ಜಾರ್[illegible] ವಿಶ್ವದ ಶ್ರೇಷ್ಠ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಾರರು. ಇವರೆಲ್ಲರೂ ಲಕ್ಷಾಧಿಪತಿಗಳು.

ಕ್ರಿಕೆಟ್ [illegible]. ಟೆನಿಸ್, ಫುಟ್‌ಬಾಲ್ ಆಟಗಾರರ [illegible] ಕ್ರಿಕೆಟ್ ಆಟಗಾರರನ್ನು ಹೋಲಿಸಿದಾಗ, [illegible] ಅಷ್ಟೊಂದು

ಹಣ ದೊರಕುವುದಿಲ್ಲ. ಸೋಬರ್ಸ್‌ನಂತಹ ಒಬ್ಬಿಬ್ಬರು ಆಟಗಾರರೇನೋ ಹಣ ಸಂಪಾದಿಸಿರಬಹುದು. ೧೯[illegible]ರಲ್ಲಿ ಆತನ ಸನ್ಮಾನಾರ್ಥ ನಡೆದ ಪಂದ್ಯದ ಮೂಲಕ ಆತ [illegible] ಲಕ್ಷ [illegible] ಸಾವಿರ ರೂಪಾಯಿ ಪಡೆದ. ಕ್ರಿಕೆಟ್ ಆಟಗಾರರಿಗೆ ಜೀವದಾನ ನೀಡಿದವನು ಆಸ್ಟ್ರೇಲಿಯಾದ ಉದ್ಯೋಗಪತಿ ಕೆರ್ರಿ ಪ್ಯಾಕರ್. ಆತನ 'ಪ್ಯಾಕರ್ ಸರ್ಕಸ್' ಮೂಲಕ ಕ್ರಿಕೆಟ್ ಆಟಗಾರರು ಸ್ವಲ್ಪವಾದರೂ ಹಣ ಪಡೆಯತೊಡಗಿದರು. [illegible] ಕ್ರಿಕೆಟ್ ಪಟುಗಳು ಹೆಚ್ಚು ಹಣ ಪಡೆಯಲು ಕ್ರಿಕೆಟ್ ಬೋರ್ಡಿನ ಕೂಡ ಯುದ್ಧವನ್ನೇ ಮಾಡಬೇಕಾಯಿತು. ಇಂಗ್ಲಂಡಿನ ಬಾಯ್‌ಕಾಟ್, ಗೂಚ್ ಮುಂತಾದ ಕ್ರಿಕೆಟ್ ವೀರರು ಕೇವಲ ೪೦ ಸಾವಿರ ಪೌಂಡು ಹಣ ಪಡೆಯಲು ದಕ್ಷಿಣ ಆಫ್ರಿಕಕ್ಕೆ ಹೋಗಿ ತಮ್ಮ ಕ್ರಿಕೆಟ್ ಜೀವನದ ಗೋರಿಯನ್ನು ತೋಡಿಕೊಂಡರು. ಇತ್ತೀಚೆಗೆ ಗಲ್ಫ್ ರಾಷ್ಟ್ರಗಳಿಗೆ ಭಾರತ ಮತ್ತು ಪಾಕಿಸ್ತಾನದ ಆಟಗಾರರು ಹೋಗಿ ಕೆಲ 'ಪೆಟ್ರೋ-ಡಾಲರ್ಸ್' ಗಳಿಸಿದರು. ಭಾರತೀಯ ಆಟಗಾರರಿಗೆ ನಿರ್ಣಾಯಕ ಪಂದ್ಯದಲ್ಲಿ ೧೦,೬೦೦ ರೂಪಾಯಿ ದೊರಕುವುದು. ಭಾರತದಲ್ಲಿ ಅತಿ ಹೆಚ್ಚು ವೇತನ ಪಡೆಯುವವರು ಗಾವಸ್ಕರ್. ಒಂದು ಖಾಸಗಿ ಕಂಪನಿ ಅವನಿಗೆ ತಿಂಗಳಿಗೆ ೪,೫೦೦ ರೂಪಾಯಿ ಕೊಡುತ್ತದೆ. ಇದರ ಹೊರತಾಗಿ ಅವನು ಮತ್ತು ಕಪಿಲ ದೇವ್ [illegible] ಶೇವಿಂಗ್ ಕ್ರೀಮ್, ಪತ್ರಿಕೆಗಳು, ಕ್ರೀಮ್, ಸೈಕಲ್ ಮುಂತಾದವುಗಳಿಗೆ ಜಾಹೀರಾತು ನೀಡಿ ಹಣ ಪಡೆಯುತ್ತಿದ್ದಾರೆ.

ಇಂದು ಎಲ್ಲ ಜನಪ್ರಿಯ ಆಟಗಳಲ್ಲಿ ಹಣ ಉಂಟು. ಆದರೆ ಅಮೇರಿಕದಲ್ಲಿ ಜನಪ್ರಿಯವಾಗಿರುವಂತಹ ಆಟಗಳಲ್ಲಿ ಮಾತ್ರ ಭಾರಿ ಹಣ ಗಳಿಸುವ ಬಹುದು. ಟೆನಿಸ್, ಬಾಕ್ಸಿಂಗ್, ಬೇಸ್‌ಬಾಲ್ ಆಟಗಳ ಉದಾಹರಣೆಯೇ ಈ ಮಾತಿಗೆ ನಿದರ್ಶನ. ಕ್ರಿಕೆಟ್ಟು ಅಮೇರಿಕದ ಆಟವಲ್ಲದ್ದರಿಂದ ಹಣ ದೊರಕುವುದಿಲ್ಲ. ಎರಡನೆಯದಾಗಿ, ಸಾಂಘಿಕ ಆಟಗಳಿಗಿಂತ ವೈಯಕ್ತಿಕ ಆಟಗಳಲ್ಲಿ ಹೆಚ್ಚು ಹಣ ದೊರಕುವುದು ಸಹಜ. ಸಾಂಘಿಕ ಆಟಗಳಲ್ಲಿ [illegible] ತಂಡದ ಒಬ್ಬಿಬ್ಬರು ಆಟಗಾರರು ಮಾತ್ರ ಇತರರಿಗಿಂತ ಹೆಚ್ಚು ದುಡ್ಡು ಮಾಡಿಕೊಳ್ಳುವರು. ಉದಾಹರಣೆಗೆ ಪೀಲೆ ಇಲ್ಲವೆ ನಮ್ಮ [illegible] ಗಾವಸ್ಕರರನ್ನು ನೋಡಬಹುದು.

ಲಖಪತಿ ಆಟಗಾರರ ಸ್ಥಿತಿಯನ್ನು ಲಕ್ಷಾಧಿಪತಿ ಚಿತ್ರ ಕಲಾವಿದರಿಗೆ ಹೋಲಿಸಬಹುದು. [illegible] ಹಣ ಸಿಗುವುದು ಒಂದು ನಿಶ್ಚಿತ ಸಮಯದ ವರೆಗೆ ಮಾತ್ರ. ತಮ್ಮ ಜೀವನದ ಸಂಧ್ಯಾಕಾಲವನ್ನು ಆರಾಮವಾಗಿ ಕಳೆಯಲು ಅವರು ಸಾಕಷ್ಟು ಹಣ ಸಂಗ್ರಹಿಸಲೇಬೇಕು. ಇಲ್ಲದಿದ್ದಲ್ಲಿ [illegible]ಗಿದ ಗತಿಯೇ ಒದಗಬಹುದು.

ವಿದೇಶೀ ಆಟಗಾರರೊಂದಿಗೆ ಭಾರತೀಯರನ್ನು ಹೋಲಿಸಿದಾಗ ಒಬ್ಬಿಬ್ಬರು ಆಟಗಾರರು ಮಾತ್ರ ಉತ್ತಮ ಸ್ಥಿತಿಯಲ್ಲಿದ್ದು ಉಳಿದವರನ್ನು ದೇವರೇ ಕಾಪಾಡಬೇಕು! ಸಂಪಾದನೆಯಲ್ಲಿ ವಿಜಯ ಅಮೃತರಾಜ ಅಗ್ರೇಸರ. ಆತ ೧೯೮೦ರಲ್ಲಿ ವಿವಿಧ [illegible]ಮೆಂಟುಗಳ ಮೂಲಕ ೧೯,೪೮,೫೦೪ ರೂಪಾಯಿಗಳನ್ನು ಗಳಿಸಿದನು. ರಮೇಶ ಕೃಷ್ಣನ್ ಸಹ ಹಣ ಸಂಪಾದಿಸಬಹುದು. ಪ್ರಕಾಶ ಪಡುಕೋಣೆ ವೃತ್ತಿಪರ ಆಟಗಾರನಾದರೆ ಹಣ ಮಾಡಬಹುದು.

ಇತ್ತೀಚೆಗೆ ಭಾರತೀಯ ಕ್ಲಬ್ಬುಗಳೂ ಫುಟ್‌ಬಾಲ್ ಆಟಗಾರರಿಗೆ ಹಣದ ಪ್ರಲೋಭನ ನೀಡುತ್ತಲಿವೆ. ಒಂದು ಕ್ಲಬ್ಬಿನಿಂದ ಮತ್ತೊಂದು ಕಬ್ಬಿಗೆ ಜಿಗಿಯಲು ಆಮಿಷ ಒಡ್ಡಲಾಗುತ್ತಿದೆ. ಕಲಕತ್ತಾದ ಮೋಹನಬಗಾನ್, ಈಸ್ಟ್ ಬೆಂಗಾಲ್, ಮಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ಬುಗಳು ನಿದರ್ಶನಗಳು.

ಈಗ ನೀವೇ ಹೇಳಿ ಓದಿ ಓದಿ ಹತ್ತಾರು ಡಿಗ್ರಿಗಳನ್ನು ಪಡೆದು ಕಾರ್ಲ್ ಮಾರ್ಕ್ಸ್‌ನಂತೆ ಬಡತನದಲ್ಲಿ ಕಾಲ ಕಳೆಯಬೇಕೋ ಅಥವಾ ಆಡಿ ಆಡಿ ಹಣ ಮತ್ತು ಹೆಸರನ್ನು ಸಂಪಾದಿಸಬೇಕೋ? ✡

(ಸಾಧಾರ)

ಸಂದರ್ಶಕ — ನಿಮಗೆ ಯಾವ ಆಟದಲ್ಲಿ ಆಸಕ್ತಿ ?

ಅಭ್ಯರ್ಥಿ— ಬಢಿದಾಟದಲ್ಲಿ.

ಕೆಲವು ವರ್ಷಗಳು ಅವರು ತುಂಬ ಕಷ್ಟಪಡಬೇಕಾಯಿತು. ಗಳಿಕೆ ಏನೂ ಇಲ್ಲದೇ ಉಪವಾಸವಿರಬೇಕಾದ ಸ್ಥಿತಿ ತಲುಪಿ ಯಾವುದೇ ಕೆಲಸವನ್ನು ಸ್ವೀಕರಿಸಲು ಸಿದ್ಧರಿದ್ದರು. ಹಾಗೆ ಹೈಕೋರ್ಟಿನಲ್ಲಿಯೇ ಸಣ್ಣ ಹುದ್ದೆಯೊಂದನ್ನು ಒಪ್ಪಿಕೊಳ್ಳಬಯಸಿದಾಗ ಅವರ ಸ್ನೇಹಿತನ ತಂದೆ ವೆಲಿಂಕರ್ ಎನ್ನುವ ವಕೀಲರು ಆರ್ಥಿಕ ಸಹಾಯ ನೀಡಿ ವಕೀಲಿಯಲ್ಲಿಯೇ ಮುಂದುವರಿಯುವಂತೆ ಪ್ರೋತ್ಸಾಹವಿತ್ತರು. ಅದೇ ಸಮಯದಲ್ಲಿ ಅವರಿಗೆ ಕಾಯಿದೆ ಪರೀಕ್ಷೆಯ ಪರೀಕ್ಷಕನ ಸ್ಥಾನ ಮತ್ತು ಸರಕಾರೀ ಕಾಯಿದೆ ಕಾಲೇಜಿನ ಅರ್ಧಾವಧಿ ಉಪನ್ಯಾಸಕನ ಕೆಲಸವೂ ಸಿಕ್ಕಿತು.

ಆವರಿಗೆ ಅದೃಷ್ಟ ಅಡ್ಡ ಬಂದದ್ದೇ ಒಳ್ಳೆಯದಾಯಿತು

ದುರದೃಷ್ಟದ ಸೋಗಿನಲ್ಲಿ ಅದೃಷ್ಟ

'ಅರಿ'

ಇಂಗ್ಲೀಷಿನಲ್ಲಿ "Blessing in disguise" ಎಂಬ ನಾಣ್ಣುಡಿಯೊಂದಿದೆ. ತಾತ್ಕಾಲಿಕವಾಗಿ ತುಂಬ ದುರದೃಷ್ಟದ ಸಂಗತಿಯೆಂದು ಕಂಡುಬಂದರೂ, ಮುಂದೆ ಅದೇ ತುಂಬ ಅದೃಷ್ಟಕರವಾಗಿ ಪರಿಣಮಿಸುವ ಘಟನೆಗಳು ಹಲವರ ಜೀವನದಲ್ಲಿ ಸಂಭವಿಸುತ್ತವೆ. ಎಂ. ಸಿ. ಛಗಲಾ ತಮ್ಮ ಜೀವನದಲ್ಲಿ ನಡೆದ ಇಂಥ ಒಂದು ಘಟನೆಯ ಬಗ್ಗೆ ತಮ್ಮ ಆತ್ಮಕಥೆ*ಯಲ್ಲಿ ಹೇಳಿದ್ದಾರೆ.

ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದು ಹಿಂದಿರುಗಿದ ಛಗಲಾರವರು ಮುಂಬಯಿ ಹೈಕೋರ್ಟಿನಲ್ಲಿ ವಕೀಲಿ ಪ್ರಾರಂಭಿಸಿದರು. ಆದರೆ ಪ್ರಾರಂಭದ

ಆದರೂ ವಕೀಲಿಯಲ್ಲಿ ನಿರೀಕ್ಷಿಸಿದಷ್ಟು ಪ್ರಗತಿ ಕಾಣದೆ ಕೇಂದ್ರ ಶಾಸನ ಸಭೆಯ ಉಪಕಾರ್ಯದರ್ಶಿಯ ಹುದ್ದೆಗೆ ಪ್ರಯತ್ನಿಸಿದರು. ಸಭೆಯ ಆಗಿನ ಅಧ್ಯಕ್ಷ ಶ್ರೀ ವಿಠ್ಠಲಭಾಯಿ ಪಟೇಲರು ರಾಷ್ಟ್ರೀಯ ಮನೋಭಾವವುಳ್ಳ ಒಬ್ಬ ವ್ಯಕ್ತಿಯನ್ನು ಆ ಹುದ್ದೆಗೆ ಆರಿಸಬೇಕು ಎಂದು ಬಯಸಿದ್ದರು. ಸರ್ ಚಿಮನ್‌ಲಾಲ್ ಸೀತಲ್‌ವಾಡರ ಶಿಫಾರಸಿನ ಮೇರೆಗೆ ಛಗಲಾರಿಗೇ ಅದನ್ನು ನೀಡಲು ಅವರು ಒಪ್ಪಿದ್ದರು. ಎಲ್ಲವೂ ನಿರ್ಧಾರವಾಗಿತ್ತು. ಅವರ ನೇಮಕದ ಆಜ್ಞೆಗೆ ಸಹಿ ಬಿದ್ದಿತ್ತು. ಸರ್ ಚಿಮನ್‌ಲಾಲರು ಛಗಲಾರಿಗೆ ದಿಲ್ಲಿಗೆ ಹೊರಡಲು ತಯಾರಾಗುವಂತೆ ತಿಳಿಸಿದ್ದರು.

*Roses In December by M. C. Chagla

ಆದರೆ ಕೊನೆಯ ಗಳಿಗೆಯಲ್ಲಿ ಎಲ್ಲ ತಿರುವುಮುರುವಾಯಿತು. ಭಗಲಾರ ನೇಮಕದ ಆಜ್ಞೆಯನ್ನು ಅಂತಿಮ ಒಪ್ಪಿಗೆಗಾಗಿ ವೈಸರಾಯರ ಮುಂದಿರಿಸಿದಾಗ ಸರ್ ಮೊಹಮ್ಮದ ಶಫಿ ಎನ್ನುವವರು "ಭಗಲಾ ರಾಷ್ಟ್ರೀಯವಾದಿಯಾಗಿದ್ದು ಅವರ ರಾಜಕೀಯ ವಿಚಾರಗಳಿಂದಾಗಿ ಅವರು ಆ ಹುದ್ದೆಗೆ ಯೋಗ್ಯರಲ್ಲ" ಎಂದು ಸೂಚಿಸಿದರು. ಅಲ್ಲದೇ ಭಗಲಾರಿಗೆ ಸಿಗುವದರಲ್ಲಿದ್ದ ಆ ಹುದ್ದೆಯನ್ನು ಅವರು ತಮ್ಮ ಅಳಿಯನಿಗೆ ಕೊಡಿಸಿದರು.

ಸರ್ ಚಿಮಣಲಾಲ್ ಈ ವಿಷಯವನ್ನು ಭಗಲಾರಿಗೆ ತಿಳಿಸಿದಾಗ ಅವರಿಗಾದ ನಿರಾಶೆ, ದುಃಖ ಅಷ್ಟಿಷ್ಟಲ್ಲ. ಅವರೇ ಹೇಳಿದಂತೆ ಅದು ಎಂದೂ ಮರೆಯಲಾಗದ್ದು. ಎಲ್ಲವೂ ಮುಳುಗಿ ಹೋದಂತಹ, ಮುಂದೆ ಜೀವನ ಸಾಗಿಸುವುದೇ ಅಸಾಧ್ಯವೆಂಬಂತಹ ಮ್ಲಾನ ಅವರನ್ನು ಆಗ ಆವರಿಸಿತು. ಇದರಿಂದಾಗಿ ಭಗಲಾ ವಕೀಲರಾಗಿ ಮುಂದುವರಿಯುವುದು ಅನಿವಾರ್ಯವಾಯಿತು. ಕಾಲಾಂತರದಲ್ಲಿ ಅವರಿಗೆ ವೃತ್ತಿಯಲ್ಲಿ ಯಶಸ್ಸು ಲಭಿಸಿತು. ಆಂಗ್ಲ ಮುಖ್ಯ ನ್ಯಾಯಾಧೀಶರ ಒತ್ತಾಯದಿಂದ ನ್ಯಾಯಾಧೀಶರಾದ ಅವರು, ಮುಂದೆ ಮುಖ್ಯ ನ್ಯಾಯಾಧೀಶರೂ ಆದರು. ಅವರನ್ನು ನೆಹರೂ ಇಂಗ್ಲಂಡ್, ಅಮೇರಿಕಗಳಿಗೆ ರಾಯಭಾರಿಯಾಗಿ ಕಳಿಸಿದರು. ಭಾರತದ ಶಿಕ್ಷಣ ಮತ್ತು ವಿದೇಶ ವ್ಯವಹಾರಗಳ ಮಂತ್ರಿಯೂ ಆದರು.

ಇದನ್ನೆಲ್ಲ ನೆನೆಸಿ ಭಗಲಾ, ಅದೃಷ್ಟವೇ ಅಡ್ಡ ಬಂದು ತಮಗೆ ಶಾಸನಸಭೆಯ ಉಪಕಾರ್ಯದರ್ಶಿಯ ಹುದ್ದೆಯನ್ನು ತಪ್ಪಿಸಿತು ಎಂದು ಹೇಳಿದ್ದಾರೆ. ಇಲ್ಲದಿದ್ದರೇ ಅದೇ ತಮ್ಮ ಜೀವನದಲ್ಲಿ ಅತಿ ದೊಡ್ಡ ಅನರ್ಥವಾಗುತ್ತಿತ್ತು. ಆದುದರಿಂದ ತಾನು ಸರ್ ಮೊಹಮ್ಮದ ಶಫಿ ಅವರಿಗೆ ಚಿರಋಣಿ ಎಂದಿದ್ದಾರೆ. ಭಗಲಾರವರು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯನ್ನು ಗಮನಿಸಿದಾಗ ಅವರಂತೆ ಎಲ್ಲ ಭಾರತೀಯರೂ ಅವರೊಂದಿಗೆ ಸರ್ ಮೊಹಮ್ಮದ ಶಫಿಯವರಿಗೆ ಋಣಿಯಾಗಿಯೇ ಇರಬೇಕೆಂದೆನಿಸುವುದಿಲ್ಲವೇ? ✡



ಒಂದು ದೊಡ್ಡ ಹಾಲಿನಲ್ಲಿ ಸಾರ್ವಜನಿಕ ಸಭೆ ನಡೆದಿತ್ತು. ಮುಖಂಡರೊಬ್ಬರು ಜೋರಾಗಿ ಭಾಷಣ ಕುಟ್ಟುತ್ತಿದ್ದರು. ಮೈಕು ಕೈ ಕೊಟ್ಟಿತ್ತು. ಆಗ ಮುಖಂಡರು ಸ್ವರವನ್ನು ಎತ್ತರಿಸಿ,

"ನಿಮಗೆ ನಾನು ಹೇಳುವುದು ಕೇಳುತ್ತಿದೆಯೆ?" ಎಂದು ಕೇಳಿದರು.

"ಇಲ್ಲ" ಎಂದು ಅತಿ ಹಿಂದೆ ಕುಳಿತವನೊಬ್ಬ ಅಷ್ಟೇ ಎತ್ತರದ ಧ್ವನಿಯಲ್ಲಿ ಉತ್ತರಿಸಿದ.

ಇದನ್ನು ಕೇಳಿದ ಮುಂದಿನ ಸಾಲಲ್ಲೇ ಕುಳಿತವನೊಬ್ಬ ಎದ್ದು ಹಿಂದೆ ಕುಳಿತವನೆಡೆಗೆ ತಿರುಗಿ, "ನನಗಂತೂ ಸ್ಪಷ್ಟವಾಗಿ ಕೇಳುತ್ತಿದೆ ನಿನಗೆ ಕೇಳುವುದಿಲ್ಲವಾದರೆ ಒಂದು ಕೆಲಸ ಮಾಡೋಣ, ನೀನು ಇಲ್ಲಿ ಬಂದು ಕುಳಿತುಕೋ, ನಾನು ಅಲ್ಲಿ ಹೋಗುತ್ತೇನೆ" ಎಂದ.

* * *

"ಪಕ್ಷಾಂತರ ಅಂದರೇನು?"

"ಲಕ್ಷಾಂತರದ ಸಂಬಂಧಿ."

ಚೀನದಲ್ಲಿ ಎರಡು ವಾರ

ಜಿ. ವಿ. ಎಸ್. ರಾವ್

೧೯೭೯ ರ ಏಪ್ರಿಲ್ ೨೯ ರಿಂದ ಮೇ ೧೧ ರ ವರೆಗೆ ಚೀನವನ್ನು ಸಂದರ್ಶಿಸುವ ಅವಕಾಶ ನನಗೆ ಒದಗಿದ್ದು ತೀರ ಅನಿರೀಕ್ಷಿತ. ಅಂತಹ ಒಂದು ಅವಕಾಶ ದೊರೆಯುವ ಸಾಧ್ಯತೆ, ಆಗ [illegible]ಯರಿಗೆ ಅಪರೂಪ. ಅಂತಹ ಸನ್ನಿವೇಶ [illegible] ಚೀನದ ಪ್ರವಾಸಕ್ಕೆ ಸಿದ್ಧರಾಗಿ, ತಕ್ಷಣ [illegible] ಒಂದು ದೆಹಲಿಯಿಂದ ಟೆಲಿ[illegible] ಬಂದಾಗ, ಆ ಸುದ್ದಿ ನಂಬಲಸಾಧ್ಯ [illegible] ಅದು ನಿಜವಾಗಿತ್ತು. ಚೀನದ ಕೋರಿಕೆಯಂತೆ, ಜಾಗತಿಕ ಅಂಚೆ ಮಹಾಸಂಘವು ಏಷಿಯ ಮತ್ತು ಪೆಸಿಫಿಕ್ ವಲಯದ ದೇಶಗಳ ೧೬ ಅಧಿಕಾರಿಗಳ ಒಂದು ತಂಡವನ್ನು ಚೀನದ ಅಂಚೆ ವ್ಯವಸ್ಥೆಯ ಅಧ್ಯಯನಕ್ಕೆ ಯೋಜಿಸಿತ್ತು. ಭಾರತದ ಪರವಾಗಿ ಈ ತಂಡ[illegible]ದವರು ನಾನು ಮತ್ತು ಸಹೋ[illegible] ಶ್ರೀ [illegible].

[illegible]ಕಿಂಗ್

ಕರಾಚಿಯ ಮಾರ್ಗವಾಗಿ ಹೊರಟು ಏಪ್ರಿಲ್ [illegible] ಗ್ಗೆ ೫–೩೦ ಕ್ಕೆ ಪೀಕಿಂಗ್ (ಈಗಿನ ಅಧಿಕೃತ ಹೆಸರು ಬೀಜಿಂಗ್) ತಲಪಿದಾಗ [illegible]ಯುವ ತಂಗಾಳಿ ಬೀಸುತ್ತಿತ್ತು. ವಿಮಾನ ನಿಲ್ದಾಣದ ಕಟ್ಟಡದ ಮೇಲಿನ ಮಾವೋರವರ ಅತಿ ದೊಡ್ಡ ಭಾವಚಿತ್ರ. [illegible] ಕಾಲಿಡುತ್ತಿದ್ದೇವೆಂಬುದನ್ನು [illegible]. ಪಾಸ್‌ಪೋರ್ಟ್ ಮತ್ತಿತರ [illegible] ಪರಿಶೀಲನೆಯಾದ ಮೇಲೆ ಅಂಚೆ [illegible] ಅಧಿಕಾರಿಗಳಾದ ಮಿ. ಲಿಯು ಮತ್ತು ಮಿಸೆಸ್ ವಾಂಗ್ ನಮ್ಮನ್ನು ಹಾರ್ದಿಕವಾಗಿ [illegible]ದರು. ಆ ಕ್ಷಣದಿಂದ ಆತಂಕ, ಅನಿಶ್ಚಿತತೆಗಳು ಕಳೆದು ಎಲ್ಲವೂ ಸುಗಮವಾಯಿತು. ಅವರ ವಿನಯ, ಸ್ನೇಹಪೂರ್ಣ [illegible] ನಮ್ಮ ಸೌಕರ್ಯಕ್ಕೋಸ್ಕರ [illegible] ಪೂರ್ವಕ ಏರ್ಪಾಡುಗಳು ನಮ್ಮನ್ನು [illegible]ದವು. ಆ ದಿನ ಸಂಜೆಯ ವರೆಗೆ [illegible] ಹೋಟೆಲಿನಲ್ಲಿ ನಮಗೆ ವಸತಿ ಏರ್ಪಡಿಸಲಾಗಿತ್ತು. ನಮ್ಮ ಗೌರವಾರ್ಥ 'ಪೀಕಿಂಗ್ ಹೋಟೆಲ್'ನಲ್ಲಿ ಅಂಚೆ ಇಲಾಖೆಯ ಮಹಾ ನಿರ್ದೇಶಕರು ಭೋಜನಕೂಟವನ್ನು [illegible] ಸಸ್ಯಾಹಾರಿಯೆಂದಾಗ ಅವರಿಗೆ ಬಹಳ ಆಶ

ರ್ಯವಾಯಿತು. "ಮಾಂಸಾಹಾರವನ್ನು ಏಕೆ ತಿನ್ನುವುದಿಲ್ಲ? ನೀವು ಬೌದ್ಧ ಪೂಜಾರಿಯೇ? ನಿಮ್ಮಂಥವರು ಭಾರತದಲ್ಲಿ ಎಷ್ಟು ಜನರಿದ್ದಾರೆ?" ಮುಂತಾದ ಪ್ರಶ್ನೆಗಳೇ ಎದುರಾದವು. ನನಗೋಸ್ಕರ ಬೇಯಿಸಿದ ತರಕಾರಿಗಳು, ಬ್ರೆಡ್, ಒಂದು ಸಣ್ಣ ಬಟ್ಟಲಿನಲ್ಲಿ ಅನ್ನ, ಬೊಂಬಿನ ಚಿಗುರುಗಳು, ವಿವಿಧ ಬಗೆಯ ಅಣಬೆಗಳು, ಹುರಿದ ಕಡಲೇಕಾಯಿ ಬೀಜ, ಕಿತ್ತಲೆಹಣ್ಣಿನ ರಸ ಮುಂತಾದ ೧೫–೨೦ ಬಗೆಯ ಭೋಜನಗಳನ್ನು ಸಿದ್ಧಗೊಳಿಸಿದ್ದನ್ನು ನೋಡಿ ನನಗೆ ಕಸಿವಿಸಿಯೇ ಆಯಿತು. ನಂತರ ತರುಣ ದುಭಾಷಿ ಚಾಂಗ್ ಜೊತೆಯಲ್ಲಿ, ಟೀನಾ 'ಮೇನ್ ಚೌಕ, ಸ್ವರ್ಗದ ದೇವಾಲಯ ಮುಂತಾದ ಪೀಕಿಂಗಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದಾಯಿತು. ಅದೇ ಸಂಜೆ ವಿಮಾನದಲ್ಲಿ ಪ್ರಯಾಣ ಮಾಡಿ ದಕ್ಷಿಣದ ಹಾಂಗ್ ಚೌ ನಗರವನ್ನು ತಲಪಿ, ಅಲ್ಲಿ 'ಹೊಟೆಲ್ ಹಾಂಗ್ ಚೌ'ನಲ್ಲಿದ್ದ ನಮ್ಮ ತಂಡದವರನ್ನು ಕೂಡಿಕೊಂಡೆವು. ಆ ವೇಳೆಗೆ ತಂಡದ ಬೇರೆ ಬೇರೆ ದೇಶಗಳ ಅಧಿಕಾರಿಗಳು ನಿಯಮಿತ ದಿನದಂದು ಚೀನಾ ತಲಪಿ, ನಾನ್‌ಕಿಂಗ್, ಸೂಚೌ, ಶಾಂಘೈ ಮುಂತಾದ ನಗರಗಳನ್ನು ಸಂದರ್ಶಿಸಿ ಹಾಂಗ್ ಚೌ ತಲಪಿದ್ದರು. ಭಾರತೀಯ ಜಾಯಮಾನದಂತೆ ಅಡ್ಡಿ, ಆತಂಕಗಳನ್ನು ಎದುರಿಸಿ, ನಾವು ತಡವಾಗಿ ಚೀನ ತಲಪಿದ್ದೆವು! ಜಾಗತಿಕ ಅಂಚೆ ಮಹಾ ಸಂಘದ ಅಧಿಕಾರಿ, ಫಿಲಿಫೈನ್ ದೇಶದವರಾದ ನವಾರೋ ನಮ್ಮ ತಂಡದ ನಾಯಕರಾಗಿದ್ದರು. ನವಾರೋ ಬಲು ಮೋಜಿನ ವ್ಯಕ್ತಿ. ಅವರ ಪ್ರಸಂಗಾವಧಾನ, ಹಾಸ್ಯ ಪ್ರಕೃತಿ ನಮ್ಮನ್ನೆಲ್ಲಾ ಪ್ರವಾಸದುದ್ದಕ್ಕೂ ಉಲ್ಲಸಿತರನ್ನಾಗಿಸುತ್ತಿದ್ದವು.

ಭೂತಲ ಸ್ವರ್ಗ

ಚೀನೀ ನಾಣ್ಣುಡಿಯಂತೆ ಹಾಂಗ್ ಚೌ ಭೂತಲ ಸ್ವರ್ಗ. ಸುಮಾರು ೪೦ ಚದರ ಕಿಲೋ ಮೀಟರ್ ವಿಸ್ತಾರದ ಸರೋವರದ ಅಂಚಿನಲ್ಲಿರುವ ಹಾಂಗ್ ಚೌ ಮನೋಹರ ಉದ್ಯಾನಗಳು, ಬೌದ್ಧ ದೇವಾಲಯಗಳು, ಪಗೋಡಗಳು ಮತ್ತಿತರ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿರುವ ಸುಂದರ ನಗರ. ರೇಷ್ಮೆ ಕೈಗಾರಿಕೆಯ ಪ್ರಮುಖ ಕೇಂದ್ರ. ಸುತ್ತಲಿನ ಕೆಲವು ಅಂಚೆ ಕಚೇರಿಗಳಿಗೆ ಭೇಟಿ ಕೊಟ್ಟು ಗ್ರಾಮಾಂತರ ಅಂಚೆ ವ್ಯವಸ್ಥೆಯನ್ನು ಪರಿಶೀಲಿಸಿದೆವು. ಹಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದೆವು. ಇವುಗಳಲ್ಲಿ ಮುಖ್ಯವಾದವು. ಲಿನ್‌ಯಿನ್ ಬೌದ್ಧ ದೇವಾಲಯ ರೇಷ್ಮೆ ಬಟ್ಟೆಗಳನ್ನು ತಯಾರಿಸುವ, ಕಾರಖಾನೆ ಮತ್ತು ಪುಷ್ಪೋದ್ಯಾನ. ಲಿನ್‌ಯಿನ್ ದೇವಾಲಯವನ್ನು ನೋಡಲು ಹೋದಾಗ ಅದರ ವಿಶಾಲವಾದ ಉದ್ಯಾನದಲ್ಲೂ ಒಳ ಆವರಣದಲ್ಲೂ ಸಾವಿರಾರು ಚೀನೀಯರು ಜಾತ್ರೆಯಂತೆ ನೆರೆದಿದ್ದನ್ನು ನೋಡಿ ಆಶ್ಚರ್ಯವಾಯಿತು.

ನೂಕುನುಗ್ಗಲು ಎಷ್ಟಿತ್ತೆಂದರೆ, ನಾವು ದೇವಾಲಯದ ಕಡೆಗೆ ನಡೆಯುತ್ತಿದ್ದಾಗ ತಂಡದವರು ಬೇರೆ ಬೇರೆಯಾಗದಿರಲೆಂದು, ನಾವೆಲ್ಲರೂ, ಒಂದು ಕೈ ಮೇಲೆತ್ತಿ ನಡೆಯಬೇಕೆಂದು ಜತೆಯಲ್ಲಿದ್ದ ಚೀನೀ ಅಧಿಕಾರಿಗಳು ಸೂಚಿಸಿದರು. ಅಲ್ಲಿ ನೆರೆದಿದ್ದ ಜನರೆಲ್ಲ ಧಾರ್ಮಿಕ ಭಾವನೆಯಿಂದ ಬುದ್ಧನ ದರ್ಶನಕ್ಕೆ ಬಂದವರಲ್ಲ' ವೆಂದೂ, ರಜಾ ದಿನವಾದ ಮೇ ಒಂದರಂದು ವಿನೋದ ವಿಹಾರಕ್ಕೆ ಬಂದವರೆಂದೂ ನಂತರ ತಿಳಿಯಿತು. ಆ ಸಾವಿರಾರು ಜನಗಳ ಸಮೂಹದಲ್ಲಿ, ದೇವಾಲಯದಲ್ಲಿ ಚಿನ್ನದ ಬಣ್ಣದಿಂದ ಕಂಗೊಳಿಸುತ್ತಿದ್ದ ಸುಮಾರು ೪೦ ಅಡಿ ಎತ್ತರದ ಸುಂದರ, ಭವ್ಯ ಬುದ್ಧನ ಮೂರ್ತಿಯನ್ನು ನೋಡಿ ರೋಮಾಂಚನಗೊಂಡು ನಮಿಸಿದವರು ಇಬ್ಬರು ಮಾತ್ರ: ಬೌದ್ಧರಾದ ನೇಪಾಳದ ಶ್ರೀ ವಜ್ರ ಆಚಾರ್ಯ ಮತ್ತು ನಾನು. ಇದನ್ನು ನೋಡಿ ನಮ್ಮ ಚೀನೀ ಆತಿಥೇಯರು ನನ್ನನ್ನೂ ಬೌದ್ಧರ ಪಟ್ಟಿಗೆ ಸೇರಿಸಿದರು. ಮೊದಲೇ ಆಚಾರ್ಯರಂತೆ ನಾನೂ ಸಸ್ಯಾಹಾರಿ, ಈಗ ಲಿನ್‌ಯಿನ್ ದೇವಾಲಯದಲ್ಲಿ ಬುದ್ಧನ ಮೂರ್ತಿಗೆ ಬಾಗಿ ಭಕ್ತಿಭಾವದಿಂದ ನಮಿಸಿದ್ದೆ. ಇದನ್ನು ಕಂಡ ಮೇಲೆ ವಜ್ರ ಆಚಾರ್ಯರಂತೆ ನಾನೂ ಬೌದ್ಧನೆಂದು ಸ್ಥಿರವಾಯ್ತು. ನಮ್ಮ ದೇಶಕ್ಕೆ ಬೌದ್ಧ ಧರ್ಮದ ಕೊಡುಗೆಯನ್ನಿತ್ತ ಭಾರತದವ

ನಾದ ನಾನು ಬೌದ್ಧನಾಗಿರುವುದು ಸಹಜವೆಂದೇ ಅವರ ಅನಿಸಿಕೆ. ತಮ್ಮ ಪೂರ್ವಿಕರಿಗೆ ಬೌದ್ಧ ಧರ್ಮವನ್ನು ಬೋಧಿಸಿದ ಮತ್ತು ನಮ್ಮ ದೇಶದಂತೆಯೇ ಪುರಾತನ ಸಂಸ್ಕೃತಿಯುಳ್ಳ ದೇಶವೆಂದು ಭಾರತದ ಬಗೆಗೆ ಅನೇಕರು ಸದ್ಭಾವನೆಯನ್ನು ವ್ಯಕ್ತಪಡಿಸಿದರು. ಏಳನೇ ಶತಮಾನದಲ್ಲಿ ಭಾರತದ ಪ್ರವಾಸ ಮಾಡಿದ್ದ ಹ್ಯೂಯೆನ್ ತ್ಸಾಂಗನ "ಪಶ್ಚಿಮದಲ್ಲಿ ಸಾಹಸಗಳು" ಎಂಬ ಗ್ರಂಥವನ್ನು ಸಾಮಾನ್ಯವಾಗಿ ಹಿಂದಿನ ಪೀಳಿಗೆಯ ಎಲ್ಲ ಚೀನೀಯರು ಓದಿರುವರೆಂದು ತಿಳಿಸಿದರು. ಆಗಿನ ಚೀನೀಯರ ದೃಷ್ಟಿಯಲ್ಲಿ ಭಾರತ ಪಾಶ್ಚಿಮಾತ್ಯ ರಾಷ್ಟ್ರ. ಲಿನ್‌ಯಿನ್ ದೇವಾಲಯದಿಂದ ಹಿಂದಿರುಗುತ್ತಿದ್ದಾಗ ನಮ್ಮ ಜೊತೆಯಲ್ಲಿದ್ದ ದುಭಾಷಿ ಮಿಸ್ ವೂ ಮತ್ತು ತಂಡದ ಇಬ್ಬರು ಸದಸ್ಯರ ನಡುವೆ ದೇವರ ಅಸ್ತಿತ್ವದ ಬಗೆಗೆ ಬಿರುಸಾದ ಚರ್ಚೆ ನಡೆಯಿತು. ದೇವರು ಇರಲು ಸಾಧ್ಯವಿಲ್ಲವೆಂದೂ ದೇವರನ್ನು ನಂಬುವುದು ಮೂಢ ನಂಬಿಕೆಯೆಂದೂ ಮಿಸ್ ವೂ ವಾದಿಸುತ್ತಿದ್ದಳು.

ಚೀನದಲ್ಲಿ ಇಂಗ್ಲೀಷ್ ಬಲ್ಲವರು ಅತಿ ವಿರಳ. ದುಭಾಷಿಗಳ ಸಹಾಯದಿಂದಲೇ ಚೀನೀಯರೊಡನೆ ನಮ್ಮ ಸಂಭಾಷಣೆ. ಇದರಿಂದಾಗಿ ನಮ್ಮ ಜತೆ ಯಾವಾಗಲೂ ಮೂರು ನಾಲ್ಕು ಜನ ದುಭಾಷಿಗಳಿರುತ್ತಿದ್ದರು. ಅವರೆಲ್ಲರೂ ಪೀಕಿಂಗಿನ ವಿದೇಶೀ ಭಾಷಾ ಅಧ್ಯಯನ ಸಂಸ್ಥೆಯಲ್ಲಿ ಇಂಗ್ಲೀಷ್ ಕಲಿತವರು. ಈಗ ಅಲ್ಲಿ ನಾಲ್ಕು ಸಾವಿರ ಮಂದಿ ವಿದೇಶೀ ಭಾಷೆಗಳನ್ನು ಅಭ್ಯಸಿಸುತ್ತಿದ್ದು ಅದರಲ್ಲಿ ಎರಡು ಸಾವಿರ ವಿದ್ಯಾರ್ಥಿಗಳು ಇಂಗ್ಲೀಷ್ ಕಲಿಯುತ್ತಿದ್ದಾರೆಂದೂ ತಿಳಿದುಬಂತು.

ರೇಷ್ಮೆ ಕಾರಖಾನೆಯನ್ನು ನೋಡಲು ಹೋದಾಗ, ಬಸ್ಸಿನಿಂದಿಳಿಯುತ್ತಲೇ ನಮ್ಮನ್ನು ಸ್ವಾಗತಿಸಿದ ೨೫–೨೬ ರ ವಯಸ್ಸಿನ ತರುಣಿ ಆ ಕಾರ್ಖಾನೆಯ ಮುಖ್ಯಸ್ಥಳೆಂದು ತಿಳಿದು ಆಶ್ಚರ್ಯವಾಯಿತು. ಅಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಬಹುಪಾಲು ಮಹಿಳೆಯರು: ಅದರಲ್ಲೂ ಕಿರಿವಯಸ್ಸಿನವರೇ ಹೆಚ್ಚು. ಮುಖ್ಯಸ್ಥೆಗೆ ಸಹಾಯಕ ಅಧಿಕಾರಿಗಳಾಗಿ ನಾಲ್ಕೈದು ಜನ ವಯೋವೃದ್ಧ ಪುರುಷರಿದ್ದರು. ಚೀನದಲ್ಲಿ ಸೇವಾ ಜ್ಯೇಷ್ಠತೆಗೆ ಪುರಸ್ಕಾರವಿಲ್ಲ! ಇದೇ ರೀತಿ ಅಂಗಡಿಗಳಲ್ಲಿ, ಕಚೇರಿಗಳಲ್ಲಿ ಕೆಲಸ ಮಾಡುವವರಲ್ಲಿ ಮಹಿಳೆಯರೇ ಹೆಚ್ಚು ಮಂದಿ. ಹೊಲಗದ್ದೆಗಳಲ್ಲೂ ಮಹಿಳೆಯರು ಪುರುಷರಿಗೆ ಸರಿ-ಸಮನಾಗಿ ದುಡಿಯುತ್ತಾರೆ.

ಮೇ ಎರಡರ ಮಧ್ಯಾಹ್ನ ಪುಷ್ಪೋದ್ಯಾನವನ್ನು ನೋಡಲು ಹೋದೆವು. ಇದು ಬೆಂಗಳೂರಿನ ಲಾಲಬಾಗಿಗಿಂತಲೂ ವಿಸ್ತಾರವಾದ ನಾನಾ ವಿಧವಾದ ಮರ, ಗಿಡ, ಪುಷ್ಪಗಳಿಂದ ಕೂಡಿದ ಉದ್ಯಾನ. ಸ್ವಚ್ಛತೆ, ಅಚ್ಚುಕಟ್ಟು ಎದ್ದು ಕಾಣುತ್ತಿದ್ದ ಅಂಶಗಳು. ಇದು ಇತ್ತೀಚೆಗೆ ಬೆಳೆಸಿದ ಉದ್ಯಾನದಂತೆ ತೋರಿತು.

ಹಾಂಗ್ ಚೌ ನಗರದಿಂದ ಸುಮಾರು ೧೨೦ ಕಿಲೋಮೀಟರ್ ದೂರದ ಲಿನಾನ್ ಎಂಬ ಊರಿನಲ್ಲಿರುವ ಅಂಚೆ ಕಚೇರಿಯನ್ನು ನೋಡಲು ಬಸ್ಸಿನಲ್ಲಿ ಹೋದೆವು. ಲಿನಾನ್ ಭೇಟಿ ನನ್ನ ನೆನಪಿನಲ್ಲಿ ಯಾವಾಗಲೂ ಹಸಿರಾಗಿ ಉಳಿಯುವಂತಹುದು. ಊರಿನ ಸಮೀಪಕ್ಕೆ ತಲಪಿದಾಗ ನಮ್ಮನ್ನು ನೋಡಲು ಸಾವಿರಾರು ಜನ ನೆರೆದಿದ್ದನ್ನು ನೋಡಿದಾಗ ಪ್ರಾಯಶಃ ಊರಿನ ಎಲ್ಲ ಜನರೂ ಅಲ್ಲಿದ್ದಿರಬಹುದೆಂದು ಅನಿಸಿತು. ನಾವು ಅಂಚೆ ಕಚೇರಿಯ ಹತ್ತಿರ ಹೋದಾಗ ಅಲ್ಲೂ ಸಾವಿರಾರು ಜನ ರಸ್ತೆಯಲ್ಲಿ, ಸುತ್ತಮುತ್ತಲಿನ ಮನೆಗಳ ಮಹಡಿಗಳಲ್ಲಿ ನಿಂತು, ಚಪ್ಪಾಳೆ ತಟ್ಟಿ ನಮ್ಮನ್ನು ಸ್ವಾಗತಿಸಿದರು. ಅಷ್ಟೆಲ್ಲ ಜನ ಒಂದೆಡೆ ಸೇರಿದ್ದರೂ, ನೂಕು ನುಗ್ಗಲು, ಸದ್ದುಗದ್ದಲವಿಲ್ಲದೇ ಶಿಸ್ತಿನಿಂದ ವರ್ತಿಸುತ್ತಿದ್ದರು. ಅಂಚೆ ಕಚೇರಿಯನ್ನು ನೋಡಿ ಮಧ್ಯಾಹ್ನದ ಊಟ ಮುಗಿಸಿ ಸುಮಾರು ಎರಡೂವರೆ ಗಂಟೆಗಳ ನಂತರ ಕಟ್ಟಡದಿಂದ ಹೊರಗೆ ಬಂದಾಗ ಜನರೆಲ್ಲ ಇನ್ನೂ ಅಲ್ಲೇ ನಿಂತಿದ್ದರು. ಅವರ ಕುತೂಹಲಕ್ಕೆ ಕಾರಣ– ಅವರ ಜೀವಮಾನದಲ್ಲಿ ವಿದೇಶೀಯರನ್ನು ನೋಡುತ್ತಿರುವುದು ಇದೇ ಮೊದಲ ಬಾರಿ ಎಂದು ಚೀನೀ ಅಧಿಕಾರಿಗಳು ಹೇಳಿದರು.

ಮುಂದೆ ಕ್ವಾಂಗ್ ಚೌ (Canton) ನಗರಕ್ಕೆ ಹೋದೆವು. ಅಲ್ಲಿ ಐದಾರು ದಿನ ತಂಗಿದ್ದು ಸಿಂಕ್ಯಿ ಪ್ರಾಂತದ ಎರಡು ಅಂಚೆ ಕಚೇರಿಗಳು ಮತ್ತು ಚುಂಗ್ಹುವಾ ಪರ್ವತ ಪ್ರಾಂತದ ರಮಣೀಯ, ಬಿಸಿ ನೀರಿನ ಬುಗ್ಗೆಗಳ ವಿಶ್ರಾಮಧಾಮ ಇವುಗಳನ್ನು ನೋಡಿದೆವು. ಕ್ಯಾಂಟನ್ ದಕ್ಷಿಣದಲ್ಲಿ ಹಾಂಕಾಂಗ್ ನಗರಕ್ಕೆ ಸಮೀಪದಲ್ಲಿರುವ ದೊಡ್ಡ ಪಟ್ಟಣ. ಉತ್ತರದ ಪೀಕಿಂಗ್ ಮತ್ತು ದಕ್ಷಿಣದ ಕ್ಯಾಂಟನ್ ಎಲ್ಲ ವಿಧಗಳಲ್ಲೂ ನಮ್ಮ ದೆಹಲಿ ಮತ್ತು ಮದ್ರಾಸ ನಗರಗಳಂತೆ ವಿಭಿನ್ನ. ಪೀಕಿಂಗಿನ ಹವೆ ಚಳಿ ಮತ್ತು ಗಾಳಿಗಳಿಂದ ಕೂಡಿದ್ದರೆ, ಕ್ಯಾಂಟನ್ನಿನ ಹವೆ ಮದ್ರಾಸ್ ಮುಂಬಯಿಯಂತೆ ಸೆಕೆ. ಪೀಕಿಂಗ್ ಪ್ರಾಂತದಲ್ಲಿ ಪೈನ್ ಮತ್ತು ಫರ್ ಜಾತಿಯ ವೃಕ್ಷಗಳಿದ್ದರೆ, ಕ್ಯಾಂಟನ್ನಿನಲ್ಲಿ ನಮ್ಮ ದೇಶದಲ್ಲಿರುವ ಅನೇಕ ಗಿಡ ಮರಗಳು ಕಾಣಬಂದವು. ಉದಾಹರಣೆಗೆ: ಮಲ್ಲಿಗೆ, ಸಂಪಿಗೆ, ಸಪೋಟ, ಕಿತ್ತಳೆ ಇತ್ಯಾದಿ. ಗೋದಿ ಮತ್ತು ಬಾರ್ಲಿ ಉತ್ತರದ ಮುಖ್ಯ ಬೆಳೆಗಳಾದರೆ, ದಕ್ಷಿಣದಲ್ಲಿ ಬತ್ತ, ಕಬ್ಬು, ಹೊಗೆಸೊಪ್ಪು, ಹತ್ತಿ.

ಭಾಷೆಯಲ್ಲೂ ಎಷ್ಟು ಅಂತರವೆಂದರೆ, ಪೀಕಿಂಗಿನವರಿಗೆ ಕ್ಯಾಂಟನ್ ಭಾಷೆ ಅರ್ಥವಾಗುವುದಿಲ್ಲ. ನಮ್ಮ ಜೊತೆಯಿದ್ದ ಪೀಕಿಂಗಿನವರಾದ ದುಭಾಷಿ ಸೊಂಗ್, "ನಿಮ್ಮಂತೆಯೇ ನಾನು ಇಲ್ಲಿ ಪರಕೀಯ– ನನಗೆ ಕ್ಯಾಂಟನ್ ಭಾಷೆ ಗೊತ್ತಿಲ್ಲ," ಎಂದರು. ಕ್ಯಾಂಟನ್ನಿನವರೇ ಆದ ಲೀ ಮತ್ತು ಮಿಸ್ ವೂ ಆಗ ನಮ್ಮ ನೆರವಿಗೆ ಬಂದರು. ಆಡು ಭಾಷೆಯಲ್ಲಿ ಮಾತ್ರ ಈ ಭಿನ್ನತೆ. ಬರವಣಿಗೆಯಲ್ಲಿ ಯಾವ ತೊಡಕೂ ಇಲ್ಲ, ದೇಶಾದ್ಯಂತ ಒಂದೇ ಭಾಷೆ. ಕಾರಣ ಚೀನೀ ಭಾಷೆಗೆ ಇತರ ಭಾಷೆಗಳಿಗಿದ್ದಂತೆ ಅಕ್ಷರಗಳಿಲ್ಲ. ಸಂಕೇತ ಲಿಪಿ (ಅಥವಾ ಚಿತ್ರಲಿಪಿ) ಅವಕ್ಕಿವೆ. ಆದ್ದರಿಂದ ದೇಶದ ಯಾವ ಭಾಗದವರೂ, ಬರವಣಿಗೆಯನ್ನು ಓದಿದಾಗ– ನೋಡಿದಾಗ ಎಂದೇ ಹೇಳಬೇಕು– ತಮ್ಮ ತಮ್ಮ ಆಡು ಭಾಷೆಗಳಲ್ಲಿ ಅದನ್ನು ಅರ್ಥಮಾಡಿಕೊಳ್ಳಬಲ್ಲರು. ಸರ್ಕಾರ ಒಂದು ರಾಷ್ಟ್ರೀಯ ಭಾಷೆಯನ್ನು ದೇಶದಲ್ಲೆಲ್ಲ ಬಳಕೆಗೆ ತರುವ ಉದ್ದೇಶದಿಂದ ಶಾಲೆಗಳಲ್ಲಿ ಪೀಕಿಂಗ್ ಭಾಷೆ(ಮ್ಯಾಂಡರಿನ್)ಯನ್ನು ಬೋಧಿಸುವ ಏರ್ಪಾಡುಮಾಡಿದೆ. ಜೊತೆಗೆ ರೋಮನ್ ಲಿಪಿಯಂತಹ ಒಂದು ಲಿಪಿಯನ್ನು ಬಳಕೆಗೆ ತರಲು ಯತ್ನಿಸಿದಾಗ ದೇಶದಲ್ಲೆಲ್ಲ ವಿರೋಧ ಕಂಡುಬಂದು ಆ ಪ್ರಯತ್ನವನ್ನು ಕೈ ಬಿಟ್ಟಿತಂತೆ. ಎಲ್ಲ ಕ್ಷೇತ್ರಗಳಲ್ಲೂ, ಎಲ್ಲ ಹಂತಗಳಲ್ಲೂ ಚೀನೀ ಭಾಷೆಯನ್ನು ಉಪಯೋಗಿಸುತ್ತಾರೆ. ಮಂತ್ರಿಗಳು, ಅಧಿಕಾರಿಗಳು ಜನಸಾಮಾನ್ಯರು ಎಲ್ಲರೂ ಚೀನೀ ಭಾಷೆಯಲ್ಲೇ ವ್ಯವಹರಿಸುತ್ತಾರೆ ಎಂಬುದು ನಮ್ಮಲ್ಲಿನ ಇಂಗ್ಲೀಷ್ ವಿರೋಧಿಗಳಿಗೆ ಸಂತಸ ಉಂಟುಮಾಡಬಹುದು. ಆದರೆ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷನ್ನು ಕಲಿಯುವುದರ ಅವಶ್ಯಕತೆಯನ್ನು ಚೀನೀಯರು ಈಗ ಮನಗಂಡಿದ್ದಾರೆ ಎನ್ನಬಹುದು. ಶಾಲೆಗಳಲ್ಲಿ ಇಂಗ್ಲೀಷ್ ಶಿಕ್ಷಣ ಕ್ರಮವನ್ನು ಈಗ ಪ್ರಾರಂಭಿಸಿದ್ದಾರೆ. ನಾವು ಪೀಕಿಂಗಿನಲ್ಲಿದ್ದಾಗ ಟೆಲಿವಿಜನ್ನಿನಲ್ಲಿ ಇಂಗ್ಲೀಷ್ ಪಾಠ ಕಾರ್ಯಕ್ರಮವನ್ನು ನೋಡಿದೆವು. ವೈಜ್ಞಾನಿಕ, ಔದ್ಯೋಗಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಇಂಗ್ಲೀಷ್ ಭಾಷೆಯ ಜ್ಞಾನ ಅವಶ್ಯವೆಂದು ಭಾವಿಸಿದ್ದಾರೆನ್ನಬಹುದು.

ಕ್ಯಾಂಟನ್

ಕ್ಯಾಂಟನ್ ನಗರ ಚೀನೀ ಇತಿಹಾಸದಲ್ಲಿ ಮಹತ್ತರ ಸ್ಥಾನ ಉಳ್ಳದ್ದು. ಮಾವೋ, ಚೌ ಎನ್ ಲಾಯ್ ಮತ್ತಿತರ ಕಮ್ಯೂನಿಸ್ಟ್ ಧುರೀಣರು ತಮ್ಮ ಪಕ್ಷವನ್ನು ಕಟ್ಟಿ ಬೆಳೆಸಿದ್ದು ಅಲ್ಲಿಂದಲೇ. ೧೯೨೭ರಲ್ಲಿ ನಡೆದ ಕ್ಯಾಂಟನ್ ದಂಗೆ ಚೀನೀ ಕಮ್ಯೂನಿಸ್ಟ್ ಪಕ್ಷದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಮಾವೊ ಅವರು ಮೂರು ತಿಂಗಳು ವರೆಗೆ ಇಲ್ಲಿ ನಡೆಸಿದ ಪಕ್ಷದ ಕಾರ್ಯಕರ್ತರ ತರಬೇತಿ ಶಿಬಿರವಿದ್ದ ಕಟ್ಟಡಕ್ಕೆ ಭೇಟಿ ಕೊಟ್ಟೆವು. ಅಲ್ಲಿ ಮಾವೊ ಮತ್ತು ಅವರ ಸಹೋದ್ಯೋಗಿಗಳು ಬಳಸುತ್ತಿದ್ದ ವಸ್ತುಗಳು, ಉಪಕರಣಗಳು, ಬಂದೂಕುಗಳು, ಅವರು ಊಟ ಮಾಡುತ್ತಿದ್ದ, ಮಲಗುತ್ತಿದ್ದ ಕೋಣೆಗಳು,

ಎಲ್ಲವನ್ನೂ ಒಂದು ವಸ್ತುಪ್ರದರ್ಶನದಂತೆ ಕಾಯ್ದಿಟ್ಟಿದ್ದಾರೆ. ಈ ವಸ್ತುಪ್ರದರ್ಶನದ ವ್ಯವಸ್ಥಾಪಕರೂ ಒಬ್ಬ ತರುಣಿ.

ಕ್ಯಾಂಟನ್ನಿನ ಇನ್ನೊಂದು ವಿಶೇಷವೆಂದರೆ, ವರ್ಷಕ್ಕೆರಡು ಬಾರಿ ಸುಮಾರು ಒಂದು ತಿಂಗಳು ನಡೆಯುವ ವ್ಯಾಪಾರಿ ಮೇಳ. ದೇಶದಲ್ಲಿ ಉತ್ಪಾದಿಸಲ್ಪಡುವ, ರಫ್ತು ಮಾಡುವಂತಹ ಎಲ್ಲ ಉತ್ಪನ್ನಗಳನ್ನೂ ಒಂದು ಬೃಹತ್ ಕಟ್ಟಡದಲ್ಲಿ ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶಿಸಿದ್ದಾರೆ. ವಿದೇಶೀ ಸರಕಾರಗಳು, ವ್ಯಾಪಾರಿ ಸಂಸ್ಥೆಗಳು, ಅಲ್ಲದೆ ಸಂದರ್ಶಕರು ಈ ಮೇಳವನ್ನು ಸಂದರ್ಶಿಸಿ ತಮಗೆ ಬೇಕಾದ ಮಾಲುಗಳನ್ನು ಕೊಳ್ಳುತ್ತಾರೆ. ವ್ಯಾಪಾರಿ ಮಾತುಕತೆಗಳಿಗೋಸ್ಕರವೇ ಕೆಲವು ಕೊಠಡಿಗಳನ್ನು ಮೀಸಲಾಗಿಟ್ಟಿದ್ದಾರೆ. ನಾವು ಮೇಳವನ್ನು ನೋಡಲು ಹೋದಾಗ ಆ ಸಂಸ್ಥೆಯ ಕ್ರಾಂತಿಕಾರಿ ಸಮಿತಿಯ ಅಧ್ಯಕ್ಷರೇ ನಮ್ಮನ್ನು ಸ್ವಾಗತಿಸಿದರು. ಮೇಳದಲ್ಲಿ ಸುತ್ತಾಡಿ ದಣಿದಾಗ ನಮ್ಮನ್ನು ಒಂದು ವಿಶ್ರಾಂತಿ ಕೋಣೆಗೆ ಕರೆದೊಯ್ದರು. ಅಲ್ಲಿ ಚೀನೀ ಪದ್ಧತಿಯಂತೆ ಚಹ ನೀಡಿ ನಮ್ಮನ್ನು ಸ್ವಾಗತಿಸಿದರು. ಚೀನೀ ಚಹವೆಂದರೆ, ಚಹಾ ಎಲೆಗಳ ಮೇಲೆ ಸುರಿದ ಬಿಸಿ ನೀರು ಮಾತ್ರ. ಸಕ್ಕರೆ, ಹಾಲುಗಳ ಮಿಶ್ರಣವಿಲ್ಲ ! ದೊಡ್ಡ ದೊಡ್ಡ ಹೋಟೆಲುಗಳಲ್ಲಿ ಮಾತ್ರ, ಪಾಶ್ಚಾತ್ಯ ಚಹ ಬೇಕೆಂದರೆ ಹಾಲು, ಸಕ್ಕರೆ ಬೆರೆಸಿದ ಚಹ ಕೊಡುತ್ತಾರೆ. ಅಧ್ಯಕ್ಷರು ಬಿಚ್ಚು ಮನಸ್ಸಿನಿಂದ ದೇಶದ ಸ್ಥಿತಿಗತಿಗಳನ್ನು ಕುರಿತು ಮಾತನಾಡಿದರು. ತಮ್ಮ ದೇಶ ಬಡ ದೇಶವೆಂದೂ, ಸಾಧಿಸಬೇಕಾದದ್ದು ಇನ್ನೂ ಬಹಳವಿದೆಯೆಂದೂ ಹೇಳಿದರು.

ಭಾಷಾಪ್ರೇಮಿ ಹಕ್ಕಿ !

ಮೇಳದಲ್ಲಿ ಒಂದು ಮಾತನಾಡುವ ಹಕ್ಕಿಯನ್ನಿಟ್ಟಿದ್ದರು. ಪಂಜರದಲ್ಲಿ ಅದರ ಮುಂದೆ ನಿಂತು ಏನನ್ನು ಹೇಳಿದರೂ, ಅದನ್ನು ಹಾಗೆಯೇ ಪುನರುಚ್ಚರಿಸುತ್ತಿತ್ತು. ನಾನು ಅದರ ಮುಂದೆ ನಿಂತು "ಮೆಯೆೊ" (ಚೀನೀ ಭಾಷೆಯಲ್ಲಿ ಅಕ್ಕಿ, ಅನ್ನ) ಎಂದೆ. ಅದು "ಮೆಯೆೊ" ಎಂದು ಮಾರು ನುಡಿಯಿತು. ಮತ್ತೆ "ಇಂಡಿಯ" ಎಂದೆ. ಆಗ ಅದು ಗೊಂದಲಕ್ಕೀಡಾದಂತೆ ಕಂಡಿತು. ಅಸ್ಪಷ್ಟವಾಗಿ ಏನೋ ಕೂಗಿತು. ಪಕ್ಕದಲ್ಲಿದ್ದ ದುಭಾಷಿಯು, "ನೀವು ಉಚ್ಚರಿಸಿದ ಪದ ಅರ್ಥವಾಗಲಿಲ್ಲವೆಂದು ಅದು ಈ ರೀತಿ ಶಬ್ದ ಮಾಡುತ್ತಿದೆ" ಎಂದರು. ನಾನು ಪುನಃ "ಇಂದು" ಎಂದೆ. (ಚೀನೀ ಭಾಷೆಯಲ್ಲಿ ಭಾರತಕ್ಕೆ "ಇಂದು" ಎಂದು ಹೆಸರು.) ಹಕ್ಕಿ ತಕ್ಷಣ "ಇಂದು" ಎಂದು ಮಾರ್ನುಡಿಯಿತು. ಚೀನದಲ್ಲಿ ಮೈನಾ ಹಕ್ಕಿಯೂ ಅಪ್ಪಟ ಚೀನೀ ಭಾಷಾಪ್ರೇಮಿಯೆಂದಾಯಿತು.

ಕ್ಯಾಂಟನ್ ನಗರದಲ್ಲಿದ್ದಾಗ, ಗ್ರಾಮೀಣ ಅಂಚೆ ವ್ಯವಸ್ಥೆಯ ನಮ್ಮ ಅಧ್ಯಯನದ ವರದಿಯನ್ನು ಸಿದ್ಧಗೊಳಿಸಿ ಅಂಚೆ ಇಲಾಖೆಯ ಮಹಾನಿರ್ದೇಶಕರಿಗೆ ಒಪ್ಪಿಸಿದೆವು. ಚೀನದ ಅಂಚೆ ವ್ಯವಸ್ಥೆಯ ಬಗೆಗೆ ಸ್ಥೂಲವಾಗಿ ಹೇಳುವುದಾದರೆ, ಅದು ನಮ್ಮ ದೇಶದ ಅಂಚೆ ಕಚೇರಿಗಳಲ್ಲಿ ದೊರಕುವ ಎಲ್ಲ ಸೇವೆಗಳನ್ನೂ ಒದಗಿಸುವುದಿಲ್ಲ. ವಿಮೆ, ಉಳಿತಾಯ ಯೋಜನೆ, ಅಂಚೆ, ಜೀವ ವಿಮೆ, ಮುಂತಾದ ಸೌಲಭ್ಯಗಳಿಲ್ಲ. ದೇಶದಲ್ಲಿರುವ ಅಂಚೆ ಕಛೇರಿಗಳ ಸಂಖ್ಯೆ ನಮ್ಮ ದೇಶಕ್ಕಿಂತ ಬಹಳ ಕಡಿಮೆ. ಗ್ರಾಮಾಂತರ ಪ್ರದೇಶದಲ್ಲಿ ಅಂಚೆ ಪೇದೆಗಳು ಮನೆ ಮನೆಗೆ ಪತ್ರಗಳನ್ನು ಬಟವಡೆ ಮಾಡುವುದಿಲ್ಲ. ಈ ಜವಾಬ್ದಾರಿಯನ್ನು ಸ್ಥಳೀಯ ಕಮ್ಯೂನ್ ಮತ್ತು ಪ್ರೊಡಕ್ಷನ್ ಬ್ರಿಗೇಡುಗಳು ವಹಿಸುತ್ತವೆ. ಮತ್ತೊಂದು ವಿಶೇಷವೆಂದರೆ ವೃತ್ತಪತ್ರಿಕೆಗಳು, ವಾರ ಪತ್ರಿಕೆಗಳು ಇತ್ಯಾದಿಗಳನ್ನು ಹಂಚುವ ಮತ್ತು ಚಂದಾ ಹಣವನ್ನು ವಸೂಲು ಮಾಡುವ ಕಾರ್ಯವನ್ನು ದೇಶಾದ್ಯಂತ ಅಂಚೆ ಕಚೇರಿಗಳೇ ನಿರ್ವಹಿಸುತ್ತವೆ. ಏಕೆಂದರೆ ಚೀನದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಖಾಸಗಿ ಉದ್ಯಮ ನಿಷಿದ್ಧ. ವೃತ್ತಪತ್ರಿಕೆಗಳನ್ನು ನಡೆಸುವುದೂ ಸರಕಾರವೇ. ಒಟ್ಟಿನಲ್ಲಿ ಅಂಚೆ ಕಚೇರಿಗಳು ಸಮರ್ಪಕವಾಗಿ ಸುವ್ಯವಸ್ಥಿತವಾಗಿ ಕೆಲಸ ಮಾಡುತ್ತಿವೆಯೆಂದು ಹೇಳಬಹುದು.

ನಮ್ಮ ತಂಡದ ಅನೇಕ ಸದಸ್ಯರು ಕ್ಯಾಂಟನ್ನಿಂದಲೇ ಸ್ವದೇಶಗಳಿಗೆ ಮರಳಿದರು. ಇನ್ನು

ಕೆಲವರು ಪೀಕಿಂಗಿಗೆ ಬಂದು ವಿಮಾನ ನಿಲ್ದಾಣದಿಂದಲೇ ತಮ್ಮ ತಮ್ಮ ದೇಶಗಳಿಗೆ ವಾಪಸಾದರು. ನಾವು ಭಾರತೀಯರು ತಡವಾಗಿ ಚೀನ ತಲಪಿದ ಕಾರಣ, "ಮೂರು ದಿನ ಪುನಃ ಪೀಕಿಂಗಿನಲ್ಲಿದ್ದು ಹೋಗಬಹುದು," ಎಂದು ಚೀನೀ ಅಧಿಕಾರಿಗಳು ಸೂಚಿಸಿದರು. ಅದರಂತೆ ಮೇ [illegible]ರಿಂದ ೧೧ರ ವರೆಗೆ ಪೀಕಿಂಗ್‌ನಲ್ಲಿ ಉಳಿದೆವು. ಈ ಸಾರಿ "ಪೀಕಿಂಗ್ ಹೋಟೆಲ್"ನಲ್ಲೇ ನಮಗೆ ವಸತಿ ಏರ್ಪಡಿಸಿದ್ದರು. ಹೋಟೆಲ್ಲಿನ ಪ್ರತಿಯೊಂದು ಕೋಣೆಯೂ ಟೆಲಿಫೋನ್, ಟೆಲಿವಿಜನ್ ಮುಂತಾದ ಎಲ್ಲ ಸೌಕರ್ಯಗಳಿಂದ ಸುಸಜ್ಜಿತವಾಗಿತ್ತು. ಪೀಕಿಂಗಿನಲ್ಲಿ ಒಂದು ಅಂಚೆ ಕಚೇರಿ, ಅಂಚೆ ಚೀಟಿಗಳನ್ನು ಮುದ್ರಿಸುವ ಕಾರ್ಖಾನೆ, ಹಿಂದಿನ ಚಕ್ರವರ್ತಿಗಳ ಅರಮನೆ, ಬೇಸಗೆಯ ಅರಮನೆ ಇವುಗಳನ್ನು ನೋಡಿದೆವು. ಮೇ ೯ರ ಸಂಜೆ ಟೆಲಿವಿಜನ್ನಿನಲ್ಲಿ ರಾಜಕಪೂರರ "ಆವಾರಾ" ಚಿತ್ರವನ್ನು ನೋಡುವ ಅಪೂರ್ವ ಅವಕಾಶ ದೊರೆಯಿತು. ಮೂರು ಹಿಂದಿ ಚಿತ್ರಗಳು—ಆವಾರಾ, ದೋ ಬಿಘಾ ಜಮೀನ್, ದೋ ಲಘಂಗಿ—ದೇಶಾದ್ಯಂತ ಪ್ರದರ್ಶಿಸಲ್ಪಡುತ್ತಿದ್ದು ಬಹಳ ಮೆಚ್ಚುಗೆಗೆ ಪಾತ್ರವಾಗಿವೆಯೆಂದು ತಿಳಿಯಿತು. ಆವಾರಾ ಚಿತ್ರದ ಹಾಡುಗಳನ್ನು ಬಿಟ್ಟು ಉಳಿದೆಲ್ಲವನ್ನೂ ಚೀನೀ ಭಾಷೆಗೆ ಡಬ್ ಮಾಡಿದ್ದಾರೆ. ಹೀಗೆಯೇ ಇನ್ನೆರಡು ಚಿತ್ರಗಳೂ ಡಬ್ ಮಾಡಲ್ಪಟ್ಟಿವೆ. "ನಿಮ್ಮ ಚಿತ್ರ ಸಂಗೀತ ಮತ್ತು ನೃತ್ಯ ನಮಗೆ ಬಹಳ ಮೆಚ್ಚುಗೆಯಾಗಿದೆ." ಎಂದು ಅನೇಕರು ಹೇಳಿದರು.


ನೃತ್ಯ ಸಂಗೀತ

ನಮಗೆ ಮೂರು ಬಾರಿ ರಂಗ ಮಂದಿರಗಳಿಗೆ ಭೇಟಿಕೊಟ್ಟು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುವ ಅವಕಾಶ ದೊರೆಯಿತು. ಹಾಂಗ್ ಚೌನಲ್ಲಿ ಒಂದು ಸಂಜೆ ಪೀಕಿಂಗ್ ರೇಡಿಯೋ ಕಂಪನಿಯ ತಂಡದವರ ಸಂಗೀತ ಕಾರ್ಯಕ್ರಮಕ್ಕೆ ಹೋಗಿದ್ದೆವು. ಅದರಲ್ಲಿ ಪಾಶ್ಚಾತ್ಯ ಪದ್ಧತಿಯಂತೆ ಮೇಳ ಸಂಗೀತವೇ ಹೆಚ್ಚಾಗಿತ್ತು. ಕಲಾವಿದರು ಚೀನ, ರಶಿಯ, ಜಪಾನ್, ಥೈಲ್ಯಾಂಡ್,

ಇಂಡೋನೇಶಿಯಾ, ಯುಗೋಸ್ಲಾವಿಯಾ ಮುಂತಾದ ದೇಶಗಳ ಗೀತೆಗಳನ್ನು ಬಹು ಸುರುಚಿಯಿಂದ ಹಾಡಿದರು. ಕಲಾವಿದರೆಲ್ಲರೂ ರಂಗದ ಮೇಲೆ ಬಂದು ಹಾಡುವಾಗ ಒಂದೇ ರೀತಿಯ ಪಾಶ್ಚಾತ್ಯ (ಸೂಟು) ಅಥವಾ ಚೀನಿ (ಮಾವೋ ಜಾಕೆಟ್ ಪ್ಯಾಂಟ್) ಉಡುಪುಗಳನ್ನು ಅಚ್ಚುಕಟ್ಟಾಗಿ ಧರಿಸುತ್ತಿದ್ದುದು ಪ್ರದರ್ಶನಕ್ಕೆ ಕಳೆ ಕೊಡುತ್ತಿತ್ತು. ಕ್ಯಾಂಟನ್ನಿನಲ್ಲಿ ಬ್ಯಾಲೆ ನೃತ್ಯ ಮತ್ತು ಚೀನೀ ಜಾನಪದ ಸಂಗೀತ ನೃತ್ಯ ಕಾರ್ಯಕ್ರಮಗಳನ್ನು ನೋಡಿದೆವು. ಶಾಂಘೈ ಬ್ಯಾಲೆ ಕಂಪನಿಯ ಕಲಾವಿದರು ಸ್ವಾನ್‌ಲೇಕ್ ಬ್ಯಾಲೆಯ ಭಾಗಗಳನ್ನೊಳಗೊಂಡ ಅನೇಕ ನೃತ್ಯಗಳನ್ನು ಬಹು ಸಮರ್ಪಕವಾಗಿ ಪ್ರದರ್ಶಿಸಿದರು. ಜಾನಪದ ನೃತ್ಯಗಳೂ, ಹೃದಯಂಗಮವಾಗಿ ರಂಜನೀಯವಾಗಿದ್ದವು. ಇದರಲ್ಲಿ ಒಂದು ನೃತ್ಯ ನಾಟಕ ಚೀನೀ ಕ್ರಾಂತಿ ಸಮರಕ್ಕೆ ಸಂಬಂಧಿಸಿತ್ತು. ಕೆಂಪು ಸೈನ್ಯದ ತುಕುಡಿಗೂ ಚಿಯಾಂಗ್ ಕೈಷೇಕರ ಸೈನಿಕರಿಗೂ ಹಳ್ಳಿಯೊಂದರ ಓಣಿಯಲ್ಲಿ ನಡೆದ ಘರ್ಷಣೆ, ವ್ಯಂಗ್ಯ, ಹಾಸ್ಯ, ಕಟಕಿಗಳಿಂದ ಕೂಡಿ ಸ್ವಾರಸ್ಯವಾಗಿತ್ತು. ನನ್ನ ಗಮನ ಸೆಳೆದ ಮತ್ತೊಂದು ನೃತ್ಯವೆಂದರೆ ಚೀನೀ ಮಹಿಳೆಯರು ಹೊಲ ಗದ್ದೆಗಳಲ್ಲಿ ಕೆಲಸ ಮುಗಿಸಿ, ಮಳೆ, ಗುಡುಗು, ಮಿಂಚುಗಳ ವಾತಾವರಣದಲ್ಲಿ ಹಿಂತಿರುಗುವ ವಸ್ತುವಿನಿಂದ ಕೂಡಿದ್ದು. ತರುಣಿಯರು ತಮ್ಮ ಬಣ್ಣ ಬಣ್ಣದ ಛತ್ರಿಗಳನ್ನು ವಿವಿಧ ಭಂಗಿಗಳಲ್ಲಿ ಗಿರ್ರನೆ ತಿರುಗಿಸುತ್ತ, ಪ್ರಕೃತಿಯ ಹಿನ್ನೆಲೆಗೆ ತಕ್ಕ ಪ್ರತಿಕ್ರಿಯೆಯನ್ನು ಮೂಡಿಸಿ ನರ್ತಿಸಿದರು. ಈ ನೃತ್ಯಕ್ಕೆ ಇಂಪಾದ ಹಿನ್ನೆಲೆ ವಾದ್ಯ ಸಂಗೀತವಿತ್ತು. ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಒಬ್ಬ ಸುಂದರ ಮಹಿಳೆ ಸೂತ್ರಧಾರಳಾಗಿದ್ದು ಆಗಾಗ್ಗೆ ರಂಗದ ಮೇಲೆ ಬಂದು ಆ ಕಾರ್ಯಕ್ರಮಗಳ ಬಗೆಗೆ ವಿವರಣೆ ನೀಡುತ್ತಾಳೆ.

ಚೀನದ ದೊಡ್ಡ ಗೋಡೆ

ಮೇ ೧೦ ರ ಬೆಳಿಗ್ಗೆ ಪೀಕಿಂಗಿನಿಂದ ಉತ್ತರಕ್ಕೆ ೬೦-೭೦ ಕಿಲೋ ಮೀಟರ್ ದೂರದಲ್ಲಿರುವ ಚೀನದ ದೊಡ್ಡ ಗೋಡೆ ನೋಡಲು ಕಾರಿನಲ್ಲಿ ಹೋದೆವು. ನಮ್ಮೊಡನೆ ಹಿರಿಯ 'ಮಗು ಮುಖದ' ಚಾಂಗ್ ಮತ್ತು ಪೆಂಗ್ ಎನ್ನುವರು






ಇದ್ದರು. ದುಭಾಷಿ ಕಿರಿಯ ಚಾಂಗ್ ಪೀಕಿಂಗ್ ನಗರದಲ್ಲಿ ಎಲ್ಲೆಡೆ ನಮ್ಮೊಡನಿರುತ್ತಿದ್ದ. ಈ ಇಬ್ಬರು ಚಾಂಗ್‌ಗಳಿಗೆ ಅವರವರ ಮುಖ ಲಕ್ಷಣಕ್ಕನುಗುಣವಾಗಿ, 'ಮಾಗು ಮುಖದ ಚಾಂಗ್' ಮತ್ತು 'ಸಪ್ಪೆ ಮುಖದ ಚಾಂಗ್' ಎಂದು ನಮ್ಮ ತಂಡದ ನಾಯಕ ನಾರಾಯಣ ನಾಮಕರಣಮಾಡಿದ್ದರು! ಈ ದೊಡ್ಡ ಗೋಡೆ ದೇಶದ ಉತ್ತರದಲ್ಲಿ ೬೩೦೦ ಕಿಲೋಮೀಟರ್ ಉದ್ದಕ್ಕೆ ಪಶ್ಚಿಮದಿಂದ ಪೂರ್ವ ತೀರದವರೆಗೂ ಹಬ್ಬಿದೆ. ಸುಮಾರು ೨೦ ಅಡಿ ಎತ್ತರದ ೧೫ ಅಡಿ ದಪ್ಪವಿರುವ ಈ ಗೋಡೆ ಹಿಂದಿನ ಚೀನೀಯರ ಒಂದು ಅದ್ಭುತ ಸಾಧನೆ. ಕ್ರಿಸ್ತಪೂರ್ವ ೩ನೇ ಶತಮಾನದಲ್ಲಿ ಉತ್ತರದ ಹೂಣ ಬುಡಕಟ್ಟಿನ ಜನರ ದಾಳಿಗಳನ್ನು ತಡೆಯಲು ಈ ಗೋಡೆಯನ್ನು ಕಟ್ಟಿದರು. ಮುಂದೆ ೧೫ ನೇ ಮತ್ತು ೧೬ನೇ ಶತಮಾನಗಳ ಮಧ್ಯೆ ಮಿಂಗ್ ಚಕ್ರವರ್ತಿಗಳ ಕಾಲದಲ್ಲಿ ಅದನ್ನು ಬಲಪಡಿಸಿ ಈಗಿನ ಸ್ಥಿತಿಗೆ ತರಲಾಯಿತು. ಬೆಟ್ಟಗುಡ್ಡಗಳ ಶಿಖರಗಳನ್ನು ಒಂದುಗೂಡಿಸುವಂತೆ ನಿರ್ಮಿಸಲಾಗಿರುವ ಗೋಡೆಯ ಮೇಲೆ ಸ್ವಲ್ಪ ದೂರ ನಡೆದರೆ ಒಂದು ಕಡಿದಾದ ಬೆಟ್ಟವನ್ನು ಹತ್ತಿದ ಅನುಭವವಾಗುತ್ತದೆ.

ಆ ದಿನ ವಿದೇಶೀಯರೂ ಸೇರಿದಂತೆ ಸಾವಿರಾರು ಜನ ವಿಹಾರಿಗಳು ಸಾಧ್ಯವಾದಷ್ಟು ದೂರ ಗೋಡೆಯ ಮೇಲೆ ನಡೆದು ಹೋಗುವ ಸಾಹಸದಲ್ಲಿ ತೊಡಗಿದ್ದರು. ದೊಡ್ಡ ಗೋಡೆಯನ್ನು ನೋಡಿ ವಾಪಸು ಬರುವ ಹಾದಿಯಲ್ಲಿ ಮಿಂಗ್ ಚಕ್ರವರ್ತಿಗಳ ಸಮಾಧಿಗಳಿರುವ ಸುಂದರ ತಾಣವನ್ನು ನೋಡಿದೆವು. ಸಮಾಧಿಗಳು ಬೆಟ್ಟಗಳ ತಪ್ಪಲಿನಲ್ಲಿ ನಿರ್ಮಿಸಲ್ಪಟ್ಟು ಕುತೂಹಲಕಾರಿಯಾಗಿವೆ. ೧೯೫೦ ರ ವರೆಗೆ ಬಹುಪಾಲು ಸಮಾಧಿಗಳು ಮಣ್ಣಿನಲ್ಲಿ ಹುದುಗಿ ಹೋಗಿ ಸಣ್ಣ ಗುಡ್ಡಗಳಾಗಿ ಪರಿವರ್ತನೆ ಹೊಂದಿದ್ದವಂತೆ. ಗುಡ್ಡಗಳ ಮೇಲೆ ಮರ, ಗಿಡಗಳು ಬೆಳೆದು, ಸಮಾಧಿಗಳು ಪೂರ್ತಿ ಭೂಗತವಾಗಿದ್ದವು. ಅವುಗಳಲ್ಲಿ ಅಮೃತ ಶಿಲೆಯಿಂದ ನಿರ್ಮಿಸಿದ ಚಕ್ರವರ್ತಿಯೊಬ್ಬನ ಸಮಾಧಿಯನ್ನು ಶೋಧಿಸಿ ಸಂದರ್ಶಕರಿಗೆ ನೋಡಲು ಅವಕಾಶ ಮಾಡಲಾಗಿದೆ. ಅದರಲ್ಲಿ ದೊರೆತ ವಜ್ರ, ವೈಢೂರ್ಯಗಳು, ಆಭರಣಗಳು, ಮತ್ತಿತರ ವಸ್ತುಗಳನ್ನು ಪಕ್ಕದಲ್ಲೆ ಒಂದು ಮ್ಯೂಸಿಯಮ್ಮಿನಲ್ಲಿಟ್ಟಿದ್ದಾರೆ. ಚೀನದ ಎಲ್ಲೆಡೆ ಅತಿ ವೆಚ್ಚದಿಂದ ಕಟ್ಟಲ್ಪಟ್ಟಿರುವ ಪ್ರಾಚೀನ ಸೌಧ, ಸ್ಮಾರಕಗಳ ಮುಂದೆ ಅವನ್ನು ಕಟ್ಟಲು ಎಷ್ಟು ಸಾವಿರ ಜನ ಎಷ್ಟು ವರ್ಷ ಕೆಲಸ ಮಾಡಿದರು, ಅವಕ್ಕೆ ತಗುಲಿದ ವೆಚ್ಚವೆಷ್ಟು, ಆ ಹಣದಿಂದ ಎಷ್ಟು ಬಡವರ ಮನೆಗಳನ್ನು ನಿರ್ಮಿಸಬಹುದಿತ್ತು ಮುಂತಾದ ವಿವರಗಳನ್ನೊಳಗೊಂಡ ಫಲಕಗಳಿವೆ. ಆ ಫಲಕಗಳಲ್ಲಿ ತಪ್ಪದೇ ಇರುವ ಮತ್ತೊಂದು ವಾಕ್ಯವೆಂದರೆ, "ಈ ಕಟ್ಟಡವು ಚೀನೀ ಕಾರ್ಮಿಕರ ವಿವೇಕವನ್ನೂ, ಕೌಶಲವನ್ನೂ ತೋರಿಸುವುದಲ್ಲದೇ ಆಳುವ ವರ್ಗದ ಕ್ರೌರ್ಯಕ್ಕೆ ನಿದರ್ಶನವಾಗಿದೆ" ಎಂಬುದು.

ಜನಜೀವನ

ಈಗಿನ ಚೀನೀ ನಾಯಕರು, ದೇಶವನ್ನು ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿಸುವ ಉದ್ದೇಶದಿಂದ "ಚತುರ್ನವೀಕರಣ" ಎಂಬ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದರ ಅಂಗವಾಗಿ ಕೃಷಿ, ಔದ್ಯೋಗಿಕ, ವೈಜ್ಞಾನಿಕ ಮತ್ತಿತರ ಕ್ಷೇತ್ರಗಳಲ್ಲಿ ತ್ವರಿತ ಪ್ರಗತಿ ಸಾಧಿಸಲು ಜಪಾನ್, ಫ್ರಾನ್ಸ್, ಅಮೇರಿಕ ಮುಂತಾದ ರಾಷ್ಟ್ರಗಳ ನೆರವನ್ನು ಪಡೆಯುತ್ತಿದ್ದಾರೆ. ದೇಶದ ಎಲ್ಲ ಭಾಗಗಳಲ್ಲೂ ವಿದೇಶೀ ಪ್ರವಾಸಿಗಳ, ತಂತ್ರಜ್ಞರ ತಂಡಗಳನ್ನು ಕಂಡೆವು. ತಮ್ಮ ದೇಶದ ಪ್ರಗತಿ ಕುಂಠಿತವಾಗಿರುವುದಕ್ಕೆ ದುಷ್ಟ ಚತುಷ್ಟಯದ ಕಾರಸ್ಥಾನವೇ ಕಾರಣ ಎಂದು ಹೇಳಲಾಗುತ್ತಿತ್ತು. ಈ ದುಷ್ಟ ಕೂಟವನ್ನು ದಮನಮಾಡಿದ ಮೇಲೆ, ಇತ್ತೀಚೆಗೆ ಎಲ್ಲ ಕ್ಷೇತ್ರಗಳಲ್ಲೂ ಪರಿಸ್ಥಿತಿ ಸುಧಾರಿಸಿದೆ ಎನ್ನುವ ಮಾತು ಪದೇ ಪದೇ ಕೇಳಿಬರುತ್ತಿತ್ತು.

ಸ್ತ್ರೀಯರೂ ಸೇರಿದಂತೆ ಚೀನೀಯರೆಲ್ಲರೂ, ನೀಲಿ ಅಥವಾ ಹಸಿರು ಬಣ್ಣದ ಸಮವಸ್ತ್ರದಂತಹ ಮಾವೊ ಜಾಕೆಟ್ ಮತ್ತು ಪ್ಯಾಂಟ್ ಧರಿಸುತ್ತಾರೆ. ಜಾಕೆಟ್ಟಿನೊಳಗೆ, ಬಿಳಿಯ ಶರ್ಟ್. ಸಾಮಾನ್ಯ ಉದ್ಯೋಗಿಗಳ ಮಾಸಿಕ ವೇತನ ೩೫ ಯುವಾನ್ (ಒಂದು ಯುವಾನ್ ಸುಮಾರು ಐದು ರೂಪಾಯಿ

ಗಳಿಗೆ ಸಮ.) ಭೂಮಿ, ಮನೆ, ಅಂಗಡಿ, ಕಾರ್ಖಾನೆ ಮತ್ತೆಲ್ಲ ಆಸ್ತಿಗಳೂ ಸಮುದಾಯ ಸ್ವಾಮ್ಯಕ್ಕೆ ಸೇರಿರುವುದರಿಂದ ಬಡವ, ಶ್ರೀಮಂತರೆಂಬ ಅಂತರವಿಲ್ಲ. ಯಾವನೂ ಸ್ವಂತ ಮೋಟರುಕಾರನ್ನು ಹೊಂದಲು ಅವಕಾಶವಿಲ್ಲ. ಕೆಲವು ವಿದೇಶೀಯರಿಗೆ ಸೇರಿದ ಕಾರುಗಳನ್ನು [illegible] ದೇಶದಲ್ಲಿರುವ ಕಾರುಗಳೆಲ್ಲ ಸರಕಾರಕ್ಕೆ ಸೇರಿದವು ಮತ್ತು ಸರ್ಕಾರದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಡುತ್ತವೆ. ಕಾರುಗಳ ಸಂಖ್ಯೆ ಬಹಳ ಕಡಿಮೆ. ನಗರಗಳಲ್ಲಿ ಟ್ರಾಫಿಕ್ ಜಾಮ್‌ಗಳಂತೂ ಇಲ್ಲವೇ ಇಲ್ಲ. ಪರ[illegible] ಪೆಟ್ರೋಲ್ ಬೆಲೆಯಿಂದಾಗಿ ಇತರ ರಾಷ್ಟ್ರಗಳಿಗೆ ಉಂಟಾಗಿರುವ ತಲೆನೋವು ಚೀನಕ್ಕಿಲ್ಲ. ಅಲ್ಲದೆ, ಚೀನದಲ್ಲಿ ಸಾಕಷ್ಟು ಪೆಟ್ರೋಲಿಯಂ ದೊರೆತಿದ್ದು ಅದರ ಉತ್ಪನ್ನಗಳನ್ನು ರಫ್ತುಮಾಡುವ ಸಾಧ್ಯತೆಯುಂಟೆಂದೂ ತಿಳಿದುಬಂತು. ಬಸ್ಸುಗಳು ಮತ್ತು ಸೈಕಲ್ಲುಗಳೇ ಜನತೆಯ ಸಾರಿಗೆ ಸಾಧನಗಳು. ಬಹು ಪಾಲು ಜನರ ಮಹತ್ಸಾಧನೆಯೆಂದರೆ, ಸ್ವಂತ ಸೈಕಲ್ ಕೊಳ್ಳುವುದು. ನಗರಗಳಲ್ಲಿ ಎದ್ದು ಕಾಣುವ ಬೇರೆ ಅಂಶವೆಂದರೆ, ಜಾಹೀರಾತುಗಳು ಪೋಸ್ಟರುಗಳು, ಫಲಕಗಳು ಇಲ್ಲದಿರುವುದು; ಹೋಟೆಲ್, ರೈಲ್ವೆಸ್ಟೇಷನ್, ಬ್ಯಾಂಕ್ ಕಚೇರಿಯಂತಹ ಕೆಲವು ಕಟ್ಟಡಗಳನ್ನು ಬಿಟ್ಟರೆ ಮತ್ತಾವ ಕಟ್ಟಡಗಳ ಮೇಲೂ ನಾಮಫಲಕಗಳಿರುವುದಿಲ್ಲ. ಈ ಕಾರಣದಿಂದ ರಸ್ತೆಗಳು ಬೋಳು ಬೋಳಾಗಿದ್ದರೂ, ಚೊಕ್ಕಟವಾಗಿವೆ. ಇಂತಹ ಪರಿಸ್ಥಿತಿ ನಮ್ಮ ಬೆಂಗಳೂರು, ಮುಂಬಯಿಯಂತಹ ನಗರಗಳಲ್ಲೂ ಬರಬೇಕೆಂದು ಕೆಲವರಂತೂ ಬಯಸಬಹುದು. ದೇಶದಲ್ಲಿ ಸಾರ್ವಜನಿಕ ಕಟ್ಟಡಗಳು ಮತ್ತು ಈಚೆಗೆ ಕಾರ್ಮಿಕರ ವಸತಿಗೆ ನಿರ್ಮಿಸಲ್ಪಟ್ಟಿರುವ ಬಹು ಮಹಡಿ ಕಟ್ಟಡಗಳನ್ನುಳಿದು, ಬಹುಪಾಲು ಮನೆಗಳು ಹಳೆಯ ಕಾಲದ ಚೀನೀ ಮಾದರಿಯ ಹೆಂಚಿನ ಮನೆಗಳು. ಕಮ್ಯೂನ್ ಪದ್ಧತಿಯಂತೆ ಪ್ರತಿಯೊಂದು ಕುಟುಂಬಕ್ಕೂ ವಾಸಕ್ಕೆ ಎರಡು ಕೋಣೆಗಳು, ಅಡಿಗೆ ಮನೆ, ಸ್ನಾನದ ಮನೆ ಮತ್ತು ಕಕ್ಕಸನ್ನು ಸಂಸಾರಗಳು ಒಟ್ಟಾಗಿ ಉಪಯೋಗಿಸಬೇಕು.

ಮೂರ್ನಾಲ್ಕು ಜನರ ಜೀವನ ನಿರ್ವಹಣೆಗಾಗಿ ಪ್ರತಿಯೊಬ್ಬರೂ ಕೆಲಸಮಾಡಲೇಬೇಕು. ಕುಟುಂಬ ನಿಯಂತ್ರಣದ ಅವಶ್ಯಕತೆಯನ್ನು ಜನ ಅರಿತಿದ್ದು, "ಎರಡು ಮಕ್ಕಳು ಸಾಕು" ಎನ್ನುವ ಸೂತ್ರವನ್ನು ಪ್ರಚಾರ ಮಾಡಲಾಗುತ್ತಿದೆ. ಕಾರ್ಯತತ್ಪರತೆ, ಶಿಸ್ತು, ಅಚ್ಚುಕಟ್ಟುತನ ಸಾಮಾನ್ಯವಾಗಿ ಜನರಲ್ಲಿ ಎದ್ದು ಕಾಣುವ ಗುಣಗಳು. ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಅದ್ದೂರಿಯ, ಆಡಂಬರದ ಜೀವನಕ್ಕೆ ಅವಕಾಶವಿಲ್ಲ. ಎಲ್ಲೆಡೆ, ಸರಳತೆಯ, ಸಂಯಮದ ವಾತಾವರಣ ಜೀವನದ ಮಟ್ಟ, ಮತ್ತಿತರ ಎಷ್ಟೋ ವಿಷಯಗಳಲ್ಲಿ ಏಶಿಯದ ಇತರ ದೇಶಗಳಿಂದ ಭಿನ್ನವಲ್ಲದಿದ್ದರೂ, ಆ ದೇಶಗಳಲ್ಲಿರುವಂತೆ ಗದ್ದಲ, ಕೊಳಕು ಅವ್ಯವಸ್ಥೆಗಳು ಸಾಮಾನ್ಯವಾಗಿ ಕಾಣಬರುವುದಿಲ್ಲ. "ಕಾಯಕವೇ ಕೈಲಾಸ" ಎನ್ನುವ ಸೂತ್ರ ಚೀನೀಯರ ಪರಿಸ್ಥಿತಿಗೆ ಚೆನ್ನಾಗಿ ಅನ್ವಯಿಸುತ್ತದೆ.

✡



ಜನಸಂಖ್ಯೆಯ ಭಾರದಿಂದ ಬಳಲುತ್ತಿರುವ ಚೀನದಲ್ಲೀಗ ಹೊಸತೊಂದು ನೀತಿ ರೂಢಿಗೆ ಬಂದಿದೆ. ಅದೆಂದರೆ "ಒಂದು ಕುಟುಂಬಕ್ಕೆ ಒಂದೇ ಮಗು" ಎಂಬುದು.

ನಮ್ಮಲ್ಲಿ ಸಂತಾನ ಹರಣ ಶಸ್ತ್ರಕ್ರಿಯೆ ಮಾಡಿಕೊಳ್ಳುವವರಿಗೆ ಸರಕಾರ ಸೀರೆ, ತಟ್ಟೆ-ಬಟ್ಟಲು ಕೊಡುವ ಹಾಗೆ ಚೀನ ಈ ನೀತಿಯನ್ನು ಅಕ್ಷರಶಃ ಪಾಲಿಸುವ ಕುಟುಂಬಕ್ಕೆ ಜಮೀನು, ಸ್ವಂತ ಮನೆ ಹಾಗೂ ನೌಕರಿ ನೀಡುವಲ್ಲಿ ಮೊದಲ ಪ್ರಾಶಸ್ತ್ಯ ನೀಡುವುದಂತೆ!

818-14

ಮಗುವಿನ ಹೆಸರೇನು?

ಮೂಲ :
ಎಂ. ಎಸ್. ಕಲ್ಯಾಣಸುಂದರಂ

ಕನ್ನಡಕ್ಕೆ :
ಕರುಣಾಕರ ಕೋವರಕೊಲ್ಲಿ

ಬೊಮ್ಮನಾಯಕನಪಳ್ಳಿಯ ಕುಪ್ಪ ಸ್ವಾಮಿ ಪಿಳ್ಳೆಗೂ ಅವರ ಪತ್ನಿ ಮರಗತ ಅಮ್ಮನಿಗೂ ಒಂದೇ ಒಂದು ಕೊರೆ ಇದ್ದಿತು, ಮಕ್ಕಳಿಲ್ಲ ಎಂಬುದು. ಮತ್ತೆ ಉಳಿದೆಲ್ಲಾ ರೀತಿಯಲ್ಲಿ ಅವರಿಗೆ ಯಾವ ತೊಂದರೆಯೂ ಇರಲಿಲ್ಲ. ಎರಡು ಎಕರೆ ಖುಷ್ಕಿ ಭೂಮಿ ಏಳೆಂಟು ಎಕರೆ ತರೀ ಜಮೀನು, ಇಟ್ಟಿಗೆ ಸಿಮೆಂಟು ಹಾಕಿ ನಿರ್ಮಿಸಿದ ಒಂದು ಸುಂದರವಾದ ಮನೆ. ಪಿತ್ರಾರ್ಜಿತವಾಗಿ ಬಂದಿದ್ದ ಆಕಳುಗಳು ತುಂಬಿದ ಗೋಕುಲ. ಅಲ್ಲದೆ ಹಲವಾರು ಮೂಲಗಳಿಂದ ಬಡ್ಡಿ ಸಂಪಾದನೆ ಮಾಡುತ್ತಿದ್ದ ಹಣ. ಊರಿನ ಇನ್ನಿತರ ಘನ ಕಾರ್ಯಗಳಿಗೆ ಪಿಳ್ಳೆಯವರು ಮುಂದಾಳಾಗಿ ನಿಲ್ಲದಿದ್ದರೆ ಆ ಕಾರ್ಯಗಳು ಯಶಸ್ವಿಯಾಗುತ್ತಿರಲಿಲ್ಲ. ಊರಿನ ವೃದ್ಧರು ಎಳೆಯರು ಅವರನ್ನು ಅಪಾರ ಗೌರವಿಸುತ್ತಿದ್ದರು.

ಈ ಪಿಳ್ಳೆ ದಂಪತಿ ಮಕ್ಕಳಿಗಾಗಿ ಎಷ್ಟೋ ಉಪವಾಸ, ಪೂಜೆ, ವ್ರತಗಳನ್ನು ಮಾಡಿದ್ದರು. ಒಮ್ಮೆ ಅವರಿಬ್ಬರು ಚೈತ್ರ ಮಾಸದ ಒಂದು ದಿನ ಮದುರೆಯಲ್ಲಿ ಜರುಗಿದ ದೇವಿಯ ವೈಭವದ ಜಾತ್ರೆಗೆ ಹೋದರು. ಅಳಗರ ನದಿಯ ದಡದಲ್ಲಿ ನಡೆದ ದಟ್ಟ ಜನಸಂದಣಿಯ ಉತ್ಸವದ ನಂತರ, ಸುಮಾರು ಮೂರು ವರ್ಷ ಪ್ರಾಯದ ಒಬ್ಬ ಹುಡುಗ ಮೆಟ್ಟಿಲೊಂದರ ಏಕಾಂತವಾಗಿ ನಿಂತು ಕೊಂಡು "ಅಮ್ಮ ನಾಯನ" ಎಂದು ಹೇಳುತ್ತಾ ಅಳುತ್ತಲಿದ್ದ.

ಪಿಳ್ಳೆ ದಂಪತಿಯ ಗಮನ ಅತ್ತ ಹರಿಯಿತು. ಹುಡುಗ ಹೊಸ ಉಡುಪು ಧರಿಸಿದ್ದ. ಕಿವಿಗಳು ಬಂಗಾರದ ಓಲೆಗಳಿಂದ ಅಲಂಕರಿಸಿದ್ದವು. ಹಣೆಯಲ್ಲಿ ಹಚ್ಚೆಯ ಬೊಟ್ಟು ಹಾಕಿತ್ತು. ಬಲಗೈಯ ಮಣಿಗಂಟಿನಲ್ಲಿ ಒಂದು ರಕ್ಷಾಬಂಧವಿತ್ತು. ಅವರು ಕ್ಷಣ ಅವನನ್ನು ಗಮನಿಸಿದರು. ನಂತರ ಪಿಳ್ಳೆ ಹುಡುಗನ ಸಮೀಪಕ್ಕೆ ತೆರಳಿ ಮುಗುಳ್ನ-ಗುತ್ತಾ "ಮಗೂ ನಿನ್ನ ಹೆಸರೇನಪ್ಪಾ?" ಎಂದು ಕೇಳಿದರು. ಹುಡುಗ ಅಳುವುದನ್ನು ತಟ್ಟನೆ ನಿಲ್ಲಿಸಿ ಕೈಗಳಿಂದ ಮೂಗನ್ನೂ ಕಣ್ಣುಗಳನ್ನೂ ನೇವರಿಸುತ್ತಾ ಮೌನಿಯಾಗಿ ಭೀತಿಯಿಂದ ನಿಂತ. ಪಿಳ್ಳೆ ತನ್ನ ಹೆಂಡತಿಯ ಕೈಯಲ್ಲಿದ್ದ ತಟ್ಟೆಯಿಂದ ಒಂದನ್ನು ತೆಗೆದು ಹುಡುಗನಿಗೆ ಕೊಡುತ್ತಾ, "ಇದು, ತಿನ್ನು."

ಎನ್ನುತ್ತಾ "ನಿನ್ನ ಹೆಸರೇನು?" ಎಂದು ಪುನಃ ಕೇಳಿದ.

ಹುಡುಗ ಇಡ್ಲಿಯನ್ನು ಆಶೆಯಿಂದ ದಿಟ್ಟಿಸಿದ ಅಷ್ಟೆ. ಆದರೆ ಅದನ್ನು ತೆಗೆದುಕೊಳ್ಳಲಿಲ್ಲ. ಅವ್ಯಕ್ತವಾದ ನುಡಿಯಲ್ಲಿ "ಇಂಗಾ" ಎಂದ. ಮಂಗತಮ್ಮ ಹೇಳಿದಳು, "ನಾಯುನ ಅಂತಾ ಹೇಳ್ತಿದ್ದಾನೆ. ತೆಲುಗು ಮಾತನಾಡೋ ಹುಡುಗ. ಇಂಕಾ ಎಂದರೆ ಇನ್ನೂ ಸ್ವಲ್ಪ ಎಂಬ ಅರ್ಥ" ಎನ್ನುತ್ತಾ ಮತ್ತೊಂದು ಇಡ್ಲಿಯನ್ನು ನೀಡಿದಳು. ಹುಡುಗ ಅದನ್ನು ತೆಗೆದುಕೊಳ್ಳದೆ "ಬೇಡ" ಎಂಬಂತೆ ತಲೆಯನ್ನು ಅಲ್ಲಾಡಿಸುತ್ತಾ "ಅಮ್ಮಾ ನಾಯನಾ" ಎಂದು ಪರಿತಾಪದಿಂದ ಕೂಗಿದ. ಪಿಳ್ಳೈ, ಹೆಂಡತಿಯೊಡನೆ ಹೇಳಿದರು, "ಇವನನ್ನು ಗಮನಿಸಿಕೊಂಡಿರು. ನಾನು ಅಕ್ಕಪಕ್ಕದಲ್ಲಿ ಹೋಗಿ ವಿಚಾರಿಸುತ್ತೇನೆ. ಯಾವ ಮಾಹಿತಿಯೂ ಸಿಗದಿದ್ದರೆ ಪೋಲೀಸಿಗೆ ತಲಪಿಸಿದರೆ ಆಯ್ತು" ಅಷ್ಟರಲ್ಲಿ ಹೆಂಡತಿ "ಪೋಲೀಸಿಗೆ? ಬೇಡ, ಏನು ಮಾಡುವರೋ... ಕಿವಿಯಲ್ಲಿ ಬೇರೆ ಚಿನ್ನದ್ದು ಹಾಕಿಕೊಂಡಿದ್ದಾನೆ, ಸೊಂಟದಲ್ಲಿ ಬೆಳ್ಳಿಯ ನೂಲಿದೆ," ಎಂದು ಆಕ್ಷೇಪಿಸಿದಳು.

ಪಿಳ್ಳೈಯ ಪ್ರಯತ್ನ ವಿಫಲಗೊಂಡಿತು. ಅಂದು ವಿದ್ಯುಚ್ಛಕ್ತಿ ಇರಲಿಲ್ಲ. ಪೋಲೀಸ್ ಠಾಣೆ, ಸಮಾಜ ಸೇವೆಯ ಯುವಕರ ಕಛೇರಿ ಎಲ್ಲೆಡೆಗಳಲ್ಲೂ ವಿಚಾರಿಸಿದಾಗ ಪ್ರಯೋಜನಕಾರಿಯಾದ ಯಾವ ದಬಲೂ ದೊರಕಲಿಲ್ಲ.

ಯಾವ ಕುರುಹೂ ದೊರಕದೆ ಹಿಂತಿರುಗಿ ಬಂದ ಗಂಡನೊಡನೆ ಪತ್ನಿ, "ಅಪ್ಪನ ಹೆಸರೇನು ಎಂದ



ಕೇಳಿದ್ರೆ 'ನಾಯನಾ' ಅನ್ನುತ್ತಾನೆ: ಅಮ್ಮನ ಹೆಸರೇನು ಎಂದು ಕೇಳಿದ್ರೆ 'ಅಮ್ಮ' ಎನ್ನುತ್ತಾನೆ. ಅಣ್ಣನ ಹೆಸರು ಕೇಳಿದ್ರೆ 'ಲೇದು' ಎಂದು 'ಇಲ್ಲ' ಅಂತ ಆಡಿಸ್ತಾನೆ. ಅಕ್ಕನ ಹೆಸರು ಕೇಳಿದರೆ ತಲೆ ಆಡಿಸ್ತಾನೆ. ಬೇರೆ ಯಾವ ವಿವರವೂ ತಿಳೀಲಿಲ್ಲ," ಎಂದಳು.

ಪಿಳ್ಳೆ ದಂಪತಿಗೆ ಇನ್ನೇನು ಮಾಡಬೇಕೆಂದು ತೋಚದಾಯಿತು. "ದೇವರು ಬಿಟ್ಟ ದಾರಿ"– ಎಂದೆನಿಸಿ ತಮ್ಮ ದಾರಿ ಹಿಡಿಯಲು ತೊಡಗಿದರು. ಆದರೆ ಮನಸ್ಸು ಸುಮ್ಮನಿರಬೇಕಲ್ಲ. ದುಷ್ಟರು ಅವನನ್ನು ಕಂಡರೆ ಆದೇನು ಮಾಡುವರೋ. ಹಸಿವಿನಿಂದ ಕೂಡಿದ ಮಗು ಬಿಸಿಲಿನ ತಾಪಕ್ಕೆ ಹೊಯಿಗೆಯ ಮೇಲೆ ಮಲಗಿ ಏನಾದರೂ ಹೆಚ್ಚು ಕಡಿಮೆ ಆದರೆ? ಒಂದು ಮಗುವಿಗಾಗಿ ತಪಸ್ಸು ಇರುವಾಗ ಮತ್ತೊಂದು ಮಗುವು ದುರ್ಮರಣಪಡುವುದನ್ನು ತಾನೆ ಯಾರು ಬಯಸಿಯಾರು? ಇದು ಎಂಥಾ ಸಂಕಟ.

ನಂತರ ಮಗುವನ್ನು ಉದ್ದೇಶಿಸಿ ಅವರಿಗೆ ತಿಳಿದಿರುವ ತೆಲುಗಿನಲ್ಲಿ ಕೇಳಿದರು. "ಮುಟಾಯಿ ಕಾವಲೇ?"

ಹುಡುಗ ಆಶೆಯಿಂದ ತಲೆಯನ್ನು ಅಲುಗಿಸಿದ. "ಏಮಿ ಮುಟಾಯಿ ಕಾವಲೆ?" ಎಂದು ಅವರು ಕೇಳುವಾಗ ಅವನು ಸಂತೋಷದಿಂದ 'ಇಷ್ಟ' ಎಂದನು. ಕ್ಷಣ ಕಳೆದೊಡನೆ ಅವನನ್ನು ಸಿಹಿ ತಿಂಡಿಯಿರುವ ಅಂಗಡಿಗೆ ಕರೆದೊಯ್ದರು. ತಿಂಡಿ ಪದಾರ್ಥಗಳನ್ನು ಕಂಡೊಡನೆ ಹುಡುಗನ ಮುಖ ಅರಳಿತು. ಮೈಸೂರುಪಾಕ, ಹಲ್ವ, ಲಡ್ಡು, ಜಿಲೇಬಿ ಮುಂತಾದವುಗಳನ್ನು ಎವೆಯಿಕ್ಕದೆ ನೋಡುತ್ತಾ, ಅತ್ತ ಕಡೆ ಬೊಟ್ಟುಮಾಡಿ ತೋರಿಸಿದ. ಪಿಳ್ಳೆ ಸ್ವಲ್ಪ ತಿಂಡಿಯನ್ನು ತೆಗೆದು ಕೊಟ್ಟರು. ಹುಡುಗ ಉತ್ಸಾಹಗೊಂಡ ಮನಸ್ಸಿನಿಂದ ಅದನ್ನು ತಿಂದು ಮುಗಿಸಿದ. ಕ್ಷಣ ಕಳೆದೊಡನೆ ಹುಡುಗನ ಮುಖದಲ್ಲಿ ಅಲ್ಪ ಸಂತೋಷದ ಛಾಯೆ ಮೂಡಿತು. ಬಹುಶಃ ಇವರು ಒಳ್ಳೆಯವರೆಂದು ಅವನ ಮನಸ್ಸಿನಲ್ಲಿ ಭಾಸವಾಗಿರಬೇಕು. ಪಿಳ್ಳೆ ಹುಡುಗನನ್ನು ಎತ್ತಿ ತೋಳಿನ ಮೇಲೆ ಕುಳ್ಳಿರಿಸಿ, ಜನಸಂದಣಿ ಇರುವಲ್ಲಿಗೆ ಸಾಗಿದರು. ಆದರೆ ಯಾರೂ ಆ ಹುಡುಗನ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಹೊತ್ತು ಏರಿದಂತೆ ಪಿಳ್ಳೆ ದಂಪತಿಗೆ ಹಸಿವು ಶುರುವಾಯಿತು. ಊಟವಾದ ನಂತರ ಮಂಗತಂ ಹೇಳಿದಳು. "ಇವನನ್ನು ಕರೆದುಕೊಂಡು ಹೋಗಿ ನಾವೇ ಸಾಕುವ. ಕೂಡಲ ಅಳಗರ ದೇವರು ಕೊಟ್ಟ ವರವಾಗಿ ಇರಲಿ. ನಮ್ಮ ತಪಸ್ಸು ನಷ್ಟವಾಗಲಿಲ್ಲ ಅಂತ ತಿಳಿಯುವ." ಎಂದಳು. ಅದನ್ನು ಹೇಳುತ್ತಿರುವಾಗ ಆಕೆಯ ಕಣ್ಣುಗಳಲ್ಲಿ ವಾತ್ಸಲ್ಯದ ಅಶ್ರು ತುಂಬಿತು.

"ನನಗೂ ಹಾಗೆ ಅನಿಸುತ್ತಿದೆ. ಎಂದು ಪಿಳ್ಳೆ ಹೇಳಿದರು" "ನಾವು ನ್ಯಾಯವಾದ ಪ್ರಯತ್ನವನ್ನು ಮಾಡಿದೆವು. ಅದು ವಿಫಲವಾಯಿತು. ಬಾಲಕನನ್ನು ಅನಾಥನಾಗಿ ಬಿಟ್ಟು ಹೋಗಲಾಗುವುದಿಲ್ಲ. ಆದರೆ ನಾವು ಮಗುವನ್ನು ಕದ್ದೆವು ಎಂಬ ಕೆಟ್ಟ ಹೆಸರು ಬಂದರೆ?" ಎಂಬ ಸಂಶಯವನ್ನು ವ್ಯಕ್ತಪಡಿಸಿದರು.

ಅಷ್ಟರಲ್ಲಿ ಮಂಗತಂ ಹೇಳಿದಳು.

"ಊರಿಗೆ ಹೋದ ನಂತರ ಇವನು ನಮಗೆ ಸಿಕ್ಕಿದ ವಿಷಯವನ್ನು ಎಲ್ಲರಿಗೂ ಹೇಳಿಬಿಡಬೇಕು. ಇವನ್ನು ಹಡದವರು ನಮ್ಮೆಡೆಗೆ ಬಂದು ಕೇಳಿದರೆ ಅವರಿಗೆ ಹಿಂತಿರುಗಿಸಿ ಕೊಡುವಂತೆ ಅಳಗರ ಮುಂದೆ ಮಾರಿಯಮ್ಮನ ಗುಡಿಯಲ್ಲಿ 'ಸತ್ಯ'ಮಾಡಿಸುವ," ಎಂದು. ಪಿಳ್ಳೆಗೂ ಅದು ನ್ಯಾಯವೆಂದು ತೋರಿತು.



ಹುಡುಗನಿಗೆ ಅಳಗರ ಅಪ್ಪು ಎಂದು ಹೆಸರು ಹಾಕಿದರು. ಕರೆಯುವುದು 'ಅಪ್ಪು' ಎಂದಾಯಿತು.

ಅಳಗರ ಅಪ್ಪು ತನಗೆ ಆಶ್ರಯ ನೀಡಿದವರೊಡನೆ ಪ್ರೀತಿಯನ್ನು ತೋರಿಸಲು ತೊಡಗಿದ. ಅವರು ಸಹ ತಮ್ಮ ಪ್ರೀತಿ ವಾತ್ಸಲ್ಯವನ್ನು ಹುಡುಗನ ಮೇಲೆ ಅಪಾರವಾಗಿ ಇರಿಸಿದರು. ಹೆತ್ತ ಮಗುವಿಗಿಂತಲೂ ಅಧಿಕವಾಗಿ ಅವನೊಡನೆ ಪ್ರೀತಿ, ವಾತ್ಸಲ್ಯ ತೋರುತ್ತಿದ್ದರು. ಒಮ್ಮೆ ಪಿಳ್ಳೆ ಲೇವಾದೇವಿ ವಿಷಯವಾಗಿ ತನ್ನ ವಕೀಲರಲ್ಲಿಗೆ ಹೋದಾಗ, ಹುಡುಗನ ವಿಷಯ ತಿಳಿಸಿದರು. ವಕೀಲರು ಸ್ವಲ್ಪ ಆಲೋಚಿಸಿ, "ಈ ಹುಡುಗನನ್ನು ಒಂದು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು ಹಾಕಿಸಿ ನೋಡಿ." ಎಂದರು.

"'ಯಾರು ಈ ಅಯೋಗ್ಯ' ಎಂದು ಹುಡುಗನ ತಂದೆ ಬಂದು ಕೇಳಿದರೆ?" ಎಂದರು. ಪಿಳ್ಳೈ ವಕೀಲರು ಮುಗುಳ್ನಗುತ್ತಾ "ಈ ಕಾಲದಲ್ಲೂ ಅಂಥ ಮುಟ್ಠಾಳರು ಇರುತ್ತಾರೇನು? ಗಂಡು ಹುಡುಗ ತಾನೆ?! ಯಾವುದಕ್ಕೂ ಅಂಥವರು ಬರುವಾಗ ನನ್ನೆಡೆಗೆ ಕರೆತನ್ನಿ," ಎಂದು ಜವಾಬ್ದಾರಿಕೆಯನ್ನು ಹೇಳಿ, ಪತ್ರಿಕೆಯ ಜಾಹೀರಾತಿಗೆಂದು ಹೀಗೆ ಬರೆದು ಕೊಟ್ಟರು.

"ತಾ......ರಂದು ಕೂಡಲದ ಅಳಗರ ನದಿಯ ದಂಡೆಯಿಂದ ಮಗುವನ್ನು ಕಳೆದುಕೊಂಡವರು ಈ ಕೆಳಗಿನ ವಿಳಾಸದವರೊಡನೆ ವಿಚಾರಿಸತಕ್ಕದ್ದು."

ಒಂದು ದಿನ ಕಳೆದೊಡನೆ ತಮಿಳು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಗೊಂಡಿತು. ದಿನಗಳು, ವಾರಗಳು ಉರುಳಿದವು. ಒಂದು ವಿವರವೂ ತಿಳಿಯದು. ಪಿಳ್ಳೈ ಹುಡುಗನೊಡನೆ ಮಾತನಾಡುವ ಸಲುವಾಗಿ ತೆಲುಗನ್ನು ಕಲಿಯಲು ಪ್ರಾರಂಭಿಸಿದರು. ಆದರೆ ಅವರು ೧೦ ತೆಲುಗು ವಾಕ್ಯಗಳನ್ನು ಕಲಿಯುವುದರೊಳಗಾಗಿ, ಅಸ್ಟು ತನ್ನ ಸಹ ಗೆಳೆಯರೊಡನೆ ಸೇರಿ ೧೦೦ ತಮಿಳು ವಾಕ್ಯಗಳನ್ನು ಕಲಿತುಕೊಂಡ.

ಮೂರು ತಿಂಗಳು ಕಳೆದವು.

ಒಂದು ದಿನ ಠೀವಿಯಾದ ಉಡುಪು ಧರಿಸಿದ ಓರ್ವ ಮಧ್ಯ ವಯಸ್ಕರು ಕುಪ್ಪುಸ್ವಾಮಿ ಪಿಳ್ಳೈಯವರನ್ನು ಹುಡುಕಿಕೊಂಡು ಬಂದರು. ಪರಸ್ಪರ ಗೌರವ ನೀಡಿದ ಬಳಿಕ ಪರಿಚಯ ಮಾಡಿಕೊಂಡರು. ಅವರ ಹೆಸರು ನಾಯಕರು. ನಂತರ ಅವರು ಆ ಜಾಹೀರಾತನ್ನು ತೋರಿಸಿ ಹುಡುಗನನ್ನು ನೋಡಲು ಅನುಮತಿ ಕೇಳಿದರು.

"ಮೊದಲೇ ಬರುತ್ತಿದ್ದೆ. ಅಷ್ಟರಲ್ಲಿ ನನ್ನ ಹೆಂಡತಿ ಒಂದು ಮಗುವಿಗೆ ಜನ್ಮ ಕೊಟ್ಟು, ನನ್ನ ಮಡಿಲಲ್ಲಿ ಇರಿಸಿ ಶಿವಲೋಕಕ್ಕೆ ಹೋದಳು. ಏನೇನೋ ಕೆಲಸ ಕಾರ್ಯಗಳು, ಬೇಸರ," ಎಂದು ದುಃಖದಿಂದ ನುಡಿದ.

ಹುಡುಗನ ದೇಹದಲ್ಲಿದ್ದ ಗುರುತುಗಳನ್ನು ಕೇಳಿದರು. ಅವರು ವಿವರಿಸಿದ ಒಡಲು, ರೂಪ, ವಯಸ್ಸು, ನೆತ್ತಿಯಲ್ಲಿನ ಹಚ್ಚೆ, ಕಿವಿಯ ಓಲೆಗಳು, ಬೆಳ್ಳಿಯ ಸೊಂಟದ ನೂಲು, ಉಡುಪು ಮೊದಲಾದವುಗಳೆಲ್ಲದರ ವರ್ಣನೆ ಮಗುವಿನ ಸಂಶಯವನ್ನು ನೀಗಿಸಿತ್ತು. ಬಾಗಿಲಿನ ಮರೆಯಲ್ಲಿ ನಿಂತ ಮರಗತಂಳ ಎದೆಯ ಮೇಲೆ ಭಾರವಾದ ಕಲ್ಲು ಇರಿಸಿದಂತೆ ಆಯಿತು. ಬಿಕ್ಕಳಿಸಲು ತೊಡಗಿದಳು. ಮಗುವನ್ನು ಬಂದವರ ಮುಂದೆ ಬಂದವರ ಮುಂದೆ ನಿಲ್ಲಿಸಿ ಪರೀಕ್ಷಿಸುವುದದೊಂದೇ ಬಾಕಿ ಆಗಿತ್ತು.

ಹೊರಗೆ ಆಡಿಕೊಂಡಿದ್ದ ಹುಡುಗ ಅಸ್ಟು, ಪಿಳ್ಳೈ ಕರೆದೊಡನೆ ಮುಂದೆ ಬಂದು ನಿಂತ. ಹುಡುಗ ನೋಡಲು ಬಹಳ ಅಂದವಾಗಿದ್ದ. ಪಿಳ್ಳೈ ಅವನೊಡನೆ "ಈ ಮಾಮ ಗೊತ್ತಾ ನಿಂಗೆ? ಅವರ ಹತ್ತಿರ ಹೋಗು" ಎಂದರು ನಾಟಕೀಯವಾಗಿ.

ಹುಡುಗ ನಾಯಕರನ್ನು ಭಯದಿಂದ ದಿಟ್ಟಿಸುತ್ತಾ ನೋಡಿ, ಪಿಳ್ಳೈಯ ಕಾಲನ್ನು ಬಿಗಿದಪ್ಪಿದ. ಅಷ್ಟರಲ್ಲಿ ಮರಗತಂಳ ಒಡಲು ತುಸು ಬಾಗಿಲಿನ ಹಿಂದೆ ಗೋಚರಿಸಿತು. ಹುಡುಗ ಪ್ರೀತಿಯಿಂದ ಆಕೆಯೆಡೆಗೆ ಧಾವಿಸಿ "ಅಮ್ಮಾ, ದುಷ್ಟನಿಗೆ ಹೋಗ

ದೀಪದ ಕತ್ತಲೆ

ಬೆಳಗಿನಲಿ ಸಂಜೆ ಹುಟ್ಟಿನಲಿ ಬಂಜೆ
ಸಾವು ಹಾದಿಗೆ ಹೆಸರು ಬದುಕು ಇಲ್ಲಿ
ಮುಗ್ಧ ಕಣ್ಣಾಲಿಗಳ ನಗೆ ಮುಟ್ಟಿ ನಿಂತಿರುವ
ಕ್ಷಣದ ಕಪ್ಪಿನ ಛಾಯೆ ಇಲ್ಲ ಎಲ್ಲಿ?

ಕರಿಯ ಸಿಂಗರದೋಲೆ ಬಿಳಿಯ ಬೆಳಕಾಗುವುದು
ಮಂಜಾಗಿ ಹೊಗೆಯಾಗಿ ನಂಜಾಗಿ ಕರಗುವುದು
ನಿತ್ಯವೂ ನಡೆದಿರುವ ಸತ್ಯಕಥೆಗಳ ಸ್ವಾದ
ಅರಿವು ಮೂಡಿದ ಚಣಕೆ ಮತ್ತೇಕೆ ಮರಗುವುದು

ನೋಟವೆಳೆಗಳ ಮೇಲೆ ಕೂಟಗೊಂಡಿಹ ಹಸಿವು
ಬಸಿರ ತೊರೆಯಲಿ ಹರಿದು ಬಂದಿರುವುದು
ಬೇಡ ಬೇಡಾ ಎಂದು ಕನಲಿದರು ಬೇಕಾದ
ಕನಸು ಮೂಡುತ ಎಲ್ಲ ಸಂದಿರುವುದು

ಬದುಕು ಭಯದಾವರಣ ನಿತ್ಯ ಕನಸು ಕಲ್ಪನೆಯು
ಕೈ ಹಿಡಿದು ಇದ ನಡೆಸಿ ಸಾಗಿಹುದು ಜಲ್ಪನೆಯು

—ಹೇಮಾ

ಲಿಕ್ಕೆ ಹೇಳು" ಎಂದು ಬೇಡಿದ.

ನಾಯಕರು ಗಮನಿಸಿ ಸ್ಪಷ್ಟಪಟ್ಟರು. ಅವರು ಒಂದು ಪೊಟ್ಟಣವನ್ನು ನೀಡಿ "ಇದಾ ಸಿಹಿ ತಿಂಡಿ," ಎಂದರು. "ಸಿಹಿ ತಿಂಡಿ" ಎಂದೊಡನೆ ಹುಡುಗನ ಮುಖದ ವರ್ಣ ಬದಲಾಯಿತು. ಮಂಗತಂ ಆಗಾಗ ಸಿಹಿ ತಿಂಡಿ ಮಾಡಿಕೊಟ್ಟು ಅದರ ಆಶೆ ಬೆಳೆದು ಹೋಗಿತ್ತು ಅವನಿಗೆ. "ಬೇಡ. ಹೋಗಲಿಕ್ಕೆ ಹೇಳು," ಎಂದು ಆಕೆಯನ್ನು ಅಪ್ಪಿ ಹಿಡಿದ.

ಈ ದೃಶ್ಯವನ್ನು ವೀಕ್ಷಿಸುತ್ತಿದ್ದ ಪಿಳ್ಳೆಯ ಕಣ್ಣಾಲಿಗಳು ಹನಿಗೂಡಿದ್ದವು. ಕಂಠ ಬಿಗಿಯಿತು. ಬೇರೆ ವಿಧಿ ಇರಲಿಲ್ಲ.

"ನಿಮ್ಮ ಮಗನಾದರೆ ಪ್ರೀತಿಯಿಂದ ಅವನ ಹೆಸರು ಹಿಡಿದು ಕರೆಯಿರಿ." ಎಂದರು.

ಮಂಗತಂ ತನ್ನ ಮನಸ್ಸಿನಲ್ಲಿ ಗಂಡನ ಮುಟ್ಠಾಳತನವನ್ನು ಖಂಡಿಸಿದಳು. ನಾಯಕ ಹೇಳಿದರು. "ಹಾ, ಸರಿಯಾದ ಯೋಚನೆ. ಸಮಯಕ್ಕೆ ಹೇಳಿದ್ರಿ," ಎಂದು ಹೇಳುತ್ತಾ ವಾಸ್ತವ ಶಬ್ದಕ್ಕಿಂತಾ ತುಸು ಗಡುಸಾದ ದನಿಯಲ್ಲಿ "ಬಾಲೂ ಇಲ್ಲಿ ಬಾ," ಎಂದು ಕರೆದರು.

ಹುಡುಗ ಭೀತಿಯಿಂದ ಅಳುತ್ತಾ ಅಮ್ಮನನ್ನು ಇನ್ನೂ ಗಟ್ಟಿಯಾಗಿ ಅಪ್ಪಿಹಿಡಿದು, "ದುಷ್ಟನನ್ನು ಹೋಗಲಿಕ್ಕೆ ಹೇಳಮ್ಮ" ಎಂದು ಗೋಗರೆದ. ಕೂಡಲೆ ಆತ ಉಲಿದರು. "ನಾನು ಹುಡುಕುತ್ತಿರುವ ಹುಡುಗ ಇವನಲ್ಲ," ಎಂದು ಹೊರಟು ಹೋದರು.

ಎರಡು ತಿಂಗಳ ಬಳಿಕ ಪಿಳ್ಳೆಯ ವಿಳಾಸಕ್ಕೆ ಒಂದು ಲಕೋಟೆ ಬಂದಿತು. ಅದನ್ನು ಮದರಾಸು ನಗರ ಅಂಚೆ ಕಛೇರಿಯೊಂದರಲ್ಲಿ ಹಾಕಲ್ಪಟ್ಟಿತ್ತೆಂಬುದು ಅದರ ಮುದ್ರೆಯಿಂದ ಸ್ಪಷ್ಟವಾಗಿತ್ತು. ಪಿಳ್ಳೆ ಅದನ್ನು ಕುತೂಹಲದಿಂದ ಬಿಡಿಸಿ ನೋಡಿದರು. ಬರೆದ ಹಸ್ತಾಕ್ಷರಗಳು ಶಾಲೆಯ ಚಿಕ್ಕಮಕ್ಕಳು ಬರೆದಂತೆ ತೋರುತ್ತಿತ್ತು.

"ಹುಡುಗನ ಹೆಸರು ರಂಗಸ್ವಾಮಿ. ಬಾಲು ಅಲ್ಲ. ರಂಗಾ ಎಂದು ಕರೆಯುತ್ತೇವೆ. ಅವನು 'ಇಂಗಾ' ಎಂದು ಹೇಳುವನು. ಕವರಿನಲ್ಲಿ ದೇವಸ್ಥಾನದ ವಿಭೂತಿ, ಕುಂಕುಮ ಇವೆ. ನಿನ್ನೆ ಅವನು ಹುಟ್ಟಿದ ನಕ್ಷತ್ರ. ದೇವಾಲಯದಲ್ಲಿ ಅರ್ಚನೆ ಮಾಡಿಸಿದೆ. ನನ್ನ ಶುಭಾಶಯಗಳು. ನಿಮ್ಮ ಪ್ರೀತಿ ಅತಿ ಶ್ರೇಷ್ಠವಾಗಿದ್ದು. ದೇವರಿಗೆ ವಂದನೆಗಳು. ಅವನಿಗೆ ಸಿಹಿ ತಿಂಡಿ ಎಂದರೆ ತುಂಬಾ ಪ್ರೀತಿ," —ಎಂದು ಬರೆದಿದ್ದ ಸಹಿ ಹಾಕದ ಒಂದು ಪತ್ರ ಅಡಗಿತ್ತು ಅದು.

"ಮಗನ ಭವಿಷ್ಯಕ್ಕಾಗಿ ಎಂಥ ಒಂದು ತ್ಯಾಗ!" ಎಂದು ಅಚ್ಚರಿಗೊಂಡ. ನಿಧಾನವಾಗಿ ಉಲಿದರು ಪಿಳ್ಳೆ.



ಹಚ್ಚೆ ಹುಚ್ಚು

ಆಲ್ಡರ್‌ಷಾಟ್ ಎಂಬಲ್ಲಿ ಬಿಲ್‌ಸ್ಕ್ರೂಸ್ ಎಂಬ ಹಚ್ಚೆ ಹಾಕುವವನೊಬ್ಬನಿದ್ದಾನೆ. ಆತನ ಹೆಂಡತಿ ರಸ್ಕಿ ಸ್ಕ್ರೂಸ್. ಆಕೆ ಹಚ್ಚೆ ಹಾಕಿಸಿಕೊಳ್ಳುವುದರಲ್ಲಿ ಹೊಸ ದಾಖಲೆ ಸ್ಥಾಪಿಸಿದ್ದಾಳೆ. ತನ್ನ ದೇಹದ ಶೇಕಡಾ ೮೫ ರಷ್ಟು ಭಾಗದಲ್ಲೆಲ್ಲ ಆಕೆ ನಾನಾ ನಮೂನೆಯ ಹಚ್ಚೆ ಹಾಕಿಸಿಕೊಂಡಿದ್ದಾಳೆ.

ಕೆನಡಾದ ಸೆಮ್ಲರ್ ಜೋ ಸಿಮ್ಮನ್ಸ್ ಎಂಬ ಹಚ್ಚೆ ಕಲಾವಿದ ತನ್ನ ದೇಹದ ಮೇಲೆಯೆ ೪೮೩೧ ನಮೂನೆಯ ಹಚ್ಚೆ ಹಾಕಿಕೊಳ್ಳುವುದರ ಮೂಲಕ ತನ್ನ ಧಂದೆಯ ಜಾಹೀರಾತು ಮಾಡಿಕೊಂಡ.

–ಸಂಗ್ರಹ: ಎಸ್. ವಿಶ್ವನಾಥ

ನನ್ನ ಮಿತ್ರನೊಬ್ಬನಿಗೆ ಫೋನ್ ಮಾಡಬೇಕಿತ್ತು. ಅವನ ಫೋನ್ ನಂಬರು ೩೨೮೭. ನಂಬರ್ ತಿರುವಿದೊಡನೆಯೇ ಒಂದು ಮಗುವಿನ ಧ್ವನಿ ಕೇಳಿ ಆಶ್ಚರ್ಯವಾಯಿತು; ಯಾಕೆಂದರೆ, ಅವನ ಮನೆಯಲ್ಲಿ ಚಿಕ್ಕ ಮಕ್ಕಳು ಯಾರೂ ಇರಲಿಲ್ಲವೆಂಬುದು ನನಗೆ ಗೊತ್ತು. ನನ್ನ ಕರೆ ತಪ್ಪು ನಂಬರಿಗೆ ಹೋಗಿದೆಯೆನೋ ಎಂದು ತಿಳಿಯದಂತಾಗಿ "ಮಗು ನಿಮ್ಮ ಫೋನಿನ ನಂಬರ್ ಎಷ್ಟು?" ಎಂದು ಕೇಳಿದೆ, "೭೮೨೩" - ಬಂತು ಉತ್ತರ. ನಾನು ಫೋನು ಕೆಳಗಿಟ್ಟೆ. ನಂತರ ನನ್ನ ಮಿತ್ರನ ಫೋನ್ ನಂಬರ್ ಮತ್ತು ವಿಳಾಸವಿದ್ದ ವಿಜಿಟಂಗ್ ಕಾರ್ಡ್ ಹುಡುಕಿ ಅವನ ನಂಬರ್ ೩೨೮೭ ಎಂದು ಮನವರಿಕೆ ಮಾಡಿಕೊಂಡು ಮತ್ತೆ ಡಯಲ್ ಮಾಡಿದೆ. ಪುನಃ ಅದೇ ಮಗುವಿನ, "ಹಲೋ"! ಮತ್ತೊಮ್ಮೆ ಅವನ ಫೋನಿನ ನಂಬರ್ ಕೇಳಿದೆ - ಅದೇ ೭೮೨೩ ! ಈ ಸಲ ನನ್ನ ತಲೆ ಮಿಂಚಿನಂತೆ ಕೆಲಸ ಮಾಡಿತು. ನನ್ನ ಸ್ನೇಹಿತನಿಗಾಗಿ ಕೇಳಿದೆ. ಮರುನಿಮಿಷವೇ ಆತನೇ ಬಂದು ಮಾತಾಡಿದ. ಆ ಮಗು ಅವನ ಅಕ್ಕನ ಮಗನೆಂದು ತಿಳಿಯಿತು. ಆತ ಉರ್ದು ಶಾಲೆಗೆ ಹೋಗುತ್ತಾನೆಂದು ತಿಳಿದಾಗ ನನ್ನ ಸಮಸ್ಯೆ ಪರಿಹಾರವಾಯಿತು.

—ಸತೀಶ ವೆಂಕಪ್ಪನವರ

ಇತ್ತೀಚಿಗೆ ಒಮ್ಮೆ ಒಂದು ಪ್ರಾಚೀನ ಸಂಸ್ಕೃತ ಗ್ರಂಥದ ಇಂಗ್ಲೀಷ್ ಅನುವಾದ ಮಾಡಿದ ಪುಸ್ತಕದಲ್ಲಿ ಯಾವುದೋ ಒಂದು ಮುಖ್ಯವಾದ ಪುಟವನ್ನು ಝೆರಾಕ್ಸ್ ಮಾಡಿಸಿದೆ. ಆ ಝೆರಾಕ್ಸ್ ಪ್ರತಿಯಲ್ಲಿ ಎರಡು ಜಾಗಗಳಲ್ಲಿ ಕೆಲವು ಪದಗಳು ಮಾಯವಾಗಿ ಕೇವಲ ಚುಕ್ಕೆಗಳು ಬಿದ್ದಿದ್ದವು. ಆ ಪ್ರತಿಯನ್ನು ಮಾಡಿಕೊಟ್ಟ ಅಂಗಡಿಯವನ ಮೇಲೆ ನಾನು ರೇಗಿ ಪುನಃ ಸರಿಯಾದ ಪ್ರತಿಯನ್ನು ತೆಗೆಯಲು ಹೇಳಿದೆ. ಅನುಭವಸ್ಥನಾದ ಅಂಗಡಿಯವನು ಕೂಡಲೆ ನಾನು ಕೊಟ್ಟಿದ್ದ ಪುಸ್ತಕದಲ್ಲಿಯ ಪುಟವನ್ನು ತೋರಿಸುತ್ತಾ, "ನನ್ನದೇನೂ ತಪ್ಪಿಲ್ಲ ಸಾರ್, ನಿಮ್ಮ ಪುಸ್ತಕದಲ್ಲೇ ಹಾಗಿದೆ," ಎಂದು ನನ್ನನ್ನೇ ತಬ್ಬಿಬ್ಬಾಗಿಸಿದ. ಆ ಪುಟವು ಬಹಳ ಮುಖ್ಯವಾದುದರಿಂದ ನನಗೆ ಬಹಳ ನಿರಾಶೆಯಾಯಿತು. ಆ ಪುಟದ ಅಡಿಟಿಪ್ಪಣಿಯಲ್ಲಿ ಹೀಗೆ ಬರೆದಿತ್ತು: "certain epithets here have not been considered fit for translation." ಕಷ್ಟಪಟ್ಟು ಎಲ್ಲಿಂದಲೋ ಹಿಂದೀ ಅನುವಾದವಿರುವ ಒಂದು ಗ್ರಂಥವನ್ನು ಹುಡುಕಿ ಅದರಲ್ಲಿ ನೋಡಿದೆ. ಅದರಲ್ಲೂ ಕೂಡ ಎರಡು ಜಾಗಗಳಲ್ಲಿ ಚುಕ್ಕಿಗಳೇ! ಹಿಂದೀ ಪುಸ್ತಕದಲ್ಲಿ ಅಡಿಟಿಪ್ಪಣಿಯಿತ್ತು ಅಪ್ಪಣೆ— "ಕುಛ್ ಶಬ್ದೋಂ ಕಾ ಅನುವಾದ್ ಛೋಡ್‌ದಿಯಾ ಗಯಾ ಹೈ" (ಕೆಲವು ಶಬ್ದಗಳ ಅನುವಾದ ಬಿಡಲಾಗಿದೆ)! ಇನ್ನು ಉಳಿದಿರುವುದು ಒಂದೇ ಮಾರ್ಗ. ನನ್ನ ಕುತೂಹಲವನ್ನು ತಡೆಯಲಾರದೆ ಮೂಲ ಸಂಸ್ಕೃತ ಶ್ಲೋಕಗಳನ್ನೇ ಹುಡುಕಿದೆ-ನನಗೆ ಧೈರ್ಯವೆಂದರೆ ಮೂಲ ಸಂಸ್ಕೃತ ಗ್ರಂಥಕರ್ತನು ಕೂಡ ಈ ಚುಕ್ಕೆಗಳ ಆಟವನ್ನು ಆಡಿರಲಾರ ಎಂದು. ಸಂಸ್ಕೃತದಲ್ಲಾದರೋ, ಸಂಬಂಧಪಟ್ಟ ಜಾಗಗಳಲ್ಲಿ ಗ್ರಂಥಕರ್ತನು ತೋರಿದ ರಸಿಕತೆಯ ತುಣುಕುಗಳು: "ಫಣಿಫಣನಿತಂಬಬಿಂಬಾಕಠಿನಸ್ತನಹಾರನಮ್ರತನುಮಧ್ಯಾ."

ಇದನ್ನು ಕನ್ನಡಕ್ಕೆ ಅನುವಾದಿಸುವ ಅಧಿಕಪ್ರಸಂಗವನ್ನು ನಾನು ಮಾಡಲಾರೆ! ಕಾರಣ, ಎಪ್ಪತ್ತು ವರ್ಷಗಳ ಹಿಂದಿನ ಇಂಗ್ಲೀಷ್ ಅನುವಾದಕರಂತೆ ಅಥವಾ

ಅವರಿಟ್ಟ ಹೆಜ್ಜೆಗಳನ್ನೇ ಅನುಸರಿಸಿದ ಹಿಂದೀ ಅನುವಾದಕರಂತೆ 'ಮಡಿವಂತಿಕೆ'ಯಲ್ಲ; ನಮ್ಮ ಕನ್ನಡದ ಓದುಗರು ಸಾಕಷ್ಟು ರಸಿಕರು ಮತ್ತು ಮೂಲದಿಂದಲೇ ಅರ್ಥಮಾಡಿಕೊಳ್ಳಬಲ್ಲರು ಎಂಬ ದೃಢ ವಿಶ್ವಾಸ ಅಷ್ಟೆ!

ಇನ್ನು ಈ ಗ್ರಂಥವು ಭರ್ತೃಹರಿಯ 'ಶೃಂಗಾರಶತಕ'ವೋ ಅಥವಾ ಜಯದೇವ ಕವಿಯ 'ಗೀತಗೋವಿಂದ'ವೋ ಎಂದು ನೀವು ಊಹಿಸಿಕೊಂಡರೆ, ನಿಮ್ಮ ಊಹೆ ತಪ್ಪು. ಈ ಸಂಸ್ಕೃತಗ್ರಂಥವು ಗಣಿತ ಶಾಸ್ತ್ರಕ್ಕೆ ಸಂಬಂಧಪಟ್ಟದ್ದು!

—ಎಸ್. ಬಾಲಚಂದ್ರರಾವ್

ಆ ದಿನ ಬಾಳೆಹೊನ್ನೂರಿನಿಂದ ಬೆಂಗಳೂರಿಗೆ ರಾತ್ರಿ ೧೦-೩೦ರ ವೇಳೆಗೆ ಸಾರಿಗೆ ಸಂಸ್ಥೆಯೊಂದರ ಬಸ್ಸಿನಲ್ಲಿ ಹೊರಟಿದ್ದೆ. ಕಂಡಕ್ಟರ್ ಇನ್ನೂ ಯುವಕ. ವೃತ್ತಿಗೆ ಹೊಸಬನೆಂದು ಅವನ ವರ್ತನೆಗಳಿಂದಲೇ ಮನದಟ್ಟಾಗಿತ್ತು. ಬಸ್ಸಿನಲ್ಲಿ ಅಂಥದೇನೂ ರಶ್ ಇದ್ದಿಲ್ಲವಾದರೂ ಯಾರಾದರೂ ಹತ್ತಿದರೆ ಕೂಡಲು ಸೀಟು ಮಾತ್ರ ಇರಲಿಲ್ಲ. ಎಲ್ಲರಿಗೂ ಟಿಕೆಟ್ಟನ್ನು ಕೊಟ್ಟಾದ ನಂತರ ಬಸ್ಸು ಹೊರಟಿತು. ಆಗಲೇ ರಾತ್ರಿ ಬಹಳ ಹೊತ್ತಾಗಿದ್ದರಿಂದ ಅರಸಿಕೆರೆ ಬರುವುದರೊಳಗೆ ನಮಗೆಲ್ಲ ನಿದ್ದೆ ಬಂದಿತ್ತು. ಈ ಹಿಂದೆ ಕೆಲವು ಊರುಗಳಲ್ಲಿ ಬಸ್ಸು ನಿಂತದ್ದು ಮಾತ್ರ ಗೊತ್ತಿತ್ತು. ತಿಪಟೂರು ತಲುಪುತ್ತಿದ್ದಂತೆ ಕಂಡಕ್ಟರ್ ಏನೋ ಕೂಗುತ್ತಿದ್ದುದು ಕೇಳಿ ನಿದ್ದೆಗೆ ಭಂಗವಾಗಿ ಎಚ್ಚರವಾಯಿತು. "ಇನ್ನೊಬ್ಬ್ರು ಯಾರ್ರಿ, ಟಿಕೆಟ್ ಆಗ್ಬೇಕಾದೋರು, ಬೇಗ ಹೇಳ್ರಿ, ಚೆಕ್ಕಿಂಗಿಗೆ ಬಂದ್ರೆ ನನ್ ಕೆಲಸ ಹೋಗುತ್ತೆ" ಎಂದು ಕೂಗುತ್ತಿದ್ದವನು ಡ್ರೈವರ್‌ಗೆ ಬಸ್ ನಿಲ್ಲಿಸುವಂತೆ ಸೂಚನೆ ನೀಡಿದ. ಗಕ್ಕನೆ ಬಸ್ಸು ನಿಂತಿತು. ಒಬ್ಬೊಬ್ಬರದಾಗಿ ಟಿಕೆಟ್‌ಗಳನ್ನು ತಪಾಸಣೆ ಮಾಡಿದ; ಎಲ್ಲರೂ ಟಿಕೆಟ್ ಪಡೆದಿದ್ದರು. ಹೀಗೆ ಒಬ್ಬೊಬ್ಬರನ್ನೆ ತಪಾಸಿಸುವಾಗ ತಾನು ಲೆಕ್ಕ ತಪ್ಪಿರುವುದು ಎಲ್ಲಿ ಎಂದು ಅವನಿಗೆ ಅರಿವಾಯ್ತು. ಅವನೇ ಸ್ವಲ್ಪ ದುಡುಕಿದ್ದ. ಆದರೆ ಅದನ್ನೂ ಅಷ್ಟು ಬೇಗ ಒಪ್ಪಿಕೊಳ್ಳುವಂತಿರಲಿಲ್ಲ. ಮುಂದುಗಡೆ ಸೀಟಿನಲ್ಲಿ ಕುಳಿತಿದ್ದವನಿಗೆ "ನಿಮಗೆ ಟೋಪಿ ಸರಿಯಾಗಿಟ್ಕೊಳೋಕೆ ಬರಲ್ವೇನ್ರಿ, ನೋಡಿ ನಮ್ಮ ಲೆಕ್ಕ ತಪ್ಪುವಂತೆ ಮಾಡಿದ್ರಿಂದ ಎಷ್ಟು ಜನರಿಗೆ ತೊಂದ್ರೆಯಾಯ್ತು" ಎಂದು ಗದರಿಸುತ್ತಿದ್ದ. ಪ್ರಯಾಣಿಕನೇನೂ ಮೆತ್ತನೆಯವನಲ್ಲ. "ನೀನ್ಯಾರಯ್ಯ ಕೇಳೋಕೆ ನನ್ ಟೋಪೀನ ಎಲ್ಲಿ ಬೇಕಾದ್ರೂ ಇಟ್ಕೊಳ್ತೀನಿ. ನಿನ್ನ ಕಂಡಕ್ಟರ್ ಕೆಲ್ಸ ಸರಿಯಾಗಿ ಮಾಡೋದನ ಕಲಿತ್ಕೋ ಮೊದ್ಲು" ಎಂದು ಪ್ರತಿಯಾಗಿ ಗದರಿಸಿದ. ನಿದ್ದೆಗಣ್ಣಿನಲ್ಲಿದ್ದ ನನಗೆಷ್ಟೋ ಜನರಿಗೆ ಇವರ ವಾದಗಳ ತಲೆ-ಬುಡ ಗೊತ್ತಾಗಲಿಲ್ಲ. ಒಂದು ಕಡೆ ನಿದ್ರಾಭಂಗವಾದದ್ದಕ್ಕೆ ಸಿಟ್ಟು ಬಂದಿತ್ತು. ಅಲ್ಲದೆ ಇವರು ಹೀಗೆ ವಾದ-ಪ್ರತಿವಾದಗಳನ್ನು ಮಾಡುತ್ತಲೇ ಇದ್ದರೆ ಬಸ್ಸು ಹೊರಡುವ ಹೊತ್ತಿಗೆ ಬೆಳಗಾಗುತ್ತಲ್ಲ ಎಂದು ಯೋಚಿಸಿ ವಿಷಯ ತಿಳಿಯಲು ಎದ್ದು ಹೋದೆ.

ಆದದ್ದಿಷ್ಟೇ: ಪ್ರಯಾಣಿಕ ತನ್ನ ಎರಡೂ ಕಾಲುಗಳನ್ನೂ ಮಡಿಚಿ ಮೇಲೆಕ್ಕೆತ್ತಿ ಸೀಟಿನ ಮೇಲೆ ಕುಕ್ಕುರುಗಾಲಿನಲ್ಲಿ ಕುಳಿತಿದ್ದ. ಅವನು ನಿದ್ದೆ ಮಾಡಬೇಕಾದ್ದರಿಂದ ತಲೆಯನ್ನು ತನ್ನ ಎರಡೂ ಮಂಡಿಯ ನಡುವೆ ಸ್ವಲ್ಪ ತೂರಿಸಿದ್ದ. ಟೋಪಿ ಬಿದ್ದು ಹೋದೀತೆಂಬ ಕಾರಣ ಅದನ್ನು ಒಂದು ಮಂಡಿಗೆ ಸಿಕ್ಕಿಸಿದ್ದ. ಕಂಡಕ್ಟರ್ ಹಿಂದಿನಿಂದ ಎಣಿಸುವಾಗ ಈ ಪ್ರಯಾಣಿಕನ ತಲೆಯನ್ನೂ ಟೋಪಿ ಸಿಕ್ಕಿಸಿದ್ದ ಮಂಡಿಯನ್ನೂ ಎರಡು ಸೀಟುಗಳೆಂದು ಲೆಕ್ಕ ಮಾಡಿದ್ದ.

—ಶಿವಸ್ವಾಮಿ ಎಸ್. ಹೊಸ್ಕೆರೆ

ಜಗತ್ತಿನ ಪ್ರಪ್ರಥಮ ರೈಲ್ವೆ ಅಪಘಾತ

ವಿ. ಶ್ರೀನಿವಾಸ

ಇಂದು ರೈಲ್ವೆ ಅಪಘಾತಗಳು ಸರ್ವಸಾಮಾನ್ಯ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿಯೇ ಅಸಂಖ್ಯಾತ ರೈಲ್ವೆ ಅಪಘಾತಗಳು ಸಂಭವಿಸಿವೆ. ಅವುಗಳ ಪರಿಣಾಮವಾಗಿ ನೂರಾರು ಮಂದಿ ಇಹಲೋಕ ಯಾತ್ರೆ ಮುಗಿಸಿದ್ದಾರೆ: ನೂರಾರು ಮಂದಿ ಗಾಯಗೊಂಡು, ಅಂಗಾಂಗಗಳನ್ನು ಕಳೆದುಕೊಂಡಿದ್ದಾರೆ. ಒಂದೇ ಒಂದು ದೇಶದಲ್ಲಿ ರೈಲ್ವೆ ದುರಂತಗಳಿಂದ ಇಷ್ಟೊಂದು ಸಾವು ನೋವುಗಳು ಸಂಭವಿಸಿದ್ದರೆ ಇನ್ನು ಇಡಿ ಜಗತ್ತಿನಲ್ಲಿ ಕಳೆದ ಶತಮಾನದ ಪೂರ್ವಾರ್ಧದಲ್ಲಿ, ರೈಲ್ವೆ ಪ್ರಯಾಣ ಪ್ರಾರಂಭವಾದಾಗಿನಿಂದ ಇಂದಿನವರೆಗೆ, ಸಂಭವಿಸಿರುವ ಅಪಘಾತಗಳ ಸಂಖ್ಯೆ ಎಷ್ಟಾಗಿರಬಹುದು? ಈ ಅನಾಹುತಗಳಲ್ಲಿ ಮಡಿದವರ, ಗಾಯಗೊಂಡವರ ಸಂಖ್ಯೆ ಎಷ್ಟಾದೀತು?

೧೮೩೦ ನೆಯ ಇಸವಿ ಸೆಪ್ಟೆಂಬರ್ ೧೫ ನಾಗರಿಕತೆಯ ಇತಿಹಾಸದಲ್ಲಿ ಅವಿಸ್ಮರಣೀಯ ದಿನ. ಅಂದು ಜನರ ಪ್ರಯಾಣಕ್ಕಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾದ ಜಗತ್ತಿನ ಪ್ರಪ್ರಥಮ ಪ್ರಯಾಣಿಕ ರೈಲು 'ಲಿವರ್‌ಪೂಲ್–ಮ್ಯಾಂಚೆಸ್ಟರ್ ರೈಲ್ವೆ' ಕಾರ್ಯಾರಂಭಮಾಡಿತು. ೩೧ ಮೈಲುಗಳಷ್ಟು ಉದ್ದದ ಎರಡು ಜೋಡಿ ಕಬ್ಬಿಣದ ಹಳಿಗಳು. ಮಾರ್ಗಮಧ್ಯೆ ೬೩ ಸೇತುವೆಗಳು. ಚಾಟ್‌ಮಾಸ್ ಎಂಬ ವಿಶಾಲ ಅಪಾಯಕಾರಿ ಹೂಳು ಪ್ರದೇಶ. ಪ್ರಯಾಣದ ಅವಧಿ ೯೦ ನಿಮಿಷಗಳು. ಪ್ರಯಾಣದರ, ಒಬ್ಬರಿಗೆ ಐದು ಷಿಲ್ಲಿಂಗ್‌ಗಳು–ಇವು ಜಗತ್ತಿನ ಚೊಚ್ಚಲು, ರೈಲು ಪ್ರವಾಸದ ವೈಶಿಷ್ಟ್ಯಪೂರ್ಣ ಅಂಶಗಳು.

ಈ · ಐತಿಹಾಸಿಕ ರೈಲ್ವೆ ಪ್ರಯಾಣದಲ್ಲಿ ಬ್ರಿಟನ್ನಿನ ಹಲವಾರು ಗಣ್ಯವ್ಯಕ್ತಿಗಳು ಭಾಗವಹಿಸಿದ್ದರು. ಹತ್ತಾರು ಯುದ್ಧಗಳ ವೀರ, ವಿಜಯಲಕ್ಷ್ಮಿಯ ವರಪುತ್ರ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಅವರಲ್ಲಿ ಅಗ್ರಗಣ್ಯ, ಅಗ್ರಮಾನ್ಯ. ರೈಲ್ವೆ ನಿಲ್ದಾಣದಲ್ಲಿ ಆತನಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು. ಅನುಪಮ ಯೋಧಾಗ್ರಣಿಯ ದರ್ಶನ ಲಾಭ ಪಡೆಯಲು ಸಾವಿರಾರು ಮಂದಿ ನೆರೆದಿದ್ದರು. ರೈಲ್ವೆ ಕಂಪನಿಯ ಅಧ್ಯಕ್ಷ ಚಾರ್ಲ್ಸ್ ಲಾರೆನ್ಸ್ ಮತ್ತು ಕಂಪನಿಯ ಇತರ ನಿರ್ದೇಶಕರು ಡ್ಯೂಕನನ್ನು ಆತನಿಗಾಗಿಯೇ ವಿಶೇಷವಾಗಿ ನಿರ್ಮಿಸಲಾಗಿದ್ದ ಸಾಲಂಕೃತ ಡಬ್ಬಿಗೆ ಸಕಲ ಮರ್ಯಾದೆಗಳೊಂದಿಗೆ ಕರೆದೊಯ್ದರು.

ಡ್ಯೂಕನ ಸುಖ ಪ್ರಯಾಣಕ್ಕಾಗಿ ಭಾರಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಈ ಭವ್ಯ ಸುಂದರ ವಾಹನ ಎಂಟು ಚಕ್ರಗಳ ಮೇಲಿನ ಅರಮನೆಯ ಕೋಣೆಯಂತಿತ್ತು! ೩೨ ಅಡಿ ಉದ್ದ ಮತ್ತು ೮ ಅಡಿ ಅಗಲದ ನೆಲಗಟ್ಟನ್ನು ಕಡುಗೆಂಪು ಬಣ್ಣದ ಬಟ್ಟೆಯಿಂದಲೂ ಲಾರೆಲ್ ಹೂದಂಡೆಗಳಿಂದಲೂ ಅಲಂಕರಿಸಲಾಗಿತ್ತು. ಬಂಗಾರದ ಎರಕ ಹೊಯ್ದ ತಳಗಟ್ಟು, ಎಂಟು ಕೆತ್ತನೆಯ, ಚಿನ್ನದ ಗಿಲಾವು ಮಾಡಿದ ಕಂಬಗಳು, ಚಿನ್ನಾಭರಣಗಳಿಂದ ಅಲಂಕರಿಸಿದ ಕಪೋತ ವಾಹನದ ಒಂದೊಂದು ಕೊನೆಯಲ್ಲಿಯೂ ಚಿನ್ನದ ಗಿಲಾವು ಮಾಡಿದ ಕಟಾಂಜನಗಳು, ಮತ್ತಿತರ ವಿಶೇಷ ಅಲಂಕಾರಗಳು

ನೆರೆದಿದ್ದ ಅಪಾರ ಜನಸ್ತೋಮದ ಕಣ್ಮನಗಳನ್ನು ಸೂರೆಗೊಂಡವು. ಇಂತಹ ಸುಂದರ ವಾಹನದಲ್ಲಿ ಆಸೀನನಾಗಿದ್ದ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ತನ್ನನ್ನು ಕಾಣಲು ಬಂದ ಗಣ್ಯರಿಗೆ ಹಸ್ತಲಾಘವ ನೀಡಿ ಸರಸ ಸಲ್ಲಾಪಗಳಲ್ಲಿ ತಲ್ಲೀನನಾಗಿದ್ದ.

ಸಿದ್ಧತೆಗಳೆಲ್ಲ ಮುಗಿದುವು. ಬೆಳಿಗ್ಗೆ ೧೦.೪೦ಕ್ಕೆ ಸರಿಯಾಗಿ ರೈಲು ಹೊರಟಿತು: ಸುಮಾರು ಒಂದೂವರೆ ಮೈಲಿಯವರೆಗೂ ಕಿಕ್ಕಿರಿದು ನೆರೆದಿದ್ದ ಅಪಾರ ಜನಸ್ತೋಮ [ಸುಮಾರು ೫೦–೬೦ ಸಾವಿರ ಜನ] ಹಿಂದೆಂದೂ ಕಂಡರಿಯದಿದ್ದ ಕೇಳರಿಯದಿದ್ದ ಕೌತುಕಮಯ ಸಾಹಸಮಯ ರೈಲು ಪ್ರಯಾಣದ ಅಭೂತಪೂರ್ವ ದೃಶ್ಯವನ್ನು ಕಣ್ಣಾರೆ ಕಂಡು ನಿಬ್ಬೆರಗಾಯಿತು. ನಿರ್ಜೀವ ಉಗಿ ಬಂಡಿ ಸಜೀವಿಯಂತೆ ಓಡುತ್ತಿತ್ತು! ಮೊದಮೊದಲು ನಿಧಾನವಾಗಿ ಓಡುತ್ತಿದ್ದ ಹೊಗೆ ಬಂಡಿ ಆಲಿವ್ ಮೌಂಟ್ ಗವಿಯನ್ನು ದಾಟಿದ ನಂತರ ಹೆಚ್ಚು ಹೆಚ್ಚು ವೇಗದಿಂದ ಮುನ್ನುಗ್ಗಲಾರಂಭಿಸಿತು. ಗಂಟೆಗೆ ಕೇವಲ ೨೪ ಮೈಲಿಗಳ ವೇಗದಲ್ಲಿ ಚಲಿಸುತ್ತಿದ್ದ ರೈಲುಬಂಡಿ. ಅಂದಿನ ಪ್ರಯಾಣಿಕರ ದೃಷ್ಟಿಯಲ್ಲಿ, ಅತಿ ವೇಗದ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್!

ಮಾರ್ಗ ಮಧ್ಯದಲ್ಲಿ ಹಲವಾರು ಕತ್ತಲೆ ಗವಿ ಕಂದರಗಳ ಮೂಲಕ ಹಾದು, ರೈಲು ಬಂಡಿ ಬ್ರಾಡ್‌ಗ್ರೀನ್ ಮೈದಾನ ಪ್ರದೇಶಕ್ಕೆ ಬಂದಿತು. ಹೊಗೆ ಬಂಡಿ ನೀರು ತುಂಬಿಕೊಳ್ಳಲು ಪಾರ್ಕ್‌ಸೈಡ್ ನಿಲ್ದಾಣದಲ್ಲಿ ನಿಂತಿತು.

ಎರಡು ರೈಲು ಬಂಡಿಗಳು ನಿಂತ ಬಂಡಿಯ ಪಕ್ಕದಲ್ಲಿ ಹಾದು ಹೋದುವು. ಇನ್ನೂ ನಾಲ್ಕು ಬಂಡಿಗಳು ಪಕ್ಕದ ಹಳಿಯ ಮೇಲೆ ಹಾದು ಹೋಗಲಿದ್ದುದರಿಂದ, ರೈಲ್ವೆ ಕಂಪನಿಯವರು ಪ್ರಯಾಣಿಕರಾರೂ ತಮ್ಮ ಪೀಠಗಳನ್ನು ಬಿಟ್ಟು ಕೆಳಗೆ ಇಳಿಯಬಾರದೆಂದು ಲಿಖಿತ ಸೂಚನೆ ನೀಡಿದ್ದರು. ಆದಾಗ್ಯೂ ಕೆಲವು ಮಂದಿ-ಸುಮಾರು ೨೦ ಮಂದಿ ಗಣ್ಯರು- ರೈಲಿನಿಂದ ಕೆಳಗಿಳಿದು, ಡ್ಯೂಕನ ಡಬ್ಬಿಯ ಬಳಿ ಸುಳಿದಾಡುತ್ತಿದ್ದರು. ಅವರ ಪೈಕಿ ಅಂದಿನ ನಿಪುಣ ರಾಜಕಾರಣಿಯೂ ಹಣಕಾಸು ವ್ಯವಹಾರತಜ್ಞನೂ ವ್ಯಾಪಾರ ಮಂಡಲಿಯ ಅಧ್ಯಕ್ಷನೂ ಆಗಿದ್ದ ವಿಲಿಯಂ ಹಸ್ಕಿನ್ಸನ್ ಒಬ್ಬ. ಪಾರ್ಲಿಮೆಂಟ್ ಸದಸ್ಯ ಹ್ಯಾಮ್ಸ್ ಆತನ ಜೊತೆಯಲ್ಲಿದ್ದ. ಹ್ಯಾಮ್ಸನಿಗೆ ಡ್ಯೂಕನ

ಆಟಿಗೆ ರೈಲು

ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ರಾಜ ಮಹಾರಾಜರು ಅತ್ಯಾಡಂಬರ ಜೀವನಕ್ಕೆ, ವೃಥಾ ಹಣ ಪೋಲುಮಾಡುವುದಕ್ಕೆ ಹೆಸರುವಾಸಿಯಾಗಿದ್ದರು. ಅರ್ಥವಿಲ್ಲದ ಕೋರಿಕೆಗಳಿಗೆ ಅವರು ಲಕ್ಷಗಟ್ಟಲೆ ರೂಪಾಯಿಗಳನ್ನು ವ್ಯಯ ಮಾಡಿದ ಸಂದರ್ಭಗಳುಂಟು. ಆದರೆ ಗ್ವಾಲ್ಹೀರ್ ಸಂಸ್ಥಾನಾಧೀಶ ಮಾಧವರಾವ್ ಸಿಂಧೆ ಹೀಗೆ ಮಾಡಿದ. ಒಂದು ಕೃತ್ಯದಿಂದ ಗ್ವಾಲ್ಹೀರ್ ಪ್ರಾಂತದ ಪ್ರಜೆ ಈಗಲೂ ಸುಖಾನುಕೂಲವನ್ನೇ ಉಪಭೋಗಿಸುತ್ತಿದ್ದಾನೆ.

ಒಂದು ಸಲ ಮಾಧವರಾವ್ ಸಿಂಧೆ ತನ್ನ ಮಗ ಜಿವಾಜಿರಾಯನು ಆಡಿಕೊಳ್ಳುವುದಕ್ಕೋಸ್ಕರ ಆಟಿಕೆಯ ರೂಪದಲ್ಲಿ ಒಂದು ರೈಲನ್ನು ತಯಾರು ಮಾಡಿಸಿದ. ೧೮೯[illegible]ರಲ್ಲಿ ಇಂಗ್ಲೆಂಡಿನಲ್ಲಿ ಬಾಗ್ನಲ್ ಕಂಪನಿ ಇದರ ಎಂಜಿನನ್ನು ಪ್ರತ್ಯಕ್ಷವಾಗಿಯೇ ತಯಾರಿಸಿತು. ೧೯[illegible]ರಲ್ಲಿ ಹೆಚ್ಚು ಸೌಲಭ್ಯಗಳೊಂದಿಗೆ ಕೆರೆನ್ ಹಾರ್ನ್ ಕಂಪನಿ ಬೇರೊಂದು ಎಂಜಿನನ್ನು ಈ ರೈಲಿಗೋಸ್ಕರ ಕಳಿಸಿತು. ಈ ರೈಲು ನಡೆಯುವದಕ್ಕೆ ರಾಜ ಪ್ರಾಸಾದದೊಳಗೇ ಎರಡಡಿ ಅಗಲದ ಒಂದು ರೈಲ್ವೆ ಲೈನನ್ನು ಮಾಧವರಾವ್ ನಿರ್ಮಿಸಿದ. ಅದನ್ನು ಸ್ವಯಂ ಮಹಾರಾಜನೇ ನಡೆಸುತ್ತಿದ್ದ. ಅದರ [illegible] ಗಂಧದ ಕಡ್ಡಿಗಳನ್ನು [illegible]ತ್ತಿದ್ದನೆಂದು ಈಗಲೂ ಅಲ್ಲಿಯ ಜನರು ಹೇಳುತ್ತಾರೆ! ಅದೇ ಎಂಜಿನ್ ಈಗಲೂ ಗ್ವಾಲ್ಹೀರಿನ ಘೂಲಬಾಗಿನಲ್ಲಿದೆ. ಅದನ್ನು ಯಾರು ಬೇಕಾದರೂ ನೋಡಬಹುದು.

ಭೇಟಿ ಮಾಡಿಸಲು ಹಸ್ಕಿನ್ಸನ್ ಪ್ಯಾಮ್ಸನನ್ನು ಡ್ಯೂಕನ ಡಬ್ಬಿಯ ಒಳಗೆ ಕರೆದೊಯ್ದ.

ಹಸ್ಕಿನ್ಸನ್ನನ್ನು ಕಂಡೊಡನೆಯೇ ಡ್ಯೂಕ್ ಆತನಿಗೆ ಹಸ್ತಲಾಘವ ನೀಡಿದ. ಆತ ಒಂದೆರಡು ಮಾತುಗಳನ್ನು ಆಡುವಷ್ಟರಲ್ಲಿಯೇ ಪಕ್ಕದ ಹಳಿಯ ಮೇಲೆ "ರಾಕೆಟ್" ರೈಲು ಯಂತ್ರ ಧಾವಿಸುತ್ತಿರುವುದು ಕಂಡಿತು. ಡ್ಯೂಕನೂ ಆತನ ಡಬ್ಬಿಯಲ್ಲಿ ಕುಳಿತಿದ್ದ ಇತರ ಗಣ್ಯರೂ ಕೆಳಗೆ ನಿಂತಿದ್ದ ಪ್ರಯಾಣಿಕರನ್ನು, "ಒಳಗೆ ಬನ್ನಿ, ಒಳಗೆ ಬನ್ನಿ" ಎಂದು ಕೂಗಿ ಕರೆಯಲಾರಂಭಿಸಿದರು. ಕೆಳಗೆ ನಿಂತಿದ್ದವರಲ್ಲಿ ಹಲವಾರು ಮಂದಿ ತಮ್ಮ ತಮ್ಮ ಪೀಠಗಳನ್ನು ಸೇರಿಯೂಕೊಂಡರು. ಪ್ಯಾಮ್ಸ್ ಕೂಡ ಡ್ಯೂಕನ ಡಬ್ಬಿಗೇ ಅಭಿಮುಖವಾಗಿ ಅದಕ್ಕೆ ಅಂಟಿಕೊಂಡಂತೆ ಒತ್ತರಿಸಿ ನಿಂತುಕೊಂಡ.

ಆದರೆ, ಆಗ ತಾನೆ ಖಾಯಿಲೆಯಿಂದ ಚೇತರಿಸಿಕೊಂಡಿದ್ದ ಹಸ್ಕಿನ್ಸನ್ನನಿಗೆ ಮಾತ್ರ ತನ್ನ ಡಬ್ಬಿಗೆ ಹತ್ತಲಾಗಲಿಲ್ಲ. ಅನಾರೋಗ್ಯದ ಜೊತೆಗೆ ಆತನ ಒಂದು ಕಾಲು ಬೇರೆ ಸ್ವಲ್ಪ ಊನ. ಗಾಬರಿಗೊಂಡ ಹಸ್ಕಿನ್ಸನ್ "ರಾಕೆಟ್" ಬರುತ್ತಿದ್ದ ಹಳಿಯನ್ನು ದಾಟಲು ಎರಡು ಬಾರಿ ವಿಫಲ ಪ್ರಯತ್ನ ನಡೆಸಿದ. ಕಕ್ಕಾಬಿಕ್ಕಿಯಾಗಿ ಅತ್ತ ಇತ್ತ ಡ್ಯೂಕನ ಡಬ್ಬಿಯ ಪಕ್ಕಕ್ಕೆ ಓಡಿ ಬಂದ. ಪಕ್ಕದಲ್ಲಿಯೇ ನಿಂತಿದ್ದ ಪ್ಯಾಮ್ಸ್, ಮುಚ್ಚಿನಂತಾಗಿದ್ದ ಬಾಗಿಲು ಹಸ್ಕಿನ್ಸನ್ನನ ಭಜೀತಿಯನ್ನು ಕಂಡು "ಮಿ. ಹಸ್ಕಿನ್ಸನ್, ಗಾಬರಿಯಾಗಬೇಡಿ. ಧೈರ್ಯದಿಂದಿರಿ" ಎಂದು ಕಿರಿಚಿಕೊಳ್ಳುತ್ತಿದ್ದ. ಅಂತೂ ಇಂತೂ ಹಸ್ಕಿನ್ಸನ್ ಡ್ಯೂಕನ ಡಬ್ಬಿಯ ಬಾಗಿಲನ್ನು ಹಿಡಿದು ನಿಂತ.

"ರಾಕೆಟ್"ನ ಚಾಲಕ ವೈಟ್ ಎಂಜಿನ್ತ ಹಸ್ಕಿನ್ಸನ್ನನ ಹೆಣಗಾಟ ಪರದಾಟವನ್ನು ಕಂಡು. ತನ್ನ ಬಂಡಿಯನ್ನು ನಿಲ್ಲಿಸಲು ಪ್ರಯತ್ನಿಸಿದ. ಆದರೆ ಆ ದೈತ್ಯ "ರಾಕೆಟ್" ನಿಂತದ್ದು ಹಲವಾರು ಗಜಗಳಷ್ಟು ಮುಂದೆ ಹೋದ ಮೇಲೆಯೇ!

ಆಗಿನ ಕಾಲದಲ್ಲಿ ಎರಡು ಸಾಲು ಕಂಬಿಗಳ ನಡುವಣ ಸ್ಥಳ ಕೇವಲ ನಾಲ್ಕು ಅಡಿಗಳು. ಹೊಗೆಬಂಡಿಯೇ ತನ್ನ ಕಂಬಿಗಳಿಂದಾಚೆ ಸುಮಾರು ಒಂದೂವರೆ ಅಡಿಯಷ್ಟು ಹೊರಗೆ ಚಾಚಿಕೊಂಡಿರುತ್ತಿತ್ತು: ಉಳಿದ ಅಂತರ ಕೇವಲ ಎರಡೂವರೆ ಅಡಿ. ಬಂಡಿಯೊಳಕ್ಕೆ ಹತ್ತುವಷ್ಟರಲ್ಲೇ

ಸಂಭ್ರಮ ತಂತು!

ಯುವರಾಜ ಜಿವಾಜಿರಾವ್ ಬೇಕಾದಾಗ ಈ ರೈಲಿನಲ್ಲಿ ವಿಹರಿಸುತ್ತಿದ್ದ. ಮಾಧವರಾಯನಿಗೆ ಬೇಟೆಯೆಂದರೆ ಎಲ್ಲಿಲ್ಲದ ಹುಚ್ಚು. ಆದ್ದರಿಂದ ಅವನು ಈ ರೈಲ್ವೇ ಲೈನನ್ನು ಸುರೇರಾ ಅರಣ್ಯ ಪ್ರಾಂತದವರೆಗೂ ಹಾಕಿಸಿಬಿಟ್ಟ. ಬೇಟೆಗೆ ಹೋಗುವಾಗ ಕೂಡ ರೈಲನ್ನು ಮಹಾರಾಜರೇ ನಡೆಸುತ್ತಿದ್ದರು. ಹಿಂದಿರುವ ಡಬ್ಬಿಗಳಲ್ಲಿ ಮಹಾರಾಣಿ, ಮಂತ್ರಿಗಳು, ಸೇವಕರು ಇರುತ್ತಿದ್ದರು. ಕಾಲಾಂತರದಲ್ಲಿ ಪ್ರಜೆಗಳ ಬಿನ್ನಹವನ್ನು ಮನ್ನಿಸಿ ಈ ಎರಡಡಿ ಅಗಲವಾದ ರೈಲ್ವೆ ಲೈನನ್ನು ವಿಸ್ತರಿಸಿ ಪ್ರಜೆಗಳಿಗೂ ಪ್ರಯಾಣ ಸೌಲಭ್ಯಗಳನ್ನು ಮಹಾರಾಜರು ಒದಗಿಸಿದರು. ಹೀಗೆ ಆಟಿಗೆಯಾಗಿದ್ದ ಅಂದಿನ ರೈಲು ಇಂದು ಗ್ವಾಲಿಯರ್ ಶಿವಪುರಗಳ ಮಧ್ಯೆ ನಡೆಯುತ್ತಿದೆ. ೨೦೦ ಮೈಲು ದೂರ ಪ್ರಯಾಣ ಮಾಡುವ ಈ ರೈಲು ಬಹಳ ಚಿಕ್ಕದು.

ಗ್ವಾಲಿಯರ್ ಪ್ರಾಂತದ ಗ್ರಾಮವಾಸಿಗಳು ಈ ರೈಲುಗಾಡಿಯ ಛಾವಣಿಯ ಮೇಲೆ ಕುಳಿತು ಆಡುತ್ತ, ಹಾಡುತ್ತ ತಮ್ಮ ಪ್ರಯಾಣ ಮಾಡುತ್ತಾರೆ. ಈ ರೈಲಿನಲ್ಲಿ ಟಿಕೆಟ್ ಚೆಕಿಂಗ್ ಇಲ್ಲ. ಆದರೆ ಪ್ರಯಾಣಿಕರು ಅವಶ್ಯಕವಾಗಿ ಟಿಕೆಟು ಕೊಳ್ಳುತ್ತಾರೆ. ೧೯೫೧ ನವೆಂಬರ್ ೫ ರಂದು ಈ ರೈಲುಮಾರ್ಗ ಮಧ್ಯ ರೈಲ್ವೆಯಲ್ಲಿ ಸೇರಿತು. ಆದರೂ ಅಲ್ಲಿಯ ಜನರು ಇದನ್ನು 'ಸಿಂಧೆ ರೈಲ್' ಎಂದೇ ಇಂದಿಗೂ ಕರೆಯುತ್ತಾರೆ.

ಸಂಗ್ರಹ: **ಎಂ. ವಿ. ಸುಬ್ಬಾರಾವ್**



ವೆಂದರೆ ಮೆಟ್ಟಿಲು ತುಂಬ ಕಿರಿದು, ಒಬ್ಬರು ಮಾತ್ರ ಹತ್ತಿಹೋಗಬಹುದಾದಷ್ಟಿತ್ತು. ದುರದೃಷ್ಟವಶಾತ್ ಡ್ಯೂಕನ ಡಬ್ಬಿಯ ಬಾಗಿಲು ಮೂರು ಅಡಿಗಳಷ್ಟು ಅಗಲವಾಗಿದ್ದು ಹೊರಚಾಚಿಕೊಂಡಿತ್ತು. ಅಂತೂ ಬಡಪಾಯಿ ಹಸ್ಕಿನ್ಸನ್ ಮಾತ್ರ ಡ್ಯೂಕನ ಡಬ್ಬಿಯ ಬಾಗಿಲನ್ನೇ ಭದ್ರವಾಗಿ ಹಿಡಿದು, ಜೀವವನ್ನು ಕೈಯಲ್ಲೇ ಧರಿಸಿಕೊಂಡು ನಿಂತಿದ್ದ.

ಪಕ್ಕದ ಹಳಿಯ ಮೇಲೆ ಧಾವಿಸುತ್ತಿದ್ದ ದೈತ್ಯ "ರಾಕೆಟ್" ಎಂಜಿನ್ ಡ್ಯೂಕನ ಬಂಡಿಯ ತೆರೆದ ಬಾಗಿಲಿಗೆ ಬಡಿದೊಡನೆಯೇ, ಬಾಗಿಲ ಅಂಚು ಕಿತ್ತು ಹೋಗಿ, ಅದು ಡ್ಯೂಕನ ಬಂಡಿಯ ಮೈಗೆ ಜೋರಾಗಿ ಅಪ್ಪಳಿಸಿ ನಡುವೆ ಸಿಕ್ಕ ವ್ಯಕ್ತಿಯನ್ನು ಇರುಕಿಸಿತು. ಮೊದಲೇ ಗಾಬರಿಗೊಂಡು ಕಕ್ಕಾಬಿಕ್ಕಿಯಾಗಿದ್ದ ಹಸ್ಕಿನ್ಸನ್, "ರಾಕೆಟ್" ಡ್ಯೂಕನ ಬಂಡಿಯ ಬಾಗಿಲಿಗೆ ಬಡಿದೊಡನೆಯೇ ಕೈಬಿಟ್ಟು ಕೆಳಗೆ ಬಿದ್ದ. ಆತನ ಬಲಗಾಲು "ರಾಕೆಟ್"ನ ಚಕ್ರಕ್ಕೆ ಸಿಕ್ಕಿ ತುಂಡುತುಂಡಾಗಿ ಕತ್ತರಿಸಿ ಹೋಯಿತಲ್ಲದೆ ಗಾಲಿ ಆತನ ತೊಡೆಯ ಮೇಲೂ ಹರಿಯಿತು. ಹಸ್ಕಿನ್ಸನ್ ಕ್ಷೀಣ ಧ್ವನಿಯಲ್ಲಿ ಚೀರಿದ. ನೆತ್ತರ ಬುಗ್ಗೆ ಚಿಮ್ಮಿತು. ಇಷ್ಟೆಲ್ಲ ಒಂದು ಕ್ಷಣದಲ್ಲಿ ನಡೆದುಹೋಯಿತು.

ಬರ್ಮಿಂಗ್‌ಹ್ಯಾಮಿನ ಜೋಸೆಫ್ ಪಾರ್ಕ್ಸ್ ಮತ್ತು ಅರ್ಲ್ ಆಫ್ ವಿಲ್ಟನ್ ತುಂಬ ಪ್ರಯಾಸದಿಂದ ಹಸ್ಕಿನ್ಸನನನ್ನು ಮೇಲೆತ್ತಿದರು. "ನನಗೆ ಸಾವು ಬಂತು," ಎಂದ ಹಸ್ಕಿನ್ಸನ್ನನನ್ನು ಪಾರ್ಕ್ಸ್ "ಹಾಗೇನಿಲ್ಲ," ಎಂದ. "ನಿಜ, ನನಗೆ ಸಾವು ಬಂದಿದೆ," ಎಂದು ಕಷ್ಟದಿಂದ ನುಡಿದ ಹಸ್ಕಿನ್ಸನ್ ಸ್ಟಾನಿಸನ್ ಎಂಬ ಮಿತ್ರನನ್ನು ಕಂಡೊಡನೆಯೇ ಆತನ ಕೈಹಿಡಿದು "ನಾನು ಸಾಯುತ್ತಿದ್ದೇನೆ. ಶ್ರೀಮತಿ ಹಸ್ಕಿನ್ಸನ್ಳನ್ನು ಕರೆಯಿರಿ" ಎಂದ. ಕೈಗಾಡಿಯಲ್ಲಿಯೇ ಆತನನ್ನು ಎಕ್ಲ್ಸ್‌ಗೆ ಸಾಗಿಸಲಾಯಿತು. ಆದರೆ, ಆತ ಕಣ್ಮುಚ್ಚಿದ. ದಿನದ ಉಳಿದ ಸಮಾರಂಭಗಳೆಲ್ಲ ರದ್ದಾದುವು. ✡

ಪುಸ್ತಕ ವಿಭಾಗ

ಭಾರತೀಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ
ಚದುರಂಗರ 'ವೈಶಾಖ' ಕಾದಂಬರಿಯ ನಾಟ್ಯ ಸಂಗ್ರಹ

ಸಂಗ್ರಹ : 'ಗಂಗಾ' ಪಾದೇಕಲ್



೧೯೪೨ರಲ್ಲಿ ಪುಣೆಯಲ್ಲಿ ಓದುತಿದ್ದ ಎಂ.ಎ. ಮತ್ತು ಲಾಗಳಿಗೆ ಶರಣು ಹೊಡೆದು 'ಚದುರಂಗ'ರು ರಾಷ್ಟ್ರೀಯ ಆಂದೋಲನಕ್ಕಿಳಿದರು. ರಾಜಕಾರಣದತ್ತ ಗಮನ ಹರಿಸದೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟರು. 'ತೂಕದ ಬರವಣಿಗೆ'ಗೆ ಹೆಸರಾದರು. ೩೦ ವರ್ಷಗಳಲ್ಲಿ ಮೂರು ಕಾದಂಬರಿಗಳು (ಸರ್ವಮಂಗಳ ೧೯೫೦, ಉಯ್ಯಾಲೆ ೧೯೬೦ ಹಾಗೂ ೩೦ರ ದಶಕದಲ್ಲಿ ವೈಶಾಖ) ಪ್ರಕಟವಾಗಿ 'ಚದುರಂಗ' ತಮ್ಮದೇ ಆದ ಸ್ಥಾನ ಪಡೆದರು. ಮೊದಲಿನೆರಡು ಕಾದಂಬರಿಗಳು ಚಲನಚಿತ್ರಗಳೂ ಆಗಿವೆ. 'ಸರ್ವಮಂಗಳಾ' (ತಾವೇ ನಿರ್ದೇಶಿಸಿದರು.) ಕಾದಂಬರಿ ಹಿಂದಿ–ಇಂಗ್ಲೀಷುಗಳಿಗೂ ತರ್ಜುಮೆಗೊಂಡಿತು.

ಹುಣಸೂರು ತಾಲೂಕಿನ ಕಲ್ಲಹಳ್ಳಿ ನೀಡಿದ ಮತ್ತೊಂದು ಕಾಣಿಕೆ 'ಚದುರಂಗ'ರು ಡಿ. ದೇವರಾಜ ಅರಸರ ದೂರದ ಸಂಬಂಧಿ. ಪೂರ್ಣ ಹೆಸರು ಎಂ. ಸುಬ್ರಮಣ್ಯರಾಜ ಅರಸು (ಜನನ ೧೯೧೬ ರ ಜನವರಿ).

ಇವರು ನಾಲ್ಕು ಕಥಾಸಂಗ್ರಹಗಳನ್ನೂ ನಾಟಕಗಳನ್ನು ಪ್ರಕಟಿಸಿದ್ದಾರೆ.

'ವೈಶಾಖ' ಕಾದಂಬರಿಯಲ್ಲಿನ ಪ್ರಮುಖ ಪಾತ್ರದ ಸಂಗ್ರಹ ಈ 'ರುಕ್ಮಿಣಿ'.

ರುಕ್ಮಿಣಿ ಮನೆಯ ಮುಂಬಾಗಿಲು ತೆರೆದಾಗ ಬಾಳೆಲೆ, ಅಡಿಕೆ ಪಟ್ಟೆಗಳನ್ನು ಹೊತ್ತ ಕೃಷ್ಣ ಶಾಸ್ತ್ರಿಗಳು, ತಮ್ಮ ಬಲಿಷ್ಠ ಕಾಲುಗಳನ್ನು ಎತ್ತೆತ್ತಿ ಇಡುತ್ತ ಒಳಗೆ ಬಂದರು. "ಸುಶೀಲ ಈಗ ಹೇಗೆ ಇದ್ದಾಳಮ್ಮ?" ಎಂದು ಕೇಳಿದಾಗ ರುಕ್ಮಿಣಿಯು, "ಇನ್ನೂ ಸ್ವಲ್ಪ ಜ್ವರ ಇದೆ. ಪಂಡಿತರು ಬಂದು ಔಷಧಿಕೊಟ್ಟು ಹೋದರು," ಎಂದಳು. "ಹೊಟ್ಟೆಗೇನು ತಗೊಂಡಳು?" ಕೈಕಾಲು ತೊಳೆಯುತ್ತ ಶಾಸ್ತ್ರಿಗಳು ಕೇಳಿದರು. "ಏನೂ ಬೇಡ ಅಂತ ಹಟ ಮಾಡ್ತಾಳೆ. 'ಹಾಲಾದರೂ ಕುಡಿ ಅತ್ತೆ' ಎಂದರೆ 'ನನಗೆ ಹಸಿವಿಲ್ಲ, ಬೇಡ' ಅಂದಳು," ಎಂದು ರುಕ್ಮಿಣಿ ಹೇಳಿದಾಗ, "ಎಲ್ಲಾದರೂ ಉಂಟೆ? ಹೊಟ್ಟೆಗೇನೂ ತಗೊಳ್ಳದೇ ಹೋದರೆ ಇನ್ನೂ ನಿಶ್ಶಕ್ತಿ ಆಗುತ್ತೆ," ಎನ್ನುತ್ತ ಶಾಸ್ತ್ರಿಗಳು ತಾವೇ ಸುಶೀಲೆ ಮಲಗಿದ್ದ ನಡುಮನೆಗೆ ನಡೆದು ಬಲವಂತ ಮಾಡಿ ಹಾಲು ಕುಡಿಸಿಯೇ ಬಿಟ್ಟರು. ಅಣ್ಣ ತಂದೆಯರು ಎಂದರೆ ಹೀಗಿರಬೇಕೆಂದು ಸಂತೋಷಿಸುತ್ತ ರುಕ್ಮಿಣಿ ಮಾವನವರನ್ನು ಊಟಕ್ಕೆಬ್ಬಿಸಿದಳು.

ಮಾರು ಬೆಳಿಗ್ಗೆ ಸಂಧ್ಯಾವಂದನೆ ಮುಗಿದ ಬಳಿಕ ಬೆಳ್ಳಿಯ ಸಂಪುಟದಿಂದ ದೇವರುಗಳನ್ನು ಒಂದೊಂದಾಗಿ ಅಗಲವಾದ ಬೆಳ್ಳಿಯ ತಟ್ಟೆಗೆ ತೆಗೆದಿಟ್ಟ ಕೃಷ್ಣ ಶಾಸ್ತ್ರಿಗಳು ಮಂತ್ರ ಪಠಿಸುತ್ತ, ರುಕ್ಮಿಣಿ ತಂದಿಟ್ಟ ಹಾಲಿನಲ್ಲಿ ಅಭಿಷೇಕ ಮಾಡಿದರು. ದೇವರ ಕೋಣೆಯ ಹೊಸ್ತಿಲಿನಾಚೆ ಕುಳಿತು ಶ್ರೀಗಂಧ ತೇಯುತ್ತಿದ್ದ ರುಕ್ಮಿಣಿ ಯೋಚನಾ ಮಗ್ನಳಾಗಿದ್ದಳು. ಈಚೆಗೆ ಮಾವಯ್ಯ ಏಕೆ ತನ್ನೊಡನೆ ಮುಖ ಕೊಟ್ಟು ಮಾತನಾಡುವುದಿಲ್ಲ? ತನ್ನಲ್ಲಿ ಕೋಪವೆ? ಛೆ. ಛೆ, ಇರಲಾರದು. ತಾನೆಂದರೆ ಮಗಳಿಗಿಂತಲೂ ಅತಿಶಯವಾದ ಮಮತೆ ಅವರಿಗೆ. ಹೀಗಿದ್ದೂ ಅವರ ಅಸ್ವಾಭಾವಿಕ ವರ್ತನೆಗೆ ಕಾರಣ ಏನಿರಬಹುದು? ಗಂಧ ತೇಯುತ್ತ ತೇಯುತ್ತ, ತಲೆ ಎತ್ತಿ ಅವರನ್ನೇ ನೋಡಿದಳು. ಕೆಂಪು [illegible] ಉಟ್ಟು, ಕೊರಳಿಗೆ ಚಿನ್ನದ ತಂತಿಯಿಂದ ಬಿಗಿದ ರುದ್ರಾಕ್ಷಿಗಳ ಮಾಲೆ ಧರಿಸಿ, ಹಣೆಗೆ ತ್ರಿಪುಂಡ್ರ ಅಕ್ಷತೆಗಳನ್ನಿಟ್ಟು ಮಾವಯ್ಯ ಕಣ್ಣು ತುಂಬುವಂತೆ ಕುಳಿತಿದ್ದರು. ಅವರನ್ನು ನೋಡುತ್ತಿದ್ದಂತೆ 'ಎಂತಹ ದೊಡ್ಡ ಮನಸ್ಸು! [illegible]

ರದು' ಎಂದವಳ ಒಳ ಮನ ನುಡಿಯಿತು. ಆ ಯೋಚನೆ ಬಂದಾಗ ಮನದೊಳಗೂ ಏನೋ ತೀವ್ರವಾಗಿ ಅವಳ ಹಿಂದಿನ ಬದುಕನ್ನು ಬಿಚ್ಚುತ್ತ ಹೋಯಿತು. ಶಾಸ್ತ್ರಿಗಳ ಮಗನೊಂದಿಗೆ ಜರುಗಿದ ತನ್ನ ವಿವಾಹವು ನೆನಪಿನಂಗಳದಲ್ಲಿ ಸುಳಿಯಿತು. ಸುತ್ತಲ ಊರುಗಳಲ್ಲೆಲ್ಲ ಯಾವ ವಧುವೂ ಒಪ್ಪದೆ ಅಂತಿಮವಾಗಿ ರುದ್ರಪಟ್ಟಣಕ್ಕೆ ಬಂದು ಮಾವಯ್ಯ, ಅವರ ಮಗ ತಾನೇ ಸರಿ ಎಂದೊಪ್ಪಿದ್ದರು. ವಿವಾಹವೇನೋ ಜರುಗಿತು. ಆದರೆ ತಾನು ಹದಿನೆಂಟರ ವರೆಗೆ ಋತುಮತಿಯಾಗಲಿಲ್ಲ. ಆಗ ಅತ್ತೆಯವರು ತನ್ನ ಮಗನಿಗೆ ಬೇರೊಂದು ವಿವಾಹ ಮಾಡುತ್ತಾರೆಂಬ ಸುದ್ದಿಯೂ ರುದ್ರಪಟ್ಟಣಕ್ಕೆ ಮುಟ್ಟಿತ್ತು. ಆದರೆ ತನ್ನ ಪತಿ ಹಟ ಹಿಡಿದು, "ಇನ್ನೂ ಎರಡು ವರ್ಷ ನೋಡೋಣ." ಎಂದು ಅತ್ತೆಯವರನ್ನು ಒಪ್ಪಿಸಿದರಂತೆ. ಅಂತೂ ತಾನು ಹದಿನೆಂಟಕ್ಕೆ ಋತು ಮತಿಯಾದೆ. ಆದರೆ ಅಷ್ಟರಲ್ಲಿ ಅತ್ತೆ ಸ್ವರ್ಗಸ್ಥರಾಗಿದ್ದರು. ಸಂಸ್ಕೃತ ಪಂಡಿತರಾದ ತನ್ನೆಜಮಾನರು ಬಲು ರಸಿಕರು. ಶೃಂಗಾರದ ಮಾತುಗಳನ್ನು ಪೋಲಿ ಎನ್ನಿಸುವಷ್ಟು ಸಲೀಸಾಗಿ ಹೇಳಿಬಿಡುತ್ತಿದ್ದರು.

ಆದರೂ ಮೊದಲ ರಾತ್ರಿ ಅವರು ಸರಸ ಸಲ್ಲಾಪಗಳಿಂದ ಎಷ್ಟೇ ಪ್ರಯತ್ನಪಟ್ಟರೂ ತಾನು ಮುದುಡಿಯೇ ಇದ್ದದ್ದು, ಕೊನೆಗೆ ಅವರೂ ಸೋತು ನಿದ್ದೆ ಹೋದರು. ಮಗುವಿನಂತೆ ಮಲಗಿದ ಅವರನ್ನು ನೋಡಿದಂತೆ, ತನ್ನನ್ನು ಬಲಾತ್ಕರಿಸದ ಅವರ ಸಂಸ್ಕೃತಿ ತನ್ನ ಮನಸೆಳೆಯಿತು. ಇಲ್ಲಿಯ ತನಕ ತನ್ನನ್ನು ಆವರಿಸಿದ್ದ ಭಯ, ನಾಚಿಕೆಗಳು ಕರಗಿ ಅವರ ಬಗ್ಗೆ ಪ್ರೀತಿ, ಅನುಕಂಪ ಮೂಡಿ ಅವರ ತಲೆ ನೇವರಿಸಿದ್ದೆ. ಆದರೆ ಅಷ್ಟಕ್ಕೇ ಬೆಚ್ಚಿ ಏರಿದಷ್ಟು ಬೆವರಿ, ಮತ್ತೂ ಮುಂದುವರಿಯದೆ ಮೌನವಾಗಿ ಮಲಗಿ ತಪ್ಪುಮಾಡಿದವಳಂತೆ ಹೊರಳಿ ನರಳಿದ್ದೆ. ಬೆಳಗ್ಗೆ ಮೊದಲ ಕೋಳಿ ಕೂಗಿದಾಗ ಅವರಿಗೆಚ್ಚರವಾಗಿತ್ತು. ಆಗ ಹೊರಳುವ ತನ್ನನ್ನು ತಬ್ಬಿ, ಮೆಲ್ಲನೆ ಗಲ್ಲ ಹಿಡಿದು ತಿರುಗಿಸಿ, "ಇನ್ನೂ ನಿದ್ದೆ ಬರಲಿಲ್ಲವೆ?" ಎಂದು ಕೇಳಿದ್ದರು. ತಾನು ನಕ್ಕಿರಬೇಕು. ಅವರು ಬಾಗಿ ಮುತ್ತಿಟ್ಟಾಗ ತಾನು ಅಡ್ಡಿಮಾಡಲಿಲ್ಲ. ಮುಂದೆ ಎಷ್ಟು ಸಲೀಸು. ನೆನೆದಾಗ ನಾಚಿ ಹಿಡಿಯಾದಳು ರುಕ್ಮಿಣಿ.

ಮಾಧ್ಯಾಹ್ನ ತೋಟದ ಕೆರೆಯಲ್ಲಿ ಬಟ್ಟೆ ಒಗೆಯುವಾಗಲೂ ರುಕ್ಮಿಣಿಗೆ ತನ್ನವರದೇ ಚಿಂತೆ. ಅವರನ್ನು ಪಡೆಯಲು ಕೋಟಿ ಜನ್ಮಗಳ ಪುಣ್ಯ ಮಾಡಿದ್ದೆ ಎಂದುಕೊಂಡಿದ್ದೆಷ್ಟೋ ಸಲ. ಆದರೆ ಆ ಪುಣ್ಯವೇಕೆ ಕೇವಲ ಒಂದೂವರೆ ವರ್ಷಗಳ ಅಲ್ಪ ಅವಧಿಯಲ್ಲೇ ಕ್ಷಯಿಸಿತು? ಈ ಪ್ರಶ್ನೆಯನ್ನು ವಿಷಮ ಶೀತ ಜ್ವರದಿಂದ ತನ್ನ ಪತಿ ಸತ್ತ ದಿನದಿಂದಲೂ ದೇವರ ಮುಂದೆ ಕೇಳುತ್ತಲೇ ಬಂದಿದ್ದಳು. ಬಾಲ್ಯದಿಂದಲೂ ಯುಗಾದಿಯಲ್ಲಿ ಬೇವು, ಬೆಲ್ಲಗಳನ್ನು ಸಮವಾಗಿಯೇ ತಿನ್ನುತ್ತ ಬಂದಿದ್ದೆನಲ್ಲ? ಆದರೆ ತನ್ನ ಬಾಳ್ವೆಯಲ್ಲಿ ಬೆಲ್ಲದ ಸವಿ ಕ್ಷಿಪ್ರದಲ್ಲೆ ಕರಗಿ, ಉಳಿದ ಬದುಕಿನುದ್ದಕ್ಕೂ ಬೇವಿನ ಕಹಿಯನ್ನು ಸೇವಿಸುವಂತಾಯ್ತಲ್ಲ? ಅದೇ ಯೋಚನೆಯಲ್ಲಿ ಮನೆಗೆ ಬಂದಾಗ ಸುಶೀಲತ್ತೆ ಕಾಣಿಸಿದಳು. 'ಅಯ್ಯೊ, ನನ್ನೊಬ್ಬಳದೇ ಏನು ಮಹಾ? ಈ ಅತ್ತೆಯೂ ಚಿಕ್ಕ ಪ್ರಾಯದಲ್ಲೇ ಗಂಡನನ್ನು ಕಳಕೊಳ್ಳಲಿಲ್ಲವೆ? ಆದರೆ ಒಂದೇ ವ್ಯತ್ಯಾಸ. ದೇವರು ಅವಳಿಗೆ ಒಂದು ಕೂಸನ್ನಾದರೂ ಕರುಣಿಸಿದ್ದಾನೆ. ತಾನು ಅದರಿಂದಲೂ ವಂಚಿತಳೆ?' ಎಂದುಕೊಂಡಾಗ ರುಕ್ಮಿಣಿಯ ಕಣ್ಣುಗಳು ತುಂಬಿದವು. ಅಂದು ತನ್ನ ಪತಿ ತೀರಿಕೊಂಡಾಗ ಸುಶೀಲತ್ತೆಯ ಜತೆಗೆ ಇಡೀ ದನುಮನ ಹಳ್ಳಿಯ ಬ್ರಾಹ್ಮಣ ಸಮುದಾಯ ತನ್ನ ತಲೆ ಬೋಳಿಸಬೇಕೆಂದು ಕಟ್ಟಾಗ್ರಹಪಡಿಸಿತ್ತು. ಆದರೆ ಮಾವನವರು ಬಂಡೆಯಂತೆ ಅಚಲರಾಗಿ ನಿಂತು ಅವರನ್ನೆಲ್ಲ ಎದುರಿಸಿದ್ದರು. "ನಿಮಗೆ ಬಹಿಷ್ಕಾರ ಹಾಕಬೇಕಾಗುತ್ತದೆ"–ಬ್ರಾಹ್ಮಣರೆಲ್ಲ ಕೆರಳಿ ಗುಡುಗಿದಾಗ, "ಬಹಿಷ್ಕಾರ ಹಾಕ್ತೀರೇನಯ್ಯಾ? ಹೋಗಿ, ಹಾಕ್ಕೊಳ್ಳಿ." ಎಂದು ದೃಢವಾಗಿ ಹೇಳಿ ಒಳಗೆ ಬಂದಿದ್ದರು. ಆಗ ಸುಶೀಲತ್ತೆ ಸುಮ್ಮನಿರದೆ, "ಬಹು ಪ್ರಾಚೀನ ಕಾಲದಿಂದಲೂ ನಡೆದು ಬಂದ ಪದ್ಧತಿ ಅಲ್ಲವೇ ಅಣ್ಣಾ? ಈ ಸಣ್ಣ ವಿಷಯಕ್ಕೆ ಇಡೀ ಸಮಾಜವನ್ನ ಹಗೆ ಮಾಡಿ ಹಾಕಿಕೊಳ್ಳುವುದರಲ್ಲಿ ಯಾವ ಜಾಣತನವಿದೆ?" ಎಂದು ಏನೇನೋ ಹೇಳಿದ್ದಳು. "ಸುಶೀ, ನೀನು ಸುಮ್ಮನಿರು. ನೀನೇ…

ನೀನು ಬಾಲ ಹೋದ ನರಿ." ಎಂದು ಕಠಿಣವಾಗೇ ಹೇಳಿದಾಗ ಅತ್ತೆಯ ಬಾಯಿ ಮುಚ್ಚಿತ್ತು.

ಆದರೆ ಸಕೇಶಿಯಾಗೇ ಉಳಿದ ಕಾರಣ ಬ್ರಾಹ್ಮಣ ಸಮುದಾಯ ಅನೇಕ ರೀತಿಯಲ್ಲಿ ಕಿರುಕುಳ ಕೊಟ್ಟಿತ್ತು. ಸಮಾಜದಲ್ಲಿ ಒಳ್ಳೆಯದು, ಕೆಟ್ಟದು ಏನೇ ಆದರೂ ಈ ಮನೆಯವರಿಗೆ ಪ್ರವೇಶ ಇರಲಿಲ್ಲ. ಈ ಮನೆಯಲ್ಲಿ ಆಗುವ ಶುಭ, ಅಶುಭಗಳು ಯಾವುದಕ್ಕೂ ತಾವು ಬರಬಾರದೆಂದು ಬ್ರಾಹ್ಮಣರೆಲ್ಲ ನಿಶ್ಚಯಿಸಿದ್ದರು. ಇದರ ಬಿಸಿ ತಟ್ಟಿದ್ದು ರುಕ್ಮಿಣಿಗೇ. ಹೊರಗಿನ ಹಿಂಸೆಯನ್ನು ಹೇಗಾದರೂ ಸಹಿಸಿಕೊಳ್ಳುತ್ತಿದ್ದಳಾದರೂ ಒಳಗೆ ಸುಶೀಲತ್ತೆಯ ಕಾಟ ಮಾತ್ರ ತಡೆಯಲು ದುಸ್ಸಾಧ್ಯವಾಗಿತ್ತು.

ಒಂದು ರಾತ್ರಿ ರುಕ್ಮಿಣಿಗೆ ನಿದ್ದೆ ಬಂದ ವೇಳೆ ಕೃಷ್ಣಶಾಸ್ತ್ರಿಗಳು ಎಚ್ಚರವಾಗಿದ್ದರು. ಸುಶೀಲ ಒಳಗೆ ಹೊರಗೆ ಬೆಕ್ಕಿನಂತೆ ಸುಳಿಯುತ್ತ, ಕಣ್ಣು ಮುಚ್ಚಿ ಮಲಗಿದ್ದ ಅವರನ್ನು "ಕಿಟ್ಟಣ್ಣ" ಎಂದು ಎರಡು ಕರೆದಾಗ ಅವರಿಗೇನೋ ಅನುಮಾನವೆನಿಸಿ ಮೌನವಾಗೇ ಮಲಗಿದ್ದರು. ಕಣ್ಣು ಮುಚ್ಚಿದ್ದರೂ ಮೈಯೆಲ್ಲ ಕಿವಿಯಾಗಿ ಮಲಗಿದ್ದಾಗ, ನಡುಮನೆಯಿಂದ ಹೊರಬಂದ ಸುಶೀಲ ದೀವಿಗೆ ಹಿಡಿದು ರುಕ್ಮಿಣಿ, ಸರಸಿಯರು ಮಲಗಿದ್ದ ರೂಮಿನೆಡೆಗೆ ಸಾಗಿದುದನ್ನು ಕಂಡರು. 'ಯಾಕಾಗಿ ಅವಳಲ್ಲಿಗೆ ಹೋಗುತ್ತಿದ್ದಾಳೆ?' ಎಂಬ ಕುತೂಹಲದಿಂದ ಸರಿಯಾಗಿ ಕಣ್ಣು ತೆರೆದಾಗ ಕಂಡ ದೃಶ್ಯ ಅವರನ್ನು ಸೋಜಿಗಗೊಳಿಸಿತು. ಸುಶೀಲಳ ಒಂದು ಕೈಯಲ್ಲಿ ಕತ್ತರಿ, ಇನ್ನೊಂದರಲ್ಲಿ ಸಣ್ಣ ದೀವಿಗೆ. ಯಾಕೆ ಈ ಸಂಭ್ರಮ? ಶಾಸ್ತ್ರಿಗಳು ಮೆಲ್ಲನೇ ಸುಶೀಲೆಯ ಬೆನ್ನ ಹಿಂದೆ ಸಾಗಿದರು. ರುಕ್ಮಿಣಿಯ ಕೋಣೆಯ ಬಾಗಿಲಿನ ತಾಪಾಳು ಎಂದೋ ಮುರಿದು ಹೋಗಿತ್ತು. ಅದನ್ನು ಒರಟಾಗಿ ಹಾಕಲು ಹೋಗಿ ಮುರಿದಿದ್ದವನು ಮಗ ವಿಶ್ವೇಶ್ವರ. ಅದನ್ನು ರಿಪೇರಿ ಮಾಡಿಸಬೇಕೆನ್ನುವಷ್ಟರಲ್ಲಿ ಅವನೇ ತೀರಿಕೊಂಡಿದ್ದ. ಸುಶೀಲೆ ನೂಕಿದೊಡನೇ ಬಾಗಿಲು ತೆರೆದುಕೊಂಡಿತು. ಸುಶೀಲೆ ತಾನು ತಂದಿದ್ದ ದೀವಿಗೆಯನ್ನು ರುಕ್ಮಿಣಿಯ ತಲೆಯ ಹಿಂಭಾಗದಲ್ಲಿ ಇರಿಸಿದಳು. ಅನಂತರ ರುಕ್ಮಿಣಿಯ ತಲೆಗೂದಲನ್ನು ಉಪಾಯವಾಗಿ ನೀವಿ ಎಡಗೈ ಮುಷ್ಟಿಯಲ್ಲಿ ಹಿಡಿದು ಇನ್ನೊಂದು ಕೈಲಿದ್ದ ಕತ್ತರಿಯನ್ನು ಆ ಕೂದಲು ಬುಡಕ್ಕಿಡಬೇಕು, ಅಷ್ಟರಲ್ಲಿ ಶಾಸ್ತ್ರಿಗಳು ಗರ್ಜಿಸಿದರು, "ಆಹಾ. ಸುಶೀ…ಏನ್ಮಾಡ್ತಿದೀಯೆ?" ಸುಶೀ ಹಾಗೇ ನೆಲಕ್ಕೆ ಕುಕ್ಕರಿಸಿದಳು. ಈ ಗದ್ದಲದಲ್ಲಿ ಕತ್ತರಿ ಕೈ ಜಾರಿ ರುಕ್ಮಿಣಿಯ ಕತ್ತಿಗೆ ಬಿದ್ದು ಅದರ ತಣ್ಣನೆ ಸ್ಪರ್ಶದಿಂದಾಗಿ ಆಕೆ ಎಚ್ಚತ್ತಳು. ರುಕ್ಮಿಣಿಗೆ ಏನಾಗುತ್ತಿದೆ ಎಂಬ ಕಲ್ಪನೆ ತಟ್ಟನೆ ಹೊಳೆಯಲಿಲ್ಲ.

ರಾತ್ರಿ ಪೂರಾ 'ಯಾಕೆ ಹೀಗೆ' ಎಂದೂ ತಲೆಕೆಡಿಸಿಕೊಂಡ ರುಕ್ಮಿಣಿ ಬೆಳಿಗ್ಗೆ ಮಾವಯ್ಯ, "ರುಕ್ಮಿಣಿ ನಿನಗೂ ಸುಶೀಲೆಗೂ ದುರದೃಷ್ಟವಶಾತ್ ಹೊಂದಿಕೆ ಆಗ್ತಿಲ್ಲ, ಕೊಂಚ ಕಾಲ ನೀನೇ ನಿಮ್ಮ ತೌರಿಗೆ ಹೋಗಿ ಇದ್ದರೆ ಕ್ಷೇಮ." ಎಂದಾಗ ಚಿಂತಾಕ್ರಾಂತಳಾದಳು. ಆದರೆ ತೌರಿಗೆ ಹೋಗಲಾರೆನೆನ್ನಲೂ ಬಾಯೇ ಬರಲಿಲ್ಲ. ಆಳು ಲಕ್ಕ ಶಾಸ್ತ್ರಿಗಳ ಕರೆಯಂತೆ ಬಂದು ಆಗಲೇ ಗಾಡಿ ಕಟ್ಟಿದ್ದ. ತಾನೂ ಬರುವುದಾಗಿ ಹಟ ಹಿಡಿದ ಸರಸಿಯನ್ನು ಸಮಾಧಾನಿಸಿ ರುಕ್ಮಿಣಿ ಗಾಡಿ ಏರಿದಳು. ಬಂಡಿ ದಬ್ಬುವಲ್ಲಿಯ ಗಡಿ ದಾಟುತ್ತಲೆ ಮಾವಯ್ಯ ದನಿ ತಗ್ಗಿಸಿ ಹೇಳಿದರು, "ಕೊಂಚ ಕಾಲ ಸಹಿಸಿದರೆ ಎಲ್ಲ ಸರಿಹೋಗುತ್ತೆ. ತಂಗಿಯ ಸ್ವಭಾವ ಚಿಕ್ಕಂದಿನಿಂದಲೂ ಅಂಥದೇ. ಸ್ವಭಾವತಃ ಸುಶೀಲೆ ಕೆಟ್ಟವಳಲ್ಲ. ನಿನ್ನ ವಿಚಾರದಲ್ಲೂ ಹಾಗೇ." ಎಂದಾಗ ರುಕ್ಮಿಣಿ "ನೀವು ಹೇಳೋದೊಂದೂ ನನಗರ್ಥ ಆಗ್ತಾ ಇಲ್ಲ." ಎಂದಳು. ಶಾಸ್ತ್ರಿಗಳು ರಾತ್ರಿ ನಡೆದುದನ್ನು ವಿವರಿಸಿ, "ಅವಳಿಗೆ ಕೋಪ ಬಂದಿದ್ದು ನೀನು ವಿಧವೆಯಾದ ಕೂಡಲೇ ಎಲ್ಲರಂತೆ ಮುಂಡೆ ಕೂದಲು ತೆಗೆಸಲಿಲ್ಲ ಎಂಬ ಕಾರಣಕ್ಕಾಗಿ. ಆ ಕ್ರಿಯೆ ನಡೆದು ಹೋಗಿದ್ದರೆ ಎಲ್ಲ ಸಲೀಸಾಗ್ತಿತ್ತು. ಅಂತ ಕಾಣುತ್ತೆ." ಎಂದರು. ರುಕ್ಮಿಣಿ ಕನಸಿನಲ್ಲಿ ಉಲಿವವಳಂತೆ "ಇರಬಹುದು" ಎಂದಳು.

ರುದ್ರಪಟ್ಟಣದಲ್ಲಾಗಲಿ ಮನೆಯಲ್ಲಾಗಲಿ ರುಕ್ಮಿಣಿ ಇಲ್ಲದ ಮೂರು ವರ್ಷಗಳಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಅಣ್ಣ ಅಶ್ವತ್ಥ ಭೋಜನದ ಮೇಲುಗೈಯಾಗಿದ್ದರೂ ಉಳಿದೆಲ್ಲ ವಿಷಯಗಳಲ್ಲೂ ಅತ್ತಿಗೆಯಾದ ಸಾವಿತ್ರಿಯದೆ ಈ ಕಾರುಭಾರು. ತಾಯ್ತಂದೆಯರಿಲ್ಲದ ತವರು ಸೊಗಸೀತೇ ?

ಅಂದು ಕಾವೇರಿ ನದಿಯಲ್ಲಿ ರುಕ್ಮಿಣಿ ಬಟ್ಟೆ ಒಗೆಯುತ್ತಿದ್ದಳು. ಒಗೆದ ಬಟ್ಟೆಗಳನ್ನು ನೀರಲ್ಲಿ ಜಾಲಿಸುತ್ತಿದ್ದಾಗ, "ಅಮ್ಮಾರೆ" ಎಂಬ ಪರಿಚಿತ ಸ್ವರ ಕೇಳಿ ತಿರುಗಿದಳು. ದರುವಾಸಹಳ್ಳಿಯ ಲಕ್ಕ! ನೀನು ಯಾವಾಗ ಬಂದೆಯೋ ಲಕ್ಕ? ಎಂದು ಕೇಳಿದಾಗ, "ಇದೇ ಬಂದೆ ಕನ್ರವ್ವ" ಎಂದ. ಅವನ ಮುಖ ಹಾಳು ಹಾಳು ಸುರಿಯುತ್ತಿತ್ತು. ರುಕ್ಮಿಣಿಗೆ ಮತ್ತೂ ಅಚ್ಚರಿಯಾಯಿತು. ಲಕ್ಕನದು ಯಾವಾಗಲೂ ಲವಲವಿಕೆಯ ಸ್ವಭಾವ. ಇಂಥವನೂ ಈ ದಿನ ಯಾಕೆ ಈ ರೀತಿ ಅಳುಮುಖಿಯಾಗಿದ್ದಾನೆ? ಏನಾಗಿರಬಹುದು. ಹೊಳೆಯಿಂದ ಮನೆ ಸೇರಿದಾಗಲೇ ಲಕ್ಕ ಬಾಯಿಬಿಟ್ಟದ್ದು.

ಶೀಲತ್ತೆ ತೋಟದ ಹಾಸುಗಲ್ಲಿನ ಮೇಲೆ ಬಟ್ಟೆ ಒಗೆಯುತ್ತಿದ್ದಾಗ ಏನೋ ಹುಳು ಕಡಿದ ಹಾಗಾಯಿತ್ತಂತೆ. ಸುಶೀಲತ್ತೆ ಗಮನಿಸಲಿಲ್ಲವಂತೆ. ಆಗ ಅಲ್ಲೇ ಆಡುತ್ತಿದ್ದ ಸರಸಿ ಚಟ್ಟನೆ ಚೀರಿ "ಹಾವು...ಹಾವು" ಎನ್ನುತ್ತ ತನ್ನ ತಾಯಿ ಬಳಿಗೆ ಓಡಿಬಂದಳಂತೆ. ಅತ್ತ ನೋಡಿದಾಗ ಬಿಸಿಲ ರಝಳಕ್ಕೆ ಮಿಂಚುತ್ತ ಭಾರಿ ಗೋದಿ ನಾಗರ ಹರಿದು ಹೋಗುತ್ತಿತ್ತಂತೆ! ಅತ್ತೆ ತನ್ನ ಕಾಲನ್ನು ನೋಡಿಕೊಂಡಳಂತೆ. ಬಲಗಾಲಿನ ಕಿರುಬೆರಳಲ್ಲಿ ಗಾಯವಾಗಿ ರಕ್ತ ಸೋರುತ್ತಿತ್ತಂತೆ. ಪುನಃ ಕಣ್ಣೆತ್ತಿ ನುಲಿನುಲಿದು ಸಾಗುವ ಸರ್ಪವನ್ನು ನೋಡಿದಳಂತೆ. ಮತ್ತೆ ತಿರುಗಿ ಗಾಯದತ್ತ ದೃಷ್ಟಿ ನೆಟ್ಟಂತೆಯೇ ಅವಳ ಪ್ರಾಣ ಪಕ್ಷಿ ಹಾರಿತ್ತಂತೆ. ಕೇಳಿ ಹೌಹಾರಿದಂತಾಗಿತು. ಸುಶೀಲತ್ತೆ ಎಂಥ ಧೈರ್ಯಗಾರ್ತಿ. ಹಾವು ಎಲ್ಲಿ ಸಿಕ್ಕಲಿ ಅಲ್ಲೇ ಸದೆ ಬಡಿಯುತ್ತಿದ್ದವಳು. ಅವಳಿಗೆ ಇಂಥ ಗತಿಯೆ, ಎಂದು ರುಕ್ಮಿಣಿ ವಿವಶಳಾದಳು. "ತಾಯಿ ಕಳಕೊಂಡ ಆ ಸರಸಮ್ಮನ ಗೋಳಂತೂ ಯೇಳೋಅಂಗೇ ಇಲ್ಲ. ಕಣ್ಣಗುಡ್ಡೆ ಕಳಚಿ ಬಿದ್ದೋಗೋ ಮಟ್ಟಿಗೆ ಆ ತಾಯಿ ಸೋಕ ಮಾಡ್ತಿತ್ತು. ನನ್ನ ಇಂದೇ ಬತ್ತೀನಿ ಅಂತಾವ ನ್ಯಾತು ಆಕ್ಕಂಡಿತ್ತು. ಆಗ ವಿಷ್ಣು ಕರಕಂಬರಕ್ಕೆ ಪೊಂಟವ್ನೆ ಅಂಗೆ ಇಂಗೇಂತ ಆ ಮಗಾನ ಸಂಜಾನಿ ಮಾಡಕ್ಕೆ ಆಪ್ಲೋರು ಪಟ್ಟ ಪಾಡು ಜ್ಯಾಡಿ ಬ್ಯಾಡಿ."

ಲಕ್ಕ ಹೀಗೆ ವಿವರಿಸುತ್ತಿದ್ದಾಗ ರುಕ್ಮಿಣಿಯ ಜತೆಗೇ ಕುಳಿತು ಕೇಳಿದ ಅಣ್ಣನೂ ಅತ್ತಿಗೆಯೂ "ಈಗ ನಮ್ಮ ಮನೆಯಲ್ಲಿ ಅಸಂದರ್ಭ. ನೀನು ರುಕ್ಮಿಣೀನ್ನ ಕರಕೊಂಡು ಹೋಗಿ ಬಿಡು. ಜಾನಕೀಗೆ ಹುಷಾರಾದ್ರೆ ವೈಕುಂಠಕ್ಕೆ ಬರ್ತಾರೆ ಅಂತ ಶಾಸ್ತ್ರಿಗಳಿಗೆ ತಿಳಿಸಿಬಿಡು," ಎಂದರೂ ಲಕ್ಕ ಒಪ್ಪಲಿಲ್ಲ. ಕೊನೆಗೂ ಮಾರು ಬೆಳಿಗ್ಗೆ ಏಳು ಗಂಟೆಗೇ ಎಲ್ಲರೂ ಗಾಡಿಯಲ್ಲಿ ರುದ್ರಪಟ್ಟಣದಿಂದ ದರುವಾಸಹಳ್ಳಿಗೆ ಹೊರಟರು.

•

ಸರಸಿಯ ನೆನಪೀಗ ರುಕ್ಮಿಣಿಯನ್ನು ನೂರತಿ ವಿಧದಲ್ಲಿ ಕಾಡುತ್ತದೆ. ವೈಕುಂಠ ಕಳೆದು ಸರಸಿಯನ್ನು ತನ್ನಕ್ಕ ಪಾರ್ವತಿಯು ತನ್ನೊಡನೆ ಧೀಮಸಳ್ಳಿಗೆ ಕರೆದೊಯ್ದು ಇನ್ನೂ ನೆಟ್ಟಗೆ ಮೂರು ವಾರಗಳು ಕಳೆದಿಲ್ಲ. ಆದರೂ ಗಂಡಸಿಲ್ಲದ ಮನೆ ರುಕ್ಮಿಣಿಗೆ ಕಡುಬೇಸರ ತಂದಿತ್ತು. ಮನೆಗೆಲಸದಲ್ಲಿ ಸರಸಿಯನ್ನು ಮರೆಯಲು ಪ್ರಯತ್ನಿಸಿದರೂ ಅದು ಸಾಗದು. ಹೀಗಾಗಿ ಕೇರಿಯ ಕೆಲವು ಮನೆಗಳಿಗೆ ಆಕೆ ಬೇಸರ ನೀಗಲು ಹೋಗುತ್ತಿದ್ದಳು. ಅವುಗಳಲ್ಲಿ ಕೇಶವಯ್ಯನ ಮನೆಯೂ ಒಂದು. ಅಲ್ಲಿ ಪಗಡೆಯಾಡುವುದಕ್ಕೂ ಶುರುಮಚ್ಚಿ ಲಕ್ಷ್ಮಮ್ಮನವರಿಂದ, "ಯಾಕೆ ರುಕ್ಕು, ಈ ಚಾಳಿ ನಿನಗ್ಯಾಕೆ ಅಂಟಿತು! ಕೇಳಿಲ್ಲವೇನೆ ಹಿರಿಯರು ಹೇಳುವ ಮಾತು? ಪಗಡೆ ಆಡಿ ಪಾಂಡವರು ಕೆಟ್ಟರು, ಇಸ್ಪೀಟಾಡಿ ಇದ್ದ ಬಿದ್ದವರೆಲ್ಲ ಕೆಟ್ಟರು ಎಂದು?" ಎಂಬ ಬುದ್ಧಿಮಾತನ್ನೂ ಕೇಳಿದ್ದಳು. ಆದರೂ ರುಕ್ಮಿಣಿ, "ಇರಲಿ ಲಕ್ಷ್ಮಮ್ಮನೋರೆ, ನಾವೇನು ಪಾಂಡವರಂತೆ ಪಣ ಇಟ್ಟು ಆಡ್ತಿಲ್ಲವಲ್ಲ?" ಎಂದು ಸಮಾಧಾನ ಹೇಳಿ ತನ್ನಾಟ ಮುಂದರಿಸಿದ್ದಳು. ಹೀಗೆ ಅವತ್ತೂ ಕೇಶವಯ್ಯನ ಮಡದಿಯ ಸಂಗಡ ಪಗಡ ಆಡುತ್ತಿದ್ದಳು. ಸೀತಾಲಕ್ಷ್ಮಿ ಪಗಡೆಯಾಟದಲ್ಲಿ ನಿಸ್ಸೀಮಳು. ದಂತದ ದಾಳಗಳನ್ನು ಹಿಡಿದು ಅವಳು ಉರುಳಿಸುತ್ತಿದ್ದ ವರಸೆಯಲ್ಲಿ ಅವಳು ಕೇಳಿದ ಲೆತ್ತ ಬೀಳುವುದು, ಆಟ ಸಾಗಿದ್ದಂತೆ ಅವಳದೇ ಮೇಲುಗೈ ಆಗುವುದೂ ಸ್ಪಷ್ಟವಾಗುತ್ತಿತ್ತು. ಆಗ ತನ್ನ ಹೆಂಡತಿ

ದಾಳ ಹಾಕಿದಂತೆ ಪಗಡೆ ಕಾಯಿಗಳನ್ನು ನಡೆಸುವುದರಲ್ಲಿ ರುಕ್ಮಿಣಿಗೆ ಜೊತೆಯಾಗಿದ್ದ ಕೇಶವಯ್ಯ ಮರೆಮೋಸದಿಂದ ರುಕ್ಮಿಣಿಯ ಕಾಯೊಂದನ್ನು ಪಗಡೆ ಚಾರಿಯ ಮಧ್ಯದ ಚೌಕುಳಿಯಲ್ಲಿ ಮಲಗಿಸಿ ಹಣ್ಣುಮಾಡಿಬಿಟ್ಟ—ಆಡುವವರಿಬ್ಬರಿಗೂ ತಿಳಿಯದ ಹಾಗೆ! ಆದರೆ ಆಗ ತಾನೇ ಒಳಗೆ ಪ್ರವೇಶಿಸಿದ ಲಕ್ಷ್ಮಮ್ಮ ಕೇಶವಯ್ಯನ ಕೈಚಳಕ ನೋಡಿ ಸುಮ್ಮನಿರದೆ, "ಇದೇನು ಸೀತಾಲಕ್ಷ್ಮಿ, ಎತ್ತ ಕಡೆ ನೋಡಿಕೊಂಡು ಆಡ್ತಾ ಇದ್ದೀಯ? ಆಟದ ಕಡೆಗೆ ಕೊಂಚ ನಿಗಾ ಇರಲಿ," ಎಂದು ಅನುಮಾನ ಹುಟ್ಟಿಸಿದರು. ಆ ಮಾತುಗಳು ಕಿವಿಗೆ ಬೀಳುತ್ತಲೂ ಪಗಡೆ ಚಾರಿಯನ್ನೇ ಸೂಕ್ಷ್ಮವಾಗಿ ಕಣ್ಣಾಡಿಸಿ ಹಣ್ಣಿನ ಮನೆಯಲ್ಲಿ ಮಲಗಿಸಿದ್ದ ಹಸಿರುಕಾಯನ್ನು ಕಂಡು, "ಮೋಸ ...ಅಯ್ಯೋ ಮೋಸ! ಈ ಹಸಿರು ಕಾಯಿ ಯಾವಾಗ ಹಣ್ಣಾಯ್ತು?" ಎಂದು ಕಿರುಚಿದಳು.

ಕೇಶವಯ್ಯನ ಕೈಚಳಕವನ್ನು ಗಮನಿಸದೇ ಇದ್ದ ರುಕ್ಮಿಣಿಯೂ ಏನು ಹೇಳಲೂ ತೋಚದೇ ತೆಪ್ಪಗೆ ಕುಳಿತಳು. ಕೇಶವಯ್ಯ ಮಾತ್ರ, "ಸುಮ್ಮಗೇ ಆಡೆ, ಅದನ್ಯಾರು ಈಗ ಮುಗಿಸಕ್ಕೆ ಬಂದಿದ್ದರು?" ಎಂದುಬಿಟ್ಟ. ಸೀತಾಲಕ್ಷ್ಮಿ ಸಿಟ್ಟಿನಿಂದ, "ಇಂಥ ಮೋಸದ ಆಟ ಆಡಿ ಗೆಲ್ಲದಿದ್ದರೂ ಆಗುತ್ತೆ," ಎಂದು ಪಗಡೆ ಹಾಸನ್ನು ಮಗುಚಿ ಒಳನಡೆದಳು. ಕೇಶವಯ್ಯ ರುಕ್ಮಿಣಿಯ ಬೆನ್ನು ಸವರುತ್ತ "ನೀನೇನೂ ಮನಸ್ಸಿಗೆ ಹಚ್ಚಿಕೋಬ್ಯಾಡ ಅವಳ ಸ್ವಭಾವವೇ ಹಾಗೆ. ನಾಳೇನೊ ಬಾ. ಅಷ್ಟರಲ್ಲಿ ಅವಳನ್ನು ರಿಪೇರಿ ಮಾಡಿರ್ತೀನಿ," ಎಂದು ನಕ್ಕ. ರುಕ್ಮಿಣಿಗೆ ಹೇಸಿಗೆಯೆನ್ನಿಸಿ ಕೇಶವಯ್ಯ, "ಇರು, ಸಂಬಾರದ ಕಾಫಿ ಮಾಡಿಸ್ತೀನಿ ಕುಡಿದು ಹೋಗುವೆಯಂತೆ," ಎನ್ನುತ್ತಿದ್ದರೂ ಗಮನಿಸದೇ ಹೊರಗೆ ನಡೆದಳು. ಅವಳು ಹಾಗೆ ನಡೆದು ಗಮಕಿ ಭೀಮಯ್ಯನವರ ಮನೆ ಮುಂದೆ ಸಾಗುತ್ತಿದ್ದಂತೇ ಹಿಂದಿನಿಂದ ಲಕ್ಷ್ಮಮ್ಮನ "ರುಕ್ಕು ರುಕ್ಕೂ" ಎಂಬ ಕರೆ ಕೇಳಿ ಅರೆಮನಸ್ಸಿನಿಂದ ನಿಂತಳು. ಲಕ್ಷ್ಮಮ್ಮ ಏದುತ್ತ ಬಂದವಳು, "ರುಕ್ಕು, ನಮ್ಮ ಮನೇಲಿ ಅವಲಕ್ಕಿ ಮುಗಿದಿತ್ತು. ಸೀತಾ ಲಕ್ಷ್ಮೀನ ಕೇಳೋಣವೆಂದು ಬಂದೆ. ಆದರೆ ಅವಳೀಗ ಮುನಿಸಿಕೊಂಡಿದ್ದಾಳಲ್ಲ? ಅವಳೇನೂ ಕೇಳಿದರೆ ಯಾವತ್ತೂ ಇಲ್ಲ ಅನ್ನಲ್ಲ. ಅಲ್ಲದೇ ನಾನೂ ಯಾರನ್ನೂ ಬಿಟ್ಟಿ ಕೊಡಿ ಎಂದು ಕೇಳಲ್ಲವಲ್ಲ? ಕಡ ತಗೊಂಡು ವ್ಯಾದೆಗೆ ಸರಿಯಾಗಿ ಕೊಟ್ಟು ಬಿಡ್ತೀನಿ," ಎಂದಾಗ 'ಮಹರಾಯತಿ ನನ್ನಿಂದ ಸಾಲವಾಗಿ ಪಡೆದ ಅದೆಷ್ಟು ಪದಾರ್ಥಗಳನ್ನು ವಾಪಸ್ ಕೊಟ್ಟಿದೀರಿ?' ಎನ್ನಬೇಕು ಅನ್ನಿಸಿದರೂ ಮೌನ ತಾಳಿದಳು. "ರುಕ್ಕು, ನಿನ್ನಲ್ಲಿದ್ದರೆ ಒಂದು ಅಚ್ಚೇರು ಅವಲಕ್ಕಿ ಕೊಟ್ಟಿರು. ನಾಳೆ ನಾಡಿದ್ದರಲ್ಲಿ ಕೊಡ್ತೀನಿ," ಎಂದು ಲಕ್ಷ್ಮಮ್ಮ ಕೇಳಿಯೇ ಬಿಟ್ಟಾಗ ಇಲ್ಲವೆನ್ನಲಾಗದೆ, "ಮನೆಗೆ ಬನ್ನಿ" ಎಂದು ರುಕ್ಮಿಣಿ ಮುಂದೆ ನಡೆದಳು.

ಅವಳು ಕೊಟ್ಟ ಪಾವು ಅವಲಕ್ಕಿ ತೆಗೆದುಕೊಳ್ಳುತ್ತ ಹತ್ತಿರ ಬಂದ ಲಕ್ಷ್ಮಮ್ಮ ಏನೋ ಉಪಕಾರ ಮಾಡುವವಳಂತೆ, "ರುಕ್ಕು, ಆ ಕೇಶವಯ್ಯನ ಮನೆಗೆ ವಿಶೇಷವಾಗಿ ಹೋಗಬೇಡಮ್ಮ. ನೆರೆಮನೆ ಹೆಂಗಸ್ರಿಗೆ ನೆಗೆದು ಮುತ್ತು ಕೊಡುವ ಜಾತಿ. ನಾನು ಹೀಗೆ ಹೇಳಿದೆ ಅಂತ ಬೇಸರ ಪಟ್ಕೋಬೇಡಮ್ಮ" ಎನ್ನುತ್ತ ಬೀದಿಗಿಳಿದಳು. ಐದಾರು ದಿನಗಳ ಹಿಂದೆ ಇದೇ ಲಕ್ಷ್ಮಮ್ಮ ಬೆಲ್ಲದಚ್ಚು ಕೇಳಲು ಬಂದಾಗ ತಾನು ಹಾಲು ಕುಡಿಯುತ್ತಿದ್ದುದನ್ನು ನೋಡಿ, "ಹಾಲು ಕುಡೀಬ ಬೇಡವೆ ರುಕ್ಕು, ಹಾದರ ಮಾಡೋ ಹಾಗಾಗುತ್ತೆ," ಅಂದದ್ದೂ ಈಗ ರುಕ್ಮಿಣಿಗೆ ನೆನಪು ಬಂತು. ಲಕ್ಷ್ಮಮ್ಮ ಮುಸುಕು ಹಾಕಿದ ಮಾತುಗಳಲ್ಲಿ ರುಕ್ಮಿಣಿಯನ್ನು ಸೂಕ್ಷ್ಮವಾಗಿ ಚುಚ್ಚುತ್ತ ಇದ್ದಳು. ಮೊದಮೊದಲು ಲಕ್ಷ್ಮಮ್ಮನ ಮಾತುಗಳ ಹಿಂಬದಿಗೆ ಅಡಗಿದ್ದ ಮರ್ಮ ರುಕ್ಮಿಣಿಗೆ ಅರಿವಾಗಲಿಲ್ಲ. ಆದರೆ ಅವುಗಳನ್ನೇ ಮೆಲುಕು ಹಾಕಿದಂತೆ ಆ ಮಸೆತುಗಳ ಹಿಂದೆ ಯಾವುದೋ ಗೂಢಾರ್ಥ ಅಡಗಿದೆ ಎಂಬ ಶಂಕೆ ತೋರಿತು. ಆ ಶಂಕೆಯ ನಿವಾರಣೆಗೆ ಬಹುಕಾಲ ಬೇಕಾಗಲಿಲ್ಲ. ಊರಿನೊಳಗೆ ಅಲ್ಲಲ್ಲಿ ಎದ್ದು ಬಿದ್ದು ಹರಿದಾಡಿದ ಸುದ್ದಿ ಅವಳ ಕಿವಿಯನ್ನು ಮುಟ್ಟದಿರಲಿಲ್ಲ. ಗಂಡಸು ಹೆಂಗಸು ಇಬ್ಬರೆ ಒಂದೇ ಜಾಗದಲ್ಲಿ ಹಗಲೂ ರಾತ್ರಿ ವಾಸಿಸಬಹುದೆ?

ಸಾಕ್ಷಾತ್ ಬ್ರಹ್ಮದೇವನೇ ಮಗಳಲ್ಲಿ ಮೋಹಗೊಳ್ಳಲಿಲ್ಲವೆ? ಎಂಬ ತರ್ಕವಾಗಿ ಆರಂಭವಾದದ್ದು ಕೃಷ್ಣಶಾಸ್ತ್ರಿಗಳು, ಪ್ರಾಯದ ಹೆಣ್ಣು ರುಕ್ಮಿಣಿ ಇಬ್ಬರೇ ಒಟ್ಟಿಗಿರುವಾಗ ಎಲ್ಲವೂ ಮುಗಿದೇ ಹೋಗಿರಬೇಕು ಎನ್ನುವ ಹಂತವನ್ನೂ ಮುಟ್ಟಿತ್ತು. ಆ ರಾತ್ರಿ ಮಲಗಿದಾಗಲೂ ಇದೇ ಚಿಂತೆ ತೀವ್ರವಾಗಿ ಒಳಗೆ ಆಳದಲ್ಲಿ ಕುಟ್ಟುವ ಕೊಟ್ಟಣವಾಗಿ ರುಕ್ಮಿಣಿಯನ್ನು ಕಾಡಿತು. ಎಷ್ಟು ಪ್ರಯತ್ನಿಸಿದರೂ ತನಗೆ ನಿದ್ರೆ ಬರುತ್ತಿಲ್ಲ. ಮಧ್ಯಾಹ್ನ ಲಕ್ಷ್ಮಮ್ಮ ಬಂದು ಇಲ್ಲದ್ದನ್ನು ತನ್ನ ಮನಸ್ಸಿನೊಳಗೆ ಬಿತ್ತಿ ಹೋದುದರಿಂದಲೆ ತನಗೆ ಈ ಚಿಂತೆ! 'ಅನಿಷ್ಟದವಳು. ಎತ್ತಲಾದರೂ ಹಾಳಾಗಿ ಹೋಗಬಾರದೆ?' ಬಹಳ ಸಮಯ ಒದ್ದಾಡಿ ಕಡೆಗೂ ನಿದ್ರೆಯ ಸೆಳೆತ ಅವಳನ್ನು ಆಕ್ರಮಿಸಬೇಕು. ಅಷ್ಟರಲ್ಲಿ ಅವಳು ಕೇಳಿದ್ದೇನು? ಹೆಜ್ಜೆಯ ಸಪ್ಪಳ! ಯಾರೋ ನಡೆದು ಬರುತ್ತಿರುವಂತೆ! ರುಕ್ಮಿಣಿಯ ಎದೆ ಬಡಿಯಲುಪಕ್ರಮಿಸಿತು. ಯಾರಿರಬಹುದು? ಅಂಗಳದಿಂದ ತಾನು ಮಲಗಿರುವ ಕೋಣೆಯತ್ತಲೇ ಬರುತ್ತಿರುವಂತಿದೆ. ಮಾವಯ್ಯ ತಾನು ಹಾಲಿಗೆ ಹೆಪ್ಪು ಹಾಕಿ ಬರುವಾಗಲೆ ಹಜಾರದ ಕೊನೆಗೆ ಮಲಗಿ ನಿದ್ರಿಸಿದ್ದರು. ಬೀದಿಯ ಬಾಗಿಲನ್ನು ತಾನೇ ಹಾಕಿ ಮತ್ತೊಮ್ಮೆ ಹಾಕಿರುವದನ್ನು ಖಾತ್ರಿ ಪಡಿಸಿಕೊಂಡೇ ಮಲಗಿದ್ದಳಲ್ಲ? ಆದ್ದರಿಂದ ಕಳ್ಳಕಾಕರು ಯಾರೂ ಬರುವ ಸಾಧ್ಯತೆಯೇ ಇಲ್ಲ. ಹಾಗಾದರೆ ಇದು ಯಾರಿರಬಹುದು? ಗತಿಸಿದ ತನ್ನ ಪತಿಯ ಪ್ರೇತವಾಗಿರಬಹುದೆ? ಪತಿಯ ಸ್ಮರಣೆ ಬಂದೊಡನೆ ಅವನ ರೂಪು ಕಣ್ಣಮುಂದೆ ತೇಲಿದಂತಾಗಿ ಉತ್ಸುಕಗೊಂಡಳು. ಮರುಘಳಿಗೆ ಈಗ ಅವರ ಅಸ್ಥಿಪಂಜರ ಮಾತ್ರ ಕಾಣಬಹುದೆನ್ನಿಸಿ, 'ಅಯ್ಯಯ್ಯೋ ಈ ಸ್ಥಿತಿಯಲ್ಲಿ ನಾನು ಅವರನ್ನು ಹೇಗೆ ನೋಡಲಿ!' ಎಂದು ತವಕಗೊಂಡಳು. ಅವಳ ಮಾತಿಗೆ ಓಗೊಟ್ಟಂತೆ ಕಾಲಸಪ್ಪಳ ಹಠಾತ್ತನೆ ನಿಂತಿತು. ಕುತೂಹಲ ಕೆರಳಿ ಉಸಿರುಗಟ್ಟಿ ಕುಳಿತಳು. ಈ ಅನುಭವ ಅವಳಿಗೆ ತೀರಾ ಹೊಸದು. ಹೀಗೆ ಕುಳಿತು ಕಡೆಗೂ ಕಣ್ಣು ಸೋತಾಗ ಮತ್ತೆ

ಹೆಜ್ಜೆಯ ಸಪ್ಪಳ! ಮುಂದೆ ಕೆಲ ನಿಮಿಷಗಳಲ್ಲಿ ಸಪ್ಪಳ ದೂರವಾದಂತೆ ಅನುಭವವಾಗಿ ಬೆವರಲ್ಲಿ ತೊಯ್ದಳು. ಇದು ಭೂತವೆ? ಇಲ್ಲ ತನ್ನ ಉದ್ವಿಗ್ನಗೊಂಡ ಮನಃಸ್ಥಿತಿಯ ಕಳವಳವೇ? ಸಮಸ್ಯೆಯ ಹೊರೆ ಕ್ರಮೇಣ ಅವಳ ಕಣ್ಣುಗಳನ್ನು ನಿದ್ರೆಯಲ್ಲಿ ತೇಲಿಸಿತು. ಅವಳ ಮೈಮೇಲೆ ಯಾವುದೋ ಭಾರ ಬಿದ್ದಂತಾದಾಗಲೇ ಅವಳಿಗೆ ಎಚ್ಚರ. ಕಣ್ಣು ತೆರೆದಳು. ಅವಳ ಮುಖದೆದುರು ಮಾವಯ್ಯನ ಅಗಲವಾದ ಮುಖ! ಕಿರುಚಲು ಯತ್ನಿಸಿದಳು. ಆಗ ಮಾವಯ್ಯ ತಮ್ಮ ದಪ್ಪಗಿನ ತುಟಿಗಳಿಂದ ಅವಳ ಬಾಯಿ ಮುಚ್ಚಿದರು. ತನ್ನ ಹೊಯ್ದಾಟ ಮಾವಯ್ಯನ ಧಡೂತಿ ಶರೀರವನ್ನು ಮೈಮೇಲಿಂದ ತಳ್ಳಿಹಾಕುವ ತನ್ನ ದುರ್ಬಲ ಯತ್ನ ಯಶಸ್ವಿಯಾಗಲಿಲ್ಲ. ಮನಸ್ಸು ಎಲ್ಲೆಲ್ಲೋ ತೇಲಿತು.

ಕಣ್ಣು ತೆರೆದಾಗ ಮಾವಯ್ಯ ಎದ್ದು ಕಚ್ಚೆಯನ್ನು ಸರಿಪಡಿಸಿಕೊಳ್ಳುತ್ತ ಕೋಣೆಯಿಂದ ಸರಸರನೇ ಹೊರಟುಹೋದರು. ಯಾಕೋ ಆ ಘಳಿಗೆಯಲ್ಲಿ ತನ್ನ ಗಂಡ ಹೇಳಿದ್ದ ಅಹಲ್ಯೆಯ ಕಥೆ ನೆನಪಾಯ್ತು. ಅಪರಾಧಿಯಂತೆ ಮಾವಯ್ಯ ತಲೆತಗ್ಗಿಸಿಕೊಂಡು ಹೋದ ರೀತಿ ಅವಳಿಗೆ ಕೃತ್ರಿಮದಿಂದ ಅಹಲ್ಯೆಯನ್ನು ಭೋಗಿಸಿದ ಇಂದ್ರನ ಚೋರವರ್ತನೆಯಂತೆ ಕಂಡಿತು. ಆ ಭಾವನೆ ಬಂದಾಗ ತಬ್ಬಿಬ್ಬಾಗಿ ತಾನು ಏನೇ ಆದರೂ ಅವಕಾಶ ಕೊಡಬಾರದಾಗಿತ್ತು ಅಂದುಕೊಂಡಳು. ಆದರೆ ಭಕ್ತಿ ಗೌರವಗಳು ಇರುವ ಕಡೆ ಪ್ರತಿಭಟಿಸುವುದು ಅಷ್ಟು ಸುಲಭವೇ? ಯಾವತ್ತೂ ಮಹಾ ಸಂಯಮಿಯಾಗಿದ್ದ ಮಾವಯ್ಯ ಈ ಹೊತ್ತು ಯಾಕೆ ಸಡಿಲಗೊಳ್ಳಬೇಕಿತ್ತು? ಈ ತನಕ ಗತಿಸಿದ ಗಂಡನ ಬಗ್ಗೆ ತಾನಿರಿಸಿಕೊಂಡಿದ್ದ ಪ್ರೇಮ ಏನಾಯಿತು? ತಪ್ಪು ಯಾರದೇ ಆದರೂ ತನಗೆ ಮಾತ್ರ ಈ ಯಾತನೆಯಿಂದ, ಈ ಪಾಪಭಾವದಿಂದ ಮುಕ್ತಿಯಿಲ್ಲ. ಈ ಒಳಗುದಿಯಲ್ಲಿ ರಾತ್ರಿ ಕಳೆದು ಬೆಳಗಾಗುತ್ತಿರುವಂತೆ ನೆರೆಮನೆಯ ವೆಂಕಣ್ಣ ಜೋಯಿಸರು ಬಾಲಕರಿಗೆ ಹೇಳಿಕೊಡುತ್ತಿದ್ದ ವೇದಪಾಠ ಗಾಳಿಯಲ್ಲಿ ತೇಲಿ ಬರುತ್ತಿತ್ತು. ಯಜುರ್ವೇದದ ಮಂತ್ರ. ಬಾಲಕರ ಕಂಠ ಎರಡಾಗಿ ಒಂದು ಗುಂಪಾದ ನಂತರ ಇನ್ನೊಂದು ಗುಂಪು ಮಂತ್ರವನ್ನು ಬಿಡಿಬಿಡಿಯಾಗಿ ಘೋಷಿಸುತ್ತಿತ್ತು. "ಪ್ರತಿ ಪೂರುಷಮೇಕ ಕಪಾಲಾನ್ನಿರ್ವಪತಿ" ಮೊದಲನೇ ಗುಂಪು ಎರಡು ಬಾರಿ ಘೋಷಿಸಿದಾಗ ಎರಡನೇ ಗುಂಪು ಏರಿದ ಸ್ವರದಿಂದ, "ಜಾತಾ ಏವ ಪ್ರಜಾರುದ್ರಾನ್ನಿರವ ದಯತೇ" ಎಂದು ಎರಡು ಬಾರಿ ಘೋಷಿಸಿತು. ಪುನಃ ಮೊದಲ ಗುಂಪು, "ಏಕಮತಿರಿಕ್ತಂ" ಎಂದರೆ ಎರಡನೇ ಗುಂಪು "ಜನಿಷ್ಯಮಾಣಾ ಏವ ಪ್ರಜಾರುದ್ರಾನ್ನಿರವ ದಯತೇ" ಎಂದು ಘೋಷಿಸಿತು. ವೇದ ಮಂತ್ರವು ಹೀಗೆ ಸುಶ್ರಾವ್ಯವಾಗಿ ಬಾಲಕರ ಪಂಚಾರಿಯ ಅಭ್ಯಾಸರೂಪದಲ್ಲಿ ತೇಲಿ ಬರುವಾಗ ರುಕ್ಮಿಣಿಯು, 'ಈ ವೇದ ಮಂತ್ರಗಳನ್ನು ತನ್ನಂತಹ ಸ್ತ್ರೀಯರಿಗೆ ಯಾಕೆ ಕಲಿಸದೇ ಹೋದರು?' ಎಂದುಕೊಂಡಳು.

ಆ ದಿನ ಹಗಲು ಕಳೆದು ಇರುಳು ಕವಿಯಿತು. ಹಾಸಿಗೆಯ ಮೇಲೆ ಬಿದ್ದುಕೊಂಡ ರುಕ್ಮಿಣಿಗೆ ಏನೋ ಆಸರ ಬೇಸರ. ಒಂದು ವರ್ಷಕ್ಕೂ ಮಿಕ್ಕಿ ಹಾಸಿಗೆ ಸುಖದಿಂದ ವಂಚಿತಳಾಗಿದ್ದ ಅವಳಿಗೆ ಮತ್ತೆ ಪುರುಷಪ್ರವೇಶದಿಂದ ನರನಾಡಿಗಳಲ್ಲೆಲ್ಲ ವಿದ್ಯುತ್ ಸಂಚಾರವಾದಂತಾಯ್ತು. ಗಂಡನೊಡನೆ ಅನುಭವಿಸಿದ್ದ ರತಿಸುಖವನ್ನು ಎಂದೋ ಮರೆತು ಸಂಯಮಶೀಲೆಯಾಗಿದ್ದವಳನ್ನು ಹಿಂದಿನ ರಾತ್ರಿಯ ಅನುಭವ ಕೆದಕಿ ಬೆದಕಿ ಪುನಃ ಪ್ರಚೋದಿಸಿದಂತಿತ್ತು. ವಿಪರೀತ ಸೆಖೆಯಾಗಿ ಹಾಸಿಗೆ ಬಿಟ್ಟೆದ್ದು ಹೊರಗೆ ಬಂದಳು. ಶಾಸ್ತ್ರಿಗಳು ಹಜಾರದ ಮೂಲೆಯಲ್ಲಿ ಮಲಗಿ ನಿದ್ರಿಸಿದ್ದರು. ಪುನಃ ಒಳಗೆ ಬಂದಳು. ಬಾಗಿಲು ಮುಚ್ಚಿ ಮಲಗಿ ಹೊರಳಿ ಸಾಕಾದಾಗ ರೆಪ್ಪೆಗಳು ತಾವಾಗಿ ಮುಚ್ಚಿದವು. ಮನಸ್ಸು ಪೂರ್ಣ ನಿದ್ರೆಯೂ ಅಲ್ಲದ ಎಚ್ಚರವೂ ಅಲ್ಲದ ಸ್ಥಿತಿಯಲ್ಲಿ ತೇಲಿತು.

ಒಂದು ಹಗಲು ಗಂಡನೊಡನೆ ತೋಟಕ್ಕೆ ಹೋಗಿದ್ದಳು. ವಿವಾಹವಾದ ಹೊಸ ದಿನಗಳು. ಇಬ್ಬರ ಹೆಜ್ಜೆಯಲ್ಲೂ ಸಂಭ್ರಮ ಇಟ್ಟಾಡುತ್ತಿತ್ತು. ಸೀಬೆಹಣ್ಣು ತಿಂದು, ಎಳನೀರು ಕುಡಿ

ವರು. "ಬೆಟ್ಟದ ಕಡೆ ಸುತ್ತಾಡಿ ಬರೋಣವೆ?" ವಿಶ್ವೇಶ್ವರ ಕೇಳಿದ್ದೆ ತಡ ರುಕ್ಮಿಣಿ ಉತ್ಸಾಹದಿಂದ ಒಪ್ಪಿದ್ದಳು. ಊರಿನ ಹೆಗಡೆ ಪಶ್ಚಿಮಕ್ಕಿದ್ದ ಕುಂತಿ ಬೆಟ್ಟವನ್ನು ಇಬ್ಬರೂ ಚಿಮ್ಮಿ ಚಿಮ್ಮಿ ಏರಿದ್ದರು. ಬೆಟ್ಟದ ನೆತ್ತಿಯ ವಿಸ್ತಾರ ಪ್ರದೇಶದ ಉತ್ತರ ಭಾಗದಲ್ಲಿ ಒಂದು ಕೋಟೆ. ಅದು ದೃಷ್ಟಿಗೆ ಬಿದ್ದೊಡನೆ, "ಇದೇ ಏನ್ರಿ, ಚಿತ್ರಮೂಲನ ಕೋಟೆ?" ಎಂದು ಕೇಳಿದ್ದಳು ರುಕ್ಮಿಣಿ "ಹೌದು, ಇದೇ ದ್ರೋಣಾಚಾರ್ಯರು ಕುರುಕ್ಷೇತ್ರ ಯುದ್ಧಕ್ಕೂ ಮುನ್ನ ದಕ್ಷಿಣಪಥಕ್ಕೆ ಬಂದಿದ್ದಾಗ ನಿರ್ಮಿಸಿದ ಚಿತ್ರಮೂಲನ ಕೋಟೆ. ಮುಂದೆ ಕುರುಕ್ಷೇತ್ರದ ಮಹಾಸಮರದಲ್ಲಿ ದುರ್ಯೋಧನನ ಸೈನ್ಯಕ್ಕೆ ಸೇನಾನಿಯಾಗುವ ಸಂಭವ ಬಂದಾಗ ತಾವು ರಚಿಸಬೇಕೆಂದಿದ್ದ ಚಕ್ರವ್ಯೂಹದ ಒಂದು ಪ್ರಯೋಗ. ರಾಜಧಾನಿ ಹಸ್ತಿನಾಪುರದಿಂದ ಸಹಸ್ರಾವಧಿ ಮೈಲಿ ದೂರದಲ್ಲಿರುವ ಈ ದುರ್ಗಮ ತಾಣದಲ್ಲಿ ಈ ಕೋಟೆಯನ್ನು ರಚಿಸಿ ಪರೀಕ್ಷೆ ನಡೆಸಿದರೆಂಬುದು ಜನಜನಿತವಾದ ಮಾತು." ವಿಶ್ವೇಶ್ವರ ವಿವರಿಸಿದಂತೆ ಜೀರ್ಣವಾಗಿದ್ದರೂ ಇನ್ನೂ ಬಲಶಾಲಿಯಾಗಿಯೇ ಕಾಣುವ ಕೋಟೆಯನ್ನು ನೋಡಿ ರುಕ್ಮಿಣಿಗೆ ಕುತೂಹಲವುಂಟಾಯಿತು.

"ಕೋಟೆ ಒಳಗೆ ಹೋಗಿ ನೋಡೋಣವಾ?" ಆಸೆಯಿಂದ ಕೇಳಿದಳು. "ಇಲ್ಲಿಯ ತನಕ ಇದರೊಳಗೆ ಯಾರೂ ಪ್ರವೇಶಿಸಿದ್ದೇ ಇಲ್ಲ. ಇದರೊಳಗೆ ಒಮ್ಮೆ ಹೋದವರು ಹಿಂದಿರುಗಿ ಬರಲು ದಾರಿ ಕಾಣದೇ ಸಾಯುತ್ತಾರೆ ಎಂದೇ ನಂಬಿಕೆ. ಕೋಟೆಯೊಳಗೆ ಕೋಟೆ ಇದೆ ಎಂದು ಪ್ರತೀತಿ. ಯಾವಾಗಲೋ ಹಿಂದೆ ಒಂದೆರಡು ದನ ಕಾಯುವ ಹುಡುಗರು ಕುತೂಹಲದಿಂದ ಒಳಗೆ ಹೊಕ್ಕವರು ಹಿಂದಿರುಗಲೇ ಇಲ್ಲವಂತೆ. ಆದ್ದರಿಂದ," ಎಂದು ವಿಶ್ವೇಶ್ವರ ಹೇಳುತ್ತಿರುವಾಗಲೇ ರುಕ್ಮಿಣಿ ಮುಖ ಸಣ್ಣದಾಗಿಸಿ, "ಆದ್ದರಿಂದ ಕೋಟೆ ಒಳಗೆ ನಾವು ಹೋಗಿ ನೋಡುವುದು ಬೇಡ ಎಂದಲ್ಲವೆ ನೀವೆನ್ನುವುದು?" ಎಂದಳು. "ಹಾಗಲ್ಲವೇ ರುಕ್ಕು, ಒಳಗೆ ಹೋಗಿ ಹಿಂದಕ್ಕೆ ಬರಲಾಗದೇ ಹೋದರೆ," ಎಂದರೆ, "ಅದಕ್ಕೇನಂತೆ. ಆಗ ಇಬ್ಬರೂ ಒಟ್ಟಿಗೆ ಸಾಯೋದಪ್ಪ", ಎಂದಳು ರುಕ್ಮಿಣಿ. "ನನ್ನ ಮನದನ್ನೆ ಹಟ ಮಾಡೋವಾಗ ನನ್ನ ಮಾತೆಲ್ಲಿ ನಡೆಯುತ್ತೆ? ಆದರೂ ಅಲ್ಲಿನ ಅಪಾಯದ ಕುರಿತು ಹೇಳಿದ್ದೇನೆ. ಹೋಗಲೇಬೇಕೆ?" ರುಕ್ಮಿಣಿ ಅಷ್ಟೇನೂ ಯೋಚಿಸದೇ ಹೌದೆಂದಳು. ಸರಿಯೆಂದ ವಿಶ್ವೇಶ್ವರ, "ಕಲ್ಲು ಮುಳ್ಳಿನ ಹಾದಿ. ಎಚ್ಚರದಿಂದ ಬಾ", ಎನ್ನುತ್ತ ಒಳಗೆ ಪ್ರವೇಶಿಸಿದ. ಅವನ ಹಿಂದೇ ಒಳಗೆ ಬಂದ ರುಕ್ಮಿಣಿ ಅವಾಕ್ಕಾದಳು. ಇಷ್ಟು ಎತ್ತರದ ಭವ್ಯವಾದ ಕೋಟೆಯನ್ನು ತನ್ನ ಜೀವಮಾನದಲ್ಲಿ ಕಂಡಿದ್ದಿಲ್ಲ. ಆ ಗೋಡೆಯೆತ್ತರಕ್ಕೂ ಇರುವ ದೈತ್ಯಾಕಾರದ ಮರಗಳು. ಈ ಮರಗಳು ಅಲ್ಲಲ್ಲಿ ಸೈನಿಕರನ್ನು ನಿಲ್ಲಿಸಿ ಅಭೇದ್ಯವಾದ ವ್ಯೂಹವನ್ನು ರಚಿಸಿದಂತೆ ನಿಂತಿದ್ದವು. ಕೆಲವೇ ಮರಗಳನ್ನು ದಾಟಿ ಹೋದ ಬಳಿಕ ತಾವೆಲ್ಲಿದ್ದೇವೆ ಎನ್ನುವುದೇ ಅರ್ಥವಾಗುತ್ತಿರಲಿಲ್ಲ. ಆದರೆ ಇಲ್ಲಿ ಮರಗಳಿರಲಿಲ್ಲ.

ಕೇವಲ ಹೆಬ್ಬಂಡೆಗಳ ಸಾಲು. ಅವುಗಳ ಸಂದಿಯಲ್ಲಿ ತೂರಿ ನಡೆದರೆ ಮತ್ತೆ ದೈತ್ಯ ಮರಗಳ ಜಾತ್ರೆ. ಇಲ್ಲಂತೂ ದಟ್ಟೈಸಿದ್ದ ವೃಕ್ಷರಾಜಿಯ ರೆಂಬೆಗಳು ಒಂದಕ್ಕೊಂದು ಹೆಣೆದಂತಿದ್ದು ಕತ್ತಲು ತಾನೇ ತಾನಾಗಿತ್ತು. ಮರಗಳ ಮೇಲಿದ್ದ ರಾಕ್ಷಸ ಬಾವಲಿಗಳು ಪಟ ಪಟ ಶಬ್ದ ಮಾಡುತ್ತ ಅವರಿಬ್ಬರ ಮುಖ ಮೈಗಳಿಗೆ ಇನ್ನೇನು ಬಡಿದು ಬಿಡುವುವೋ ಎನ್ನುವಂತೆ ಸುತ್ತಲೂ ಹಾರಾಡಿದಾಗ ಭೀತಿಗೊಂಡ ರುಕ್ಮಿಣಿಯು ವಿಶ್ವೇಶ್ವರನನ್ನು ಬಲವಾಗಿ ಅಪ್ಪಿದ್ದಳು. ಆ ಕೋಟೆ ಒಳಗಿನಿಂದ ಎಂಥೆಂಥದ್ದೋ ವಿಕಾರ ಸ್ವರಗಳು ಕೇಳಲಾರಂಭಿಸಿದಾಗ ಭೀತಿಯಿಂದ ನಡುಗುತ್ತ, "ಇನ್ನೊಂದು ಕ್ಷಣ ಇಲ್ಲಿರೋದು ಬೇಡ. ನಡೆಯಿರಿ, ಆದಷ್ಟು ಬೇಗ ಹೋಗೋಣ", ಎನ್ನುತ್ತ ಗಂಡನನ್ನು ಪೀಡಿಸಿದಳು. ವಿಶ್ವೇಶ್ವರನಿಗೂ ಅದೇ ಚಿಂತೆಯಾಗಿತ್ತು. ಅವಳ ಕೈ ಹಿಡಿದು ಮಸಕು ಕತ್ತಲೆಯಲ್ಲಿ ದಾರಿ ಹುಡುಕುತ್ತ ಹೊರಟಂತೆ ಒಂದು ಮರಕ್ಕೆ ಢಿಕ್ಕಿ ಹೊಡೆದು ರಕ್ತ ಚಿಮ್ಮಿತು. ಅನಂತರ ಅವರಿಬ್ಬರೂ ಮರದಿಂದ ಮರಕ್ಕೆ ಢಿಕ್ಕಿ ಹೊಡೆಯುತ್ತ, ಸಾಗಿ ತಾವು ಬಂದ ದ್ವಾರವನ್ನು ಹುಡುಕಾಡಿದರು.

ಎಷ್ಟು ಕಾಲ ಅರಸಿದರೂ ಆ ಕೋಟೆ ಬಾಗಿಲು ಕಣ್ಣಿಗೆ ಬೀಳದೇ ನಿಗೂಢವಾಗಿತ್ತು. ವಿಚಿತ್ರವೆಂದರೆ ಎಲ್ಲ ಸ್ಥಳಗಳೂ ಒಂದೇ ರೀತಿ ಕಾಣುತ್ತಿದ್ದವು. ಅವರೆ ಆ ಕಠೋರ ಸನ್ನಿವೇಶದಲ್ಲಿ ಒಂದೇ ಜಾಗದಲ್ಲಿ ನಿಲ್ಲುವುದೂ ಅಪಾಯಕಾರಿಯೆಂದು ಅವರು ಗ್ರಹಿಸಿದರು. ಕೂಡಲೇ ಎದ್ದು ಬಿದ್ದು, ಮುಗ್ಗರಿಸುತ್ತ ಮರದಿಂದ ಮರಕ್ಕೆ ಢಿಕ್ಕಿ ಹೊಡೆಯುತ್ತ ಸಾಗಿದರು. ಆ ಮಾಸಕದಲ್ಲಿ ದಾರಿಯೇ ತಿಳಿಯುತ್ತಿರಲಿಲ್ಲ. ಆ ಪರಮಸಂಕಟದ ವೇಳೆ, ಆರಂಭದಲ್ಲಿ ದೂರದಿಂದ ಕೇಳುತ್ತಿದ್ದ ವಿಕಾರ ಸ್ವರಗಳು ಬರ ಬರುತ್ತ ರಾಮಪ್ಪಳಿಯಾಗಿ ಹತ್ತಿರವಾದಂತೆ ಭಾಸವಾಗತೊಡಗಿತು. ಎತ್ತ ಕಡೆಗೆ ತಿರುಗಿದರೂ ಕರ್ಕಶ ಸ್ವರಗಳು, ವಿಕಾರ ಚೀರಾಟ, ಕುದುರೆಗಳ ಖುರಪುಟ ಧ್ವನಿ, ಆನೆಗಳ ಘೀಳಾಟ, ಕತ್ತಿಗಳ ಖಣಿಲ್ ಖಣಿಲ್ ಸದ್ದು ಕೇಳಿಸಿ, ಯಾವ ಕಡೆಗೆ ತಿರುಗಿದರೂ ಭೀತಿ ಹುಟ್ಟಿಸುವ ಇಂಥ ಸದ್ದುಗಳೇ ಸಮೀಪವಾಗುತ್ತಿರುವಂತೆನಿಸಿ ಇನ್ನು ಪ್ರಯತ್ನಿಸುವುದು ವ್ಯರ್ಥವೆಂದು ತಟಸ್ಥರಾಗಿ ನಿಂತರು. ಹಠಾತ್ತನೆ ಯಾರೋ ತನ್ನ ಗಂಡನನ್ನು ಎಳೆದೊಯ್ಯುತ್ತಿರುವಂತೆ ಭಾಸವಾಯಿತು. ರುಕ್ಮಿಣಿ ತತ್ತರಿಸಿದಳು. ಅವನನ್ನೆಳೆದೊಯ್ದ ಜಾಡನ್ನು ಕುರುಡಾಗಿ ಅನುಸರಿಸುತ್ತ ನಡೆದಳು.

ಮಂಚಕ್ಕೆ ಢಿಕ್ಕಿ ಹೊಡೆದು ಬಿದ್ದಳು. ಮತ್ತೆ ಎದ್ದಳು. ಆ ಮರಗಳ ಗುಂಪಿನಲ್ಲಿ ಸಾಗಿದಂತೆ ಥಟ್ಟನೆ ಒಂದು ಕೊಚ್ಚೆ ಗುಂಡಿಯೊಳಗೆ ಮಂಗುಚಿ ಮುಳುಗಿದಂತಾಯಿತು. 'ಅಮ್ಮಾ' ಎಂದು ಚೀರುತ್ತ ಕಣ್ತೆರೆದಳು. ಆಗ ವೆಂಕಣ್ಣ ಜೋಯಿಸರ ಮನೆಯಿಂದ 'ಪಂಚಾರತಿ'ಯ ಸದ್ದು ಕೇಳಿಸಿ ತಾನು ಕಂಡುದು ಕನಸೆಂದು ಅರಿವಾದರೂ ಅವಳ ಎದೆಬಡಿತ ಸ್ಥಿಮಿತಕ್ಕೆ ಬರಲು ಸ್ವಲ್ಪ ಕಾಲವೇ ಬೇಕಾಯ್ತು. ಮುಂದಿನ ದಿನಗಳಲ್ಲಿ ಕೃಷ್ಣಶಾಸ್ತ್ರಿಗಳು ತೋಟದಲ್ಲಿ ತಮ್ಮ ದುಡಿಮೆಯನ್ನು ಅಧಿಕಗೊಳಿಸಿದರು. ತಣ್ಣೀರು ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲೇ ಪೂಜೆ ಮಾಡಿ, ನಂತರ ಒಂದೇ ಊಟದ ಉಗ್ರ ವ್ರತದ ಆಚರಣೆ. ರುಕ್ಮಿಣಿ ಯಾಂತ್ರಿಕವಾಗಿ ಮನೆಗೆಲಸ ಮಾಡುವಳು. ಹಗಲು ಹೇಗೋ ಜಾರುವುದು. ಆದರೆ ರಾತ್ರಿ ಕಾಲಿಕ್ಕೊಡನೇ ಅವಳ ಒಳಗಿನ ತಳಮಳ ಆರಂಭವಾಗುವುದು. ಅನೇಕ ದಿನಗಳಿಂದ ಉಪಯೋಗಿಸದೆ ಮೂಲೆಗಿಟ್ಟ ತಂಬೂರಿಯನ್ನು ಯಾರೋ ಕೈಗೆತ್ತಿ ಶ್ರುತಿಮಾಡಿ ಬಿಗಿದ ತಂತಿಯನ್ನೊಮ್ಮೆ ಮೀಟಿ ಹೋದಂತಾಗಿತ್ತು ಅವಳ ಸ್ಥಿತಿ. ಮೀಟಿ ಹೋದ ಮೇಲೂ ತಂಬೂರಿಯಿಂದ ಝೇಂಕಾರ ನಾದ ಹೊರಡುವಂತೆ, ಶಾಸ್ತ್ರಿಗಳು ಎಲ್ಲೋ ಸೊರಗಿ ಸೊಪ್ಪಾಗಿ ಮಲಗಿದ್ದ ಅವಳ ಬಯಕೆಗಳನ್ನು ಒಮ್ಮೆ ಮಾತ್ರ ಕೆದಕಿ, ನಂತರ ವಿಶ್ವಾಮಿತ್ರನಂತೆ ಸಂಯಮದ ಚಿಪ್ಪಿನೊಳಗೆ ಮುದುಡಿದ್ದರು. ಎಂಟು ಹತ್ತು ದಿನಗಳು ಕಳೆದಾಗ ಅವಳಿಗೆ ಅರಿವಿಲ್ಲದಂತೆಯೇ ಅವಳೊಳಗೆ ಪಲ್ಲವಿಸಿದ್ದ ಬಯಕೆ ಅದಮ್ಯವಾಗಿ ಬೆಳೆದು ಹೆಮ್ಮರವಾಗಿತ್ತು. ಹೀಗಿರುವಾಗ ಅಕ್ಕ ಪಾರ್ವತಿಯು ತನ್ನ ಮಗಳು ಋತುಮತಿಯಾದ್ದರಿಂದ ಇಟ್ಟಿರುವ ಆರತಕ್ಷತೆಗೆ ತಪ್ಪದೇ ಬರಬೇಕೆಂದು ಆಹ್ವಾನಿಸಿದ್ದಳು. ಉಬ್ಬಸ ಹಿಡಿಸುವ ತಮ್ಮ ಮನೆಯ ವಾತಾವರಣದಿಂದ ಮುಕ್ತಳಾಗಬೇಕೆಂಬ ರುಕ್ಮಿಣಿಯ ಅಪೇಕ್ಷೆಗನುಗುಣವಾಗಿಯೇ ಶಾಸ್ತ್ರಿಗಳೂ ಬೆಂಬಲಿಸಿದ್ದರಿಂದ ರುಕ್ಮಿಣಿ ಭೀಮನಹಳ್ಳಿಗೆ ಹೋಗುವುದು ನಿಶ್ಚಿತವಾಯ್ತು. ಶಾಸ್ತ್ರಿಗಳು ಗಾಡಿ ಹೊಡೆಯಲು ಯಥಾ ಪ್ರಕಾರ ಲಕ್ಕನನ್ನೆ ಗೊತ್ತು ಮಾಡಿದರು.

ಆರತಕ್ಷತೆಯ ಬೆಳಗ್ಗೇ ಗಾಡಿ ಹೊರಟಿತು. ಭೀಮನಹಳ್ಳಿಗೆ ಹೋಗಲು ಕಾಡಿನ ಮಧ್ಯೆ ಹೋಗಬೇಕು. ಮುಂಜಾವಿನಲ್ಲಿ ದರುಮನಹಳ್ಳಿ ಬಿಟ್ಟು ಹೊರಡುವಾಗಲೇ ಹಪ್ಪುಗಟ್ಟಿದ್ದ ಹೊಡ ಸಣ್ಣಗೆ ಮಳೆಗರೆಯಲಾರಂಭಿಸಿತು. ಕ್ರಮೇಣ ಅದರ ರಭಸ ಹೆಚ್ಚಾಗಿ ಎರಚುವ ಮಳೆ ಹನಿಗಳಿಂದ ರಕ್ಷಿಸಿಕೊಳ್ಳಲು ರುಕ್ಮಿಣಿ ಗಾಡಿಯ ಹಿಂದಿನಿಂದ ಮೇಲೆ ಮೇಲೆ ಸರಿಯುತ್ತ ಹೋಗಬೇಕಾಯ್ತು. ಉಟ್ಟ ದಟ್ಟಿಯ ಹೊರತಾಗಿ ಬರಿ ಮೈಯಲ್ಲೇ ಕುಳಿತು ಗಾಡಿ ಹೊಡೆವ ಲಕ್ಕನ ಕರಿ ಮೈ ಆಗೀಗ ಮಿಂಚು ಹೊಡೆದಾಗಲೆಲ್ಲ ನುಣುಪಾದ ಕಪ್ಪು ಶಿಲೆಯಂತೆ ಹೊಳೆಯುವುದು. ಮುಂದೆ ಮುಂದೆ ಜರುಗಿದ ರುಕ್ಮಿಣಿಗೆ ಅವನ ಮೈ ಕಟ್ಟು ಅಭಿಮಾನ ಉಕ್ಕಿಸಿತು. ಮಳೆಯೆಂದರೆ ಅವಳಿಗೂ ಖುಷಿಯೇ. ಗಂಡನ ಸಂಗ ಸುಖ ಅನುಭವಿಸಿದ ಮೊದಲ ರಾತ್ರಿಯಲ್ಲೂ ಇಂಥದೇ ಮಳೆ. ಕಿಟಕಿಗಳಿಗೆ ಇಂಥವೆ ಹನಿಯ ತೆರೆ ಬೀಸಿ ಒಸಗೆ ಕೋಣೆಯಲ್ಲಿ ತಮ್ಮಿಬ್ಬರನ್ನು ಬೆಸೆದು ಹೊರಗಿನ ಪ್ರಪಂಚವನ್ನು ಮರೆಸಿತ್ತು. ಇದೇ ಗುಂಗಿನಲ್ಲಿ ಅವಳ ಚಿತ್ತ ರೆಕ್ಕೆ ಕಟ್ಟಿ ಹಾರುತ್ತಿರುವಾಗ ಥಟ್ಟನೆ ಸಿಡಿಲೊಂದು ಫಳಾರನೆ ಅಬ್ಬರಿಸಿತು. ಬೆಚ್ಚಿದ ರುಕ್ಮಿಣಿ, "ಅಮ್ಮಾ" ಎಂದು ಈಗ ತೀರ ಸನಿಹದಲ್ಲಿದ್ದ ಲಕ್ಕನನ್ನು ಅಪ್ಪಿ ಬಿಟ್ಟಳು. ಅದರಿಂದ ಭಯಭ್ರಾಂತನಾದ ಲಕ್ಕ, "ಅಯ್ಯೋ, ಬುಡಿ, ಸಿಡ್ಲು ಹೊಡೆದ್ರೆ ಇಂಗೆ ಬೆಚ್ಚ್ಕೋದ್ಯಾಕ ಬುಡಿ," ಎಂದು ಬಿಡಿಸಿಕೊಳ್ಳಲೆತ್ನಿಸಿದ. ಆದರೆ ರುಕ್ಮಿಣಿಯ ಹಿಡಿತ ಬಲವಾಗಿತ್ತು. ಲಕ್ಕ ಮಾತ್ರ ತಳಮಳಕ್ಕೆ ಈಡಾದ. ಲಕ್ಕನ ಮಾನ ರುಕ್ಮಿಣಿಯ ಆಕ್ರಮಣದಿಂದ ಕಲಕಿ ಹೋಗಿತ್ತು. ಕಾಡಿನಲ್ಲಿ ಬಿದಿರು ಒಂದಕ್ಕೊಂದು ಮಸೆದು ಕಿಡಿ ಹುಟ್ಟಿ ಕೊನೆಗೆ ಜ್ವಾಲೆಯಾದಂತೆ ಅವನ ದೇಹಕ್ಕೂ ಬಿಸಿ ಏರಿತ್ತು.

■

ಭೀಮನಹಳ್ಳಿಯಿಂದ ದರುಮನ ಹಳ್ಳಿಗೆ ಮರಳಿ ತಿಂಗಳು ಉರುಳಿದಾಗ ರುಕ್ಮಿಣಿಗೆ ಭಯ ಕಾಣಿಸಿಕೊಂಡಿತು. ಎರಡು ತಿಂಗಳು ಉರುಳಿದರೂ ಮುಟ್ಟಾಗುವ ಯಾವ ಚಿಹ್ನೆಯೂ ಕಾಣಿಸುತ್ತಿಲ್ಲ. ದರುಮನ ಹಳ್ಳಿಗೆ ಬಂದೊಡನೆಯೇ ಫರಂಗಿ ಹಣ್ಣು, ಬೆಲ್ಲ ಇತ್ಯಾದಿ ಉಷ್ಣ ಪದಾರ್ಥಗಳನ್ನೇ ಹೆಚ್ಚಾಗಿ ಬಳಸಿದರೂ ಫಲ ಕಾಣದಾದಾಗ ರುಕ್ಮಿಣಿಗೆ ತುಂಬ

ದಿಗಿಲಾಯಿತು. ಈಗೇನು ಮಾಡುವುದು? ಈ ಅನಪೇಕ್ಷಿತ ಗರ್ಭವನ್ನು ಹೇಗೆ ಕಳೆದುಕೊಳ್ಳುವುದು? ಮಾವನವರಲ್ಲಿ ಹೇಳಲಿ? ಛೆ, ಛೆ, - ಆಚಾರನಿಷ್ಠರಾದ ಅವರು ಗರ್ಭಪಾತಕ್ಕೆ ಒಪ್ಪಿಯಾರೆ? ಲಕ್ಷ್ಮಮ್ಮನವರು? ಆಯಿತು, ಅವರ ಹತ್ತಿರ ಯಾವ ಗುಟ್ಟು ಉಳಿಯುತ್ತೆ? ಹೀಗೇ ಕೇರಿಯ ಯಾರ ಕುರಿತಾಗಿ ವಿಚಾರಿಸಿದರೂ ಯಾರೂ ಅವಳಿಗೆ ಹಿತಪರೆನಿಸಲಿಲ್ಲ. ಯಾರಲ್ಲಿ ಹೇಳಿದರೂ ತನಗೆ ಅಪಾಯವೇ ಕಾದಿತ್ತು. ಕೊನೆಗೆ ಎಲ್ಲ ಸಾಧಕ ಬಾಧಕಗಳನ್ನೂ ಪರಿಶೀಲಿಸಿ ಅಕ್ಕನ ನೆರವು ಬೇಡುವುದೇ ಉಚಿತವೆಂದುಕೊಂಡಳು. ಆ ನಿರ್ಧಾರದ ಪ್ರಕಾರ ಅದೇ ಸೋಮವಾರ ಲಕ್ಕನನ್ನು ತಮ್ಮ ಮನೆಗೆ ಕರೆಸಿದಳು. ಕೊಟ್ಟಿಗೆಯಲ್ಲಿ ಗಬ್ಬದ ಕಡಸನ್ನು ನೋಡಿಕೊಳ್ಳುತ್ತಿದ್ದ ಲಕ್ಕನಲ್ಲಿ ಹೇಗೆ ಹೇಳಲೆಂದೇ ತಿಳಿಯದೇ ನಿಂತ ರುಕ್ಮಿಣಿ ತಗ್ಗಿದ ದನಿಯಲ್ಲಿ, "ಲಕ್ಕ" ಎಂದಳು.

"ಯೇನವ್ವಾರೆ?"

"ಲಕ್ಕ," ಎಂದು ಪುನಃ ತೊದಲಿದಳು.

"ಯೋಳಿ ಅವ್ವಾರೆ."

"ನೀನು ಸಹಾಯ ಮಾಡ್ತೀನಿ ಅಂದರೆ..."

"ಯೋಳಿ ಅವ್ವಾರೆ."

"ಲಕ್ಕ...ನಾನು...ನನಗೆ ಎರಡೂವರೆ ತಿಂಗಳು ಮೇಲಾಯ್ತು," ರುಕ್ಮಿಣಿಯ ಕಣ್ಣಲ್ಲಿ ನೀರು ತುಂಬಿತು.

"ಅಂಗಂದ್ರೇನು ಅವ್ವಾರೆ?" ಲಕ್ಕ ಕಕ್ಕಾಬಿಕ್ಕಿಯಾಗಿದ್ದ.

"ನಾನು ಬಸುರಾಗಿ ಎರಡೂವರೆ ತಿಂಗಳ ಮೇಲಾಯ್ತು."

"ಹಂಗ್ಯೋ ದ್ಯಾವರೆ!" ಲಕ್ಕ ಕುಸಿದ.

"ಈಗೇನು ಮಾಡೋದು?"

"ನಾನು ಮುಕ್ಕ. ನಂಗೇನು ತಿಳಿದಾತು? ನೀವು ಯೋಳಿದ ಅಂಗೆ ಮಾಡ್ತೀನಿ."

"ಇದನ್ನ ಕಳೆಯಲಿಕ್ಕೆ ಏನಾದರೂ ಔಷಧಿ ತಂದುಕೊಡಬೇಕಲ್ಲ?"

"ನಾಳೆ ಹುಣಸೂರಿಗೋಗಿ ಆ ಕಾಸಿಂಬೀನೇ ಕ್ಯಾಳ್ತೀನಿ," ಅಂದ ಲಕ್ಕ. ಅವನ ಸಂಗಡ ರುಕ್ಮಿಣಿ ಮಾತಾಡುತ್ತಿದ್ದಾಗ ಬೀದಿ ಬಾಗಿಲು ಹಾಕಲು ಬರುತ್ತಿದ್ದಳು. ಒಗ್ಗರಣೆಗೆ ಸಾಸಿವೆ ಬೇಡಲು ಬಂದ ಲಕ್ಷ್ಮಮ್ಮ ನಡುಮನೆಯಲ್ಲಿ ಅವಿತು ನಿಂತು ಇವರ ಮಾತನ್ನೆಲ್ಲ ಕೇಳಿಸಿಕೊಂಡವಳು ರುಕ್ಮಿಣಿ ಮಾತು ನಿಲ್ಲಿಸಿ ಒಳಗೆ ಬರುತ್ತಿರುವಂತೇ ಹಿಂಬಾಗಿಲಿಂದ ಜಾರಿಕೊಂಡರು.

ಅದೇ ರಾತ್ರಿ ಕೃಷ್ಣ ಶಾಸ್ತ್ರಿಗಳನ್ನು ಕರೆಸಿದರು ವೆಂಕಣ್ಣ ಜೋಯಿಸರು. "ಇದೇ ನಮ್ಮ ಬ್ರಾಹ್ಮಣ ಕುಲಕ್ಕೇ ಅವಮಾನ! ಅವತ್ತೇ ನೀವು ರುಕ್ಮಿಣಿಗೆ ಕೇಶಮುಂಡನ ಮಾಡಿಸಿದ್ದರೆ ಈ ದಿನ ಇದೇ ಆಗುತ್ತಿರಲಿಲ್ಲ. ಎಲ್ಲ ಬಿಟ್ಟು ಆ ಹೊಲೆಯ ಲಕ್ಕನ ಸಂಬಂಧ ಬೆಳೆಸಿ ಗರ್ಭಿಣಿಯಾದಳಲ್ಲ, ಇದಕ್ಕಿಂತ ಹೇಯವಾದ ಕೃತ್ಯ ಇನ್ನೊಂದಿದೆಯೆ? ನಾವೆಲ್ಲ ಹೇಳಿದಾಗಲೇ ಅವಳ ತಲೆ ಬೋಳಿಸಿ ವಿರೂಪಗೊಳಿಸಿದ್ದರೆ ಈಗ ಇಂಥ ವಿಕೃತ ಸ್ಥಿತಿಯನ್ನು ಎದುರಿಸಬೇಕಾಗ್ತಿತ್ತೆ? ನಿಮ್ಮ ಹಟದಿಂದಲೆ ಈ ಘೋರ ಅನರ್ಥ ಸಂಭವಿಸಿದೆ." ಜೋಯಿಸರ ಮಾತುಗಳನ್ನು ಶಾಸ್ತ್ರಿಗಳು ವಿಸ್ಮಿತರಾಗಿ ಆಲಿಸಿದರು. ರುಕ್ಮಿಣಿಗೆ ವಿಶ್ವೇಶ್ವರ ಮೃತನಾದಾಗಲೆ ಕೇಶಮುಂಡನ ಮಾಡಿಸಬೇಕಾಗಿತ್ತು ಎನ್ನುವ ಅಭಿಪ್ರಾಯವನ್ನವರೇ ಈಗ ಒಪ್ಪುವಂತಾಗಿದೆ. ನಿಜ, ಅವಳೇ ವಿರೂಪಗೊಂಡಿದ್ದರೆ ಈ ರಂಪವೆಲ್ಲ ನಡೆಯುತ್ತಿರಲಿಲ್ಲವೇನೋ? ಆದರೆ ಅಕ್ಕನಿಂದ ಅವಳು ಗರ್ಭಿಣಿ ಆಗಿದ್ದಾಳೆನ್ನುವ ಮಾತನ್ನು ಒಪ್ಪಬಹುದೆ? ತನ್ನಿಂದಲೆ ಅವಳು ಬಸುರಾದದ್ದು? ಅದರಲ್ಲಿ ಸಂಶಯವೇ ಇಲ್ಲ. ಲಕ್ಕ, ರುಕ್ಮಿಣಿ ತನ್ನ ಮಾನವನ್ನು ಕಾಪಾಡುವುದಕ್ಕೋಸ್ಕರ ಈ ಕಥೆ ಕಟ್ಟಿರಬೇಕು. ಈ ಚಿಂತೆಯಲ್ಲೇ ಮರಳಿದ ಶಾಸ್ತ್ರಿಗಳು ಮನೆ ಜಗಲಿಯಲ್ಲಿ ಕುಳಿತಾಗ ವಿಧವೆ ಲಕ್ಷ್ಮಮ್ಮ ಅಲ್ಲಿಗೆ ಬಂದು, "ಎಚ್ಚರ ಶಾಸ್ತ್ರಿಗಳೇ, ಅನಾಚಾರವು ಆಗ್ತಾ ಇದೆ. ಈಗ ಬಸುರು ಕಳೆವ ಮದ್ದಿಗಾಗಿ ಲಕ್ಕನನ್ನು ರುಕ್ಮಿಣಿ ಹುಣಸೂರಿಗೆ ಓಡಿಸಿದ್ದಾಳೆ. ಅವನನ್ನು ಹಟ್ಟಿಬಾಗಿಲಿಗೂ ಸುಳಿಯದಂತೆ ಮುತುವರ್ಜಿ ವಹಿಸಿ. ಇಲ್ಲವಾದರೆ ಅವಳ ತಲೆ ಬೋಳಿಸದ ತಪ್ಪಿಗಿಂತಲೂ ಘೋರ ತಪ್ಪನ್ನ ನೀವು ಮಾಡಿದಂತಾಗುತ್ತೆ. ಪಿಂಡಾನ ನಾಶ ಮಾಡೋದೂ, ಜೀವಂತ ವ್ಯಕ್ತೀನ ನಾಶ ಮಾಡೋದೂ ಒಂದೆ," ಎಂದು ದೊಡ್ಡ ಗಂಟಲಲ್ಲಿ ಎಚ್ಚರಿಸಿ ಹೋದಳು. ತೊಟ್ಟಿಯ ಕಂ

ಹೊರಗಿ ಹೊಂಚುತ್ತಿ ಹೊಸೆವ ರುಕ್ಮಿಣಿಗೂ ಈ ಮಾತುಗಳು ಕೇಳಿಸಿ ಕಾದ ಸೀಸವನ್ನೆರೆದಂತಾಯಿತು.

ಆ ರಾತ್ರಿ ಶಾಸ್ತ್ರಿಗಳು ಮತ್ತೆ ರುಕ್ಮಿಣಿಯ ಬಳಿ ಬಂದಾಗ ಅವರ ದೇಹದ ಕಂಪನ ಗುರುತಿಸಿದ ರುಕ್ಮಿಣಿ ಬೆಚ್ಚಿಬಿದ್ದಳು. ಮಾವನವರನ್ನು ಒಂದೆ ಹಿಡಿದಿದ್ದ ಭೂತವೇ ಹಿಡಿಯಿತೆ? ಎಂದು ಶಂಕಿಸಿದಳು. ಆದರೆ ಶಾಸ್ತ್ರಿಗಳು ಪ್ರಯಾಸಪಟ್ಟು, "ತುಂಬಾ ಅನ್ಯಾಯ ಮಾಡಿದೆ. ಲಕ್ಕನಿಂದ ಔಷಧಿ ತಗೋಬಾರದು.ಒಂದು ಪಾಪ ಅಳಿಸಲಿಕ್ಕೆ ಹೋಗಿ," ಎನ್ನುತ್ತ ಉಳಿದ ಮಾತುಗಳನ್ನು ತಮ್ಮೊಳಗೇ ನುಂಗಿಕೊಳ್ಳುತ್ತ ತೆರಳಿ ತಮ್ಮ ಹಾಸಿಗೆಯಲ್ಲಿ ಉರುಳಿದರು. ರಾತ್ರಿಯಲ್ಲಿ ಹೊರಳಿದರೂ ಅವರಿಗೆ ನಿದ್ದೆ ಹತ್ತಲಿಲ್ಲ. ಮನದೊಳಗೇ, 'ನಾನು ಪಾಪಿ...ನಾನು ಪಾಪಿ' ಎಂದು ಹಲುಬಿದರು. ತನ್ನಲ್ಲಿ ಲಕ್ಕನಿಗೆ ತುಂಬಾ ಗೌರವ. ಜೊತೆಗೆ ರುಕ್ಮಿಣಿಯೂ ಈ ಹೂಟದಲ್ಲಿ ಸೇರಿರಬೇಕು. ತಮ್ಮ ಮಾನ ಉಳಿಸಲು ಹೀಗೆ ಮಾಡಿರಬೇಕೆಂದು ಅನುಮಾನಿಸಿದರು.

ಅತ್ತ ರುಕ್ಮಿಣಿಗೂ ನಿದ್ದೆಯಿರಲಿಲ್ಲ. ಈ ಪರಮ ಸಂಕಟದಿಂದ ಪಾರಾಗಲು ಉಳಿದಿದ್ದ ಒಂದೇ ಒಂದು ದೂರದ ದಾರಿಯೂ ಮುಚ್ಚಿ ಹೋಯಿತ್ತು. ನೇಣುಗಂಬ ಹತ್ತಿರ ಹತ್ತಿರವಾಗುತ್ತಿದೆ ಎಂಬ ಭಾವನೆ ಬಲಿಯಿತು. ತಟ್ಟನೆ ಅವಳ ಆಲೋಚನೆಗೆ ಬೇರೆ ಒಂದು ವೇದನೆಯ ಆಯಾಮ ಕೂಡಿತು. ಪ್ರತಿ ಹೆಣ್ಣೂ ಬಯಸುವ ಗರ್ಭ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿದ್ದರೂ ಅದು ಯಾರಿಗೂ ಕೊನೆಗೆ ತನಗೂ ಬೇಡವಾದ ಗರ್ಭವಾಗಿದೆ. ಈ ಕ್ರೂರ ಪರಿಸ್ಥಿತಿಗೆ ಯಾರನ್ನು ದೂಷಿಸಬೇಕು? ಮಾವನವರತ್ತ ಬೆರಳು ಮಾಡಬಹುದಾದರೂ ಲಕ್ಕನ ವಿಷಯದಲ್ಲಿ ತಾನೆಷ್ಟು ಸಂಯಮಿಯಾಗಿದ್ದೆ? ಎಂದು ಆತ್ಮನಿಂದೆಯಲ್ಲಿ ತೊಳಲಾಡಿದಳು. ಕ್ಷೋಭೆಗೊಳಗಾದ ಅವಳ ಚಿತ್ತ ಹೀಗೆ ಹಳಹಳಿಸುತ್ತಿರುವಾಗಲೇ ಹಕ್ಕಿಗಳ ಚಿಲಿಪಿಲಿ ಕೇಳಿಸತೊಡಗಿತು.

ಬೆಳಗ್ಗೆ ಮದ್ದಿನೊಂದಿಗೆ ಬಂದ ಲಕ್ಕನಲ್ಲಿ, "ಔಷಧಿ ತಂದರೆ ಅದನ್ನು ದೂರ ಚೆಲ್ಲಿ ಬಿಡು. ರುಕ್ಮಿಣಿಗೆ 'ಕೊಡಬ್ಯಾಡ" ಎಂದ ಶಾಸ್ತ್ರಿಗಳ ಮಾತಿನಿಂದ ಲಕ್ಕ

"ಇದೆಂಗಾತು? ಶಾಸ್ತ್ರಿಗಳಿಗೆ ಎಂಗೆ ತಿಳೀತು?" ಎಂದು ಚಿಂತಿಸಿದ.

*

ಈ ಶುಕ್ರವಾರ ರಾತ್ರಿ ಊರಿನಲ್ಲಿ ದೊಡ್ಡ ನ್ಯಾಯ. ಹಿಂದೆ ಈ ಊರಲ್ಲಿ ದೊಡ್ಡ ನ್ಯಾಯಗಳು ಆಗಿರಲಿಲ್ಲವೆಂದಲ್ಲ. ಆದರೆ ಈ ನ್ಯಾಯಕ್ಕೊಂದು ವಿಶೇಷ ಮಹತ್ವವಿತ್ತು. ಹೊಲೆಯ ತರುಣನೊಬ್ಬ ಹಿಂದೂ ಸಮಾಜದಲ್ಲೆ ಸರ್ವಶ್ರೇಷ್ಠವೆನಿಸಿದ ಬ್ರಾಹ್ಮಣ ಯುವತಿಯೊಬ್ಬಳ ಸಂಗಸುಖ ಪಡೆದದ್ದು ಈ ಊರಿನ ಉತ್ತಮರನ್ನೇ ಅಲ್ಲದೆ ಸುತ್ತಲ ಊರುಗಳ ಉತ್ತಮ ಜಾತಿಗಳವರನ್ನೂ ಕೆರಳಿಸಿತ್ತು. ಊರು ಆ ರೀತಿಯಲ್ಲಿ ಬೆಳಗನ್ನು ಬೀಳ್ಕೊಟ್ಟು, ಮಧ್ಯಾಹ್ನ ಕಂಡಿತು. ಮಧ್ಯಾಹ್ನದಲ್ಲಿ ಕುದಿದು, ದಣಿದು ಸಂಜೆಗೆ ಕಾಲಿಟ್ಟಿತು. ಸಂಜೆಯಲ್ಲಿ ಬಾಡಿ, ಬಸವಳಿದು ರಾತ್ರಿಗೆ ಹೊರಳಿತು. ರಾತ್ರಿಯಾಗುತ್ತಲೂ ಹೆಣ್ಣು ಗಂಡೆನ್ನದೇ ಊಟ ಮುಗಿಸಿ ಪಂಚಾಯತಿ ಕಟ್ಟೆಗೆ ಧಾವಿಸಿದರು. ನೆರೆಯೂರ ಮಂದಿಯೂ ಸೇರಿದರು. ಚಾವಡಿ ಮುಂದಿನ ಎತ್ತರದ ವೇದಿಕೆಯ ಮೇಲೆ ಜಮಖಾನ ಹಾಸಿ ಯಜಮಾನರುಗಳನ್ನು ಕೂರಿಸಲು ವ್ಯವಸ್ಥೆ ಮಾಡಲಾಗಿತ್ತು. ಯಜಮಾನರೆಲ್ಲ ಚಾವಡಿಗೆ ಸೇರಿದ ನಂತರ ಲಕ್ಕನಿಗೆ ಕರೆ ಬಂತು. ಲಕ್ಕ ಚಾವಡಿ ಅಂಗಳಕ್ಕೆ ತಲಪುತ್ತಲೂ ಶ್ಯಾನುಭಾಗರು ಚಾವಡಿ ಒಳಗೆ ಕುಳಿತ ಯಜಮಾನರುಗಳತ್ತ, ದೃಷ್ಟಿ ಹೊರಳಿಸಿ, "ಹಾಗಾದ್ರೆ ಶುರೂಮಾಡಬಹುದಲ್ಲ?" ಎಂದು ಕೇಳಿದರು. ಆಗ ಅವರೆಲ್ಲ ಆಗಬಹುದೆಂದು ಒಪ್ಪಿಗೆಯಿತ್ತರು. "ನ್ಯಾಯ ಶುರು ಆಯ್ತು. ಸದ್ದು ಸದ್ದು," ಎಂದು ಕುಳವಾಡಿ ತಮಟೆ ಬಾರಿಸಿದ. ಆಗ ದೊಳ್ಳಪ್ಪ, "ಲಕ್ಕನ ನ್ಯಾಯ ತಗೋಬೇಕಾದ್ರೆ ರುಕ್ಮಿಣಮ್ಮನನ್ನೂವೆ ಕರೆಸಬೇಕು. ಇಲ್ಲದಿದ್ರೆ ಪಕ್ಕಪಾತ ನ್ಯಾಯ ಆಯ್ತದೆ. ಆ ಯಮ್ಮನ್ನೂ ಕರೆಸಿ," ಎಂದು ಒತ್ತಾಯಪೂರ್ವಕ ವಾದ ಮಂಡಿಸಿದ. ಆಗ ಕೇಶವಯ್ಯ ಎದ್ದು ನಿಂತು, "ಅವಶ್ಯವಿಲ್ಲ. ಅವಳಿಗೆ ನಮ್ಮ ಬ್ರಾಹ್ಮಣಕೇರಿಯೋರೇ ತಕ್ಕ ಶಾಸ್ತಿ ಮಾಡೀವಿ. ಲಕ್ಕ ಗಂಡಸು. ರುಕ್ಮಿಣಿ ಹೆಂಗಸು. ಬೆಳಗಿನ ರಭಾವ ಕಾಡುದಾರೀಲಿ ಹೋಗುತ್ತಿದ್ದಾಗ ಲಕ್ಕ ಬಲಾತ್ಕಾರ ಮಾಡಿರೋದು ಸಾಧ್ಯ ಈ ವಿಷಯದಲ್ಲಿ. ಯಜಮಾನರು ಏನಂತಾರೆ?" ಅಂದ. ಆಗ ನಂಜೇಗೌಡರೆದ್ದು, "ಕೇಸವಯ್ಯ ನೋಡು ಹೇಳೋ ಮಾತು ಕೇಳಿದ್ರಾ? ಆದ್ರೆ ಇದು ಕಲಿಕಾಲ ಅಣ್ಣಾ ದ ಸ್ವಾಮಿಯೋರು ಪಾರೆ ತಂಗದೆ. ಈಗ ಗಂಡಸರಿಗಿಂತ ಹೆಂಗಸರು ಯಾತ್ಯಾತರಲ್ಲೂವೇ ಕಡಿಮೆ ಇಲ್ಲ. ಆದ್ರಿಂದ ರುಕ್ಮಿಣಮ್ನ ನಮ್ಮೆಲ್ಲಾರ ಮುಂದುಕೆ ನಿಲ್ಲಿಸಿದ್ರೆ ಆಗ ನಿಜಸ್ಥಿತಿ ಗೊತ್ತಾಯ್ತದೆ," ಎಂದು ಒತ್ತಾಯಿಸಿದರು. ಸಭೆ ಮುಂದೇನಾದೀತೋ ಎಂದು ಕಾತರದಿಂದ ಕಾಯುತ್ತಿತ್ತು. ಆಗ ಕೇಶವಯ್ಯ, "ನಾನು ಮೊದಲೇ ಹೇಳಿಲ್ಲವೆ? ರುಕ್ಮಿಣಿಯ ನ್ಯಾಯ ಫೈಸಲ್ ಮಾಡೋರು ನಾವೆಂದು? ಈಗ ಲಕ್ಕನ್ನೇ ಕೇಳಿ ಶ್ಯಾನುಭೋಗರೆ, ಏನೇನ್ನಡೀತಂತ," ಎಂದು ವಾದದ ದಿಕ್ಕನ್ನು ಹೊರಳಿಸಿದ. ಶ್ಯಾನುಭೋಗರು ಅದಕ್ಕೊಪ್ಪಿ, "ಏನಪ್ಪ ಲಕ್ಕ, ನಿನ್ನ ಮೇಲೆ ಬಂದಿರೋ ಅಪಾದನೆ ವಿಷಯದಲ್ಲಿ ನೀನು ಏನು ಹೇಳ್ತೀಯ?" ಎಂದು ಕೇಳಿದರು. ಲಕ್ಕ ಮೌನವಾಗಿದ್ದ. "ಊರು ಬಿಟ್ಟು ಗಾಡೀಲಿ ನೀವಿಬ್ಬರೇ ಕಾಡುಹಾದಿ ಹಿಡಿದಿದ್ದಾಗ ಏನು ನಡೀತು?" ಲಕ್ಕ ಮತ್ತೆ ನಿರುತ್ತರ. "ತಪ್ಪು ನಿನ್ನದೋ ರುಕ್ಮಿಣಮ್ಮಂದೋ?" ಲಕ್ಕ ಇದಕ್ಕೆ ಯಾವ ಉತ್ತರ ಕೊಡುವನೋ ಎಂದು ಸಭಿಕರ ಜೀವ ತುದಿಗಾಲ ನಿರೀಕ್ಷೆಯಲ್ಲಿ ತವಕಗೊಂಡಿತ್ತು. ಲಕ್ಕನಿಂದ ಇದಕ್ಕೂ ಉತ್ತರ ಬರಲಿಲ್ಲ. ನಂಜೇಗೌಡ ಎದ್ದು, "ಈ ಹೇತಲಂಡಿ ಬಡ್ಡಿ ಹೈದ ರುಕ್ಮಿಣಮ್ಮನ ಇರುದ್ದೆ ಯೋಳಿದರ, ನಿಮ್ಮ ಬ್ರಾಂಬರ ತೋಟಗಳಲ್ಲೆ ಅಲ್ವ ಅವನು ಇಸೇಸ್ವಾಗಿ ಕೂಲಿಗೆ ದುಡಿಯೋದು? ಅದಕ್ಕೆ ಅವ್ನು ಎದುರಿ ನಿಜಸ್ಥಿತ್ಯ ಬಾಯಿ ಬಿಡ್ತಾ ಇಲ್ಲ," ಎಂದು ಕೆಣಕಿದ.

ಗಂಗಪ್ಪ ಕೊಸಾರನೆದ್ದು, "ನಂಜೇಗೌಡರು ಯೋ-ಳೋ ಅಂಗೆ ರುಕ್ಮಿಣವ್ವನ ಈ ಚಾವಡಿ ಮುಂದೆ ನಿಲ್ಲಿಸಿದ್ರೇನೆ ನ್ಯಾಯ ಫೈಸಲ್ ಆಗೋದು," ಬಾಣ ಬಿಟ್ಟಂತೆ ಆಡಿದ. ಶ್ಯಾನುಭಾಗರು, "ಏನೊ ಲಕ್ಕ, ನೀನು ಹೀಗೆ ಮನೊಗೊಂಡ್ತಿ ಕರಹ ನಿಂತಿದ್ರೆ, ರುಕ್ಮಿಣೀನೂ ಕರೆಸಬೇಕಾಗುತ್ತೆ: ಕರೆಸೋಣವೇ?" ಎಂದು ಕೇಳಿದಾಕ್ಷಣ ಚಾವಡಿ ಒಳ

ಗಿಂದ "ಕರೆಸಿ, ರುಕ್ಮಿಣವ್ವನ ಕರೆಸಿ," ಎಂಬ ಕೂಗೆದ್ದಿತು. ಆ ಸದ್ದು ಅಡಗುವವರೆಗೂ ಸುಮ್ಮನಿದ್ದ ಲಕ್ಕ "ಕರುಸಬ್ಯಾಡಿ," ಎಂದ ದೃಢಸ್ವರದಲ್ಲಿ. "ಹಾಗಾದರೆ ನೀನೇ ಅಪ್ಪಿತಸ್ಥ ಎಂದು ಒಪ್ಪಿಕೊಳ್ತೀಯ," ಲಕ್ಕನೊಳಗೆ ಹೋರಾಟ; 'ಒಂದ್ ಪಕ್ಸ ನಾಒಪ್ಪಿಕ್ವಳದೇ ಹೋದ್ರೆ ರುಕ್ಮಿಣವ್ವನ ಕರಸೇ ಕರುಸ್ತಾರೆ. ಅವರು ಇಲ್ಲಿಗೆ ಬಂದ್ರೆ ಈ ತುಂಬಿದ ಸಬೇಲಿ ಅವ್ರರ ಮಾನಾವ ಇಂಕರ ಇಂಕರಾಗಿ ಅರಾಜು ಅಕ್ತಾರೆ! ಇಲ್ಲ. ನಾ ಒಪ್ಪಿಕ್ವಂಡೆನೋ, ನನ್ನ ಚಮಡಾವ ಸುಲಿದು ಬುಡ್ತಾರೆ. ಎಂಗೆ ಮಾಡಾದು? ಏನು ಯೋಳಾದು?... ರುಕ್ಮಿಣವ್ವ ನನ್ನ ಉದ್ದಕ್ಕೂ ಚಂದಾಗಿ ನೋಡಿಕೊಂಡವರೆ. ನಮ್ಮವ್ವಗಿಂತ ಎಚ್ಚಾಗಿ ಇಲ್ಲೀಗಂಟ ಕಾಪಾಡಿಲ್ವ. ಏಟು ದೊಡ್ಡ ಗುಣ ಅವ್ರುದ್ದು? ಏನೋ ನಡಯ್ತೋ ಕಾಲು ಎಡವ್ತು. ಈಗ ನಾನು ಈ ರಕ್ಕಸರ ಕೈಗೆ ಆ ತಾಯ ಒಪ್ಪಿಸಿದ್ರೆ ಆ ದ್ಯಾವರು ಮೆಚ್ಚಕ್ಕಿಲ್ಲ' -ಲಕ್ಕ ಯೋಚಿಸುತ್ತಿದ್ದ ಹಾಗೇ ತಾಳ್ಮೆಗೆಟ್ಟ ನಂಜೇಗೌಡರ ಮಾತಿನಂತೆ ಶ್ಯಾನುಭಾಗರು ಕುಳವಾಡಿಯನ್ನು ಕರೆದು ರುಕ್ಮಿಣಿಯನ್ನು ಕರೆತರಲು ಹೇಳಿದರು. ಆಗ ತಟಕ್ಕನೆ ಕಾಡಿನಲ್ಲಿ ನೂರಾರು ರಣ ಹದ್ದುಗಳು ಬಸುರಿಯೊಬ್ಬಳ ಹೆಣವ ಕುಕ್ಕಿ ಕುಕ್ಕಿ ಮಾಂಸ ಕೀಳ್ತಿದ್ದ ದೃಶ್ಯ ಲಕ್ಕನ ಕಣ್ಣ ಮುಂದೆ ಸುಳಿದು ಎರಡು ಹೆಜ್ಜೆ ಮುಂದೆ ಬಂದು ಕೂಗಿದ, "ಬ್ಯಾಡಿ ಅವ್ರುನ್ನ ಕರೆಸಬ್ಯಾಡಿ. ನಾನೇ ತಪ್ಪ ಮಾಡಿದೋನು." ಲಕ್ಕನ ಮಾತು ಕೇಳಿ ಸಭೆ ಘೋರ್ಗರೆಯಿತು. "ಲೌಡಿ ಮಗ, ಎಂತಾ ಕೊಬ್ಬು ಹಲ್ಕ ನನ್ನ ಮಗನ ಚಮಡಾ ಸುಲೀಬೇಕು," ಎಂಬ ಉದ್ಗಾರಗಳ ಮಧ್ಯೆ ಯಜಮಾನರುಗಳು ಶಿಕ್ಷೆ ವಿಧಿಸಿದರು. "ಅವ್ರನ್ನ ಆ ಪಾಂಡವರ ಕುಮುರೆ ಕಂಬಕ್ಕೆ ಕಟ್ಟಿ ನಾಕು ಜಡೀಬೇಕು. ರುದ್ರ ನಿನ್ನ ಸಿನೇಯಿತ್ರ ಕಟ್ಟಿಗಂಡು ಈ ಲಕ್ಕನ್ನ ಆ ಕುಮುರೆ ಕಂಬಕ್ಕೆ ಬಿಗಿಯೋ" ನಂಜೆಗೌಡರ ಅಪ್ಪಣೆ ಹೊರಟಿದ್ದೇ ಸಮ, ಆ ಮಾರಿಗುಡಿ ಅಣ್ಣದೀರು ಲಕ್ಕನನ್ನು ಮಾಳದ ಮಧ್ಯಭಾಗದಲ್ಲಿದ್ದ ಕುಮುರೆ ಕಂಬಕ್ಕೆ ಬಿಗಿಯಲು ಅನುವಾದರು.

*

ದೇವರ ಕೋಣೆಯಲ್ಲಿ ಕುಳಿತ ಶಾಸ್ತ್ರಿಗಳು ಇನ್ನೂ ಕುಳಿತಿರಲಾರದೆ ಹೊರಗೆದ್ದು ಬಂದು ದುಡುದುಡನೆ ಪಂಚಾಯತಿ ಕಟ್ಟೆಯತ್ತ ಸಾಗಿದರು. "ಅಪರಾಧಿ ನಾನು, ಶಿಕ್ಷೆ ನಿರಪರಾಧಿ ಲಕ್ಕನಿಗೆ. ಇದೆಲ್ಲಿಯ ನ್ಯಾಯ?" ಅವರ ಅಂತರಂಗ ಕುದಿಯುತ್ತಿದ್ದಾಗಲೇ ಚಾವಡಿಗೆ ಬಂದಿದ್ದರು. ನಂಜೇಗೌಡ ಹಸನ ಚಿತ್ರದ ಕೋಲನ್ನು ರುದ್ರ ತೆಗೆದುಕೊಳ್ಳುತ್ತಿದ್ದಾಗಲೇ ಜನ ಸಂದಣಿಯಲ್ಲಿ ತೂರಿಬಂದ ಶಾಸ್ತ್ರಿಗಳು ಚಾವಡಿಯ ಮುಂದೆ ಬಿರುಗಾಳಿಯಂತೆ ಬಂದು ನಿಂತು, "ತಡೀರಿ. ಲಕ್ಕ ನಿರಪರಾಧಿ, ಶಿಕ್ಷೆ ಆಗಬೇಕಾದದ್ದು ನನಗೆ." ಎಂದು ಏದುತ್ತ ನುಡಿದರು. ಕೆಲವು ನಿಮಿಷ ಎಲ್ಲರೂ ಸ್ತಂಭೀಭೂತರಾದರು. ಆಗ ಕೇಶವಯ್ಯ, "ಶಾಸ್ತ್ರಿಗಳೇ, ನಿಮ್ಮ ಮಾತು ಯಾರೂ ನಂಬಲ್ಲ. ಈ ಹೈದ ಲಕ್ಕನ್ನ ಅವನ ಬಾಲ್ಯದಿಂದಲೂ ನೀವು ಪ್ರೀತಿ ಮಾಡ್ತೀರಿ ಅನ್ನೋ ವಿಷ್ಯ ಊರಿಗೆಲ್ಲ ತಿಳಿದಿರೋದೆ. ಏನೋ ತಪ್ಪು ಮಾಡಿದಾನೆ ಅನ್ನೋ ಔದಾರ್ಯದಿಂದ ಅವನ್ನ ಉಳಿಸಲು ನೀವು ಹೊರಟಂತಿದೆ. ಅವನ್ನ ಉಳಿಸಲು ನಿಮ್ಮ ಮಾನ ಯಾಕೆ ಕಳಕೊಳ್ಳಬೇಕು? ಇದನ್ನು ಹುಚ್ಚಿನ್ನದೆ ಬೇರೆ ಯಾವ ಹೆಸರಿನಲ್ಲಿ ಕರೆಯೋಣ?" ಎಂದು ಚಾವಡಿಯ ಯಜಮಾನರುಗಳತ್ತ ದೃಷ್ಟಿ ಬೀರಿದ.

ಒಡನೇ ನಂಜೇಗೌಡ, "ಈ ಶಾಸ್ತ್ರಿಗಳ್ಗೆ ಹುಚ್ಚೇ ಹಿಡಿದಿರಾದು. ಇದರಾಗೆ ಸಂದೇಹವೇ ಇಲ್ಲ" ಅಂತ ಘೋಷಿಸಿದ. "ನನಗೆ ಹುಚ್ಚೂ ಇಲ್ಲ ಬೆಪ್ಪೂ ಇಲ್ಲ." ಶಾಸ್ತ್ರಿಗಳು ಗೋಗರೆದರು. "ಇದು ನಿಜವಾದ ಬುದ್ಧಿಭ್ರಮಣೆ." ಅಲ್ಲಿ ನೆರೆದ ಬ್ರಾಹ್ಮಣ ವೃಂದ ಗೊಣಗಿತು. "ಈ ಹುಚ್ಚು ಇಳಿಯಬೇಕಾದರೆ ಈ ದಿನ್ನ ಹುಂಡೆಗೆ ಲಿಂಬೆ ಅದ್ದಿ ತಿಕ್ಕಿ ನೂರೆಂಟು ತಲೆಗೆ ನೀರು ಉಯ್ಯಲೇಬೇಕು", ಎಂದು ಗಂಗಪ್ಪ ಉದ್ಗರಿಸಿದ. ಪಂಚಾಯತಿದಾರರು ಅವರವರಲ್ಲೆ ವಿಚಾರ ವಿನಿಮಯ ಮಾಡಿ ಶಾಸ್ತ್ರಿಗಳ ಚಿತ್ತಸ್ವಾಸ್ಥ್ಯ ಹದತೋಟ ತಪ್ಪಿದೆ ಎಂಬ ನಿರ್ಣಯಕ್ಕೆ ಬಂದಿದ್ದರು. ಲಕ್ಕನಿಗೆ ಛಡಿ ಏಟಿನ ಶಿಕ್ಷೆ ಮುಗಿದ ತರುವಾಯ ದರುಮನಹಳ್ಳಿಯ ನ್ಯಾಯಸ್ಥಾನ ಅವನನ್ನು ಹಳ್ಳಿಯಿಂದಾಚೆಗೆ

ಗಡೀಪಾರು ಮಾಡುವ ತೀರ್ಮಾನ ಮಾಡಿತು. ಅವನು ಗ್ರಾಮದಿಂದಾಚೆ ಕೂಡಲೆ ಹೋಗಬೇಕೆಂದೂ ಅವನಿಗೆ ಬೆಂಕಿ, ಬಿಸಿನೀರುಗಳನ್ನು ಯಾರೂ ಕೊಡಬಾರದೆಂದೂ ಕುಳವಾಡಿಯಿಂದ "ಸಾರಿಕೆ" ಕೊಡಿಸಿದ್ದರು.

•

ವೈಶಾಖ ಹುಣ್ಣಿಮೆ ಕಳೆದ ಮಾರನೆ ದಿನ ದರುಮನಹಳ್ಳಿಯ ಬ್ರಾಹ್ಮಣರು ಸಭೆ ಸೇರಿ ಹೊಲೆಯನ ಸಂಪರ್ಕ ಮಾಡಿ ಮಹಾಪಾತಕವೆಸಗಿದ ರುಕ್ಮಿಣಿಗೆ ಅವಳು ಜೀವಂತವಿರುವಾಗಲೆ ಘಟಸ್ಫೋಟ ಕರ್ಮಮಾಡಿ ಅವಳಿಗೂ ತಮಗೂ ನಡುವೆ ಎಲ್ಲ ಸಂಬಂಧಗಳನ್ನು ಕಡಿದುಕೊಳ್ಳಲು ನಿಶ್ಚಯಿಸಿದರು. ಈ ಕರ್ಮವನ್ನು ನೀರಿರುವ ಸ್ಥಳದಲ್ಲಿ ಆಚರಿಸಬೇಕೆಂದು ವೈದಿಕನೊಬ್ಬ ಸೂಚಿಸಿದಾಗ ಅಲ್ಲೆ ಕುಳಿತಿದ್ದ ಲಕ್ಷ್ಮಮ್ಮ,"ಛೆ ಛೇ ಇಂಥ ಪಾಪಿಗೆ ನೀರಿರೋ ಜಾಗದಲ್ಲಿ ಕರ್ಮ ಆಚರಿಸಬಾರದು. ಅವಳ ಮನೆ ಮುಂದೇನೆ ನಡೆಸಬೇಕು" ಎಂದು ಬಲವಾಗಿ ವಾದಿಸಿದಳು. ಬ್ರಾಹ್ಮಣ ಸಮೂಹ ಆ ಮಾತಿಗೆ ಸೈಗುಟ್ಟಿತು. ಲಕ್ಷ್ಮಮ್ಮ ಅವಳ "ಜಲ್ಲಾನ ಒದ್ದೆ ಬಟ್ಟೆಲೂ ಒರೆಸಬಾರದು ಬರೆ ಬಟ್ಟೆಲಿ ಒರೆಸಬೇಕು," ಎಂದು ಔಡು ಕಚ್ಚುತ್ತ ಎದ್ದು ಹೋದಳು.

ಇಷ್ಟು ದಿನಗಳಂತಲ್ಲದೇ ಇಂದು ರುಕ್ಮಿಣಿಯ ಸಮಾಧಾನಭಾವ ಶಾಸ್ತ್ರಿಗಳಿಗೆ ಕೊಂಚ ಅಚ್ಚರಿಯಾಗಿತ್ತು. ಪೂಜೆ ತೀರಿಸಿ ಅವರು ಬೀದಿಗೆ ಇಳಿಯುತ್ತಿದ್ದಾಗ ಬಂದ ರುಕ್ಮಿಣಿ, "ಬಾಳೆ ಎಲೆ ತಗೊಂಡು ಬನ್ನಿ ಮಾವಯ್ಯ," ಎನ್ನುತ್ತಿದ್ದಳು. ಆಗ ಜೋಯಿಸರ ಜಗಲಿಯಲ್ಲಿ ನೆರೆದ ಬ್ರಾಹ್ಮಣರ ಮಾತುಗಳ ಕೊನೆ ಅವಳ ಕಿವಿಗೂ ಬಿದ್ದಿತು. "ಆದ್ದರಿಂದ ರುಕ್ಮಿಣಿಗೆ ಘಟಸ್ಫೋಟ ಮಾಡಿ ಮಂಡೆ ಬೋಳಿಸಿ ಕತ್ತೆ ಮೇಲೆ ಕೂರಿಸಿ ಊರು ಬಿಟ್ಟು ಓಡಿಸಬೇಕು. ನಮ್ಮ ಇಡೀ ಬ್ರಾಹ್ಮಣ ಸಮುದಾಯದ ಮಾನ ಕಳೆದ ಆ ಪಾಪಿಗೆ ಇದೊಂದೇ ತಕ್ಕ ಪ್ರಾಯಶ್ಚಿತ್ತ." ಈ ಮಾತುಗಳನ್ನು ಆಲಿಸಿದ ರುಕ್ಮಿಣಿಯ ಮೊಗದಲ್ಲಿ ಒಂದು ಕ್ಷಣ ವಿಷಣ್ಣಭಾವ ಕವಿಯಿತು.

ಶಾಸ್ತ್ರಿಗಳು ಆತಂಕದಿಂದಲೇ ತೋಟಕ್ಕೆ ನಡೆದರು. ರುಕ್ಮಿಣಿಗೆ ಘಟಸ್ಫೋಟ ಮಾಡಲು ನಿರ್ಧರಿಸಿದ್ದು ಅವರಿಗೆ ಅಂತಹ ಗಾಬರಿಯ ವಿಷಯವಾಗಿರಲಿಲ್ಲ! ಅದನ್ನವರು ನಿರೀಕ್ಷಿಸಿಯೆ ಇದ್ದರು. ಆದರೆ ಮಂಡೆ ಬೋಳಿಸಿ ಕತ್ತೆಯ ಮೇಲೆ ಕುಳ್ಳಿರಿಸಿ ಊರು ಬಿಟ್ಟು ಓಡಿಸುವ ತೀರ್ಮಾನ ಅವರನ್ನು ಕುಕ್ಕಿತು. ಘಟಸ್ಫೋಟ ಮಾಡಿದರಾದರೂ ನಿಮಗೂ ನಮಗೂ ಯಾವ ಸಂಬಂಧವೂ ಬೇಡ, ಎಂದು ಬದುಕುಸಾಗಿಸಬಹುದಿತ್ತು. ಆದರೆ ಇವರೆಲ್ಲ ಅವಳನ್ನು ಊರು ಬಿಟ್ಟು ಓಡಿಸುವ ಸನ್ನಾಹದಲ್ಲಿ ಇರುವರಲ್ಲ? ಯಾವ ಧರ್ಮಶಾಸ್ತ್ರದ ಆಧಾರದ ಮೇಲೆ ಇವರು ಈ ಬಲಪ್ರಯೋಗ ಮಾಡಬೇಕೆಂದಿದ್ದಾರೆ? ಆದರೆ ಇವರೆಲ್ಲ ಒಟ್ಟಾಗಿ ದಾಳಿಯಿಟ್ಟರೆ ನಾನೊಬ್ಬನೇ ಎದುರಿಸಲು ಸಾಧ್ಯವಾದೀತೆ? ಇದೇ ವ್ಯಾಕುಲದಲ್ಲಿ ಶಾಸ್ತ್ರಿಗಳು ಮನೆಗೆ ಬಂದಾಗ ಯಾವಾಗಲೂ ನೀರಿಟ್ಟು ಮರೆಯಾಗುತ್ತಿದ್ದ ರುಕ್ಮಿಣಿ ಇಂದು ತಾನಾಗಿ ನೀರು ತುಂಬಿ ಕಾಲ್ತೊಳೆಯಲು ಕೊಟ್ಟಳು.

ಶಾಸ್ತ್ರಿಗಳು ಪೂಜಾದಿಗಳನ್ನು ಮುಗಿಸಿ ಸರಸಿಯೊಡನೆ ಭೋಜನಕ್ಕೆ ಕುಳಿತಾಗ ಚಿತ್ರಾನ್ನ, ಮಜ್ಜಿಗೆ ಹುಳಿ, ಅಂಬೊಡೆ, ಗಸಗಸೆ ಖೀರು, ಕೋಸುಂಬರಿ, ಬದನೆ ಗೊಜ್ಜು ಎಲ್ಲ ಗಮನಿಸಿ ಸೋಜಿಗ ಪಟ್ಟು, ಅಂಥ ದುಃಖದಲ್ಲೂ, "ಇದೇಕೆ ಮಾಡಿದೆ?" ಎಂದು ಕೇಳಿದರು. "ನಿನ್ನೆ ಪೂರ್ಣಿಮೆಗೆ ಏನೂ ಮಾಡಲಿಲ್ಲವಲ್ಲ, ಅದಕ್ಕಾಗಿಮಾಡಿದೆ." ಎಂದ ರುಕ್ಮಿಣಿ ಸರಸಿಗೆ ಇನ್ನಷ್ಟು ಖೀರನ್ನು ಬಡಿಸಿದಳು. ಮಾರುದಿನ ಪ್ರಾತಃಕಾಲ ಎಂದಿನಂತೆ ತೋಟಕ್ಕೆ ಹೋದ ಶಾಸ್ತ್ರಿಗಳು, ಅಲ್ಲಿನ ಕೆಲಸ ಮುಗಿಸಿ ಬಂದಾಗ ರುಕ್ಮಿಣಿಯ ಸುಳಿವಿರಲಿಲ್ಲ. ಈ ದಿನ ಬ್ರಾಹ್ಮಣರು ರುಕ್ಮಿಣಿಗೆ ಘಟಸ್ಫೋಟ ಮಾಡುವರೆನ್ನುವುದು ಶಾಸ್ತ್ರಿಗಳ ಮನಸ್ಸಿನಲ್ಲಿದ್ದುದರಿಂದ ಅವರು ಬೇಗನೇ ಬಂದಿದ್ದರು. ಈಗ ರುಕ್ಮಿಣಿ ಕಾಣದಾಗಲು ಆತಂಕಗೊಂಡು ಹುಡುಕಿದರು. ರುಕ್ಮಿಣಿ ಎಲ್ಲೂ ಇಲ್ಲ. ಶಾಸ್ತ್ರಿಗಳು ಅವಾಕ್ಕಾದರು. ಘಟಸ್ಫೋಟದ ಬೆದರಿಕೆಯಿಂದ ಮನಸ್ಸು ಕೆಟ್ಟು ಏನಾದರೂ


ಕೆರೆ, ಬಾವಿ ಎಂಬ ಯೋಚನೆ ಬಂದು ತಟಸ್ಥರಾದರು. ಶಾಸ್ತ್ರಿಗಳು ಹೀಗೆ ಚಿಂತೆಯಲ್ಲಿರುವಾಗಲೇ ಅವರ ಮನೆಯ ಹೊರಗೆ ರುಕ್ಮಿಣಿಯ ಗಂಡನ ಸಪಿಂಡರು ಸಮಾನೋದಕರು ಹಾಗೂ ಬಾಂಧವರು ಸೇರಿ ರುಕ್ಮಿಣಿಯ ವಿರುದ್ಧ ಘಟಸ್ಫೋಟ ಕರ್ಮವನ್ನು ಆಚರಿಸುತ್ತಿದ್ದರು. ಜೋಯಿಸರ ಪ್ರಕಾರ ಈ ಕರ್ಮವನ್ನು ಎರಡು ಕಾರಣಗಳಿಗಾಗಿ ಆಚರಿಸುತ್ತಿದ್ದರು ಒಂದು ಘಾತಕಿ ಮಾಡಿದ ಪಾತಕಕರ್ಮದಿಂದ ಇವರೆಲ್ಲ ಮುಕ್ತರಾಗಲು; ಪಾತಕಿಗೆ ಜನ್ಮಾಂತರಗಳಲ್ಲಿ ಪಾಪನಿವಾರಣೆಯಾಗಲಿ ಎಂಬುದು ಇನ್ನೊಂದು.

ರುಕ್ಮಿಣಿಯನ್ನು ಎಲ್ಲೂ ಕಾಣದೇ ಶಾಸ್ತ್ರಿಗಳು ಕಂಗಾಲಾದರು. ಮನೆಯ ಹಿಂದಿನ ಬಾಗಿಲಿನಿಂದಲೇ ಅವಳು ಹೊರಟು ಹೋಗಿರಬೇಕು. ಅವಳ ಮುನ್ನಾದಿನದ ನಡತೆ ಅರ್ಥವಾಗಿ ಶಾಸ್ತ್ರಿಗಳು ಕಂಬನಿಗರೆದರು. ಅಷ್ಟರಲ್ಲಿ ಕರ್ಮ ತೀರಿಸಿದ ಬ್ರಾಹ್ಮಣರೆಲ್ಲ ಒಳಗೆ ನುಗ್ಗಿ, "ರುಕ್ಮಿಣಿ ಎಲ್ಲಿ?" ಎಂದು ಗಲಾಟೆಗಾರಂಭಿಸಿದರು.

"ಅವಳು ಮನೆಯಲ್ಲಿಲ್ಲ," ಶಾಸ್ತ್ರಿಗಳ ಉತ್ತರದಿಂದ ಗುಂಪು ರೊಚ್ಚಿಗೆದ್ದು, "ಸುಳ್ಳು, ನೀವೇ ಅವಳನ್ನು ಬಚ್ಚಿಟ್ಟಿದ್ದೀರಿ," ಎಂದಿತು.

"ನೀವೇ ಹುಡುಕಿಕೊಳ್ಳಿ" ಶಾಸ್ತ್ರಿಗಳು ಶಾಂತರಾಗೇ ನುಡಿದರು. ಮನೆಯ ಮೂಲೆಯನ್ನೂ ಬಿಡದೆ ಶೋಧಿಸಿದ ಗುಂಪು ನಿರಾಶವಾಗಿ "ನೀವೇ ಎಲ್ಲೋ ಕಳಿಸಿದ್ದೀರಿ," ಎಂದು ಆಪಾದಿಸಿತು. "ನಾನಲ್ಲ, ನೀವೇ ಅವಳನ್ನು ಕೆರೆಗೋ ಬಾವಿಗೋ ತಳ್ಳಿರೋರು... ನೀವು," ಶಾಸ್ತ್ರಿಗಳು ಖಾರವಾಗಿ ನುಡಿದಾಗ ಗುಂಪು ಚಕಿತಗೊಂಡಿತು. ನಿಜ ಸುದ್ದಿ ತಿಳಿದ ಸರಸಿ ಅಳುತ್ತಿರುವಂತೆ ಗುಂಪಿನಲ್ಲಿಯ ಯಾರೋ ಅಂದರು "ಅವಳು ಮಾಡಿದ ಪಾಪಕ್ಕೆ ದೇವರೇ ಶಿಕ್ಷೆ ಕೊಟ್ಟ. ನಾವು ಮಾಡೋದನ್ನ ದೇವರೇ ಮಾಡಿದ ಹಾಗಾಯಿತು."

ಊರಿನ ಎಲ್ಲ ಕೆರೆ ಬಾವಿಗಳು ತೋಟದ ಕೊಳಗಳು ನೆಲಬಾವಿಗಳನ್ನು ಶೋಧಿಸಿದರೂ ರುಕ್ಮಿಣಿಯು ಸಿಗಲಿಲ್ಲ. ಅವಳು ಎಲ್ಲಿಗೆ ಹೋದಳೆಂಬ ಸುಳಿವೂ ಹತ್ತಲಿಲ್ಲ. ಯಾವ ಬಾವಿ ಕೆರೆಗಳಲ್ಲೂ ಅವಳ ಹೆಣ ತೇಲಲಿಲ್ಲ. ರುದ್ರಪಟ್ಟಣ ಭೀಮಾನಳ್ಳಿ ಮುಂತಾದ ಕಡೆಗೆ ಜನ ಕಳಿಸಿದರೂ ಅವಳಿಲ್ಲ. ಮೈಸೂರು ಪೋಲೀಸ್ ಸ್ಟೇಷನ್ನಿನಲ್ಲಿ 'ಕಂಪ್ಲೈಂಟ್' ಕೊಟ್ಟಿದ್ದೂ ಆಯ್ತು. ಅಂತೂ ರುಕ್ಮಿಣಿ ರಾತ್ರೋರಾತ್ರಿ ನಾಪತ್ತೆಯಾದ ಸುದ್ದಿ ಊರಲ್ಲಿ ಕೋಲಾಹಲವೆಬ್ಬಿಸಿತ್ತು. ಮುಂದೆ ಒಂದು ದಿನ ಅಮಾವಾಸ್ಯೆಯ ರಾತ್ರಿ ಚಿತ್ರಮೂಲನ ಕೋಟೆಯ ದಿಸೆಯಿಂದ ಹೆಣ್ಣು ಗೋಳಿಡುವ ಧ್ವನಿ ಕೇಳಿತಂತೆ ಯಾರಿಗೋ. ಆ ಸುದ್ದಿ ಬಾಯಿಂದ ಬಾಯಿಗೆ ಹರಡಿ ಇಡೀ ಊರಿಗೆ ವ್ಯಾಪಿಸಿತು. ರುಕ್ಮಿಣಿ ಆ ಚಿತ್ರಮೂಲನ ಕೋಟೆಗೇ ಹೋಗಿ ಸತ್ತಿರಬೇಕು. ಬರಬರುತ್ತ ಬಹುತೇಕ ಮಂದಿಯ ಈ ಅಭಿಪ್ರಾಯವೇ ಹೆಚ್ಚು ಕಡಿಮೆ ಹರುಮನಹಳ್ಳಿಯ ಸಾರ್ವತ್ರಿಕ ಅಭಿಪ್ರಾಯವಾಗಿ ರೂಪುಗೊಂಡಿತು. ✡



ಕಾಲಕ್ರಮೇಣ ಧರ್ಮದ ಟೊಂಗೆಗಳು ಎಷ್ಟು ಟಿಸಿಲೊಡೆಯುತ್ತವೆಯೆಂದರೆ ಅವುಗಳ ಮೂಲಕ ದೇವರನ್ನು ಕಾಣುವುದೇ ಅಸಾಧ್ಯವಾಗುತ್ತದೆ.

–ಲಿಝುಟ್ ವುಡ್ ವರ್ಥ್ ರೀಸೆ

Printed & published by M. N. Mahishi on behalf of the Administrator, Loka Shikshana Trust, Samyukta Karnataka Press, Koppikar Road, Hubli-580 020. Editor: B.S.Gopala Krishna. Rept: Bombay: V.Satyamurthy Phone: 522412 Calcutta: H. Majumdar Phone: 46-4233: Madras: K. A. Subramanian Phone: 842201; New Delhi: P. R. Chopra Phone: 714130.

Registered with the Registrar of Newspapers for India under No. ...|57